# www.karunaduexams.com

ಪ್ರಚಲಿತ ವಿದ್ಯಮಾನ ಮತ್ತು ಸಾಮಾನ್ಯ ಜ್ಞಾನ ಕ್ವಿಜ್-ಸೆಪ್ಟೆಂಬರ್, 2016

www.karunaduexams.com

**ಹೆಚ್ಚಿನ ಮಾಹಿತಿಗಾಗಿ,**

ನೀಮಗೆ ಯಾವುದೇ ಸಹಾಯದ ಅಗತ್ಯವಿದ್ದರೆ, WhatsApp ಮತ್ತು ಸಂದೇಶವನ್ನು ಮಾಡಿ, ದಯವಿಟ್ಟು ಕರೆ ಮಾಡಬೇಡಿ

Mobile: +91- 98805 33259 (Content related queries)

Mobile: +91-9844915689 (Technical and Marketing related queries)

Mobile:+91-9972355744(Management related queries)

www.karunaduexams.com

1. ಪ್ರತಿಷ್ಠಿತ “ರಾಷ್ಟ್ರೀಯ ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ (CSR)” ಪ್ರಶಸ್ತಿಯನ್ನು ಪಡೆದುಕೊಂಡ ಸಂಸ್ಥೆ ಯಾವುದು?

ಅ) ಟೈಮ್ಸ್ ಫೌಂಡೇಶನ್

ಆ) ಟಾಟಾ ಮೋಟಾರ್ಸ್ ಲಿಮಿಟೆಡ್

ಇ) ಇನ್ಫೋಸಿಸ್ ಲಿಮಿಟೆಡ್

ಈ) ವಿಪ್ರೋ ಲಿಮಿಟೆಡ್

ಟೈಮ್ಸ್ ಫೌಂಡೇಶನ್

ಟೈಮ್ಸ್ ಗ್ರೂಫ್ ನ ಸಾಮಾಜಿಕ ಅಂಗಸಂಸ್ಥೆ ಟೈಮ್ಸ್ ಫೌಂಡೇಶನ್ ಪ್ರತಿಷ್ಠಿತ ರಾಷ್ಟ್ರೀಯ ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ (Corporate Social Responsibility)”ಪ್ರಶಸ್ತಿಯನ್ನು ಪಡೆದುಕೊಂಡಿದೆ. ಸಿಎಸ್ಆರ್ ರಾಷ್ಟ್ರೀಯ ನಾಯಕತ್ವ ಪ್ರಶಸ್ತಿಯನ್ನು ವಿಶ್ವ ಸಿಎಸ್ಆರ್ ದಿನ ಮತ್ತು ವಿಶ್ವ ಸುಸ್ಥಿರ ಸಂಸ್ಥೆ ಜಂಟಿಯಾಗಿ ಕೊಡಮಾಡುತ್ತಿದೆ. ಟೈಮ್ಸ್ ಫೌಂಡೇಶನ್ ನ ದಕ್ಷಿಣ ಪ್ರಾದೇಶಿಕ ಮುಖ್ಯಸ್ಥೆ ಎಸ್.ಕಲಾದೇವಿ ಅವರು ಪ್ರಶಸ್ತಿಯನ್ನು ಸ್ವೀಕರಿಸಿದರು.

2. ಈ ಕೆಳಗಿನ ಯಾವ ಪ್ರಶಸ್ತಿ/ಪ್ರಶಸ್ತಿಗಳು ಸಂತ ಮದರ್ ತೆರೆಸಾ ಅವರಿಗೆ ಲಭಿಸಿವೆ?

I) ಪದ್ಮಶ್ರೀ ಪ್ರಶಸ್ತಿ

II) ರೇಮನ್ ಮ್ಯಾಗ್ಸೆಸೆ

III) ನೊಬೆಲ್ ಶಾಂತಿ ಪ್ರಶಸ್ತಿ

IV) ಭಾರತ ರತ್ನ

ಈ ಕೆಳಗೆ ನೀಡಿರುವ ಕೋಡ್ ಮೂಲಕ ಸರಿಯಾದ ಉತ್ತರವನ್ನು ಗುರುತಿಸಿ:

ಅ) I & II

ಆ) II & III

ಇ) I, II & III

ಈ) ಮೇಲಿನ ಎಲ್ಲವೂ

ಮೇಲಿನ ಎಲ್ಲವೂ

ಶಾಂತಿ ಧೂತೆ ಮದರ್ ತೆರೆಸಾ ಅವರಿಗೆ ಸೆಪ್ಟೆಂಬರ್ 4ರಂದು ಪೋಪ್ ಫ್ರಾನ್ಸಿಸ್ ಅವರು ಸಂತ ಪದವಿ ಪ್ರದಾನ ಮಾಡಲಿದ್ದಾರೆ.. ಮೆದುಳಿನಲ್ಲಿ ಕೀವು ತುಂಬಿ ಸಾವಿನ ಅಂಚಿನಲ್ಲಿದ್ದ ಬ್ರೆಜಿಲ್‌ನ ಸ್ಯಾಟೊಂಸ್ ಪಟ್ಟಣದ ನಿವಾಸಿಯೊಬ್ಬರು ಮದರ್ ತೆರೆಸಾ ಅವರನ್ನು ಪ್ರಾರ್ಥಿಸಿ ಪವಾಡ ಸದೃಶ್ಯ ರೀತಿಯಲ್ಲಿ ಗುಣಹೊಂದಿದ್ದರು. 2008ರಲ್ಲಿ ನಡೆದಿದ್ದ ಈ ಘಟನೆಯನ್ನೇ ಅವರ ಸಂತ ಪದವಿಗೆ ಪ್ರಮುಖ ಅಂಶವಾಗಿ ಪರಿಗಣಿಸಲಾಗಿದೆ. ಸಾಕಷ್ಟು ಪರಿಶೀಲನೆಯ ನಂತರ 2013ರಲ್ಲಿ ಈ ಘಟನೆ ಸತ್ಯ ಎಂದು ದೃಢಪಟ್ಟಿತ್ತು. ಇದನ್ನು ಆಧರಿಸಿ 2015ರ ಡಿಸೆಂಬರ್‌ನಲ್ಲಿ ತೆರೆಸಾ ಹೆಸರನ್ನು ಸಂತಪದವಿಗೆ ಪರಿಗಣಿಸಲು ಕ್ಯಾಥೊಲಿಕ್ ಧರ್ಮಸಭೆ ಅಂತಿಮ ಒಪ್ಪಿಗೆ ನೀಡಿತ್ತು. ವಿಶ್ವಕ್ಕೆ ಶಾಂತಿ ಸಾರಿದ ತೆರೆಸಾ

www.karunaduexams.com

ಅವರಿಗೆ 1962 ಪದ್ಮಶ್ರೀ ಪ್ರಶಸ್ತಿ, 1979 ನೊಬೆಲ್ ಶಾಂತಿ ಪ್ರಶಸ್ತಿ, 1980 ರಲ್ಲಿ ಭಾರತ ಸರ್ಕಾರದ ಅತ್ಯುನ್ನತ ನಾಗರೀಕ ಪ್ರಶಸ್ತಿಯಾದ ಭಾರತ ರತ್ನ ಪ್ರಶಸ್ತಿ ಹಾಗೂ ರೇಮನ್ ಮ್ಯಾಗ್ಸೆಸ್ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳನ್ನು ನೀಡಲಾಗಿದೆ.

3. "ದಿ ಎನರ್ಜಿ ಅಂಡ್ ರಿಸೋರ್ಸ್ ಇನ್ಸ್ ಟಿಟ್ಯೂಟ್ (The Energy and Resource Institute)"ನ ನೂತನ ಚಾನ್ಸೆಲರ್ ಆಗಿ ಯಾರು ನೇಮಕಗೊಂಡರು?

ಅ) ಅಶೋಕ್ ಚಾವ್ಲ

ಆ) ಕರಣ್ ಸಿಂಗ್

ಇ) ಮಹೇಂದ್ರ ಸಿಂಗ್

ಈ) ಕುಮಾರ್ ರಜನೀಶ್

ಅಶೋಕ್ ಚಾವ್ಲ

ಕೇಂದ್ರ ಮಾಜಿ ಹಣಕಾಸು ಕಾರ್ಯದರ್ಶಿ ಅಶೋಕ್ ಚಾವ್ಲ ಅವರು ಎನರ್ಜಿ ಅಂಡ್ ರಿಸೋರ್ಸ್ ಇನ್ಸ್ ಟಿಟ್ಯೂಟ್ ನ ನೂತನ ಚಾನ್ಸೆಲರ್ ಆಗಿ ನೇಮಕಗೊಂಡಿದ್ದಾರೆ. ಪ್ರಸ್ತುತ ಇವರು ಈ ಸಂಸ್ಥೆಯ ಅಧ್ಯಕ್ಷರಾಗಿ ಕಳೆದ ಫೆಬ್ರವರಿಯಿಂದ ಕಾರ್ಯನಿರ್ವಹಿಸುತ್ತಿದ್ದಾರೆ.

4. "ಅಲಿ ಬಾಂಗೋ ಒಂಡಿಂಬ (Ali Bongo Ondimba)" ರವರು ಯಾವ ದೇಶದ ನೂತನ ಅಧ್ಯಕ್ಷರಾಗಿ ಇತ್ತೀಚೆಗೆ ಆಯ್ಕೆಯಾದರು?

ಅ) ಗಬಾನ್

ಆ) ಇಥೋಪಿಯಾ

ಇ) ಈಜಿಪ್ಟ್

ಈ) ಸೊಮಾಲಿ

ಗಬಾನ್ (Gabon)

ಅಲಿ ಬಾಂಗೋ ಒಂಡಿಂಬ ರವರು ಇತ್ತೀಚೆಗೆ ನಡೆದ ಗಬಾನ್ ರಾಷ್ಟ್ರಾಧ್ಯಕ್ಷ ಚುನಾವಣೆಯಲ್ಲಿ ಗೆಲುವಿನ ನಗೆ ಬೀರಿದರು. ಆ ಮೂಲಕ ಎರಡನೇ ಬಾರಿಗೆ ಗಬಾನ್ ರಾಷ್ಟ್ರದ ಅಧ್ಯಕ್ಷ ಸ್ಥಾನವನ್ನು ಖಾಯಂಗಳಿಸಿಗೊಂಡರು. ಒಂಡಿಂಬ ಅವರು ಗಬಾನ್ ರಾಷ್ಟ್ರಾಧ್ಯಕ್ಷರಾಗಿ ಏಳು ವರ್ಷಗಳ ಕಾಲ ಸೇವೆಸಲ್ಲಿಸಲಿದ್ದಾರೆ.

www.karunaduexams.com

5. ಬಿಹಾರದಲ್ಲಿ ಗಂಗಾನದಿಯಲ್ಲಿ ಹೂಳು ತುಂಬಿರುವ ಬಗ್ಗೆ ಅಧ್ಯಯನ ನಡೆಸಲು ಕೇಂದ್ರ ಸರ್ಕಾರ ಇತ್ತೀಚೆಗೆ ಈ ಕೆಳಗಿನ ಯಾವ ಸಮಿತಿಯನ್ನು ರಚಿಸಿದೆ?

ಅ) ಎ.ಕೆ.ಸಿನ್ಹಾ ಸಮಿತಿ

ಆ) ಅಶೋಕ್ ಕುಮಾರ್ ಸಮಿತಿ

ಇ) ಪ್ರಸಾದ್ ಕುಲಕರ್ಣಿ ಸಮಿತಿ

ಈ) ಸತೀಶ್ ಚಂದ್ರ ಸಮಿತಿ

ಎ.ಕೆ.ಸಿನ್ಹಾ ಸಮಿತಿ

ಬಿಹಾರದಲ್ಲಿ ಗಂಗಾನದಿಯಲ್ಲಿ ತುಂಬಿರುವ ಹೂಳನ್ನು ಅಧ್ಯಯನ ನಡೆಸುವ ಸಲುವಾಗಿ ಕೇಂದ್ರ ಸರ್ಕಾರ ಎ.ಕೆ.ಸಿನ್ಹಾ ನೇತೃತ್ವದ ತಜ್ಞರ ಸಮಿತಿಯನ್ನು ರಚಿಸಿದೆ. ಗಂಗಾ ನದಿಯಲ್ಲಿ ಹೂಳು ತುಂಬಿರುವ ಕಾರಣ ಬಿಹಾರದಲ್ಲಿ ಇತ್ತೀಚೆಗೆ ಪ್ರವಾಹ ಸೃಷ್ಟಿಯಾಗಿ ಅವಾಂತರ ಸೃಷ್ಟಿಸಿದ್ದ ಹಿನ್ನಲೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ. ಸಮಿತಿಯು 10 ದಿನದೊಳಗೆ ತನ್ನ ಅಧ್ಯಯನದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಿದೆ.

6. ಇತ್ತೀಚೆಗೆ ನಿಧನರಾದ "ಕಾಶ್ಮೀರಿ ಲಾಲ್ ಝಾಕೀರ್" ಅವರು ಯಾವ ಭಾಷೆಯ ಪ್ರಸಿದ್ದ ಕವಿಯಾಗಿದ್ದಾರೆ?

ಅ) ಡೊಗ್ರಿ

ಆ) ಕಾಶ್ಮೀರಿ

ಇ) ಉರ್ದು

ಈ) ಹಿಂದಿ

ಉರ್ದು

ಪ್ರಸಿದ್ದ ಉರ್ದು ಕವಿ, ಕಾದಂಬರಿಕಾರ ಮತ್ತು ಸಣ್ಣಕತೆಗಾರ ಕಾಶ್ಮೀರಿ ಲಾಲ್ ಝಾಕೀರ್ ಚಂಡೀಘರ್ನಲ್ಲಿ ನಿಧನರಾದರು. ಅಬ್ ಮುಜೆ ಸೊನೆ ದೊ, ತಿನ್ ಸಿಹ್ರೆ ಎಕ್ ಸವಾಲ್, ಎ ಘಜಲ್ ಅಂಥೋಲಜಿ" ಇವರ ಪ್ರಮುಖ ಕೃತಿಗಳಾಗಿವೆ.

7. ಪ್ರಸಿದ್ದ "ಸೊಲಂಗ್ ಹಬ್ಬ(Solung Festival)" ಯಾವ ರಾಜ್ಯಕ್ಕೆ ಸಂಬಂಧಿಸಿದೆ?

ಅ) ಅಸ್ಸಾಂ

ಆ) ಜಾರ್ಖಂಡ್

ಇ) ಅರುಣಾಚಲ ಪ್ರದೇಶ

ಈ) ಸಿಕ್ಕಿಂ

ಅರುಣಾಚಲ ಪ್ರದೇಶ

ಪ್ರಸಿದ್ಧ ಸೊಲಂಗ್ ಹಬ್ಬ ಅರುಣಾಚಲ ಪ್ರದೇಶದಲ್ಲಿ ಆರಂಭಗೊಂಡಿತು. ಐದು ದಿನಗಳ ಕಾಲ ನಡೆಯುವ ಈ ಹಬ್ಬವನ್ನು ಪ್ರತಿವರ್ಷ ಸೆಪ್ಟೆಂಬರ್ ಮೊದಲ ವಾರದಲ್ಲಿ ಆಚರಿಸಲಾಗುತ್ತದೆ. ಕೃಷಿ ಆಧಾರಿತ ಈ ಹಬ್ಬವನ್ನು ಅರುಣಾಚಲ ಪ್ರದೇಶದ ಆದಿ ಬುಡಕಟ್ಟು ಜನಾಂಗ ಆಚರಿಸುತ್ತಾರೆ. ವಿವಿಧ ದೇವರುಗಳಿಗೆ ಪೂಜೆ ಪ್ರಾರ್ಥನೆ ಸಲ್ಲಿಸುವ ಮೂಲಕ ಉತ್ತಮ ಇಳುವರಿ ನೀಡುವಂತೆ ಬೇಡಿಕೊಳ್ಳುವುದು ಹಬ್ಬದ ವಾಡಿಕೆ.

8. "ಸಾರ್ವಜನಿಕ ನಿಧಿ ನಿರ್ವಹಣಾ ವ್ಯವಸ್ಥೆ (Public Fund Management System)" ಜಾರಿಗೆ ತಂದ ಮೊದಲ ರಾಜ್ಯ ಯಾವುದು?

ಅ) ಜಾರ್ಖಂಡ್

ಆ) ಮಧ್ಯ ಪ್ರದೇಶ

ಇ) ಗುಜರಾತ್

ಈ) ಮಹಾರಾಷ್ಟ್ರ

ಜಾರ್ಖಂಡ್

ದೇಶದಲ್ಲೇ ಮೊದಲ ಬಾರಿಗೆ ಸಾರ್ವಜನಿಕ ನಿಧಿ ನಿರ್ವಹಣಾ ವ್ಯವಸ್ಥೆಯನ್ನು ಜಾರ್ಖಂಡ್ ನಲ್ಲಿ ಜಾರಿಗೊಳಿಸಲಾಗಿದೆ. ರಾಜ್ಯದ ಎಲ್ಲಾ 32 ಟ್ರೆಷರಿಗಳನ್ನು ಕಂಪ್ಯೂಟರೀಕರಣಗೊಳಿಸಲಾಗಿದ್ದು, ಸೈಬರ್ ಟ್ರೆಷರಿಯನ್ನು ಆರಂಭಿಸಲಾಗಿದೆ.

9. ಭಾರತದ ಜಲಾಂತರ್ಗಾಮಿ ನೌಕೆಗಳ ಸಂಬಂಧಿಸಿದ ಮಾಹಿತಿಗಳ ದಾಖಲೆಗಳನ್ನು ಬಿಡುಗಡೆಮಾಡಿ ಸುದ್ದಿಯಲ್ಲಿದ್ದ ಪ್ರತಿಕೆ ಯಾವುದು?

ಅ) ದಿ ನ್ಯೂಯಾರ್ಕ್ ಟೈಮ್ಸ್

ಆ) ದಿ ಆಸ್ಟ್ರೇಲಿಯನ್

ಇ) ದಿ ವಾಷಿಂಗಟನ್ ಪೋಸ್ಟ್

ಈ) ದಿ ಸಿಡ್ನಿ ಹೆರಾಲ್ಡ್

ದಿ ಆಸ್ಟ್ರೇಲಿಯನ್

ಭಾರತದ ಸ್ಕಾರ್ಪಿನ್ ಜಲಾಂತರ್ಗಾಮಿ ನೌಕೆಗಳ ಕುರಿತ ಸೂಕ್ಷ್ಮ ಮಾಹಿತಿಗಳುಳ್ಳ ದಾಖಲೆಗಳನ್ನು ಆಸ್ಟ್ರೇಲಿಯಾದ ಪತ್ರಿಕೆ "ದಿ ಆಸ್ಟ್ರೇಲಿಯನ್" ಪ್ರಕಟಿಸಿತ್ತು.

10. ಈ ಕೆಳಗಿನ ಯಾವ ನಗರ ಆಫ್ರಿಕಾ ಖಂಡದಲ್ಲೇ ಅತಿದೊಡ್ಡ ನಗರವಾಗಿದೆ?

ಅ) ಡರ್ಬನ್

ಆ) ಲಗೊಸ್

ಇ) ನೈರೋಬಿ

ಈ) ಕೈರೋ

www.karunaduexams.com

ಲಗೊಸ್

ನೈಜೀರಿಯಾದ ಲಗೊಸ್ ನಗರ ಆಫ್ರಿಕಾ ಖಂಡದ ಅತಿದೊಡ್ಡ ನಗರವಾಗಿದೆ.

11. ಫ್ರಾನ್ಸ್ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ "ನೈಟ್ ಆಫ್ ದಿ ನ್ಯಾಷನಲ್ ಆರ್ಡರ್ ಆಫ್ ದಿ ಫ್ರೆಂಚ್ ಲಿಜ್ವನ್ ಆಫ್ ಹಾನರ್ Knight of the National Order of the French Legion of Honour)" ಯಾರಿಗೆ ನೀಡಲಾಗಿದೆ?

ಅ) ರತನ್ ಟಾಟಾ

ಆ) ಕಿರಣ್ ಮಜುಂದಾರ್ ಷಾ

ಇ) ಮುಖೇಶ್ ಅಂಬಾನಿ

ಈ) ಅಜೀಂ ಪ್ರೇಮ್ ಜಿ

ಕಿರಣ್ ಮಜುಂದಾರ್ ಷಾ

ಬಯೋಕಾನ್ ಲಿಮಿಟೆಡ್ ಮುಖ್ಯಸ್ಥೆ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಆಗಿರುವ ಕಿರಣ್ ಮಜುಂದಾರ್ ಷಾ ಅವರಿಗೆ ಫ್ರಾನ್ಸ್ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ "ನೈಟ್ ಆಫ್ ದಿ ನ್ಯಾಷನಲ್ ಆರ್ಡರ್ ಆಫ್ ದಿ ಫ್ರೆಂಚ್ ಲಿಜ್ವನ್ ಆಫ್ ಹಾನರ್" ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಬಯೋಸೈನ್ಸ್ ಮತ್ತು ಸಂಶೋಧನೆಗೆ ಇವರು ನೀಡಿರುವ ಜಾಗತಿಕ ಕೊಡುಗೆಯನ್ನು ಗಮನಿಸಿ ಪ್ರಶಸ್ತಿಗೆ ಪರಿಗಣಿಸಲಾಗಿದೆ. ಪ್ರಶಸ್ತಿಯನ್ನು ಫ್ರೆಂಚ್ ಅಧ್ಯಕ್ಷರು ಈ ವರ್ಷದ ಕೊನೆಯಲ್ಲಿ ಪ್ರಧಾನ ಮಾಡಲಿದ್ದಾರೆ. ಈ ಹಿಂದೆ ಈ ಪ್ರಶಸ್ತಿಯನ್ನು ಪಡೆದ ಭಾರತೀಯರೆಂದರೆ ಅಮಿತಾಬ್ ಬಚ್ಚನ್, ಐಶ್ವರ್ಯ ರೈ, ನಂದಿತಾ ದಾಸ್ ಶಾರೂಖ್ ಖಾನ್ ಮತ್ತು ಶಿವಾಜಿ ಗಣೇಶನ್.

12. ಲೊನಲ್ವ ಇಂಟರ್ ನ್ಯಾಷನಲ್ ಫಿಲ್ಮಂ ಫೆಸ್ಟಿವಲ್ ಆಫ್ ಇಂಡಿಯಾ (Lonavla International Film Festival of India) ಜೀವಮಾನ ಸಾಧನೆ ಪ್ರಶಸ್ತಿಯನ್ನು ಯಾರಿಗೆ ನೀಡಲಾಯಿತು?

ಅ) ಗಿರೀಶ್ ಕಾರ್ನಾಡ್

ಆ) ಮಣಿರತ್ನಂ

ಇ) ಗೋವಿಂದ್ ನಿಹಲನಿ

ಈ) ವಿ.ಕೆ.ಮೂರ್ತಿ

ಗೋವಿಂದ್ ನಿಹಲನಿ

ಖ್ಯಾತ ಚಲನಚಿತ್ರ ನಿರ್ದೇಶಕ ಶ್ಯಾಮ್ ಬೆನೆಗಲ್ ಅವರು ತನ್ನ ಸಮಕಾಲೀನ ಚಿತ್ರ ನಿರ್ದೇಶಕ ಗೋವಿಂದ್ ನಿಹಲನಿ ಅವರಿಗೆ ಲೊನಲ್ವ ಇಂಟರ್ ನ್ಯಾಷನಲ್ ಫಿಲ್ಮಂ ಫೆಸ್ಟಿವಲ್ ಆಫ್ ಇಂಡಿಯಾ ಜೀವಮಾನ ಸಾಧನೆ ಪ್ರಶಸ್ತಿಯನ್ನು ನೀಡಿದರು. ನಿಲಹನಿ ಅವರ "ಆಕ್ರೋಶ್" ಮತ್ತು "ಅರ್ಧ ಸತ್ಯ" ಅಪಾರ ಜನಮನ್ನಣೆ ಗಳಿಸಿದ ಸಿನಿಮಾಗಳಾಗಿವೆ.

www.karunaduexams.com

13. ಈ ಕೆಳಗಿನ ಯಾವ ನಟನನ್ನು ಆಸ್ಕರ್ ಜೀವಮಾನ ಸಾಧನೆ (Lifetime Achievement) ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ?

ಅ) ಜಾಕಿ ಚಾನ್

ಆ) ಜಾನಿ ಡೆಪ್

ಇ) ರಾಬರ್ಟ್ ಡಿ ನಿರೊ

ಈ) ರಸ್ಸೆಲ್ ಕ್ರೌ

ಜಾಕಿ ಚಾನ್

ಮಾರ್ಷಲ್ ಆರ್ಟ್ಸ್ ಕಲೆಗಾರ, ಚಿತ್ರ ನಿರ್ದೇಶಕ ಮತ್ತು ಪ್ರಸಿದ್ದ ನಟ ಜಾಕಿಚಾನ್ ಅವರನ್ನು ಪ್ರತಿಷ್ಠಿತ ಆಸ್ಕರ್ ಜೀವಮಾನ ಸಾಧನೆ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಸಿನಿಮಾ ಕ್ಷೇತ್ರದಲ್ಲಿ ಸಲ್ಲಿಸಿರುವ ಗಣನೀಯ ಸೇವೆಗೆ ಆಸ್ಕರ್ ಜೀವಮಾನ ಸಾಧನೆ ಪ್ರಶಸ್ತಿಯನ್ನು ಚಾನ್ ಅವರಿಗೆ ನೀಡಲಾಗುತ್ತಿದೆ. ಚಾನ್ ಅವರನ್ನು 2016 ಗವರ್ನರ್ಸ್ ಪ್ರಶಸ್ತಿಗೂ ಆಯ್ಕೆಮಾಡಲಾಗಿದೆ. ಜಾಕಿಚಾನ್ ಸೇರಿದಂತೆ ಸಂಕಲನಕಾರ ಅನ್ನೇವಿ ಕೋಟ್ಸ್ , ಆವರಣ ನಿರ್ದೇಶಕ ಲೀನ್ ಸ್ಟಾರ್ ಮಾಸ್ಟರ್ ಮತ್ತು ನಿರ್ಮಾಪಕ ಫೆಡ್ರಿಕ್ ವೈಸ್‌ಮೆನ್ ಅವರಿಗೆ ಅಸ್ಕರ್ ಪ್ರಶಸ್ತಿ ನೀಡಲು ಯುಎಸ್ ಫಿಲಂ ಅಕಾಡೆಮಿ ನಿರ್ಧರಿಸಿದೆ. ಜಾಕಿಚಾನ್ ಹಲವಾರು ಸಿನಿಮಾಗಳಲ್ಲಿ ನಟಿಸಿದ್ದು , ವಿಶೇಷವಾಗಿ ಮಾರ್ಷಲ್ ಸಿನಿಮಾಗಳಲ್ಲಿ ಹೆಚ್ಚು ಗಮನ ಸೆಳೆದಿದ್ದಾರೆ. ಪ್ರಮುಖ ಚಿತ್ರಗಳಾದ ಹವರ್, ಕುಂಗ್‌ಫು ಫಾಂಡ ಮತ್ತುಕರಾಟೆ ಕಿಡ್ ಮೊದಲಾದ ಸಿನಿಮಾಗಳು ವಿಶ್ವಾದ್ಯಂತ ಹೆಚ್ಚು ಪ್ರಸಿದ್ಧಿಯಾಗಿವೆ. ಪ್ರಶಸ್ತಿಯನ್ನು ನವೆಂಬರ್ ನಲ್ಲಿ ವಿತರಿಸಲಾಗುವುದು. ಚಾನ್ ಅವರು ಅತಿ ಹೆಚ್ಚು ಸಂಭಾವನೆ ಪಡೆಯುವ ವಿಶ್ವದ ನಟರ ಪಟ್ಟಿಯಲ್ಲಿ ಎರಡನೇ ಸ್ಥಾನವನ್ನು ಪಡೆದುಕೊಂಡಿದ್ದಾರೆ.

14. ಮಾಜಿ ರಾಜ್ಯಸಭಾ ಸದಸ್ಯ ನವಜೋತ್ ಸಿಂಗ್ ಸಿಧು ರವರು ಸ್ಥಾಪಿಸಿರುವ ಹೊಸ ರಾಜಕೀಯ ಪಕ್ಷದ ಹೆಸರೇನು?

ಅ) ಪಂಜಾಬ್ ಆದ್ಮಿ

ಆ) ಪಂಜಾಬ್ ಪೀಪಲ್ ಪಾರ್ಟಿ

ಇ) ಅವಾಜ್ ಇ ಪಂಜಾಬ್

ಈ) ಪಂಜಾಬ್ ಜನ್ ವಿಮೋಚನ್

ಅವಾಜ್ ಇ ಪಂಜಾಬ್

ಮಾಜಿ ಕ್ರಿಕೆಟರ್ ಮತ್ತು ಮಾಜಿ ಸಂಸದ ನವಜ್ಯೋತ್ ಸಿಂಗ್ ಸಿಧು ಅವರು ಅವಾಜ್ ಇ ಪಂಜಾಬ್ ಹೆಸರಿನ ಹೊಸ ರಾಜಕೀಯ ಪಕ್ಷಕ್ಕೆ ನಾಂದಿ ಹಾಡಿದ್ದಾರೆ. ಮುಂದಿನ ವಾರ ಪಕ್ಷಕ್ಕೆ ಅಧಿಕೃತ ಚಾಲನೆ ಸಿಗಲಿದ್ದು, ಪಂಜಾಬಿನ ಅಸೆಂಬ್ಲಿ ಚುನಾವಣೆಯಲ್ಲಿ ಹೊಸ ಪಕ್ಷ ಸಕ್ರಿಯವಾಗಿ ಭಾಗವಹಿಸಲಿದೆ.

www.karunaduexams.com

15. ಇತ್ತೀಚೆಗೆ ನಿಧನರಾದ “ಇಸ್ಲಾಮ್ ಕರಿಮೊವ್ (Islam Karimov)” ಅವರು ಯಾವ ದೇಶದ ಅಧ್ಯಕ್ಷರಾಗಿದ್ದರು?

ಅ) ಉಜ್ಬೇಕಿಸ್ತಾನ

ಆ) ತುರ್ಜಕಿಸ್ತಾನ

ಇ) ಸೂಡಾನ್

ಈ) ಇರಾನ್

ಉಜ್ಬೇಕಿಸ್ತಾನ

ಪಾರ್ಶ್ವವಾಯುವಿಗೆ ಒಳಗಾಗಿದ್ದ ಉಜ್ಬೇಕಿಸ್ತಾನದ ಅಧ್ಯಕ್ಷ ಇಸ್ಲಾಮ್ ಕರಿಮೊವ್ ನಿಧನರಾಗಿದ್ದಾರೆ. ಅವರಿಗೆ 78 ವರ್ಷ ವಯಸ್ಸಾಗಿತ್ತು.. ಕರಿಮೊವ್ 1989ರಿಂದ ಆರಂಭದಲ್ಲಿ ಕಮ್ಯುನಿಸ್ಟ್ ಪಾರ್ಟಿಯ ಮುಖ್ಯಸ್ಥನಾಗಿ ನಂತರ 1991ರಿಂದ ನೂತನ ಸ್ವತಂತ್ರ ರಿಪಬ್ಲಿಕ್ನ ಅಧ್ಯಕ್ಷರಾಗಿ ಉಝ್ಬುಕಿಸ್ತಾನವನ್ನು ಆಳಿದ್ದಾರೆ. ಉಜ್ಬೇಕಿಸ್ತಾನ ಹತ್ತಿ ರಫ್ತು ಮಾಡುವ ಪ್ರಮುಖ ದೇಶಗಳಲ್ಲಿ ಒಂದಾಗಿದೆ. ನೈಸರ್ಗಿಕ ಅನಿಲ ಮತ್ತು ಚಿನ್ನ ಉತ್ಪಾದನೆಯಲ್ಲೂ ಮುಂಚೂಣಿಯಲ್ಲಿದೆ.

16. ದಕ್ಷಿಣ ಆಫ್ರಿಕಾದ ಪ್ರಖ್ಯಾತ ಕ್ರಿಕೆಟ್ ಆಟಗಾರ ಎಬಿ ಡಿವಿಲಿಯರ್ಸ್ ಅವರ ಆತ್ಮಚರಿತ್ರೆ _____?

ಅ) Cricket My Fever

ಆ) AB The Autobiography

ಇ) Cricket for Ever

ಈ) My Life Without Cricket

AB The Autobiography

“AB The Autobiography” ದಕ್ಷಿಣ ಆಫ್ರಿಕಾದ ಪ್ರಖ್ಯಾತ ಕ್ರಿಕೆಟ್ ಆಟಗಾರ ಎಬಿ ಡಿವಿಲಿಯರ್ಸ್ ಅವರ ಆತ್ಮಚರಿತ್ರೆಯಾಗಿದೆ. ದಕ್ಷಿಣ ಆಫ್ರಿಕಾದಲ್ಲಿ ಈಗಾಗಲೇ ಬಿಡುಗಡೆಗೊಂಡಿರುವ ಈ ಪುಸ್ತಕ ಮುಂದಿನ ವಾರದಲ್ಲಿ ಭಾರತದಲ್ಲಿ ಬಿಡುಗಡೆಗೊಳ್ಳಲಿದೆ.

17. ಈ ಕೆಳಗಿನ ಯಾರು “ರಾಷ್ಟ್ರೀಯ ವನ್ಯಜೀವಿ ಮಂಡಳಿ (The National Board for Wildlife)”ನ ಅಧ್ಯಕ್ಷರಾಗಿರುತ್ತಾರೆ?

ಅ) ಪ್ರಧಾನ ಮಂತ್ರಿ

ಆ) ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವ

ಇ) ಕೇಂದ್ರ ಗೃಹ ಮಂತ್ರಿ

ಈ) ಸಂಪುಟ ಕಾರ್ಯದರ್ಶಿ

www.karunaduexams.com

ಪ್ರಧಾನ ಮಂತ್ರಿ

ರಾಷ್ಟ್ರೀಯ ವನ್ಯಜೀವಿ ಮಂಡಳಿ ಒಂದು ಶಾಸನಬದ್ಧ ಸಂಸ್ಥೆಯಾಗಿದ್ದು, ವನ್ಯಜೀವಿ ಸಂರಕ್ಷಣ ಕಾಯಿದೆ-1972 ರಡಿ ಸ್ಥಾಪಿಸಲಾಗಿದೆ. ರಾಷ್ಟ್ರೀಯ ಉದ್ಯಾನವನ ಮತ್ತು ಅಭಯಾರಣ್ಯದಲ್ಲಿ ವನ್ಯಜೀವಿ ಸಂಬಂಧಿಸಿದ ಯೋಜನೆ ಜಾರಿಗೊಳಿಸುವ ನಿರ್ಧಾರವನ್ನು ತೆಗೆದುಕೊಳ್ಳುವ ಹೊಣೆಗಾರಿಕೆ ಈ ಸಂಸ್ಥೆಯದು. ಭಾರತದ ಪ್ರಧಾನ ಮಂತ್ರಿಗಳು ಈ ಮಂಡಳಿಯ ಅಧ್ಯಕ್ಷರಾಗಿದ್ದು, ಕೇಂದ್ರ ಪರಿಸರ ಸಚಿವರು ಇದರ ಉಪಾಧ್ಯಕ್ಷರಾಗಿದ್ದಾರೆ. ಜೊತೆಗೆ 47 ಸದಸ್ಯರನ್ನು ಈ ಮಂಡಳಿ ಒಳಗೊಂಡಿದೆ.

18. ಸುಮಾರು 3.7 ಬಿಲಿಯನ್ ವರ್ಷಗಳಷ್ಟು ಹಳೆಯದಾದ ಸ್ಟ್ರೊಮೊಟೊಲೈಟ್ ಪಳಿಯುಳಿಕೆಗಳನ್ನು ವಿಜ್ಞಾನಿಗಳು ಇತ್ತೀಚೆಗೆ ಎಲ್ಲಿ ಪತ್ತೆಹಚ್ಚಿದ್ದಾರೆ?

ಅ) ನ್ಯೂಜಿಲ್ಯಾಂಡ್

ಆ) ಗ್ರೀನ್ ಲ್ಯಾಂಡ್

ಇ) ಫಿಲಿಫೈನ್ಸ್

ಈ) ಮೆಕ್ಸಿಕೊ

ಗ್ರೀನ್ ಲ್ಯಾಂಡ್

ಜಗತ್ತೀನ ಅತ್ಯಂತ ಹಳೆಯದಾದ ಅಂದರೆ ಸುಮಾರು 3.7 ಬಿಲಿಯನ್ ವರ್ಷಗಳಷ್ಟು ಹಳೆಯದಾದ ಸ್ಟ್ರೊಮೊಟೊಲೈಟ್ ಪಳಿಯುಳಿಕೆಗಳನ್ನು ವಿಜ್ಞಾನಿಗಳು ಗ್ರೀನ್ ಲ್ಯಾಂಡ್ ನಲ್ಲಿ ಪತ್ತೆಹಚ್ಚಿದ್ದಾರೆ. ಹಿಮಚ್ಛಾದಿತ ಗ್ರೀನ್‌ಲ್ಯಾಂಡ್‌ನ ಅಂಚಿನಲ್ಲಿರುವ ವಿಶ್ವದ ಅತ್ಯಂತ ಹಳೆಯ ಸಂಚಿತ ಶಿಲೆಗಳಾದ ಇಸುವಾ ಹಸಿರುಶಿಲಾ ಪಟ್ಟಿ (Isua Greenstone Belt)ಯ ನಡುವೆ ಪತ್ತೆಹಚ್ಚಲಾಗಿದೆ. ಪಶ್ಚಿಮ ಆಸ್ಟ್ರೇಲಿಯಾದಲ್ಲಿ ಪತ್ತೆಯಾಗಿದ್ದ 22 ಕೋಟಿ ವರ್ಷಗಳ ಹಿಂದಿನ ಪಳೆಯುಳಿಕೆಗಳು, ಇದುವರೆಗೆ ಭೂಮಿ ಮೇಲೆ ಕಂಡು ಬಂದಿದ್ದ ಅತ್ಯಂತ ಹಳೆಯ ಪಳೆಯುಳಿಕೆಯಾಗಿದ್ದವು. ಸ್ಟ್ರೊಮಾಟೊಲೈಟ್ ಪಳೆಯುಳಿಕೆ ಎಂದರೆ ಸೂಕ್ಷ್ಮಾಣು ಜೀವಿ, ಸಾಮಾನ್ಯವಾಗಿ ಬ್ಯಾಕ್ಟೀರಿಯಾಗಳ (ಸಯನೊಬ್ಯಾಕ್ಟೀರಿಯಾ) ಗುಂಪುಗಳಿಂದ ಸೃಷ್ಟಿಯಾಗಿರುವ, ಪದರಗಳನ್ನು ಹೊಂದಿರುವ ಶಿಲಾರಚನೆ.

19. ವಿಶ್ವದ ಅತಿದೊಡ್ಡ ಕಬ್ಬಿಣ ಅದಿರು ಗಣಿ “ಕರಜಸ್ ಗಣಿ (Carajas Mine)” ಯಾವ ದೇಶದಲ್ಲಿದೆ?

ಅ) ಆಸ್ಟ್ರೇಲಿಯಾ

ಆ) ಬ್ರೆಜಿಲ್

ಇ) ಮೆಕ್ಸಿಕೊ

ಈ) ಜರ್ಮನಿ

ಬ್ರೆಜಿಲ್

ಬ್ರೆಜಿಲ್ ನ ಪ್ಯಾರ ರಾಜ್ಯದಲ್ಲಿರುವ ಕರಜಸ್ ಗಣಿ ವಿಶ್ವದ ಅತಿದೊಡ್ಡ ಕಬ್ಬಿಣ ಅದಿರು ಗಣಿಯಾಗಿದೆ.

www.karunaduexams.com

20. ರಾಜ್ಯ ನಾಗರಿಕ ಸೇವಾ ಆಯೋಗದ ಯಾವುದೇ ಸದಸ್ಯರನ್ನು ನೇಮಕ ಮಾಡುವ ಮತ್ತು ವಜಾ ಮಾಡುವ ಅಧಿಕಾರ ಕ್ರಮವಾಗಿ ಯಾರಿಗಿದೆ?

ಅ) ರಾಜ್ಯಪಾಲ, ರಾಷ್ಟ್ರಪತಿ

ಆ) ರಾಜ್ಯಪಾಲ, ರಾಜ್ಯಪಾಲ

ಇ) ರಾಷ್ಟ್ರಪತಿ, ರಾಜ್ಯಪಾಲ

ಈ) ರಾಷ್ಟ್ರಪತಿ, ರಾಷ್ಟ್ರಪತಿ

ರಾಜ್ಯಪಾಲ, ರಾಷ್ಟ್ರಪತಿ

ರಾಜ್ಯ ನಾಗರಿಕ ಸೇವಾ ಆಯೋಗದ ಯಾವುದೇ ಸದಸ್ಯರನ್ನು ರಾಜ್ಯಪಾಲರು ನೇಮಕ ಮಾಡುತ್ತಾರೆ. ಆದರೆ ರಾಷ್ಟ್ರಪತಿಗಳು ಸುಪ್ರೀಂಕೋರ್ಟ್ ವರದಿ ಮೇರಿಗೆ ಸದಸ್ಯರನ್ನು ವಜಾಗೊಳಿಸುವ ಅಧಿಕಾರ ಹೊಂದಿದ್ದಾರೆ.

21. ಯಾವ ರಾಜ್ಯ ಇತ್ತೀಚೆಗೆ ಹೆಣ್ಣು ಮಕ್ಕಳ ಅಭಿವೃದ್ಧಿಗಾಗಿ "ಬಿಜು ಕನ್ಯಾ ರತ್ನ ಯೋಜನಾ" ಯನ್ನು ಆರಂಭಿಸಿದೆ?

ಅ) ಬಿಹಾರ

ಆ) ಮಧ್ಯ ಪ್ರದೇಶ

ಇ) ಹಿಮಾಚಲ ಪ್ರದೇಶ

ಈ) ಉತ್ತರಖಂಡ್

ಬಿಹಾರ

ಬಿಹಾರ ರಾಜ್ಯದ ಮೂರು ಜಿಲ್ಲೆಗಳಲ್ಲಿ ಹೆಣ್ಣು ಮಕ್ಕಳ ಅಭಿವೃದ್ಧಿಗಾಗಿ "ಬಿಜು ಕನ್ಯಾ ರತ್ನ ಯೋಜನೆ"ಗೆ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಚಾಲನೆ ನೀಡಿದರು. ಲಿಂಗಾನುಪಾತದಲ್ಲಿ ತೀರಾ ಹಿಂದೆ ಬಿದ್ದಿರುವ ಬಿಹಾರದ ಮೂರು ಜಿಲ್ಲೆಗಳಾದ ಗಂಜಮ್, ಡೆಂಕನಲ್ ಮತ್ತು ಅಂಗುಲ್ ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು. ಶಿಶು ಮತ್ತು ಮಕ್ಕಳ ಲಿಂಗಾನುಪಾತವನ್ನು ಸುಧಾರಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಇದರ ಜೊತೆಗೆ ಪ್ರಾಥಮಿಕ ಶಿಕ್ಷಣದಲ್ಲಿ ಹೆಣ್ಣು ಮಕ್ಕಳ ನೋಂದಣಿ, ಶಾಲೆ ಬಿಟ್ಟ ಹೆಣ್ಣು ಮಕ್ಕಳನ್ನು ಗುರ್ತಿಸುವುದು ಹಾಗೂ ಹೆಣ್ಣು ಮಕ್ಕಳಿಗೆ ಪೂರಕವಾದ ವಾತಾವರಣ ಸೃಷ್ಟಿಸುವುದು ಈ ಯೋಜನೆಯ ಗುರಿಯಾಗಿದೆ.

22. ಇತ್ತೀಚೆಗೆ ಭಾರತ ಈ ಕೆಳಗಿನ ಯಾವ ದೇಶದೊಂದಿಗೆ ಸಾಗರ ಸಾರಿಗೆ (Maritime Transport) ಕ್ಷೇತ್ರದಲ್ಲಿ ಒಪ್ಪಂದಕ್ಕೆ ಸಹಿ ಹಾಕಿತು?

ಅ) ವಿಯಟ್ನಾಂ

ಆ) ಈಜಿಪ್ಟ್

www.karunaduexams.com

ಇ) ಆಫ್ಘಾನಿಸ್ತಾನ

ಈ) ಚೀನಾ

ಈಜಿಪ್ಟ್

ಸಾಗರ ಸಾರಿಗೆ ಕ್ಷೇತ್ರದಲ್ಲಿ ಪರಸ್ಪರ ಸಹಕಾರ ನೀಡುವ ಸಲುವಾಗಿ ಭಾರತ ಮತ್ತು ಈಜಿಪ್ಟ್ ಸಾಗರ ಸಾರಿಗೆ ಒಪ್ಪಂದಕ್ಕೆ ಸಹಿಹಾಕಿದವು. ಸಾಗರ ಸಾರಿಗೆ ಸಂಬಂಧಿ ವಿಷಯಗಳ ಬಗ್ಗೆ ಪರಸ್ಪರ ಸಹಕಾರ ಮತ್ತು ಸಲಹೆಗಳನ್ನು ವಿನಿಮಯ ಮಾಡಿಕೊಳ್ಳಲು ಈ ಒಪ್ಪಂದ ಅವಕಾಶ ಕಲ್ಪಿಸಲಿದೆ. ಜೊತೆಗೆ ಉಭಯ ದೇಶಗಳ ನಡುವೆ ಸಾಗರ ಸಂಬಂಧವನ್ನು ಬಲಗೊಳಿಸಲು ಮತ್ತು ಸಾಗರ ಸಾರಿಗೆಯನ್ನು ಸುಸ್ಥಿರವಾಗಿ ಅಭಿವೃದ್ಧಿಪಡಿಸಲು ಇದು ಸಹಕಾರಿಯಾಗಲಿದೆ.

23. ಮಹಾನದಿ ನೀರು ಹಂಚಿಕೆ ಈ ಕೆಳಗಿನ ಯಾವ ಎರಡು ರಾಜ್ಯಗಳ ನಡುವೆ ವಿವಾದಕ್ಕೆ ಕಾರಣವಾಗಿದೆ?

ಅ) ಛತ್ತೀಸ್ ಘರ್ ಮತ್ತು ಮಧ್ಯಪ್ರದೇಶ

ಆ) ಮಹಾರಾಷ್ಟ್ರ ಮತ್ತು ಒಡಿಶಾ

ಇ) ಛತ್ತೀಸ್ ಘರ್ ಮತ್ತು ಒಡಿಶಾ

ಈ) ಜಾರ್ಖಂಡ್ ಮತ್ತು ಛತ್ತೀಸ್ ಘರ್

ಛತ್ತೀಸ್ ಘರ್ ಮತ್ತು ಒಡಿಶಾ

ಮಹಾನದಿಯ ಮೇಲೆ ಛತ್ತೀಸ್ ಘರ್ ರಾಜ್ಯ ನಿರ್ಮಿಸುತ್ತಿರುವ ಅಣೆಕಟ್ಟು ವಿವಾದಕ್ಕೆ ಎಡೆಮಾಡಿದೆ. ಈ ಅಣೆಕಟ್ಟು ನಿರ್ಮಾಣದ ಮಾಹಿತಿಯನ್ನು ತನಗೆ ತಿಳಿಸಿಲ್ಲವೆಂದು ಒಡಿಶಾ ಸರ್ಕಾರ ಕೇಂದ್ರದ ಮೊರೆ ಹೋಗಿದೆ. ಅಲ್ಲದೇ ಛತ್ತೀಸ್ ಘರ್ ಮಹಾನದಿಯ ನೀರನ್ನು ಕೇವಲ ಕೃಷಿಗೆ ಬಳಸದೆ ಕೈಗಾರಿಕೆಗಳಿಗೂ ಪೂರೈಸುತ್ತಿದೆ ಎಂದು ಒಡಿಶಾ ಸರ್ಕಾರ ಕಿಡಿಕಾರಿದೆ. ಮಹಾನದಿ ಭಾರತದ ಛತ್ತೀಸ್‌ಗಢ ರಾಜ್ಯದ ಉನ್ನತಪ್ರಾಂತ್ಯದಲ್ಲಿ ಧಮ್ತಾರಿ ಜಿಲ್ಲೆಯಲ್ಲಿ ಉಗಮಿಸುತ್ತದೆ. ಮುಂದೆ ಒಡಿಶಾ ರಾಜ್ಯದ ಮೂಲಕ ಪ್ರವಹಿಸಿ ಬಂಗಾಳ ಕೊಲ್ಲಿಯನ್ನು ಸೇರುತ್ತದೆ. ಮಹಾನದಿಯ ಉದ್ದ ಸುಮಾರು ೮೬೦ ಕಿ.ಮೀ.ಗಳು. ಭಾರತದ ದೊಡ್ಡನದಿಗಳ ಪೈಕಿ ಒಂದಾದ ಮಹಾನದಿಗೆ ಅಡ್ಡಲಾಗಿ ಸಂಬಾಲ್ಪುರದ ಬಳಿ ಜಗತ್ತಿನ ಅತ್ಯಂತ ದೊಡ್ಡ ಮಣ್ಣುಗಾರೆಯ ಆಣೆಕಟ್ಟನ್ನು ನಿರ್ಮಿಸಲಾಗಿದೆ. ಈ ಆಣೆಗೆ ಹಿರಾಕುಡ್ ಆಣೆಕಟ್ಟು ಎಂಬ ಹೆಸರು. ಮಹಾನದಿ ಕಣಿವೆಯ ಫಲವತ್ತಾದ ನೆಲದಲ್ಲಿ ಭತ್ತವನ್ನು ವ್ಯಾಪಕವಾಗಿ ಬೆಳೆಯಲಾಗುತ್ತದೆ. ಮಹಾನದಿಯು ಬ್ರಾಹ್ಮಣಿ ನದಿಯೊಂದಿಗೆ ಸಂಗಮಿಸಿ ಬಂಗಾಳ ಕೊಲ್ಲಿಯನ್ನು ಸೇರುವೆಡೆಯಲ್ಲಿ ಬೃಹತ್ ಮುಖಜಭೂಮಿಯನ್ನು ಸೃಷ್ಟಿಸಿದೆ. ಈ ಮುಖಜಭೂಮಿಯಲ್ಲಿ ಜಂಬೂದ್ವೀಪದ ಅತ್ಯಂತ ವಿಸ್ತಾರವಾದ ಮ್ಯಾಂಗ್ರೋವ್ ಅರಣ್ಯಗಳಿವೆ. ಅಲ್ಲದೆ ಈ ಪ್ರದೇಶವು ಪೂರ್ವ ಭಾರತದ ಭತ್ತದ ಕಣಜವೆಂದು ಕರೆಯಲ್ಪಡುವುದು.

www.karunaduexams.com

24. ಈ ಕೆಳಗಿನ ಯಾವ ದೇಶಗಳಲ್ಲಿ ಭಾರತದ ಆರ್ಥಿಕ ಉಪಸ್ಥಿತಿಯನ್ನು ವೃದ್ದಿಸುವ ಸಲುವಾಗಿ ಕೇಂದ್ರ ಸರ್ಕಾರ ಇತ್ತೀಚೆಗೆ "ಯೋಜನಾ ಅಭಿವೃದ್ಧಿ ನಿಧಿ" ಸ್ಥಾಪಿಸಲು ಸಮ್ಮತಿಸಿದೆ?

I) ಕಾಂಬೋಡಿಯಾ

II) ಲಾವೋಸ್

III) ಮಯನ್ಮಾರ್

IV) ವಿಯಟ್ನಾಂ

ಈ ಕೆಳಗೆ ನೀಡಿರುವ ಕೋಡ್ ಮೂಲಕ ಸರಿಯಾದ ಉತ್ತರವನ್ನು ಗುರುತಿಸಿ:

ಅ) I & II ಮಾತ್ರ

ಆ) II & III ಮಾತ್ರ

ಇ) I, II & III ಮಾತ್ರ

ಈ) ಮೇಲಿನ ಎಲ್ಲವೂ

ಮೇಲಿನ ಎಲ್ಲವೂ

ಕಾಂಬೋಡಿಯಾ, ಲಾವೋಸ್, ಮಯನ್ಮಾರ್ ಮತ್ತು ವಿಯಟ್ನಾಂ (CLMV) ದೇಶಗಳಲ್ಲಿ ಭಾರತದ ಆರ್ಥಿಕ ಉಪಸ್ಥಿತಿಯನ್ನು ವೃದ್ದಿಸುವ ಸಲುವಾಗಿ 500 ಕೋಟಿ ಮೂಲ ಬಂಡವಾಳದ "ಯೋಜನಾ ಅಭಿವೃದ್ಧಿ ನಿಧಿ (Project Development Fund)" ಸ್ಥಾಪಿಸಲು ನರೇಂದ್ರ ಮೋದಿ ನೇತೃತ್ವದ ಸಚಿವ ಸಂಪುಟ ಸಮ್ಮತಿಸಿದೆ. ಕೇಂದ್ರ ವ್ಯವಹಾರ ಇಲಾಖೆಯಡಿಈ ಯೋಜನಾ ಅಭಿವೃದ್ದ ನಿಧಿಯನ್ನು ಸ್ಥಾಪಿಸಲಾಗಿದ್ದು, ಎಕ್ಸಿಂ ಬ್ಯಾಂಕ್ ಮೂಲಕ ಕಾರ್ಯನಿರ್ವಹಿಸಲಿದೆ.

25. ಅಖಿಲ ಭಾರತ ಟೆನಿಸ್ ಅಸೋಸಿಯೇಶ್ನ ಗೌರವ ಅಜೀವ ಅಧ್ಯಕ್ಷರಾಗಿ ಯಾರು ಆಯ್ಕೆಯಾಗಿದ್ದಾರೆ?

ಅ) ಸುಮನ್ ಕಪೂರ್

ಆ) ಹಿರೊನ್ಮಯ್ ಚಟರ್ಜಿ

ಇ) ಅನಿಲ್ ಖನ್ನಾ

ಈ) ದೀಪೆಂದ್ರ ಹೂಡಾ

ಅನಿಲ್ ಖನ್ನಾಏಷ್ಯನ್ ಟೆನಿಸ್ ಫೆಡರೇಶನ್ ಅಧ್ಯಕ್ಷ ಹಾಗೂ ಅಂತಾರಾಷ್ಟ್ರೀಯ ಟೆನಿಸ್ ಫೆಡರೇಶನ್ನ ಉಪಾಧ್ಯಕ್ಷ ಅನಿಲ್ ಖನ್ನಾ ಅಖಿಲ ಭಾರತ ಟೆನಿಸ್ ಅಸೋಸಿಯೇಶನ್ನ(ಎಐಟಿಎ) ಗೌರವ ಆಜೀವ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಎಐಟಿಎ ವಾರ್ಷಿಕ ಮಹಾ ಸಭೆ(ಎಜಿಎಂ)ಯಲ್ಲಿ ಮಾನ್ಯತೆ ಪಡೆದಿರುವ 23 ಘಟಕಗಳಿಂದ ಖನ್ನಾ ಹೆಸರನ್ನು ಈ ಗೌರವಕ್ಕೆ ಅವಿರೋಧವಾಗಿ ಶಿಫಾರಸು ಮಾಡಲಾಯಿತು. ಎಐಟಿಎಯಲ್ಲಿ ಈಗಾಗಲೇ ಇಬ್ಬರು ಆಜೀವ ಗೌರವ ಅಧ್ಯಕ್ಷರಿದ್ದಾರೆ. ಅವರುಗಳೆಂದರೆ ಎಸ್.ಎಂ. ಕೃಷ್ಣ ಹಾಗೂ ಯಶವಂತ್ ಸಿನ್ಹಾ.

www.karunaduexams.com

26. ಯಾವ ನಗರ 65ನೇ ಅಖಿಲ ಭಾರತ ಪೊಲೀಸ್ ಅಥ್ಲೆಟಿಕ್ಸ್ ಚಾಂಪಿಯನ್ ಷಿಪ್ ಆತಿಥ್ಯವಹಿಸಲಿದೆ?

ಅ) ಹೈದ್ರಾಬಾದ್

ಆ) ಮೈಸೂರು

ಇ) ಪುಣೆ

ಈ) ಕೊಲ್ಕತ್ತಾ

ಹೈದ್ರಾಬಾದ್

65ನೇ ಅಖಿಲ ಭಾರತ ಪೊಲೀಸ್ ಅಥ್ಲೆಟಿಕ್ಸ್ ಚಾಂಪಿಯನ್ ಷಿಪ್ ಹೈದ್ರಾಬಾದ್ನ ಬಾಲಯೋಗಿ ಸ್ಟೇಡಿಯಂನಲ್ಲಿ ಆರಂಭಗೊಂಡಿದೆ. ಕೇಂದ್ರ ಕೈಗಾರಿಕೆ ಭದ್ರತ ಪಡೆ ಈ ಬಾರಿಯ ಕ್ರೀಡಾಕೂಟವನ್ನು ಆಯೋಜಿಸಿದ್ದು, ಸೆಪ್ಟೆಂಬರ್ 3 ರಿಂದ 7 ವರೆಗೆ ನಡೆಯಲಿದೆ. ಪ್ಯಾರಮಿಲಿಟರಿ ಪಡೆ ಮತ್ತು ವಿವಿಧ ರಾಜ್ಯಗಳ ಪೊಲೀಸ್ ಇಲಾಖೆಯ 1000 ಕ್ಕೂ ಹೆಚ್ಚು ಅಥ್ಲಿಟಿಕ್ಸ್ ಗಳು ಈ ಕ್ರೀಡಾಕೂಟದಲ್ಲಿ ಭಾಗವಹಿಸಲಿದ್ದಾರೆ.

27. ಪ್ರತಿಷ್ಠಿತ ಪ್ರಯಾಣ ನಿಯತಕಾಲಿಕೆ ಕೊಂಡ್ ನಾಸ್ಟ್ ಟ್ರಾವೆಲರ್(Conde Nast Traveller) ಸಮೀಕ್ಷೆ ಪ್ರಕಾರ ಏಷ್ಯಾದ ಅತ್ಯುತ್ತಮ ಹೋಟೆಲ್ ಯಾವುದು?

ಅ) ಲೇಕ್ ಪ್ಯಾಲೇಸ್, ಉದಯ್ ಪುರ

ಆ) ತಾಜ್ ಹೋಟೆಲ್, ಮುಂಬೈ

ಇ) ದಿ ಓಬೆರಾಯ್ ಅಮರ್ವಿಲಾಸ್, ಆಗ್ರಾ

ಈ) ಉಮ್ಮೈದ್ ಭವನ್ ಪ್ಯಾಲೇಸ್, ಜೋಧ್ ಪುರ

ಲೇಕ್ ಪ್ಯಾಲೇಸ್, ಉದಯ್ ಪುರ

ಪ್ರತಿಷ್ಠಿತ ಪ್ರಯಾಣ ನಿಯತಕಾಲಿಕ ಕೊಂಡ್ ನಾಸ್ಟ್ ಟ್ರಾವೆಲರ್ ನಡೆಸಿರುವ ಸಮೀಕ್ಷೆಯಲ್ಲಿ ರಾಜಸ್ಥಾನದ ಉದಯಪುರದಲ್ಲಿರುವ ತಾಜ್ ಲೇಕ್ ಪ್ಯಾಲೇಸ್ 2016ನೇ ಸಾಲಿನಲ್ಲಿ ಏಷ್ಯಾ ಖಂಡದಲ್ಲೇ ಶ್ರೇಷ್ಠ ಹೋಟೆಲ್ ಎಂಬ ಕೀರ್ತಿಗೆ ಪಾತ್ರವಾಗಿದೆ. ಕೆರಿಬಿಯನ್ ದ್ವೀಪದ ಸೇಂಟ್ ಬರ್ಥ್ಸ್ ನಲ್ಲಿರುವ ಈಡನ್ ರಾಕ್ ಹೋಟೆಲ್ ವಿಶ್ವದ ಅತ್ಯುತ್ತಮ ಹೋಟೆಲ್ ಎಂಬ ಹೆಗ್ಗಳಿಕೆಯನ್ನು ಪಡೆದಿದೆ. 1746 ರಲ್ಲಿ ನಿರ್ಮಿತ ,ಪಿಚೋಲಾ ಕೆರೆಯ ದ್ವೀಪದ ಮಧ್ಯದಲ್ಲಿರುವ ಈ ವೈಭವೋಪೇತ ಅರಮನೆ ಹೋಟೆಲ್ ಈ ಹಿಂದೆ ಜಗ್ ನಿವಾಸ್ ಹೆಸರಲ್ಲಿ ಕರೆಯಲ್ಪಡುತ್ತಿತ್ತು. ಇದರಲ್ಲಿ 17 ಗ್ರ್ಯಾಂಡ್ ಸ್ಯೂಟ್ ಗಳು ಹಾಗು 60 ವಿಲಾಸಿ ರೂಮುಗಳಿವೆ. ದೇಶದ ಪ್ರತಿಷ್ಠಿತ , ದುಬಾರಿ, ವೈಭವದ ಮದುವೆ , ಮಧುಚಂದ್ರಗಳಿಗೆ ಖ್ಯಾತವಾಗಿರುವ ಈ ಹೋಟೆಲನ್ನು ದೇಶದ ಅತ್ಯಂತ ರೊಮ್ಯಾಂಟಿಕ್ ಹೋಟೆಲ್ ಎಂದೂ ಬಣ್ಣಿಸಲಾಗುತ್ತದೆ.

www.karunaduexams.com

28. ಇತ್ತೀಚೆಗೆ ಭಾರತ ಸರ್ಕಾರ ವಿಯೆಟ್ನಾಂನ ರಕ್ಷಣಾ ಕ್ಷೇತ್ರದ ಅಭಿವೃದ್ಧಿಗೆ ಎಷ್ಟು ಮಿಲಿಯನ್ ಡಾಲರ್ ಆರ್ಥಿಕ ನೆರವು ಘೋಷಿಸಿದೆ?

ಅ) 100 ಮಿಲಿಯನ್ ಡಾಲರ್

ಆ) 300 ಮಿಲಿಯನ್ ಡಾಲರ್

ಇ) 500 ಮಿಲಿಯನ್ ಡಾಲರ್

ಈ) 1000 ಮಿಲಿಯನ್ ಡಾಲರ್

500 ಮಿಲಿಯನ್ ಡಾಲರ್

ವಿಯೆಟ್ನಾಂನ ರಕ್ಷಣಾ ಕ್ಷೇತ್ರದ ಅಭಿವೃದ್ಧಿಗೆ ಭಾರತ 500 ಮಿಲಿಯನ್ ಡಾಲರ್ ಆರ್ಥಿಕ ನೆರವು ಘೋಷಿಸಿದೆ. ವಿಯೆಟ್ನಾಂ ಪ್ರವಾಸದಲ್ಲಿರುವ ಭಾರತದ ಪ್ರಧಾನಿ ನರೇಂದ್ರ ಮೋದಿ ಹಾಗೂ ವಿಯೆಟ್ನಾಂ ಪ್ರಧಾನಿ ಗುಯೆನ್ ಕ್ಸುವಾನ್ ಅವರು ಈ ದ್ವಿಪಕ್ಷೀಯ ಒಪ್ಪಂದಗಳಿಗೆ ಸಹಿ ಹಾಕಿದರು. ಇದಲ್ಲದೇ ಉಭಯ ದೇಶಗಳು ಮಾಹಿತಿ ತಂತ್ರಜ್ಞಾನ, ಬಾಹ್ಯಾಕಾಶ, ಸೈಬರ್ ಭದ್ರತೆ ಹಾಗೂ ಆರೋಗ್ಯ ಸೇರಿದಂತೆ 12 ಮಹತ್ವದ ದ್ವಿಪಕ್ಷೀಯ ಒಪ್ಪಂದಗಳಿಗೆ ಸಹಿ ಹಾಕಿವೆ.

29. ಏಷ್ಯಾದ ಅತ್ಯಂತ ಹಳೆಯ ಪುಟ್ಬಾಲ್ ಪಂದ್ಯಾವಳಿ _____?

ಅ) ಫೆಡರೇಷನ್ ಕಪ್

ಆ) ಡುರಾಂಡ್ ಕಪ್

ಇ) ಸಂತೋಷ್ ಟ್ರೋಫಿ

ಈ) ಐಎಫ್ಎ ಶೀಲ್ಡ್

ಡುರಾಂಡ್ ಕಪ್

ಡುರಾಂಡ್ ಕಪ್ ಏಷ್ಯಾದ ಹಾಗೂ ಭಾರತದ ಅತ್ಯಂತ ಹಳೆಯ ಪುಟ್ಬಾಲ್ ಪಂದ್ಯಾವಳಿ ಆಗಿದೆ. 1888 ರಲ್ಲಿ ಡುರಾಂಡ್ ಕಪ್ ಅನ್ನು ಅಂದಿನ ಭಾರತದ ವಿದೇಶಾಂಗ ಕಾರ್ಯದರ್ಶಿ ಮೋರ್ಟಿಮರ್ ಡುರಾಂಡ್ ಅವರು ಶಿಮ್ಲಾದಲ್ಲಿ ಆರಂಭಿಸಿದ್ದರು. ಭಾರತದ ಪುಟ್ಬಾಲ್ ತಂಡಗಳ ಪೈಕಿ ಅತ್ಯಂತ ಹಳೆಯ ತಂಡವೆಂದರೆ ಮೋಹುನ್ ಭಾಗನ್ ಪುಟ್ಬಾಲ್ ತಂಡ. ಇದನ್ನು 1889 ರಲ್ಲಿ ಸ್ಥಾಪಿಸಲಾಗಿದೆ.

30. ಇತ್ತೀಚೆಗೆ ಸುದ್ದಿಯಲ್ಲಿರುವ ಬ್ರುಸೆಲ್ಲೋಸಿಸ್ (Brucellosis) ರೋಗಕ್ಕೆ ಸಂಬಂಧಿಸಿದಂತೆ ಹೇಳಿಕೆಗಳನ್ನು ಗಮನಿಸಿ:

I) ಬ್ರುಸೆಲ್ಲೋಸಿಸ್ ಬ್ಯಾಕ್ಟೀರಿಯಾದಿಂದ ಜಾನುವಾರುಗಳಿಗೆ ಹರಡಬಲ್ಲ ಮಾರಣಂತಿಕ ರೋಗವಾಗಿದೆ

II) ಸೋಂಕಿತ ಪ್ರಾಣಿಗಳ ಸಂಪರ್ಕದಿಂದ ಮನುಷ್ಯರಲ್ಲೂ ಈ ರೋಗ ಹರಡಬಲ್ಲದಾಗಿದೆ

ಮೇಲಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆ/ಹೇಳಿಕೆಗಳು ಯಾವುವು?

ಅ) ಹೇಳಿಕೆ ಒಂದು ಮಾತ್ರ

ಆ) ಹೇಳಿಕೆ ಎರಡು ಮಾತ್ರ

www.karunaduexams.com

ಇ) ಎರಡು ಹೇಳಿಕೆ ಸರಿಯಾಗಿವೆ

ಈ) ಎರಡು ಹೇಳಿಕೆ ತಪ್ಪಾಗಿವೆ

ಎರಡು ಹೇಳಿಕೆ ಸರಿಯಾಗಿವೆ

ಬ್ರುಸೆಲ್ಲೋಸಿಸ್ ಬ್ಯಾಕ್ಟೀರಿಯಾದಿಂದ ಜಾನುವಾರುಗಳಿಗೆ ಹರಡಬಲ್ಲ ಮಾರಣಾಂತಿಕ ರೋಗವಾಗಿದೆ. ಹಸು, ಮೇಕೆ, ಒಂಟೆ, ಹಂದಿ ಮತ್ತು ನಾಯಿಗಳಲ್ಲೂ ಈ ರೋಗ ಕಂಡುಬರುತ್ತದೆ. ಹಸುಗಳಲ್ಲಿ ಗರ್ಭಪಾತವಾಗುವುದು ರೋಗದ ಪ್ರಮುಖ ಲಕ್ಷಣವಾಗಿದೆ. ಸೋಂಕಿತ ಪ್ರಾಣಿಗಳ ಮಾಂಸ, ಹಾಲು ಮತ್ತು ಇತರೆ ಯಾವುದೇ ಮೂಲಗಳಿಂದ ಸಂಪರ್ಕಕ್ಕೆ ಬಂದಾಗ ಮನುಷ್ಯರಿಗೂ ಈ ರೋಗ ಹರಡುತ್ತದೆ. ಇತ್ತೀಚೆಗೆ ಕೋಲಾರದಲ್ಲಿರುವ ಶಾಸಕ ವರ್ತೂರು ಪ್ರಕಾಶ್ ಫಾರ್ಮ್ ಹೌಸ್‌ನಲ್ಲಿ ರೋಗಾಣು ಪತ್ತೆಯಾಗಿದೆ. 988 ಹಸುಗಳಲ್ಲಿ 49 ಹಸುಗಳಲ್ಲಿ ಈ ಬ್ಯಾಕ್ಟೀರಿಯಾ ಪತ್ತೆಯಾಗಿದೆ. ಮುನ್ನೆಚ್ಚರಿಕೆ ಕ್ರಮವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದು, ಫಾರ್ಮ್‌ಹೌಸ್‌ನಲ್ಲಿರುವ ಹಸುಗಳ ಹಾಲು ಮಾರಾಟಕ್ಕೆ ನಿಷೇಧ ಮಾಡಲಾಗಿದೆ. ಆ ಭಾಗದ ಸುತ್ತಮುತ್ತ ಹಸುಗಳುಗೆ ಪರೀಕ್ಷೆ ಮಾಡಲು ಆದೇಶಿಸಿದ್ದು, ಸೋಂಕು ದೃಢಪಟ್ಟ ಹಸುಗಳಿಗೆ ದಯಾಮರಣಕ್ಕೆ ಆದೇಶಿಸಲಾಗಿದೆ.

31. ವಿಶ್ವ ಆರೋಗ್ಯ ಸಂಸ್ಥೆ ಇತ್ತೀಚೆಗೆ ಯಾವ ರಾಷ್ಟ್ರವನ್ನು "ಮಲೇರಿಯಾ ಮುಕ್ತ" ರಾಷ್ಟ್ರವೆಂದು ಘೋಷಿಸಿದೆ?

ಅ) ಭಾರತ

ಆ) ಶ್ರೀಲಂಕಾ

ಇ) ಭೂತಾನ್

ಈ) ಬಾಂಗ್ಲದೇಶ

ಶ್ರೀಲಂಕಾ

ವಿಶ್ವ ಆರೋಗ್ಯ ಸಂಸ್ಥೆ ಶ್ರೀಲಂಕಾ ದೇಶವನ್ನು ಮಲೇರಿಯಾ ಮುಕ್ತ ರಾಷ್ಟ್ರವೆಂದು ಘೋಷಿಸಿದೆ. ಸೊಳ್ಳೆಯಿಂದ ಹರಡುವ ಈ ರೋಗವನ್ನು ಸಂಪೂರ್ಣವಾಗಿ ತಡೆಯುವ ಮೂಲಕ ಆರೋಗ್ಯ ಕ್ಷೇತ್ರದಲ್ಲಿ ಐತಿಹಾಸಿಕ ಸಾಧನೆಯನ್ನು ಶ್ರೀಲಂಕಾ ಮಾಡಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಪ್ರಶಂಸಿದೆ. ಆರು ವರ್ಷಗಳ ಹಿಂದೆ ಶ್ರೀಲಂಕಾ ತೀವ್ರವಾಗಿ ಮಲೇರಿಯಾ ರೋಗಕ್ಕೆ ತುತ್ತಾಗಿತ್ತು, ಆದರೆ ಶ್ರೀಲಂಕಾ ಸರ್ಕಾರ ಕೈಗೊಂಡ ಹಲವು ಕ್ರಮಗಳಿಂದ ಕಳೆದ 3.5 ವರ್ಷಗಳಿಂದ ಯಾವುದೇ ಮಲೇರಿಯಾ ಪ್ರಕರಣಗಳು ಪತ್ತೆಯಾಗಿಲ್ಲ. ಆಗಾಗಿ ಶ್ರೀಲಂಕಾವನ್ನು ಮಲೇರಿಯಾ ಮುಕ್ತ ರಾಷ್ಟ್ರವೆಂದು ಘೋಷಿಸಲಾಗಿದೆ. ಈ ಹಿಂದೆ ಯುನೈಟೆಡ್ ಅರಬ್ ಎಮಿರೇಟ್ಸ್ (2007), ಮೊರೊಕ್ಕೊ (2010), ತರ್ಕಮೆನಿಸ್ತಾನ (2010) ಮತ್ತು ಮಾಲ್ಡೀವ್ಸ್ (2015) ರಲ್ಲಿ ಮಲೇರಿಯಾ ಮುಕ್ತ ರಾಷ್ಟ್ರಗಳೆಂದು ಘೋಷಿಸಲಾಗಿದೆ. ಭಾರತ 2030ಕ್ಕೆ ಮಲೇರಿಯಾ ಮುಕ್ತರಾಷ್ಟ್ರವನ್ನಾಗಿಸುವ ಗುರಿ ಹೊಂದಿದೆ.

www.karunaduexams.com

32. ಇತ್ತೀಚೆಗೆ ಭಾರತ ಚುನಾವಣಾ ಆಯೋಗ ಯಾವ ರಾಜಕೀಯ ಪಕ್ಷಕ್ಕೆ ರಾಷ್ಟ್ರೀಯ ಪಕ್ಷ ಸ್ಥಾನಮಾನ ನೀಡಿದೆ?

ಅ) ಅಮ್ ಆದ್ಮಿ ಪಕ್ಷ

ಆ) ಎಐಎಡಿಎಂಕೆ

ಇ) ಬಿಜು ಜನತಾ ದಳ

ಈ) ಅಖಿಲ ಭಾರತ ತೃಣಮೂಲ ಕಾಂಗ್ರೆಸ್

ಅಖಿಲ ಭಾರತ ತೃಣಮೂಲ ಕಾಂಗ್ರೆಸ್

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೇತೃತ್ವದ ಅಖಿಲ ಭಾರತ ತೃಣಮೂಲ ಕಾಂಗ್ರೆಸ್ ಪಕ್ಷಕ್ಕೆ ರಾಷ್ಟ್ರೀಯ ಪಕ್ಷ ಸ್ಥಾನವನ್ನು ಭಾರತೀಯ ಚುನಾವಣಾ ಆಯೋಗ ನೀಡಿದೆ. ರಾಷ್ಟ್ರೀಯ ಪಕ್ಷದ ಸ್ಥಾನಮಾನ ಪಡೆಯಲು ಬೇಕಾದ ಮಾನದಂಡಗಳ ಪೈಕಿ ಒಂದನ್ನು (4 ಅಥವಾ ಅದಕ್ಕಿಂತ ಹೆಚ್ಚು ರಾಜ್ಯಗಳಲ್ಲಿ ರಾಜ್ಯ ಪಕ್ಷದ ಸ್ಥಾನಮಾನ ಪಡೆದಿರಬೇಕು) ಟಿಎಂಸಿ ಪೂರೈಸಿದೆ. ಹೀಗಾಗಿ ಚುನಾವಣಾ ಆಯೋಗ ಟಿಎಂಸಿಯನ್ನು ರಾಷ್ಟ್ರೀಯ ಪಕ್ಷವನ್ನಾಗಿ ಪರಿಗಣಿಸಲು ಒಪ್ಪಿಕೊಂಡಿದೆ. ಪ್ರಸ್ತುತ ಟಿಎಂಸಿ ಪಶ್ಚಿಮಬಂಗಾಳದಲ್ಲಿ ಆಡಳಿತ ಚುಕ್ಕಾಣಿ ಹಿಡಿದಿದೆ ಹಾಗೂ ಈಶಾನ್ಯ ರಾಜ್ಯಗಳಾದ ತ್ರಿಪುರಾ, ಅರುಣಾಚಲ ಪ್ರದೇಶ ಮತ್ತು ಮಣಿಪುರದಲ್ಲಿ ಟಿಎಂಸಿ ರಾಜ್ಯ ಪಕ್ಷ ಎನಿಸಿಕೊಂಡಿದೆ. ಚುನಾವಣಾ ಆಯೋಗದ ಈ ನಿರ್ಧಾರದಿಂದ ತೃಣಮೂಲ ಕಾಂಗ್ರೆಸ್ 7ನೇ ರಾಷ್ಟ್ರೀಯ ಪಕ್ಷ ಎನಿಸಿಕೊಂಡಿದೆ. ಸದ್ಯ ಕಾಂಗ್ರೆಸ್, ಬಿಜೆಪಿ, ಬಿಎಸ್‌ಪಿ, ಎನ್‌ಸಿಪಿ, ಸಿಪಿಐ ಮತ್ತು ಸಿಪಿಎಂಗಳು ರಾಷ್ಟ್ರೀಯ ಪಕ್ಷದ ಮಾನ್ಯತೆ ಪಡೆದಿವೆ.

33. ಈ ಕೆಳಗಿನ ಯಾವ ರಾಜ್ಯಗಳಲ್ಲಿ ಎಲ್ಲಾ ಹಳ್ಳಿಗಳು ಮೊಬೈಲ್ ಸೇವೆಯನ್ನು ಹೊಂದಿವೆ?

I) ಮಹಾರಾಷ್ಟ್ರ

II) ಕರ್ನಾಟಕ

III) ಛತ್ತೀಸ್ ಘರ್

IV) ಕೇರಳ

ಈ ಕೆಳಗೆ ನೀಡಿರುವ ಕೋಡ್ ಮೂಲಕ ಸರಿಯಾದ ಉತ್ತರವನ್ನು ಆಯ್ಕೆಮಾಡಿ:

ಅ) I, II & III

ಆ) II & IV

ಇ) I & III

ಈ) I, II, III & IV

II & IV

ಒಡಿಶಾ ರಾಜ್ಯ ಮೊಬೈಲ್ ಸೇವೆ ಇಲ್ಲದ ಅತಿ ಹೆಚ್ಚು ಹಳ್ಳಿಗಳನ್ನು ಹೊಂದಿರುವ ಮೂಲಕ ಮೊದಲ ಸ್ಥಾನದಲ್ಲಿದೆ. ಒಡಿಶಾದಲ್ಲಿ 10,398 ಹಳ್ಳಿಗಳು ಮೊಬೈಲ್ ಸೇವೆಯಿಂದ ವಂಚಿತವಾಗಿದೆ. ಎರಡನೇ ಸ್ಥಾನದಲ್ಲಿ ಜಾರ್ಖಂಡ್ ಇದ್ದು, 5,949 ಹಳ್ಳಿಗಳಿಗೆ ಮೊಬೈಲ್ ಸೇವೆ ನೀಡಬೇಕಿದೆ. ಮದ್ಯಪ್ರದೇಶ (5,926) ಮತ್ತು ಮಹಾರಾಷ್ಟ್ರ (4,792) ಕ್ರಮವಾಗಿ

ಮೂರನೇ ಮತ್ತು ನಾಲ್ಕನೇ ಸ್ಥಾನದಲ್ಲಿವೆ. ಕೇರಳ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಎಲ್ಲಾ ಹಳ್ಳಿಗಳು ಮೊಬೈಲ್ ಸೇವೆಯನ್ನು ಹೊಂದಿವೆ.

34. 2016 ಜಿ-20 ರಾಷ್ಟ್ರಗಳ ಶೃಂಗಸಭೆ ಚೀನಾದ ಯಾವ ನಗರದಲ್ಲಿ ಇತ್ತೀಚೆಗೆ ಆರಂಭಗೊಂಡಿತು?

ಅ) ಬೀಜಿಂಗ್

ಆ) ಶಾಂಘೈ

ಇ) ಹಂಗ್ ಝೌ

ಈ) ಹುಯಾನ್

ಹಂಗ್ ಝೌ

ಜಿ-20 ದೇಶಗಳ ಎರಡು ದಿನಗಳ ಶೃಂಗಸಭೆಯು ಚೀನಾ ಹಂಗ್ ಝೌನಲ್ಲಿ ಸೆಪ್ಟೆಂಬರ್ 4 ರಂದು ಆರಂಭಗೊಂಡಿತು. ಕುಂಠಿತಗೊಂಡಿರುವ ಜಾಗತಿಕ ಆರ್ಥಿಕತೆ, ಆರ್ಥಿಕ ರಕ್ಷಣಾ ನೀತಿಯ ಏರಿಕೆ, ಜಾಗತಿಕ ವ್ಯಾಪಾರ ಮತ್ತು ಉದ್ಯೋಗ ಸೃಷ್ಟಿಯ ವಿಸ್ತರಣೆಗೆ ರಚನಾತ್ಮಕ ಸುಧಾರಣೆಗಳು, ಆವಿಷ್ಕಾರ, ಒಳಗೊಳ್ಳುವ ಬೆಳವಣಿಗೆ ಮತ್ತು ಹವಾಮಾನ ಆರ್ಥಿಕತೆ ಇವು ಶೃಂಗಸಭೆಯಲ್ಲಿ ಚರ್ಚೆಗೆ ಬರಲಿರುವ ಪ್ರಮುಖ ವಿಷಯಗಳಾಗಿವೆ.ಪ್ರಧಾನಿ ನರೇಂದ್ರ ಮೋದಿ, ಅಮೆರಿಕ ಅಧ್ಯಕ್ಷ ಬರಾಕ್ ಒಬಾಮ, ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್, ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಸೇರಿದಂತೆ ಜಗತ್ತಿನ ಪ್ರಮುಖ ದೇಶಗಳ ನಾಯಕರು ಆರ್ಥಿಕ ಬೆಳವಣಿಗೆ ಮತ್ತು ವ್ಯಾಪಾರದ ವೃದ್ಧಿಗೆ ಅಗತ್ಯವಾದ ಪ್ರಯತ್ನಗಳ ಕುರಿತು ಸಮಾಲೋಚನೆ ನಡೆಸಲಿದ್ದಾರೆ.

35. ವಿಶ್ವದ ಅಗ್ರಮಾನ್ಯ ಆಟಗಾರ್ತಿ ಸೆರೆನಾ ವಿಲಿಯಮ್ಸ್ ಗ್ರ್ಯಾಂಡ್ ಸ್ಲಾಮ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ 307ನೇ ಗೆಲುವು ಗಳಿಸಿ ಯಾರ ದಾಖಲೆಯನ್ನು ಅಳಿಸಿ ಹಾಕಿದರು?

ಅ) ಮಾರ್ಟಿನಾ ನವ್ರಟಿಲೋವಾ

ಆ) ಜೊಹಾನ್ನ ಲಾರ್ಸನ್

ಇ) ವಿಕ್ಟೋರಿಯಾ ಅಜೆರೆಕಾ

ಈ) ವೀನಸ್ ವಿಲಿಯಮ್ಸ್

ಮಾರ್ಟಿನಾ ನವ್ರಟಿಲೋವಾ

ವಿಶ್ವದ ಅಗ್ರಮಾನ್ಯ ಆಟಗಾರ್ತಿ ಅಮೆರಿಕದ ಸೆರೆನಾ ವಿಲಿ ಯಮ್ಸ್ ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿ ಸೇರ್ಪಡೆಯಾಗಿದೆ. 22 ಗ್ರ್ಯಾಂಡ್ ಸ್ಲಾಮ್ ಗಳ ಒಡತಿ ಸೆರೆನಾ ಅವರು ಗ್ರ್ಯಾಂಡ್ ಸ್ಲಾಮ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ 307ನೇ ಗೆಲುವು ಗಳಿಸಿ ಟೆನಿಸ್ ದಂತಕತೆ ಮಾರ್ಟಿನಾ ನವ್ರಟಿಲೋವಾ ಅವರ ದಾಖಲೆ ಅಳಿಸಿ ಹಾಕಿದ್ದಾರೆ. ಅಷ್ಟೇ ಅಲ್ಲದೆ ಸ್ವಿಟ್ಜರ್ಲೆಂಡ್ನ ರೋಜರ್ ಫೆಡರರ್ ಹೆಸರಿನಲ್ಲಿರುವ ಸಾಧನೆಯನ್ನು ಸೆರೆನಾ ಸರಿಗಟ್ಟಿದ್ದಾರೆ.

www.karunaduexams.com

ಋತುವಿನ ಕೊನೆಯ ಗ್ರ್ಯಾಂಡ್ಸ್ಲಾಮ್ ಅಮೆರಿಕ ಓಪನ್ನ ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ನಾಲ್ಕನೇ ಸುತ್ತು ಪ್ರವೇಶಿಸಿ ಸೆರೆನಾ ಈ ಸಾಧನೆ ಮಾಡಿದ್ದಾರೆ.

36. ಮಾಜಿ ಕ್ರಿಕೆಟಿಗ ಸಚಿನ್ ತೆಂಡೂಲ್ಕರ್ ಯಾವ ರಾಜ್ಯದ ಮದ್ಯ ಮತ್ತು ಮಾಧಕ ವಸ್ತು ವಿರೋಧಿ ಅಭಿಯಾನದ ರಾಯಭಾರಿಯಾಗಿ ನೇಮಕಗೊಂಡಿದ್ದಾರೆ?

ಅ) ಮಹಾರಾಷ್ಟ್ರ

ಆ) ತೆಲಂಗಣ

ಇ) ಕೇರಳ

ಈ) ಗೋವಾ

ಕೇರಳ

ಕೇರಳ ಸರ್ಕಾರ ಮಾಜಿ ಕ್ರಿಕೆಟಿಗ ಸಚಿನ್ ತೆಂಡೂಲ್ಕರ್ ರವರನ್ನು ಮದ್ಯ ಮತ್ತು ಮಾಧಕ ವಸ್ತು ವಿರೋಧಿ ಅಭಿಯಾನದ ರಾಯಭಾರಿಯನ್ನಾಗಿ ನೇಮಕ ಮಾಡಿದೆ. ಈ ಅಭಿಯಾನದಡಿ ಮದ್ಯ ಮತ್ತು ಮಾಧಕ ವಸ್ತು ಸೇವೆನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲಾಗುವುದು.

37. "ಮುನ್ನು: ಎ ಬಾಯ್ ಫ್ರಮ್ ಕಾಶ್ಮೀರ್ (Munnu: A Boy From Kashmir)" ಪುಸ್ತಕದ ಲೇಖಕರು ಯಾರು?

ಅ) ಮಲಿಕ್ ಸಜದ್

ಆ) ಅನುರಾಧ ರಾವ್

ಇ) ದಿನೇಶ್ ಠಾಕೂರ್

ಈ) ಸ್ವಾತಿ ಚತುರ್ವೇದಿ

ಮಲಿಕ್ ಸಜದ್

"ಮುನ್ನು: ಎ ಬಾಯ್ ಫ್ರಮ್ ಕಾಶ್ಮೀರ್" ಪುಸ್ತಕವನ್ನು ಮಲಿಕ್ ಸಜದ್ ಬರೆದಿದ್ದಾರೆ. ಸಂಘರ್ಷದಿಂದ ಕೂಡಿರುವ ಕಾಶ್ಮೀರದಲ್ಲಿ ಹುಟ್ಟಿ ಬೆಳದ ಹುಡುಗನೊಬ್ಬನ ಹೃದಯ ವಿದ್ರಾವಕ ಘಟನೆಯನ್ನು ಈ ಪುಸ್ತಕದಲ್ಲಿ ಚಿತ್ರಿಸಲಾಗಿದೆ.

38. ಕೇಂದ್ರ ಸರ್ಕಾರ ಜಮ್ಮು ಮತ್ತು ಕಾಶ್ಮೀರದಲ್ಲಿ ಪೆಲೆಟ್ ಗನ್ ಬದಲು ಪಾವಾ ಶೆಲ್ ಗಳನ್ನು ಬಳಸಲು ಒಪ್ಪಿಗೆ ನೀಡಿದೆ. ಪಾವಾ ಶೆಲ್ ಗಳನ್ನು ಈ ಕೆಳಗಿನ ಯಾವ ಸಂಸ್ಥೆ ಅಭಿವೃದ್ದಿಪಡಿಸಿದೆ?

ಅ) ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಕೆಮಿಕಲ್ ಟೆಕ್ನಾಲಜಿ

ಆ) ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟಾಕ್ಸಿಕಾಲಜಿ ರಿಸರ್ಚ್

ಇ) ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಕೆಮಿಕಲ್ ಬಯಾಲಜಿ

ಈ) ಇಂಡಿಯನ್ ಆರ್ಡಿನೆನ್ಸ್ ಫ್ಯಾಕ್ಟರಿ

ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟಾಕ್ಸಿಕಾಲಜಿ ರಿಸರ್ಚ್

ಕಾಶ್ಮೀರದಲ್ಲಿ ನಡೆಯುತ್ತಿರುವ ಹಿಂಸಾಚಾರದ ವೇಳೆ ಜನರನ್ನು ನಿಯಂತ್ರಿಸಲು ಪೆಲೆಟ್ ಗನ್ ಬದಲಿಗೆ ಪಾವಾ ಶೆಲ್ಸ್ ಬಳಸಲು ಕೇಂದ್ರ ಗೃಹ ಸಚಿವಾಲಯ ನಿರ್ಧರಿಸಿದೆ. ಪಾವಾ ಶೆಲ್ಸ್ ಅಥವಾ ಪೆಲರ್ಗೊನಿಕ್ ಆಸಿಡ್ ವನಿಲಿಲ್ಲ್ ಅಮೈಡ್ (Pelargonic Acid Vanillyl Amide (PAVA)) ಮೆಣಸಿನಪುಡಿ ಆಧಾರಿತ ಗ್ರೆನೇಡ್ ಆಗಿದ್ದು, ನೊನಿವಮೈಡ್ (Nonivamide) ಎಂತಲೂ ಕರೆಯಲಾಗುತ್ತದೆ. ಪೆಲೆಟ್ ಗನ್ಗೆ ಹೋಲಿಸಿದರೆ ಇದು ಕಡಿಮೆ ಅಪಾಯಕಾರಿಯಾಗಿದ್ದು,ದೇಹಕ್ಕೆ ಯಾವುದೇ ಹಾನಿಯಾಗುವುದಿಲ್ಲ. ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರೀಯಲ್ ರಿಸರ್ಚ್ (CSIR)ನ ಅಂಗಸಂಸ್ಥೆಯಾದ ಇಂಡಿಯನ್ ಇನ್ಸ್ ಟಿಟ್ಯೂಟ್ ಆಫ್ ಟಾಕ್ಸಿಕಲಾಜಿ ಪಾವಾ ಸೆಲ್ ಅನ್ನು ಅಭಿವೃದ್ದಿಪಡಿಸಿದೆ. ಕೇಂದ್ರ ಸರ್ಕಾರ ಇತ್ತೀಚೆಗೆ ರಚಿಸಿದ್ದ ಟಿವಿಎಸ್ಎನ್ ಪ್ರಸಾದ್ ನೇತೃತ್ವದ ಸಮಿತಿಯ ಶಿಫಾರಸ್ಸಿನ ಮೇರೆಗೆ ಪಾವಾ ಶೆಲ್ ಬಳಸಲು ತೀರ್ಮಾನಿಸಲಾಗಿದೆ.

39. ಇತ್ತೀಚೆಗೆ ನಿಧನರಾದ "ನಳಿನಿಧಾರ್ ಭಟ್ಟಚಾರ್ಯ"ರವರು ಯಾವ ರಾಜ್ಯದ ಪ್ರಸಿದ್ದ ಕವಿ ಆಗಿದ್ದಾರೆ?

ಅ) ಅಸ್ಸಾಂ

ಆ) ಕೇರಳ

ಇ) ಮಧ್ಯ ಪ್ರದೇಶ

ಈ) ಗುಜರಾತ್

ಅಸ್ಸಾಂ

ಅಸ್ಸಾಮಿ ಭಾಷೆಯ ಪ್ರಸಿದ್ಧ ಕವಿ, ವಿಮರ್ಶಕ ಮತ್ತು ಪ್ರಬಂಧಕಾರ ನಳಿನಿಧಾರ್ ಭಟ್ಟಚಾರ್ಯ ನಿಧನರಾದರು. 95 ವರ್ಷದ ಭಟ್ಟಚಾರ್ಯ ವಯೋಸಹಜಮಾನದ ಕಾಯಿಲೆಯಿಂದ ಬಳಲುತ್ತಿದ್ದರು. ಅಸ್ಸಾಂ ಸಾಹಿತ್ಯ ಸಭಾ ಅವರಿಗೆ ಸಾಹಿತ್ಯಚಾರ್ಯ ಬಿರುದನ್ನು 2010 ರಲ್ಲಿ ನೀಡಿ ಗೌರವಿಸಿತ್ತು. ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಸೇವೆ ಸಲ್ಲಿಸಿದ್ದ ಅವರಿಗೆ 1983 ರಲ್ಲಿ ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ, 1991 ರಲ್ಲಿ ಭಾರತೀಯ ಭಾಷಾ ಪರಿಷದ್ ಪ್ರಶಸ್ತಿ, 2002 ರಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು 2006 ರಲ್ಲಿ ಅಸ್ಸಾಂ ವ್ಯಾಲಿ ಸಾಹಿತ್ಯ ಪ್ರಶಸ್ತಿಗಳು ಲಭಿಸಿವೆ.

40. 2016 ಇಟಾಲಿಯನ್ ಗ್ರ್ಯಾನ್ ಪ್ರಿ ಫಾರ್ಮೂಲಾ-1 ಚಾಂಪಿಯನ್ಷಿಪ್ ನಲ್ಲಿ ಪ್ರಶಸ್ತಿ ಗೆದ್ದವರು ಯಾರು?

ಅ) ಸೆಬಾಸ್ಟಿಯನ್ ವೆಟಾಲ್

ಆ) ನಿಕೊ ರೋಸ್ಬರ್ಗ್

ಇ) ಲೂಯಿಸ್ ಹ್ಯಾಮಿಲ್ಟನ್

ಈ) ಸರ್ಜಿಯೊ ಪೆರೆಜ್

ನಿಕೊ ರೋಸ್ಬರ್ಗ್

www.karunaduexams.com

ಮರ್ಸಿಡೀಸ್ ತಂಡದ ನಿಕೊ ರೋಸ್ಬರ್ಗ್ ಇಟಾಲಿಯನ್ ಗ್ರ್ಯಾನ್ ಪ್ರಿ ಫಾರ್ಮುಲಾ-1 ಚಾಂಪಿಯನ್ಷಿಪ್ನಲ್ಲಿ ಪ್ರಶಸ್ತಿ ಎತ್ತಿಹಿಡಿದಿದ್ದಾರೆ.ಇದೇ ತಂಡದ ಲೂಯಿಸ್ ಹ್ಯಾಮಿಲ್ಟನ್ ಎರಡನೇ ಸ್ಥಾನ ಗಳಿಸಿದರೆ, ಫೆರಾರಿ ತಂಡದ ಸೆಬಾಸ್ಟಿಯನ್ ವೆಟಲ್ ಮೂರನೇಯವರಾಗಿ ಸ್ಪರ್ಧೆ ಕೊನೆಗೊಳಿಸಿದರು.

41. ಅಂತಾರಾಷ್ಟ್ರೀಯ ಪರಿಸರ ಸಂರಕ್ಷಣಾ ಒಕ್ಕೂಟ (IUCN) ನೀಡುವ ಹೇರಿಟೇಜ್ ಹೀರೋಸ್ (Heritage Heroes) ಪ್ರಶಸ್ತಿ ಪಡೆದ ಭಾರತದ ಪರಿಸರಶಾಸ್ತ್ರಜ್ಞ ಮತ್ತು ಸಂರಕ್ಷಣಗಾರ ಯಾರು?

ಅ) ನಿಖಿಲ್ ಚೋಪ್ರಾ

ಆ) ಬಿಭೂತಿ ಲಹ್ಕರ್

ಇ) ಅನಿಲ್ ಗೋಸ್ವಾಮಿ

ಈ) ಸುರೇಶ್ ಚಂದ್ರ

ಬಿಭೂತಿ ಲಹ್ಕರ್

ಭಾರತದ ಪರಿಸರಶಾಸ್ತ್ರಜ್ಞ ಮತ್ತು ಸಂರಕ್ಷಣಗಾರ ಬಿಭೂತಿ ಲಹ್ಕರ್ ಅವರು ಅಂತಾರಾಷ್ಟ್ರೀಯ ಪರಿಸರ ಸಂರಕ್ಷಣಾ ಒಕ್ಕೂಟ ನೀಡುವ ಪ್ರತಿಷ್ಠಿತ ಹೇರಿಟೇಜ್ ಹೀರೋಸ್ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಆ ಮೂಲಕ ಪ್ರಸಿದ್ಧ ಪ್ರಶಸ್ತಿಯನ್ನು ಪಡೆದ ಏಷ್ಯಾದ ಹಾಗೂ ಭಾರತದ ಮೊದಲಿಗ ಎಂಬ ಖ್ಯಾತಿಗೆ ಪಾತ್ರರಾಗಿದ್ದಾರೆ. ಜಾಗತಿಕ ಮಟ್ಟದಲ್ಲಿ ಪರಿಸರ ಸಂರಕ್ಷಣೆಗೆ ಗಣನೀಯ ಸೇವೆ ನೀಡಿದವರಿಗೆ ನೀಡಲಾಗುವ ಈ ಪ್ರಶಸ್ತಿಗೆ ವಿಶ್ವದ ಐದು ಜನರನ್ನು ನಾಮನಿರ್ದೇನ ಮಾಡಲಾಗಿತ್ತು. ಅಸ್ಸಾಂನ ಮಾನಸ್ ಮತ್ತು ಕಾಜೀರಂಗ ರಾಷ್ಟ್ರೀಯ ಉದ್ಯಾನವನದಲ್ಲಿ ಹುಲ್ಲುಗಾವಲ ಬಗ್ಗೆ ಆಳವಾಗಿ ಸಂಶೋಧನೆ ಮಾಡಿರುವ ಲಹ್ಕರ್ ಪರಿಸರ ಸಂರಕ್ಷಣೆಗೆ ತಮ್ಮನ್ನು ತಾವೇ ಅರ್ಪಿಸಿಕೊಂಡಿದ್ದಾರೆ.

42. ಈ ಕೆಳಗಿನ ಯಾವ ಸಸ್ತನಿ/ಸಸ್ತನಿಗಳನ್ನು ಐಯುಸಿನ್ ಅಪಾಯದ ಅಂಚಿನಲ್ಲಿರುವ ಗುಂಪಿಗೆ ಸೇರಿಸಲಾಗಿದೆ?

I) ಈಸ್ಟರ್ನ್ ಗೊರಿಲ್ಲಾ

II) ವೆಸ್ಟರ್ನ್ ಗೊರಿಲ್ಲಾ

III) ಬೊರ್ನಿಯನ್ ಒರಾಂಗುಟನ್

IV) ಸುಮಾತ್ರನ್ ಒರಾಂಗುಟನ್

ಈ ಕೆಳಗೆ ನೀಡಿರುವ ಕೋಡ್ ಮೂಲಕ ಸರಿಯಾದ ಉತ್ತರವನ್ನು ಗುರುತಿಸಿ:

ಅ) I & II

ಆ) II & III

ಇ) III & IV

ಈ) I, II, III & IV

I, II, III & IV

ಇತ್ತೀಚೆಗೆ ಹವಾಯಿಯಲ್ಲಿ ನಡೆದ ಅಂತಾರಾಷ್ಟ್ರೀಯ ಪರಿಸರ ಸಂರಕ್ಷಣಾ ಒಕ್ಕೂಟ (IUCN) ಕಾಂಗ್ರೆಸ್ನಲ್ಲಿ ಸದ್ಯ ಬದುಕಿರುವ ದೊಡ್ಡ ಸಸ್ತನಿ ಎನಿಸಿರುವ ಈಸ್ಟರ್ನ್ ಗೊರಿಲ್ಲಾವನ್ನು ತೀರಾ ಅಪಾಯದ ಅಂಚಿನಲ್ಲಿರುವ ಪ್ರಭೇದದ ಗುಂಪಿಗೆ ಸೇರಿಸಲಾಗಿದೆ. ಆರು ದೊಡ್ಡ ಮಂಗಗಳ ಪ್ರಭೇದಗಳ ಪೈಕಿ ನಾಲ್ಕು ಪ್ರಬೇಧಗಳಾದ ಈಸ್ಟರ್ನ್ ಗೊರಿಲ್ಲಾ, ವೆಸ್ಟರ್ನ್ ಗೊರಿಲ್ಲಾ, ಬೊರ್ನಿಯನ್ ಒರಾಂಗುಟನ್ ಮತ್ತು ಸುಮಾತ್ರನ್ ಒರಾಂಗುಟನ್ ಪ್ರಭೇದಗಳು ಅಪಾಯದ ಅಂಚಿನಲ್ಲಿರುವ ಪ್ರಭೇದಗಳೆಂದು ಗುರುತಿಸಲಾಗಿದೆ. ಮಿತಿಮೀರಿದ ಭೇಟೆಯಿಂದಾಗಿ ಈಸ್ಟರ್ನ್ ಗೊರಿಲ್ಲಾದ ಪ್ರಭೇದ ಕಳೆದ 20 ವರ್ಷಗಳಲ್ಲಿ ಶೇ 70 ರಷ್ಟು ಕುಸಿದಿದೆ.

43. ಕೇಂದ್ರ ಆರೋಗ್ಯ ಸಚಿವಾಲಯ ಇತ್ತೀಚೆಗೆ ದೇಶದಲ್ಲಿ ಕುಷ್ಠರೋಗವನ್ನು ನಿರ್ಮೂಲನ ಮಾಡುವ ಸಲುವಾಗಿ LCDC ಅಭಿಯಾನವನ್ನು ಆರಂಭಿಸಿದೆ. LCDC ಯ ವಿಸ್ತೃತ ರೂಪ________?

ಅ) Leprosy Case Detection Campaign

ಆ) Leprosy Case Destruction Campaign

ಇ) Leprosy Cover Detection Campaign

ಈ) Leprosy Cover Destruction Campaign

Leprosy Case Detection Campaign

ಕೇಂದ್ರ ಆರೋಗ್ಯ ಸಚಿವಾಲಯ ದೇಶದಲ್ಲಿ ಕುಷ್ಠರೋಗವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ಸಲುವಾಗಿ Leprosy Case Detection Campaign (LCDC) ಅಭಿಯಾನವನ್ನು ಆರಂಭಿಸಿದೆ. ಎರಡು ವಾರಗಳ ಈ ಅಭಿಯಾನವನ್ನು ದೇಶದ 20 ರಾಜ್ಯಗಳ 149 ಜಿಲ್ಲೆಗಳ 1600 ಬ್ಲಾಕ್ ಗಳಲ್ಲಿ ಚಾಲನೆ ನೀಡಲಾಗಿದೆ. ಈ ಅಭಿಯಾನದಡಿ 3 ಲಕ್ಷಕ್ಕೂ ಹೆಚ್ಚು ಆರೋಗ್ಯ ತಂಡಗಳು ಪ್ರತಿ ಮನೆಗೂ ತೆರಳಿ ಕುಷ್ಠರೋಗ ಪ್ರಕರಣವನ್ನು ಪತ್ತೆಹಚ್ಚಲಿವೆ. ಸುಮಾರು 32.18 ಕೋಟಿ ಜನರನ್ನು ತಲುಪುವ ಗುರಿಯನ್ನು ಹೊಂದಲಾಗಿದೆ. 2019 ರ ವೇಳೆಗೆ ಭಾರತದಲ್ಲಿ ಕುಷ್ಠರೋಗವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ಗುರಿಯನ್ನು ಹೊಂದಲಾಗಿದೆ. 2019 ಮಹಾತ್ಮ ಗಾಂಧಿ ಅವರ 150 ನೇ ಜನ್ಮ ವಾರ್ಷಿಕೋತ್ಸವವಾಗಿದೆ.

44. ಈ ಯಾವ ರಾಜ್ಯ/ಕೇಂದ್ರಾಡಳಿತ ಪ್ರದೇಶದಲ್ಲಿ "ಇಂಟರ್ವಿವ್ ಐಲ್ಯಾಂಡ್ ವನ್ಯಜೀವಿ ಅಭಯಾರಣ್ಯ(Interview Island Wildlife Sanctuary (IIWS))" ವಿದೆ?

ಅ) ಲಕ್ಷದ್ವೀಪ

ಆ) ಗೋವಾ

ಇ) ಅಂಡಮಾನ್ ಮತ್ತು ನಿಕೋಬಾರ್

ಈ) ಕೇರಳ

ಅಂಡಮಾನ್ ಮತ್ತು ನಿಕೋಬಾರ್

www.karnaduexams.com

ಇಂಟರ್ವೀವ್ ಐಲ್ಯಾಂಡ್ ವನ್ಯಜೀವಿ ಅಭಯಾರಣ್ಯ ಅಂಡಮಾನ್ ಮತ್ತು ನಿಕೋಬಾರ್ ನಲ್ಲಿದೆ. ೧೨ ಚದರ ಕಿ.ಮೀ ವಿಸ್ತೀರ್ಣತೆ ಹೊಂದಿರುವ ಈ ಅಭಯಾರಣ್ಯ ಆಸ್ಟೆನ್ ಸ್ಟ್ರೈಟ್ ಪೂರ್ವದಲ್ಲಿದೆ. ಆಸ್ಟೆನ್ ಸ್ಟ್ರೈಟ್ ಉತ್ತರ ಅಂಡಮಾನ್ ದ್ವೀಪ ಮತ್ತು ಮಧ್ಯ ಅಂಡಮಾನ್ ದ್ವೀಪ ಪ್ರದೇಶವನ್ನು ವಿಭಜಿಸಿದೆ.

45. ಈ ಕೆಳಗಿನ ಯಾವ ಸಂಸ್ಥೆಯನ್ನು 2016 ಯುನೆಸ್ಕೋ ಕನ್ಫ್ಯೂಷಿಯಸ್ ಸಾಕ್ಷರತೆ ಪ್ರಶಸ್ತಿ (UNESCO Confucius Prize for Literacy)ಗೆ ಆಯ್ಕೆಮಾಡಲಾಗಿದೆ?

ಅ) ನ್ಯಾಷನಲ್ ಲೈಬ್ರರಿ

ಆ) ಜನ್ ಶಿಕ್ಷಣ್ ಸಂಸ್ಥಾನ್

ಇ) ಸೆಂಟ್ರಲ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯನ್ ಲಾಂಗ್ವೇಜ್

ಈ) ಡೈರೇಕ್ಟರ್ ಆಪ್ ಲಿಟರಸಿ ಅಂಡ್ ನ್ಯಾಷನಲ್ ಲಾಂಗ್ವೇಜಸ್

ಜನ್ ಶಿಕ್ಷಣ್ ಸಂಸ್ಥಾನ್

ಕೇರಳ ಮೂಲದ ಮಲ್ಲಾಪ್ಪುರಂನ ಜನ್ ಶಿಕ್ಷಣ್ ಸಂಸ್ಥಾನ್ ಸಂಸ್ಥೆಯನ್ನು 2016ನೇ ಸಾಲಿನ ಪ್ರತಿಷ್ಠಿತ ಯುನೆಸ್ಕೋ ಕನ್ಫ್ಯೂಷಿಯಸ್ ಸಾಕ್ಷರತೆ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಗ್ರಾಮೀಣ ಭಾಗದ ಬಡವರಿಗೆ ಸಾಕ್ಷರತೆ ಸಂಯೋಜಿತ ಕೌಶಲ್ಯ ಅಭಿವೃದ್ದಿ ಚಟುವಟಿಕೆಗಳ ಮೂಲಕ ಜನ್ ಶಿಕ್ಷಣ್ ಸಂಸ್ಥಾನ್ ಸಂಸ್ಥೆ ನೀಡುತ್ತಿರುವ ಸೇವೆಯನ್ನು ಗಮನಿಸಿ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಸಾಕ್ಷರತೆ ಸೇವೆಗಾಗಿ ಈ ಸಂಸ್ಥೆ ಅನೇಕ ನಾವೀನ್ಯ ತಂತ್ರಜ್ಞಾನಗಳಾದ ಬ್ರೆಲಿ ಅಪ್ಲೀಕೇಷನ್ ಮತ್ತು ಟಾಕಿಂಗ್ ಪೆನ್ ಗಳನ್ನು ಅಳವಡಿಸಿಕೊಂಡಿದೆ. ಅಂತಾರಾಷ್ಟ್ರೀಯ ಸಾಕ್ಷರತಾ ದಿನವಾದ ಸೆಪ್ಟೆಂಬರ್ ೮ ರಂದು ವಿಶ್ವಸಂಸ್ಥೆಯ ಮಹಾ ಕಾರ್ಯದರ್ಶಿ ಬಾನ್-ಕಿ-ಮೂನ್ ಅವರು ಪ್ರಶಸ್ತಿಯನ್ನು ಪ್ರಧಾನ ಮಾಡಲಿದ್ದಾರೆ. $೨೦೦೦೦ ಡಾಲರ್ ಮೊತ್ತದ ಪ್ರಶಸ್ತೀಯನ್ನು ಚೀನಾ ಪ್ರಾಯೋಜಿಸಿದೆ. ಚೀನಾದ ತತ್ವಜ್ಞಾನಿ ಕನ್ಫ್ಯೂಷಿಯಸ್ ಸ್ಮರಣಾರ್ಥ ಪ್ರಶಸ್ತಿಗೆ ಕನ್ಫ್ಯೂಷಿಯಸ್ ಹೆಸರಿಡಲಾಗಿದೆ.

46. ಇತ್ತೀಚೆಗೆ ಪೆಸಿಫಿಕ್ ಸಮುದ್ರದ ಕುರ್ ಹವಳ ದ್ವೀಪದ ಬಳಿ ಪತ್ತೆಯಾದ ಟೊಸನಾಯಿಡ್ಸ್ ಜಾತಿಗೆ ಸೇರಿದ ಮೀನಿನ ಹೊಸ ಪ್ರಭೇದಕ್ಕೆ ಯಾವ ಗಣ್ಯವ್ಯಕ್ತಿಯ ಹೆಸರಿಡಲಾಗಿದೆ?

ಅ) ನರೇಂದ್ರ ಮೋದಿ

ಆ) ಬರಾಕ್ ಒಬಾಮ

ಇ) ಪೋಪ್ ಬೆನೆಡಿಕ್ಟ್

ಈ) ವಿನ್ ಡಿಸೇಲ್

ಬರಾಕ್ ಒಬಾಮ

ಪೆಸಿಫಿಕ್ ಸಮುದ್ರದ ಕುರ್ ಹವಳ ದ್ವೀಪದ ಬಳಿ ಪತ್ತೆಯಾದ ಮೀನಿನ ಹೊಸ ಪ್ರಭೇದಕ್ಕೆ ವಿಜ್ಞಾನಿಗಳು ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮ ಅವರ ಹೆಸರು ಇರಿಸಿದ್ದಾರೆ.ಟೊಸನಾಯಿಡ್ಸ್ ಜಾತಿಗೆ ಸೇರಿದ, ಕಡುಗೆಂಪು ಮತ್ತು ಚಿನ್ನದ ಬಣ್ಣ ಹೊಂದಿರುವ ಈ ಮೀನುಗಳು ದ್ವೀಪದ ಕರಾವಳಿಯಲ್ಲಿ 300 ಅಡಿ ಆಳದಲ್ಲಿ ಪತ್ತೆಯಾಗಿವೆ.ಪಪಹಾನೌಮೊಕಕಿ ಕಡಲ ರಾಷ್ಟ್ರೀಯ ಸ್ಮಾರಕವನ್ನು ವಿಸ್ತರಿಸುವ ಮೂಲಕ ಪ್ರಕೃತಿ ರಕ್ಷಣೆಯ ಬದ್ಧತೆಯನ್ನು ಪ್ರದರ್ಶಿಸಿರುವ ಬರಾಕ್ ಒಬಾಮ ಅವರಿಗೆ ಗೌರವ ಸಲ್ಲಿಸುವ ಉದ್ದೇಶದಿಂದ ಮೀನಿಗೆ ಅವರ ಹೆಸರನ್ನು ಇರಿಸಲಾಗಿದೆ ಎಂದು ವಿಜ್ಞಾನಿಗಳು ತಿಳಿಸಿದ್ದಾರೆ. ಹವಾಯಿ ದ್ವೀಪಗಳ ಉತ್ತರಭಾಗದಲ್ಲಿರುವ ಕುರ್ ಪ್ರದೇಶದ ಹವಳ ದಿಬ್ಬದ ಬಳಿ ಜೂನ್ ತಿಂಗಳಲ್ಲಿ ಈ ಮೀನಿನ ಪ್ರಭೇದ ಪತ್ತೆಯಾಗಿತ್ತು.

47. 2016 ASEAN-INDIA (ಅಸಿಯಾನ್-ಭಾರತ) ಶೃಂಗಸಭೆ ಯಾವ ದೇಶದಲ್ಲಿ ನಡೆಯಲಿದೆ?

ಅ) ಚೀನಾ

ಆ) ಲಾವೋಸ್

ಇ) ಮಯನ್ಮಾರ್

ಈ) ಇಂಡೋನೇಷಿಯಾ

14ನೇ ಅಸಿಯಾನ್-ಭಾರತ ಶೃಂಗಸಭೆ ಮತ್ತು 11ನೇ ಪೂರ್ವ ಏಷ್ಯಾ ಶೃಂಗಸಭೆ ಲಾವೋಸ್ ನ ವಿಯೆಂಟಿಯಾನ್ ನಲ್ಲಿ ಸೆಪ್ಟೆಂಬರ್ 8 ರಂದು ನಡೆಯಲಿದೆ. ಅಸಿಯಾನ್ ನ ಹತ್ತು ರಾಷ್ಟ್ರಗಳ ಮುಖಂಡರು ಈ ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ. ಭಾರತದಿಂದ ಪ್ರಧಾನಿ ಮೋದಿ ರವರು ಈ ಶೃಂಗಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

48. ಇತ್ತೀಚೆಗೆ ಆರಂಭಗೊಂಡ ಮೊದಲ ಬ್ರಿಕ್ಸ್ ಸಿನಿಮಾ ಉತ್ಸವದಲ್ಲಿ ಈ ಕೆಳಗಿನ ಯಾರನ್ನು ಸನ್ಮಾನಿಸಲಾಯಿತು?

ಅ) ಅಮಿತಾಬ್ ಬಚ್ಚನ್

ಆ) ರಿಶಿ ಕಪೂರ್

ಇ) ಸಲ್ಮಾನ್ ಖಾನ್

ಈ) ಸಂಜಯ್ ದತ್

ರಿಶಿ ಕಪೂರ್

ಬಾಲಿವುಡ್ ನ ಹಿರಿಯ ನಟ ರಿಶಿ ಕಪೂರ್ ಅವರನ್ನು ಮೊದಲ ಬ್ರಿಕ್ಸ್ ಸಿನಿಮಾ ಉತ್ಸವದ ಉದ್ಘಾಟನಾ ಸಮಾರಂಭದಲ್ಲಿ ಸನ್ಮಾನಿಸಲಾಯಿತು. ಪ್ರಪ್ರಥಮ ಬ್ರಿಕ್ಸ್ ಸಿನಿಮಾ ಉತ್ಸವ ದೆಹಲಿಯ ಸಿರಿ ಫೋರ್ಟ್ ಆಡಿಟೋರಿಯಂ ಆಯೋಜಿಸಲಾಗಿದೆ.

www.karunaduexams.com

49. ಯಾವ ರಾಜ್ಯ "ದೀನದಯಾಳ್ ಸ್ವಾಸ್ಥ್ಯ ಸೇವಾ ಯೋಜನೆ" ಹೆಸರಿನ ನಗದು ರಹಿತ ವಿಮಾ ಯೋಜನೆ ಜಾರಿಗೊಳಿಸಿದೆ?

ಅ) ಗೋವಾ

ಆ) ಮಹಾರಾಷ್ಟ್ರ

ಇ) ತೆಲಂಗಣ

ಈ) ಮಧ್ಯ ಪ್ರದೇಶ

ಗೋವಾ

ಗೋವಾ ಸರ್ಕಾರ ದೀನದಯಾಳ್ ಸ್ವಾಸ್ಥ್ಯ ಸೇವಾ ಯೋಜನೆ ಎಂಬ ಆರೋಗ್ಯ ವಿಮೆ ಯೋಜನೆಯನ್ನು ಜಾರಿಗೊಳಿಸಿದೆ. ಈ ಯೋಜನೆಯ ಉಪಯೋಗ ಪಡೆಯಲು ಯಾವುದೇ ಆರ್ಥಿಕ ಇತಿಮಿತಿ ಮಾನದಂಡವನ್ನು ನಿಗದಿಪಡಿಸಲ್ಲ. ಆಗಾಗಿ ಪ್ರತಿಯೊಬ್ಬರು ಇದರ ಅನುಕೂಲವನ್ನು ಪಡೆದುಕೊಳ್ಳಬಹುದಾಗಿದೆ. ಗೋವಾದಲ್ಲಿ 5 ಅಥವಾ ಅದಕ್ಕಿಂತ ಹೆಚ್ಚು ವರ್ಷ ವಾಸವಿರುವ ಪ್ರತಿಯೊಬ್ಬರು ಇದರಡಿ ಪ್ರಯೋಜನ ಪಡೆಯಬಹುದು. ಈ ಯೋಜನೆಯಡಿ ಮೂರು ಸದಸ್ಯರನ್ನು ಹೊಂದಿರುವ ಕುಟಂಬಕ್ಕೆ ರೂ 2.5 ಲಕ್ಷ ವಿಮೆಯನ್ನು ನೀಡಲಾಗುವುದು. ನಾಲ್ಕು ಅಥವಾ ಹೆಚ್ಚಿನ ಸದಸ್ಯರನ್ನು ಹೊಂದಿರುವ ಕುಟುಂಬಕ್ಕೆ ನಾಲ್ಕು ಲಕ್ಷ ವಿಮೆ ಸೌಲಭ್ಯ ನೀಡಲಾಗುವುದು.

50. ಇತ್ತೀಚೆಗೆ ಬಿಡುಗಡೆಗೊಂಡ "QS ವಿಶ್ವ ವಿಶ್ವವಿದ್ಯಾಲಯ (World University)" ಶ್ರೇಯಾಂಕದಲ್ಲಿ ಪ್ರಥಮಸ್ಥಾನ ಪಡೆದುಕೊಂಡ ವಿಶ್ವವಿದ್ಯಾಲಯ ಯಾವುದು?

ಅ) ಆಕ್ಸ್ ಫರ್ಡ್ ವಿಶ್ವವಿದ್ಯಾಲಯ

ಆ) ಮಸ್ಸಚುಸೆಟ್ಸ್ ವಿಶ್ವವಿದ್ಯಾಲಯ

ಇ) ಹಾರ್ವರ್ಡ್ ವಿಶ್ವವಿದ್ಯಾಲಯ

ಈ) ಸ್ಟಾನ್ ಫೋರ್ಡ್ ವಿಶ್ವವಿದ್ಯಾಲಯ

ಮಸ್ಸಚುಸೆಟ್ಸ್ ವಿಶ್ವವಿದ್ಯಾಲಯ

ಕೇಂಬ್ರಿಡ್ಜ್ ನ ಮಸ್ಸಚುಸೆಟ್ಸ್ ವಿಶ್ವವಿದ್ಯಾಲಯ ಸತತ ಐದನೇ ಬಾರಿ QS ವಿಶ್ವ ವಿಶ್ವವಿದ್ಯಾಲಯ (World University)" ಶ್ರೇಯಾಂಕದಲ್ಲಿ ಪ್ರಥಮಸ್ಥಾನ ಪಡೆದುಕೊಂಡಿದೆ. ಸ್ಟಾನ್ ಫೋರ್ಡ್ ವಿವಿ ಎರಡನೇ ಸ್ಥಾನ ಮತ್ತು ಹಾರ್ವಡ್ ವಿವಿ ಮೂರನೆ ಸ್ಥಾನಕ್ಕೆ ತೃಪ್ತಿಪಟ್ಟಿಕೊಂಡಿವೆ. ಭಾರತದ ಅತ್ಯುನ್ನತ ವಿಶ್ವವಿದ್ಯಾಲಯವಾಗಿ ಭಾರತೀಯ ವಿಜ್ಞಾನ ಸಂಸ್ಥೆ (ಐ ಐ ಎಸ್ ಸಿ) ಬೆಂಗಳೂರು ಸ್ಥಾನ ಕಾಯ್ದುಕೊಂಡಿದ್ದರು, ಪಟ್ಟಿಯಲ್ಲಿ ಐದು ಸ್ಥಾನಗಳಷ್ಟು ಹಿಂದಕ್ಕೆ ಹೋಗಿದೆ. ಜೆಮ್ ಶೆಡ್ ಜಿ ಟಾಟಾ, ಮೈಸೂರು ಮಹಾರಾಜ ಮತ್ತು ಭಾರತೀಯ ಸರ್ಕಾರದ ಜಂಟಿ ಸಹಯೋಗದೊಂದಿದೆ 1909 ರಲ್ಲಿ ನಿರ್ಮಾಣವಾದ ಐ ಐ ಎಸ್ ಸಿ ಜಾಗತಿಕ ಶ್ರೇಯಾಂಕದಲ್ಲಿ ಕಳೆದ ವರ್ಷ 147 ನೇ ಸ್ಥಾನದಲ್ಲಿದ್ದರೆ, ಈ ವರ್ಷ 152 ನೇ ಸ್ಥಾನಕ್ಕೆ ಕುಸಿದಿದೆ. 400 ಉತ್ತಮ ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿರುವ ಇತರ ಸಂಸ್ಥಗಳೆಂದರೆ ಐಐಟಿ ದೆಹಲಿ (185),

www.karunaduexams.com

ಐಐಟಿ ಬಾಂಬೆ (219), ಐಐಟಿ ಮದ್ರಾಸ್ (249), ಐಐಟಿ ಕಾನ್ಪುರ್ (302), ಐಐಟಿ ಖರಗ್ಪುರ್ (313) ಮತ್ತು ಐಐಟಿ ರೂರ್ಕೆ (399).

51. ಚೊಚ್ಚಲ ಬ್ರಿಕ್ಸ್ ಸಿನಿಮಾ ಉತ್ಸವದಲ್ಲಿ ಅತ್ಯುತ್ತಮ ಸಿನಿಮಾ ಪ್ರಶಸ್ತಿಯನ್ನು ಪಡೆದುಕೊಂಡ ಸಿನಿಮಾ ಯಾವುದು?

ಅ) ತಿಥಿ

ಆ) ಬಾಹುಬಲಿ

ಇ) ದಿ ಬ್ಯಾಟಲ್ ಫಾರ್ ಸೆವಸ್ಟೊಪೊಲ್

ಈ) ಬಾಜೀರಾವ್

ತಿಥಿ

ವಿಶ್ವಮನ್ನಣೆ ಪಡೆದಿರುವ ಕನ್ನಡದ ಚಿತ್ರ “ತಿಥಿ” ಇತ್ತೀಚೆಗೆ ನವದೆಹಲಿಯಲ್ಲಿ ಮುಕ್ತಾಯಗೊಂಡ ಪ್ರಪ್ರಥಮ ಬ್ರಿಕ್ಸ್ ಸಿನಿಮಾ ಉತ್ಸವದಲ್ಲಿ ಅತ್ಯುತ್ತಮ ಸಿನಿಮಾ ಪ್ರಶಸ್ತಿಯನ್ನು ಪಡೆದುಕೊಂಡಿತು. ಆ ಮೂಲಕ ನೂರಾರು ಕೋಟಿ ರೂ. ವೆಚ್ಚದಲ್ಲಿ ತಯಾರಾಗಿದ್ದ ರಾಜಮೌಳಿ ನಿರ್ದೇಶನದ ತೆಲುಗಿನ ಸೂಪರ್ಹಿಟ್ ಚಿತ್ರ 'ಬಾಹುಬಲಿ', ಹಿಂದಿಯ ಬಾಜೀರಾವ್ ಮಸ್ತಾನಿ ಮತ್ತು ಕೌಶಿಕ್ ಗಂಗೂಲಿ ನಿರ್ದೇಶನದ ಸಿನೆಮಾವಾಲಾ ಸೇರಿದಂತೆ ಇತರೆ ಚಿತ್ರಗಳನ್ನು ಹಿಂದಿಕ್ಕಿದೆ. ಐದು ದಿನಗಳ ಕಾಲ ನಡೆದ ಈ ಸಿನಿಮೋತ್ಸವದಲ್ಲಿ ಬ್ರಿಕ್ಸ್ ರಾಷ್ಟ್ರಗಳ ಹಲವು ಸಿನಿಮಾಗಳನ್ನು ಪ್ರದರ್ಶಿಸಲಾಗಿತ್ತು. ತಿಥಿ ಚಿತ್ರವನ್ನು ರಾಮರೆಡ್ಡಿರವರು ನಿರ್ದೇಶನ ಮಾಡಿದ್ದಾರೆ. ತಿಥಿ ಚಿತ್ರ ರಾಜ್ಯ ಪ್ರಶಸ್ತಿ ಸೇರಿದಂತೆ ಹಲವಾರು ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನು ಬಾಚಿಕೊಂಡಿದೆ.

52. ಭಾರತೀಯ ವಿಶಿಷ್ಟ ಗುರುತಿನ ಚೀಟಿ ಸಂಖ್ಯೆ ಪ್ರಾಧಿಕಾರದ(ಯುಐಡಿಎಐ) ಅರೆಕಾಲಿಕ ಅಧ್ಯಕ್ಷರಾಗಿ ಯಾರನ್ನು ನೇಮಕಮಾಡಲಾಗಿದೆ?

ಅ) ಜೆ ಸತ್ಯನಾರಾಯಣ

ಆ) ಅಮರನಾಥ್ ಸಿಂಗ್

ಇ) ಅಜಯ್ ಭೂಷಣ್ ಸಿಂಗ್

ಈ) ರಾಜೀವ್ ಜೈನ್

ಜೆ ಸತ್ಯನಾರಾಯಣ

ನಿವೃತ್ತ ಐಎಎಸ್ ಅಧಿಕಾರಿ ಜೆ. ಸತ್ಯನಾರಾಯಣ ಅವರು ಭಾರತೀಯ ವಿಶಿಷ್ಟ ಗುರುತಿನ ಚೀಟಿ ಸಂಖ್ಯೆ ಪ್ರಾಧಿಕಾರ'(ಯುಐಡಿಎಐ) ಅರೆಕಾಲಿಕ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಸತ್ಯನಾರಾಯಣ ರವರು ಆಂಧ್ರಪ್ರದೇಶ ಕೇಡರ್ ನ 1977 ತಂಡದ ಐಎಎಸ್ ಅಧಿಕಾರಿ. ಇವರೊಂದಿಗೆ ರಾಜೇಶ್ ಜೈನ್ ಮತ್ತು ಆನಂದ್ ದೇಶಪಾಂಡೆ ಅವರನ್ನು ಅರೆಕಾಲಿಕ ಸದಸ್ಯರನ್ನು ಕೇಂದ್ರ ಸಚಿವ ಸಂಪುಟ ನೇಮಕ ಮಾಡಿದೆ. ಭಾರತೀಯ ವಿಶಿಷ್ಟ ಗುರುತಿನ ಚೀಟಿ ಸಂಖ್ಯೆ

www.karunaduexams.com

ಪ್ರಾಧಿಕಾರ'(ಯುಐಡಿಎಐ) ಮೊದಲ ಅಧ್ಯಕ್ಷ ನಂದನ್ ನಿಲೇಕಣಿ 2014ರಲ್ಲಿ ರಾಜೀನಾಮೆ ನೀಡಿದ ಬಳಿಕ ಅಧ್ಯಕ್ಷ ಹುದ್ದೆ ತೆರವಾಗಿತ್ತು.

53. ಇತ್ತೀಚೆಗೆ ಆಸ್ಟ್ರೇಲಿಯಾ ತಂಡ ಯಾವ ದೇಶದ ವಿರುದ್ಧ ಟ್ವೆಂಟಿ-20 ಅಂತಾರಾಷ್ಟ್ರೀಯ ಪಂದ್ಯದಲ್ಲಿ 263 ರನ್ ಗಳಿಸಿ ವಿಶ್ವ ದಾಖಲೆ ನಿರ್ಮಿಸಿತು?

ಅ) ಪಾಕಿಸ್ತಾನ

ಆ) ದಕ್ಷಿಣ ಆಫ್ರಿಕಾ

ಇ) ಶ್ರೀಲಂಕಾ

ಈ) ಇಂಗ್ಲೆಂಡ್

ಶ್ರೀಲಂಕಾ

ಆಸ್ಟ್ರೇಲಿಯ ತಂಡ ಶ್ರೀಲಂಕಾ ವಿರುದ್ಧ ನಡೆದ ಮೊದಲ ಟ್ವೆಂಟಿ-20 ಅಂತಾರಾಷ್ಟ್ರೀಯ ಪಂದ್ಯದಲ್ಲಿ ನಿಗದಿತ 20 ಓವರ್ಗಳಲ್ಲಿ 3 ವಿಕೆಟ್ ನಷ್ಟದಲ್ಲಿ 263 ರನ್ ಗಳಿಸಿ ವಿಶ್ವ ದಾಖಲೆ ಮೊತ್ತ ಗಳಿಸಿತು. ನಾಯಕ ವಾರ್ನರ್(28) ಅವರೊಂದಿಗೆ ಇನಿಂಗ್ಸ್ ಆರಂಭಿಸಿದ ಆಲ್ರೌಂಡರ್ ಗ್ಲೆನ್ ಮ್ಯಾಕ್ಸ್ವೆಲ್(ಔಟಾಗದೆ 145 ರನ್, 65 ಎಸೆತ, 14 ಬೌಂಡರಿ, 9 ಸಿಕ್ಸರ್)ಚೊಚ್ಚಲ ಶತಕ ಸಿಡಿಸಿ ಆಸ್ಟ್ರೇಲಿಯ ಟ್ವೆಂಟಿ-20ಯಲ್ಲಿ ಬೃಹತ್ ಮೊತ್ತ ಗಳಿಸಿದ ಮೊದಲ ತಂಡವೆಂಬ ಕೀರ್ತಿಗೆ ಭಾಜನರಾಗಲು ನೆರವಾದರು. 263 ರನ್ ಗಳಿಸಿದ ಆಸ್ಟ್ರೇಲಿಯ ತಂಡ ಶ್ರೀಲಂಕಾ 9 ವರ್ಷಗಳ ಹಿಂದೆ ನಿರ್ಮಿಸಿದ್ದ ವಿಶ್ವ ದಾಖಲೆಯೊಂದನ್ನು ಮುರಿಯಿತು. ಶ್ರೀಲಂಕಾ 2007ರಲ್ಲಿ ಕೀನ್ಯ ವಿರುದ್ಧ ಟ್ವೆಂಟಿ-20 ವಿಶ್ವಕಪ್ನಲ್ಲಿ 6 ವಿಕೆಟ್ ನಷ್ಟಕ್ಕೆ 260 ರನ್ ಗಳಿಸಿತ್ತು.

54. ಈ ಕೆಳಗಿನ ಯಾವ ರಾಜ್ಯ "ನುವಾಖಾಯ್ (Naukhai)" ಕೃಷಿ ಹಬ್ಬಕ್ಕೆ ಪ್ರಸಿದ್ಧಿ ಹೊಂದಿದೆ?

ಅ) ಆಂಧ್ರಪ್ರದೇಶ

ಆ) ಗೋವಾ

ಇ) ಒಡಿಶಾ

ಈ) ಪಶ್ಚಿಮ ಬಂಗಾಳ

ಒಡಿಶಾ

ನುವಾಖಾಯ್ ಪಶ್ಚಿಮ ಒಡಿಶಾದ ಪ್ರಸಿದ್ಧ ಕೃಷಿ ಹಬ್ಬ. ನುವಾಖಾಯ್ ಹಬ್ಬವನ್ನು ಈ ಋತುವಿನಲ್ಲಿ ಬೆಳೆಯಲಾದ ಭತ್ತವನ್ನು ಸ್ವಾಗತಿಸಲು ಈ ಹಬ್ಬವನ್ನು ಆಚರಿಸಲಾಗುತ್ತದೆ. ಕೋಸಲಿ ಕ್ಯಾಲೆಂಡರ್ ಪ್ರಕಾರ ನುವಾಖಾಯ್ ಹಬ್ಬವನ್ನು ಪ್ರತಿ ವರ್ಷ ಗಣೇಶ ಚತುರ್ಥಿ ನಂತರ ಆಚರಿಸಲಾಗುವುದು. ಪಶ್ಚಿಮ ಬಂಗಾಳ ಮತ್ತು ಈ ಭಾಗಕ್ಕೆ ಹೊಂದಿಕೊಂಡಿರುವ ಒಡಿಶಾದ ಸಿಮ್ದೆಗ ಪ್ರದೇಶದಲ್ಲಿ ಈ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತದೆ.

www.karunaduexams.com

55. ಭಾರತದ ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ಸುದ್ದಿಯಲ್ಲಿದ "ತಿಹಯು (TIHAYU)" ಒಂದು _____?

ಅ) ಕ್ಷಿಪ್ರವಾಗಿ ದಾಳಿಮಾಡಬಲ್ಲ ಹಡಗು

ಆ) ಜಲಾಂತರ್ಗಾಮಿ ಯುದ್ಧ ನೌಕೆ

ಇ) ಕರಾವಳಿ ಗಸ್ತು ನೌಕೆ

ಈ) ಯುದ್ಧ ವಿಮಾನ

ಕ್ಷಿಪ್ರವಾಗಿ ದಾಳಿಮಾಡಬಲ್ಲ ಹಡಗು

ಕ್ಷಿಪ್ರವಾಗಿ ದಾಳಿಮಾಡಬಲ್ಲ ಹಡಗು "ತಿಹಯು"ವನ್ನು ಭಾರತದ ನೌಕಪಡೆಗೆ ಸೇರ್ಪಡೆಗೊಳಿಸಲಾಯಿತು. ಗಾರ್ಡನ್ ರೀಚ್ ಶಿಪ್ ಬ್ಯುಲ್ಡರ್ಸ್ ಅಂಡ್ ಎಂಜನಿಯರ್ಸ್ ಸಂಸ್ಥೆ ತಿಹಯುವನ್ನು ಅಭಿವೃದ್ದಿಪಡಿಸಿದೆ. ಅಂಡಮಾನ್ ದ್ವೀಪ ಪ್ರದೇಶವೊಂದರ ಹೆಸರನ್ನು ಇದಕ್ಕೆ ಇಡಲಾಗಿದೆ. ಮೂರು ವಾಟರ್ ಜೆಟ್ ಪ್ರೊಪಲ್ಷನ್ ಸಿಸ್ಟಂ ಅನ್ನು ಹೊಂದಿದ್ದು, ಡಿಸೇಲ್ ಎಂಜಿನ್ ಮೂಲಕ ಕಾರ್ಯನಿರ್ವಹಿಸಲಿದೆ.

56. ಕೇಂದ್ರ ಸರ್ಕಾರ ಇತ್ತೀಚೆಗೆ ದೇಶದಲ್ಲಿ ಅನಿಲ ಇಂಧನದ ಬಳಕೆಯನ್ನು ಉತ್ತೇಜಿಸುವ ಸಲುವಾಗಿ ಯಾವ ಅಭಿಯಾನವನ್ನು ಜಾರಿಗೊಳಿಸಿದೆ?

ಅ) Gas4India

ಆ) CleanIndia

ಇ) Gas4Change

ಈ) GreenIndia

Gas4India

ದೇಶದಲ್ಲಿ ಅನಿಲ ಇಂಧನ ಬಳಕೆಯನ್ನು ಪ್ರೇರೆಪಿಸುವ ಸಲುವಾಗಿ ಕೇಂದ್ರ ಸರ್ಕಾರ "Gas4India" ಅಭಿಯಾನವನ್ನು ಆರಂಭಿಸಿದೆ. ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಇಲಾಖೆ ರಾಜ್ಯ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಈ ಅಭಿಯಾನಕ್ಕೆ ಚಾಲನೆ ನೀಡಿದರು. ಅನಿಲ ಇಂಧನ ಬಳಕೆಯಿಂದ ಸಾಮಾಜಿಕ, ಆರ್ಥಿಕ ಮತ್ತು ಪರಿಸರದ ಮೇಲಾಗುವ ಅನುಕೂಲಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಈ ಅಭಿಯಾನಕ್ಕೆ ಸಾಮಾಜಿಕ ತಾಣಗಳಾದ ಟ್ವಿಟ್ಟರ್, ಫೇಸ್ಬುಕ್ ಮತ್ತು ಯು ಟ್ಯೂಬ್ ಗಳನ್ನು ಬಳಸಿಕೊಳ್ಳಲಾಗುವುದು.

www.karunaduexams.com

57. ಮಲಯಾಳಂ ಸಿನಿಮಾ ರಂಗದ ಮಹೋನ್ನತ ಪ್ರಶಸ್ತಿಯಾದ "ಜೆಸಿ ಡೇನಿಯಲ್" ಪ್ರಶಸ್ತಿಯನ್ನು 2015ನೇ ಸಾಲಿಗೆ ಯಾರಿಗೆ ನೀಡಲಾಗುವುದು?

ಅ) ಎ.ಕೆ.ಬಾಲನ್

ಆ) ಕೆ.ಜಿ.ಜಾರ್ಜ್

ಇ) ಮೋಹನ್ ಲಾಲ್

ಈ) ಪಾರ್ವತಿ ಮೆನನ್

ಕೆ.ಜಿ.ಜಾರ್ಜ್

ಹಿರಿಯ ನಿರ್ದೇಶಕ ಮತ್ತು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಕೆ.ಜಿ.ಜಾರ್ಜ್ ಅವರನ್ನು 2015 ಜೆಸಿ ಡೇನಿಯಲ್ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಕೇರಳ ಸರ್ಕಾರ ಈ ಪ್ರಶಸ್ತಿಯನ್ನು ಮಲೆಯಾಳಂ ಸಿನಿಮಾ ಕ್ಷೇತ್ರಕ್ಕೆ ಅಪಾರ ಸೇವೆ ನೀಡಿದವರಿಗೆ ನೀಡುತ್ತದೆ. ಮಲೆಯಾಂ ಸಿನಿಮಾ ರಂಗದ ಮಹೋನ್ನತ ಪ್ರಶಸ್ತಿ ಇದಾಗಿದ್ದು, ಒಂದು ಲಕ್ಷ ನಗದು ಹಾಗೂ ಫಲಕವನ್ನು ಒಳಗೊಂಡಿದೆ. 1970 ರಲ್ಲಿ ಸಿನಿಮಾ ರಂಗಕ್ಕೆ ಪಾದರ್ಪಣೆ ಮಾಡಿದ ಜಾರ್ಜ್ ಇದುವರೆಗೂ 9 ರಾಜ್ಯ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ಇವರ ಸ್ವಪ್ನನಾದಂ ಸಿನಿಮಾಗೆ 1997 ರಲ್ಲಿ ರಾಷ್ಟ್ರ ಪ್ರಶಸ್ತಿಯನ್ನು ನೀಡಲಾಗಿದೆ.

58. ಈ ಕೆಳಗಿನ ಯಾವ ದೇಶ 2017 ಜಿ-20 ರಾಷ್ಟ್ರಗಳ ಶೃಂಗಸಭೆಯ ಆತಿಥ್ಯವಹಿಸಲಿದೆ?

ಅ) ಜರ್ಮನಿ

ಆ) ಭಾರತ

ಇ) ಅಮೆರಿಕಾ

ಈ) ದಕ್ಷಿಣ ಕೊರಿಯಾ

ಜರ್ಮನಿ

2016 ಜಿ-20 ರಾಷ್ಟ್ರಗಳ ಶೃಂಗಸಭೆ ಚೀನಾದಲ್ಲಿ ಇತ್ತೀಚೆಗೆ ಮುಕ್ತಾಯಗೊಂಡಿತು. ಮುಂದಿನ ಜಿ-20 ಶೃಂಗಸಭೆ ಜರ್ಮನಿಯ ಹಂಬರ್ಗ್ ನಲ್ಲಿ ಜುಲೈ7-8, 2017 ರಲ್ಲಿ ನಡೆಯಲಿದೆ.

59. ಪ್ರತಿಷ್ಠಿತ ಮೆಲ್ಬೋರ್ನ್ ಕ್ರಿಕೆಟ್ ಕ್ಲಬ್ (ಎಂಸಿಸಿ)ನ ಗೌರವ ಆಜೀವ ಸದಸ್ಯತ್ವ ಪಡೆದ ಭಾರತದ ಮೊದಲ ಮಹಿಳಾ ಕ್ರಿಕೆಟ್ ಆಟಗಾರ್ತಿ ಯಾರು?

ಅ) ಮಿಥಾಲಿ ರಾಜ್

ಆ) ಪೂನಂ ರಾವತ್

ಇ) ಅಂಜುಮ್ ಚೋಪ್ರಾ

ಈ) ಜೂಲನ್ ಗೋಸ್ವಾಮಿ


www.karunaduexams.com

ಅಂಜುಮ್ ಚೋಪ್ರಾ

ಭಾರತದ ಮಹಿಳಾ ಕ್ರಿಕೆಟ್ ತಂಡದ ಮಾಜಿ ನಾಯಕಿ ಅಂಜುಮ್ ಚೋಪ್ರಾಗೆ ಮೆಲ್ಬೋರ್ನ್ ಕ್ರಿಕೆಟ್ ಕ್ಲಬ್ (ಎಂಸಿಸಿ)ನ ಗೌರವ ಆಜೀವ ಸದಸ್ಯತ್ವ ನೀಡಿ ಗೌರವಿಸಿದೆ. ಅಂಜುಮ್ ಪ್ರತಿಷ್ಠಿತ ಎಂಸಿಸಿ ಆಜೀವ ಸದಸ್ಯತ್ವ ಪಡೆದ ಭಾರತದ ಮೊದಲ ಮಹಿಳಾ ಕ್ರಿಕೆಟ್ ಆಟಗಾರ್ತಿ ಎಂಬ ಕೀರ್ತಿಗೆ ಭಾಜನರಾಗಿದ್ದಾರೆ. 39ರ ಹರೆಯದ ಅಂಜುಮ್ ಭಾರತದ ಪರ 12 ಟೆಸ್ಟ್, 127 ಏಕದಿನ ಹಾಗೂ 18 ಟ್ವೆಂಟಿ-20 ಅಂತಾರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದಾರೆ. ಟೆಸ್ಟ್ ಕ್ರಿಕೆಟ್ನಲ್ಲಿ ನಾಲ್ಕು ಅರ್ಧಶತಕಗಳಿರುವ 548 ರನ್ ಹಾಗೂ ಏಕದಿನ ಕ್ರಿಕೆಟ್ನಲ್ಲಿ ಒಂದು ಶತಕ ಹಾಗೂ 18 ಅರ್ಧಶತಕಗಳ ಸಹಿತ 2,856 ರನ್ ಗಳಿಸಿದ್ದಾರೆ.

60. ಯಾವ ರಾಜ್ಯ ಮುಂದಿನ ಐದು ವರ್ಷಗಳಲ್ಲಿ ರಾಜ್ಯವನ್ನು ಶೂನ್ಯ ವಸತಿರಹಿತ(Zero Homeless)ವನ್ನಾಗಿಸುವ ಸಲುವಾಗಿ "ಪ್ರಾಜೆಕ್ಟ್ ಲೈಫ್" ಯೋಜನೆಯನ್ನು ಜಾರಿಗೊಳಿಸಲಿದೆ?

ಅ) ಕೇರಳ

ಆ) ಹರಿಯಾಣ

ಇ) ಅಸ್ಸಾಂ

ಈ) ಬಿಹಾರ

ಕೇರಳ

ಕೇರಳದ ಎಡರಂಗ ಸರಕಾರವು ಮುಂದಿನ ಐದು ವರ್ಷಗಳಲ್ಲಿ ರಾಜ್ಯದ ಭೂ ಮತ್ತು ವಸತಿ ರಹಿತ ನಿರ್ಗತಿಕರಿಗೆ ಪುನರ್ವಸತಿ ಕಲ್ಪಿಸಿ ಶೂನ್ಯ ವಸತಿ ರಹಿತ ರಾಜ್ಯವನ್ನಾಗಿ ಮಾಡಲು "ಪ್ರಾಜೆಟ್ ಲೈಫ್" ಯೋಜನೆಯನ್ನು ಅನುಷ್ಠಾನಗೊಳಿಸಲಿದೆ. ಕೇರಳ ರಾಜ್ಯದಿನವಾದ ನವೆಂಬರ್ 1 ರಂದು ಈ ಯೋಜನೆಗೆ ಅಧಿಕೃತವಾಗಿ ಚಾಲನೆ ಸಿಗಲಿದೆ. ಯೋಜನೆಯಡಿ 4.70 ಲಕ್ಷಕ್ಕೂ ಅಧಿಕ ಕುಟುಂಬಗಳಿಗೆ ಅನುಕೂಲವಾಗಲಿದೆ.

61. ಇತ್ತೀಚೆಗೆ ಆರಂಭಗೊಂಡ "PRABAL DOSTYK -16" ಮಿಲಿಟರಿ ಸಮರಭ್ಯಾಸ ಭಾರತ ಮತ್ತು ಯಾವ ದೇಶದ ನಡುವಿನ ಜಂಟಿ ಸಮರಭ್ಯಾಸವಾಗಿದೆ?

ಅ) ರಷ್ಯಾ

ಆ) ಕಜಖಸ್ತಾನ

ಇ) ಜಪಾನ್

ಈ) ಮೆಕ್ಸಿಕೊ

ಕಜಖಸ್ತಾನ

ಭಾರತ ಮತ್ತು ಕಜಖಸ್ತಾನ ನಡುವಿನ ಜಂಟಿ ಮಿಲಿಟರಿ ಸಮರಭ್ಯಾಸ "PRABAL DOSTYK -16" ಕಜಖಸ್ತಾನದ ಕರಗಂದ ಪ್ರದೇಶದಲ್ಲಿ ಆರಂಭಗೊಂಡಿತು. ಸೆಪ್ಟೆಂಬರ್ 17 ರವರೆಗೆ 14 ದಿನಗಳ ಕಾಲ ಈ ಅಭ್ಯಾಸ ನಡೆಯಲಿದೆ.

www.karunaduexams.com

ಉಭಯ ದೇಶಗಳ ನಡುವೆ ರಾಜತಾಂತ್ರಿಕ ಸಂಬಂಧವನ್ನು ಬಲಪಡಿಸಲು ಹಾಗೂ ಮಿಲಿಟರಿ ಕೌಶಲ್ಯವನ್ನು ವಿನಿಮಯ ಮಾಡಿಕೊಳ್ಳಲು ಸಮರಭ್ಯಾಸ ಸಹಾಯವಾಗಲಿದೆ. ಈ ಸಮರಭ್ಯಾಸದಲ್ಲಿ ಭಯೋತ್ಪಾದನೆ ಮತ್ತು ಒಳನುಸುಳುವಿಕೆ ನಿಗ್ರಹ ಕಾರ್ಯಾಚರಣೆಗಳನ್ನು ನಡೆಸಲಾಗುವುದು.

62. 2016 ಪ್ಯಾರಾಲಿಂಪಿಕ್ಸ್ ನ ಉದ್ಘಾಟನ ಫೆರೆಡ್ನಲ್ಲಿ ಭಾರತದ ಧ್ವಜ ಸಾರಥ್ಯವಹಿಸಿದ್ದವರು ಯಾರು?

ಅ) ದೇವೇಂದ್ರ ಝುಜಾರಿಯಾ

ಆ) ಅಂಕುರ್ ಧಾಮಾ

ಇ) ದೀಪಾ ಮಲಿಕ್

ಈ) ವೀರೇಂದ್ರ ಧಂಕಾ

ದೇವೇಂದ್ರ ಝುಜಾರಿಯಾ

ಬ್ರೆಜಿಲ್ ನ ಮರಕಾನ ಸ್ಟೇಡಿಯಂನಲ್ಲಿ ರಿಯೋ ಪ್ಯಾರಾಲಿಂಪಿಕ್ಸ್ ಕ್ರೀಡಾಕೂಟಕ್ಕೆ ಅದ್ದೂರಿ ಚಾಲನೆ ದೊರೆತಿದೆ. 2004ರ ಅಥೆನ್ಸ್ ಪ್ಯಾರಂಲಿಂಪಿಕ್ಸ್ ನಲ್ಲಿ ಭಾರತಕ್ಕೆ ಮೊತ್ತ ಮೊದಲ ಬಾರಿ ಚಿನ್ನದ ಪದಕ ಗೆದ್ದುಕೊಟ್ಟಿದ್ದ ದೇವೇಂದ್ರ ಝುಜಾರಿಯಾ ಉದ್ಘಾಟನ ಫೆರೆಡ್ನಲ್ಲಿ ಭಾರತದ ಧ್ವಜ ಸಾರಥ್ಯವಹಿಸಿದ್ದರು. 11 ದಿನಗಳ ಕಾಲ ನಡೆಯಲಿರುವ ಪ್ಯಾರಾಲಿಂಪಿಕ್ ಗೇಮ್ಸ್ನಲ್ಲಿ 159 ದೇಶಗಳ 4,342 ಅಥ್ಲೀಟ್ಗಳು ಭಾಗವಹಿಸಲಿದ್ದಾರೆ.

63. ಇತ್ತೀಚೆಗೆ ವಿಶ್ವ ಆರೋಗ್ಯ ಸಂಸ್ಥೆ ಈ ಕೆಳಗಿನ ಯಾವ ರೋಗಗಳಿಂದ ಭಾರತ ಮುಕ್ತವಾಗಿದೆ ಎಂದು ಘೋಷಿಸಿದೆ?

I) ಯಾಸ್ (Yaws)

II) ತಾಯಿ ಮತ್ತು ನವಜಾತ ಧನುರ್ವಾಯು

III) ಮಲೇರಿಯಾ

IV) ಇಲಿ ಜ್ವರ

ಈ ಕೆಳಗೆ ನೀಡಿರುವ ಕೋಡ್ ಮೂಲಕ ಸರಿಯಾದ ಉತ್ತರವನ್ನು ಆರಿಸಿ:

ಅ) I & II ಮಾತ್ರ

ಆ) I, II & IV ಮಾತ್ರ

ಇ) I & IV ಮಾತ್ರ

ಈ) ಮೇಲಿನ ಎಲ್ಲವೂ

I & II ಮಾತ್ರ

ಭಾರತ ಯಾಸ್ ಹಾಗೂ ತಾಯಿ ಮತ್ತು ನವಜಾತ ಧನುರ್ವಾಯು ರೋಗ ಮುಕ್ತವೆಂದು ವಿಶ್ವಆರೋಗ್ಯ ಸಂಸ್ಥೆ ಘೋಷಿಸಿದೆ. ಕಳೆದ ವರ್ಷ ಭಾರತ ಪೋಲಿಯೊ ರೋಗವೆಂದು ಘೋಷಿಸಲಾಗಿತ್ತು. ಯಾಸ್ ಬ್ಯಾಕ್ಟೀರಿಯಾದಿಂದ



www.karunaduexams.com

ಚರ್ಮ, ಮೃದ್ವಸ್ಥಿ ಮತ್ತು ಮೂಳೆಗಳಿಗೆ ಉಂಟಾಗುವ ಸೋಂಕು ರೋಗವಾಗಿದೆ. ಶ್ರೀಲಂಕಾದ ಕೊಲೊಂಬೊದಲ್ಲಿ ನೆಡದ ವಿಶ್ವ ಆರೋಗ್ಯ ಸಂಸ್ಥೆಯ ಸಭೆಯಲ್ಲಿ ಅಧಿಕೃತ ಘೋಷಣೆ ಪತ್ರವನ್ನು ಕೇಂದ್ರ ಆರೋಗ್ಯ ಸಚಿವ ಜೆಪಿ ನಡ್ಡಾ ಅವರಿಗೆ ವಿತರಿಸಲಾಯಿತು. ನಿರ್ಲಕ್ಷ್ಯ ಒಳಗಾದ ಉಷ್ಣವಲಯದ ರೋಗ(neglected tropical diseases)ಗಳಲ್ಲಿ ಒಂದಾದ ಯಾಸ್ ರೋಗವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಿದ ಮೊದಲ ದೇಶ ಭಾರತವೆನಿಸಿದೆ. ಒಂದು ಕಾಲದಲ್ಲಿ ವರ್ಷಕ್ಕೆ 2 ಲಕ್ಷ ಮಂದಿಯನ್ನು ಬಲಿತೆಗೆದುಕೊಳ್ಳುತ್ತಿದ್ದ ಧನುರ್ವಾಯು(ತಾಯಿ ಮತ್ತು ನವಜಾತ ಶಿಶುವಿಗೆ ಸಂಬಂಧಿಸಿದ) ಸೋಂಕನ್ನು ಸಂಪೂರ್ಣ ನಿರ್ಮೂಲನೆ ಮಾಡುವಲ್ಲಿ ಭಾರತ ಯಶಸ್ವಿಯಾಗಿದೆ. ಧನುರ್ವಾಯು ನಿರ್ಮೂಲನೆಗೆ ಬಾಕಿಯಿರುವ 23 ರಾಷ್ಟ್ರಗಳಲ್ಲಿ ಭಾರತವೂ ಒಂದಾಗಿತ್ತು. ಕ ಒಂದು ಕಾಲದಲ್ಲಿ ದೇಶದ ಒಟ್ಟು ನವಜಾತ ಶಿಶುಗಳ ಮರಣದ ಪೈಕಿ ಶೇ.15ರಷ್ಟು ಧನುರ್ವಾಯುವಿನಿಂದ ಸಂಭವಿಸುತ್ತಿತ್ತು. ಆದರೆ, ಈಗ ಗರ್ಭಿಣಿಯರಿಗೆ ಸೂಕ್ತ ಸಮಯದಲ್ಲಿ ಪ್ರತಿರಕ್ಷಕ ಲಸಿಕೆ ನೀಡಲಾಗುತ್ತದೆ. ಆಸ್ಪತ್ರೆಗಳಲ್ಲದೆ ಬೇರೆ ಕಡೆ ಹೆರಿಗೆಯಾದರೂ ಸೋಂಕು ಹರಡದಂತೆ ತಡೆಯುವ ಕಿಟ್‌ಗಳನ್ನು ಬಳಸಲಾಗುತ್ತದೆ. ಇವೆಲ್ಲವೂ ಧನುರ್ವಾಯು ತಡೆಗೆ ಕಾರಣವಾಗಿದೆ.

64. "ಅಂಕುರ್ ಧಾಮ" ಅವರು ಪ್ಯಾರಾಲಿಂಪಿಕ್ ನಲ್ಲಿ ಭಾಗವಹಿಸುತ್ತಿರುವ ಭಾರತದ ಮೊದಲ ದೃಷ್ಟಿಮಾಂದ್ಯ ಅಥ್ಲೇಟಿಕ್ ಎನಿಸಿದ್ದಾರೆ. ಅಂಕುರ್ ಯಾವ ಕ್ರೀಡೆಯನ್ನ ಪ್ರತಿನಿಧಿಸಲಿದ್ದಾರೆ?

ಅ) ಈಜು

ಆ) ಜಾವೆಲಿನ್ ಎಸೆತ

ಇ) ಕ್ಲಬ್ ಥ್ರೋ

ಈ) ರನ್ನಿಂಗ್

ರನ್ನಿಂಗ್

ದೆಹಲಿ ಮೂಲದ ಅಂಕುರ್ ಧಾಮ" ಅವರು ಪ್ಯಾರಾಲಿಂಪಿಕ್ ನಲ್ಲಿ ಭಾಗವಹಿಸುತ್ತಿರುವ ಭಾರತದ ಮೊದಲ ದೃಷ್ಟಿಮಾಂದ್ಯ ಅಥ್ಲೇಟಿಕ್ ಎನಿಸಿದ್ದಾರೆ. ಧಾಮ ಅವರು 1,500ಮೀ ನಲ್ಲಿ ಭಾರತವನ್ನು ಪ್ರತಿನಿಧಿಸುತ್ತಿದ್ದಾರೆ. ಸೆಪ್ಟೆಂಬರ್ 7ರಿಂದ 18ರ ತನಕ ನಡೆಯಲಿರುವ ಪ್ಯಾರಾಲಿಂಪಿಕ್ ಗೇಮ್ಸ್‌ನಲ್ಲಿ ಭಾರತದ ಒಟ್ಟು 19 ಅಥ್ಲೀಟ್ಗಳು 10 ಸ್ಪರ್ಧೆಗಳಲ್ಲಿ ಭಾಗವಹಿಸಲಿದ್ದಾರೆ. ಭಾರತ ತಂಡದಲ್ಲಿ 2004ರ ಅಥೆನ್ಸ್ ಗೇಮ್ಸ್‌ನಲ್ಲಿ ಭಾರತಕ್ಕೆ ಪ್ಯಾರಾಲಿಂಪಿಕ್ಸ್‌ನಲ್ಲಿ ಮೊತ್ತ ಮೊದಲ ಬಾರಿ ಚಿನ್ನದ ಪದಕ ಗೆದ್ದುಕೊಟ್ಟಿದ್ದ ದೇವೇಂದ್ರ ಝಜಾರಿಯಾ ಭಾಗವಹಿಸುತ್ತಿದ್ದಾರೆ. ಈ ಬಾರಿ ಅವರು ಜಾವೆಲಿನ್ ಎಸೆತದಲ್ಲಿ ಪದಕ ಗೆಲ್ಲುವತ್ತ ಚಿತ್ತವಿರಿಸಿದ್ದಾರೆ .2016ರ ಪ್ಯಾರಾಲಿಂಪಿಕ್ಸ್‌ನಲ್ಲಿ ವಿಶ್ವದ 4,300 ಅಥ್ಲೀಟ್ಗಳು 23 ಸ್ಪರ್ಧೆಗಳಲ್ಲಿ ಭಾಗವಹಿಸಿ ಪದಕಕ್ಕಾಗಿ ಹೋರಾಟ ನಡೆಸಲಿದ್ದಾರೆ. ಭಾರತ ಪ್ಯಾರಾಲಿಂಪಿಕ್ ಗೇಮ್ಸ್‌ನಲ್ಲಿ ಈ ತನಕ ಒಟ್ಟು 8 ಪದಕಗಳನ್ನು ಜಯಿಸಿದೆ. ಇದರಲ್ಲಿ 2 ಚಿನ್ನ, 3 ಬೆಳ್ಳಿ ಹಾಗೂ ಮೂರು ಕಂಚಿನ ಪದಕಗಳಿವೆ.

www.karunaduexams.com

65. "ಹಾಪ್ ಮನ್ ಕಪ್ (Hopman Cup)" ಯಾವ ಕ್ರೀಡೆಗೆ ಸಂಬಂಧಿಸಿದೆ?

ಅ) ಕ್ರಿಕೆಟ್

ಆ) ಟೆನ್ನಿಸ್

ಇ) ಫುಟ್ಬಾಲ್

ಈ) ಹಾಕಿ

ಟೆನ್ನಿಸ್

ಹಾಪ್ ಮನ್ ಕಪ್ ಒಳಾಂಗಣ ಟೆನ್ನಿಸ್ ಟೂರ್ನಮೆಂಟ್ ಆಗಿದ್ದು, ಪ್ರತಿವರ್ಷ ಆಸ್ಟ್ರೇಲಿಯಾದ ಪರ್ಥ್ ನಲ್ಲಿ ಆಯೋಜಿಸಲಾಗುವುದು. ಆಸ್ಟ್ರೇಲಿಯಾದ ಖ್ಯಾತ ಟೆನ್ನಿಸ್ ಆಟಗಾರ ಮತ್ತು ಕೋಚ್ ಆಗಿದ್ದ ಹ್ಯಾರಿ ಹಾಪ್ ಮನ್ ಅವರ ಹೆಸರಿನ್ನು ಈ ಪ್ರಶಸ್ತಿ ಇಡಲಾಗಿದೆ.

66. ವಿಶ್ವ ಸಂಸ್ಥೆಯ ಲಿಖಿತ ಸಂವಿಧಾನವನ್ನು ಇತ್ತೀಚೆಗೆ ಈ ಕೆಳಗಿನ ಯಾವ ಭಾಷೆಗೆ ಭಾಷಾಂತರಗೊಳಿಸಲಾಗಿದೆ?

ಅ) ಸಂಸ್ಕೃತಿ

ಆ) ಗುಜರಾತಿ

ಇ) ಪಂಜಾಬಿ

ಈ) ಕನ್ನಡ

ಸಂಸ್ಕೃತಿ

ವಿಶ್ವ ಸಂಸ್ಥೆಯ ಲಿಖಿತ ಸಂವಿಧಾನ ಅಥವಾ ಒಪ್ಪಂದ ಇದೇ ಮೊದಲ ಬಾರಿಗೆ ಸಂಸ್ಕೃತಕ್ಕೆ ಭಾಷಾಂತರಗೊಂಡಿದೆ. ಲಖನೌ ಮೂಲದ ಅಖಿಲ ಭಾರತೀಯ ಸಂಸ್ಕೃತ ಪರಿಷತ್ತಿನ ಕಾರ್ಯದರ್ಶಿಯಾಗಿರುವ ಡಾ.ಜಿತೇಂದ್ರ ಕುಮಾರ್ ತ್ರಿಪಾಠಿ ಅವರ ಶ್ರಮದಿಂದ ಸಂವಿಧಾನವನ್ನು ಸಂಸ್ಕೃತ ಭಾಷಕ್ಕೆ ಭಾಷಾಂತರಗೊಳಿಸಲಾಗಿದೆ. ವಿಶ್ವ ಸಂಸ್ಥೆಯ ಲಿಖಿತ ಸಂವಿಧಾನ ಎಲ್ಲಾ ಆರು ಅಧಿಕೃತ ಭಾಷೆಗಳಲ್ಲಿ ಲಭ್ಯವಿದೆ. ಅರಾಬಿಕ್, ಚೈನೀಸ್, ಇಂಗ್ಲಿಷ್, ಫ್ರೆಂಚ್, ರಷ್ಯನ್ ಹಾಗೂ ಸ್ಪ್ಯಾನಿಷ್ ಭಾಷೆಗಳನ್ನು ವಿಶ್ವ ಸಂಸ್ಥೆ ಅಧಿಕೃತ ಭಾಷೆಗಳಾಗಿ ಸ್ವೀಕರಿಸಿದೆ. ವಿಶ್ವ ಸಂಸ್ಥೆಯ ಲಿಖಿತ ಸಂವಿಧಾನ(ಮೂಲ ಒಪ್ಪಂದ)ಕ್ಕೆ 1945ರ ಜೂನ್ 26ರಂದು ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ಸಹಿ ಹಾಕಲಾಗಿತ್ತು. ಅಂತರರಾಷ್ಟ್ರೀಯ ಸಂಸ್ಥೆಗಳ ಕುರಿತಾದ ವಿಶ್ವ ಸಂಸ್ಥೆಯ ಸಭೆಯಲ್ಲಿ ಈ ಒಪ್ಪಂದಕ್ಕೆ ಬರಲಾಗಿತ್ತು. 1945ರ ಅಕ್ಟೋಬರ್ 24ರಿಂದ ಒಪ್ಪಂದ ಕಾರ್ಯ ರೂಪಕ್ಕೆ ಬಂದಿತು.

www.karunaduexams.com

67. ಇತ್ತೀಚೆಗೆ ನಿಧನರಾದ ಹಿರಿಯ ಟೆಸ್ಟ್ ಕ್ರಿಕೆಟ್ ಆಟಗಾರ "ಲಿಂಡ್ಸೆ ಟಕ್ಕೆಟ್ (Lindsay Tuckett)" ಯಾವ ದೇಶದವರು?

ಅ) ಇಂಗ್ಲೆಂಡ್

ಆ) ಆಸ್ಟ್ರೇಲಿಯಾ

ಇ) ದಕ್ಷಿಣ ಆಫ್ರಿಕಾ

ಈ) ನ್ಯೂಜಿಲ್ಯಾಂಡ್

ದಕ್ಷಿಣ ಆಫ್ರಿಕಾ

ವಿಶ್ವದ ಹಿರಿಯ ಜೀವಂತ ಮಾಜಿ ಕ್ರಿಕೆಟ್ ಆಟಗಾರ ಎನಿಸಿದ್ದ ದಕ್ಷಿಣ ಆಫ್ರಿಕಾದ ಲಿಂಡ್ಸೆ ಟಕ್ಕೆಟ್ ನಿಧನರಾದರು. ಟಕ್ಕೆಟ್ ದಕ್ಷಿಣ ಆಫ್ರಿಕಾ ಪರವಾಗಿ 1947 ರಿಂದ 1949ರ ಅವಧಿಯಲ್ಲಿ 9 ಟೆಸ್ಟ್ ಪಂದ್ಯಗಳನ್ನು ಆಡಿದ್ದರು. 1947 ರಲ್ಲಿ ಟೆಸ್ಟ್ ಕ್ರಿಕೆಟ್ ಗೆ ಪಾದಾರ್ಪಣೆ ಮಾಡಿದ ಅವರು 19 ವಿಕೆಟ್ಗಳನ್ನು ಪಡೆದುಕೊಂಡಿದ್ದಾರೆ.

68. ವಿಶ್ವ ಆರೋಗ್ಯ ಸಂಸ್ಥೆ ಇತ್ತೀಛೆಗೆ ಭಾರತವನ್ನು "ಯಾಸ್ (Yaws) ಮುಕ್ತರಾಷ್ಟ್ರವೆಂದು ಘೋಷಿಸಿದೆ. ಯಾಸ್ ಈ ಕೆಳಗಿನ ಯಾವುದರಿಂದ ಬರುವ ರೋಗವಾಗಿದೆ?

ಅ) ಫಂಗಸ್

ಆ) ಬ್ಯಾಕ್ಟೀರಿಯಾ

ಇ) ವೈರಸ್

ಈ) ಪ್ರೊಟೋಜೊವ

ಬ್ಯಾಕ್ಟೀರಿಯಾ

ಯಾಸ್ ಒಂದು ಬ್ಯಾಕ್ಟೀರಿಯಾ ಸೋಂಕಿಗಿದ್ದು, *ಟ್ರೆಪೊನಿಮಾ ಪಲ್ಲಿಡಂ* (Treponema Pallidum) ಹೆಸರಿನ ಬ್ಯಾಕ್ಟೀರಿಯಾ ಇದಕ್ಕೆ ಪ್ರಮುಖ ಕಾರಣವಾಗಿದೆ. ಚರ್ಮ, ಮೂಳೆ ಮತ್ತು ಮೃದ್ವಸ್ಥಿ ಸೋಂಕಿಗೆ ಒಳಗಾಗುವ ಪ್ರಮುಖ ಅಂಗಗಳು.

69. ಈ ಕೆಳಗಿನ ಯಾವ ಉಡಾವಣಾ ವಾಹಕ ಮೂಲಕ ಇಸ್ರೋ ಇತ್ತೀಚೆಗೆ ಸುಧಾರಿತ ಹವಾಮಾನ ಉಪಗ್ರಹ ಇನ್ಸಾಟ್-3ಡಿಆರ್ ಅನ್ನು ಉಡಾವಣೆ ಮಾಡಿತು?

ಅ) GSLV-D5

ಆ) GSLV-D4

ಇ) GSLV-F05

ಈ) GSLV-Mark II

GSLV-D6

ಸುಧಾರಿತ ಮತ್ತು ಆತ್ಯಾಧುನಿಕ ಹವಾಮಾನ ಉಪಗ್ರಹ ಇನ್ಸಾಟ್-3 ಡಿ.ಆರ್ ಅನ್ನು ಇಸ್ರೋ ಯಶಸ್ವಿಯಾಗಿ ಉಡಾವಣೆ ಮಾಡಿದೆ. ಆಂಧ್ರಪ್ರದೇಶದ ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಈ

www.karunaduexams.com

ಉಪಗ್ರಹವನ್ನು ಜಿ.ಎಸ್.ಎಲ್.ವಿ.-ಎಫ್ 05 ರಾಕೆಟ್ ಬಳಸಿ ಯಶಸ್ವಿಯಾಗಿ ಉಡಾವಣೆ ಮಾಡಲಾಯಿತು. 2,211 ಕೆ.ಜಿ. ತೂಕವನ್ನು ಹೊಂದಿರುವ ಇನ್ಸಾಟ್-3 ಡಿ.ಆರ್. ಉಪಗ್ರಹ ನಭೋ ಮಂಡಲ ತಲುಪಿದ ನಂತರ, ತನ್ನದೇ ಮುನ್ನೂಕುವ ಶಕ್ತಿಯನ್ನು ಪಡೆದುಕೊಂಡು ಭೂ ಸ್ಥಿರ ಕಕ್ಷೆಯನ್ನು ಸೇರಲಿದೆ ಎನ್ನಲಾಗಿದೆ. ಇನ್ಸಾಟ್-3 ಡಿ.ಆರ್. ಉಪಗ್ರಹ ಸಾಗರದ ಮೇಲ್ಭಾಗದಲ್ಲಿ ಬೀಸುವ ಮಾರುತಗಳ ಚಲನೆಯನ್ನು ವಿಶ್ಲೇಷಿಸಿ, ಚಂಡಮಾರುತ ಗ್ರಹಿಸಲಿದೆ. ಉಷ್ಣಾಂಶ ಏರಿಳಿತ ರಕ್ಷಣಾ ಸೇವೆಗಳಿಗೆ ಮಾಹಿತಿ ಪಡೆದುಕೊಳ್ಳಬಹುದಾಗಿದೆ.

70. ಈ ಕೆಳಗಿನ ಒಕ್ಕೂಟಗಳನ್ನು ಗಮನಿಸಿ:

I) ASEAN

II) SAARC

III) APEC

ಭಾರತ ಈ ಮೇಲಿನ ಯಾವ ಒಕ್ಕೂಟಗಳ ಸದಸ್ಯ ರಾಷ್ಟ್ರವಾಗಿದೆ?

ಅ) I ಮಾತ್ರ

ಆ) II ಮಾತ್ರ

ಇ) I & II ಮಾತ್ರ

ಈ) ಮೇಲಿನ ಎಲ್ಲವೂ

II ಮಾತ್ರ

ಮೇಲಿನ ಒಕ್ಕೂಟಗಳಲ್ಲಿ ಭಾರತ ಸಾರ್ಕ್ ಒಕ್ಕೂಟದ ಸದಸ್ಯ ರಾಷ್ಟ್ರವಾಗಿದೆ. ಏಷಿಯಾನ್ ಅಥವಾ ಅಸೋಸಿಯೇಷನ್ ಆಫ್ ಸೌತ್ ಈಸ್ಟ್ ಏಷ್ಯಾನ್ ನೇಷನ್ ಆಗಸ್ಟ್ 8, 1967 ರಲ್ಲಿ ಸ್ಥಾಪನೆಗೊಂಡಿದೆ. ಇಂಡೋನೇಷಿಯಾ, ಮಲೇಷಿಯಾ, ಫಿಲಿಫೈನ್ಸ್, ಸಿಂಗಾಪುರ, ಥಾಯ್ಲೆಂಡ್, ಬ್ರೂನಿ, ಕಾಂಬೋಡಿಯಾ, ಲಾವೋಸ್, ಮಯನ್ಮಾರ್ ಮತ್ತು ವಿಯೆಟ್ನಾಂ ಇದರ ಸದಸ್ಯ ರಾಷ್ಟ್ರಗಳಾಗಿವೆ. ಏಷ್ಯಾ-ಫೆಸಿಫಿಕ್ ಎಕಾನಿಮಿಕ್ ಕೊ-ಆಪರೇಷನ್ (APEC) 21 ಸದಸ್ಯ ರಾಷ್ಟ್ರಗಳನ್ನು ಹೊಂದಿವೆ. 1989 ರಲ್ಲಿ ಸ್ಥಾಪಿಸಲಾಗಿದೆ.

71. ಯಾವ ಬ್ಯಾಂಕ್ ಇತ್ತೀಚೆಗೆ ಪವರ್ ಬ್ಯಾಂಕಿಂಗ್ ಕಾರ್ಯಾಚರಣೆಗಾಗಿ "ಸಾಫ್ಟವೇರ್ ರೊಬೊಟಿಕ್ಸ್ (Software Robotics)" ಪರಿಚಯಿಸಿದ ದೇಶದ ಬ್ಯಾಂಕ್ ಎನಿಸಿದೆ?

ಅ) HDFC

ಆ) ICICI

ಇ) Axis

ಈ) Corporation

www.karunaduexams.com

ICICI

ಭಾರತದ ಅತಿದೊಡ್ಡ ಖಾಸಗಿ ಬ್ಯಾಂಕ್ ಐಸಿಐಸಿಐ ಬ್ಯಾಂಕ್ ಪವರ್ ಬ್ಯಾಂಕಿಂಗ್ ಕಾರ್ಯಾಚರಣೆಗೆ ಸಾಪ್ಟವೇರ್ ರೊಬೋಟಿಕ್ಸ್ (Software Robotics) ಅನ್ನು ಪರಿಚಯಿಸಿದೆ. ಆ ಮೂಲಕ ಈ ವಿನೂತನ ತಂತ್ರಜ್ಞಾನವನ್ನು ಜಾರಿಗೆ ತಂದ ದೇಶದ ಮೊದಲ ಬ್ಯಾಂಕ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಹಾಗೂ ಜಾಗತಿಕ ಮಟ್ಟದಲ್ಲಿ ಈ ತಂತ್ರಜ್ಞಾನದ ಮೊರೆ ಹೋಗಿರುವ ಕೆಲವೇ ಬ್ಯಾಂಕ್ ಗಳಲ್ಲಿ ಇದು ಒಂದಾಗಿದೆ.

72. ಸಂಕೋಶ್ (Sankosh) ನದಿಯು ಈ ಕೆಳಗಿನ ಯಾವ ಎರಡು ರಾಜ್ಯಗಳ ಗಡಿಭಾಗವಾಗಿದೆ?

ಅ) ಬಿಹಾರ ಮತ್ತು ಪಶ್ಚಿಮ ಬಂಗಾಳ

ಆ) ಅರುಣಾಚಲ ಪ್ರದೇಶ ಮತ್ತು ಅಸ್ಸಾಂ

ಇ) ಬಿಹಾರ್ ಮತ್ತು ಜಾರ್ಖಂಡ್

ಈ) ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶ

ಅರುಣಾಚಲ ಪ್ರದೇಶ ಮತ್ತು ಅಸ್ಸಾಂ

ಸಂಕೋಶ್ ನದಿಯು ಅರುಣಾಚಲ ಪ್ರದೇಶ ಮತ್ತು ಅಸ್ಸಾಂ ರಾಜ್ಯಗಳನ್ನು ಬೇರ್ಪಡಿಸುವ ಮೂಲಕ ಎರಡು ರಾಜ್ಯಗಳ ಗಡಿಭಾಗವಾಗಿ ಮಾರ್ಪಟ್ಟಿದೆ.

73. ರಾಷ್ಟ್ರೀಯ ಮಾದರಿ ಸಮೀಕ್ಷೆ ಕಚೇರಿ (NSSO) ಇತ್ತೀಚೆಗೆ ಬಿಡುಗಡೆ ಮಾಡಿದ ಸ್ವಚ್ಚ ರಾಜ್ಯಗಳ ಪಟ್ಟಿಯಲ್ಲಿ ಪ್ರಥಮ ಸ್ಥಾನಗಳಿಸಿರುವ ರಾಜ್ಯ ಯಾವುದು?

ಅ) ಕೇರಳ

ಆ) ಸಿಕ್ಕಿಂ

ಇ) ಕರ್ನಾಟಕ

ಈ) ಪಂಜಾಬ್

ಸಿಕ್ಕಿಂ ರಾಜ್ಯ ದೇಶದ ಅತ್ಯಂತ ಸ್ವಚ್ಚ ರಾಜ್ಯ ಎಂಬ ಹಿರಿಮೆಗೆ ಪಾತ್ರವಾಗಿದೆ. ರಾಷ್ಟ್ರೀಯ ಮಾದರಿ ಸಮೀಕ್ಷೆ ಕಚೇರಿ (NSSO) ಬಿಡುಗಡೆಗೊಳಿಸಿರುವ ಸ್ವಚ್ಛತೆಯ ಸೂಚ್ಯಂಕದಲ್ಲಿ ಕರ್ನಾಟಕ 18ನೇ ಸ್ಥಾನ ಪಡೆದಿದೆ. ಸಿಕ್ಕಿಂ, ಕೇರಳ, ಮಿಜೋರಾಂ ಕ್ರಮವಾಗಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದುಕೊಂಡಿವೆ. ಕೊನೆಯ ಸ್ಥಾನದಲ್ಲಿ ಜಾರ್ಖಂಡ್ ಇದೆ.

www.karunaduexams.com

74. "2016 ಎಂಎಂ ಬೆನ್ನೆಟ್ಸ್ ಪ್ರಶಸ್ತಿ"ಗೆ ಆಯ್ಕೆಯಾಗಿರುವ "Into The Hidden Valley" ಕಾದಂಬರಿಯ ಲೇಖಕರು ಯಾರು?

ಅ) ಸ್ಟುವರ್ಟ್ ಬ್ಲಾಕ್ ಬರ್ನ್

ಆ) ಜೇಮ್ಸ್ ವ್ಯಾಟ್ಸನ್

ಇ) ಜೆ.ಕೆ ರೌಲಿಂಗ್

ಈ) ಕಿರಣ್ ದೇಸಾಯಿ

ಅರುಣಾಚಲ ಪ್ರದೇಶ ಅಪತಣಿ (Apatani) ಬುಡಕಟ್ಟು ಜನಾಂಗ ಕುರಿತಾದ ಸ್ಟುವರ್ಟ್ ಬ್ಲಾಕ್ ಬರ್ನ್ ರವರ "Into The Hidden Valley" ಕಾದಂಬರಿಯನ್ನು ಪ್ರತಿಷ್ಠಿತ ಎಂಎಂ ಬೆನ್ನೆಟ್ಸ್ ಪ್ರಶಸ್ತಿ (2016 MM Bennetts Award)ಗೆ ಆಯ್ಕೆಮಾಡಲಾಗಿದೆ. ಬ್ರಿಟಿಷ್ ಆಡಳಿತಾವಧಿ ಈ ಬುಡಕಟ್ಟು ಜನಾಂಗದ ಮೇಲೆ ಹೇಗೆ ಪರಿಣಾಮ ಬೀರಿತು ಎಂಬುದರ ಬಗ್ಗೆ ಕಾದಂಬರಿಯಲ್ಲಿ ಬಣ್ಣಿಸಲಾಗಿದೆ.

75. ಕೇಂದ್ರ ಸರ್ಕಾರ ಇತ್ತೀಚೆಗೆ "ಸ್ವದೇಶ ದರ್ಶನ" ಯೋಜನೆಯಡಿ ಐದು ರಾಜ್ಯಗಳಲ್ಲಿ ಪ್ರವಾಸೋದ್ಯಮ ಉತ್ತೇಜಿಸಲು ರೂ 450 ಕೋಟಿಗೆ ಒಪ್ಪಿಗೆ ನೀಡಿದೆ. ಈ ಕೆಳಗಿನ ಯಾವ ರಾಜ್ಯ ಇದಕ್ಕೆ ಸಂಬಂಧಿಸಿಲ್ಲ?

ಅ) ಮಧ್ಯ ಪ್ರದೇಶ

ಆ) ಸಿಕ್ಕಿಂ

ಇ) ಕರ್ನಾಟಕ

ಈ) ತಮಿಳು ನಾಡು

ಕರ್ನಾಟಕ

ದೇಶದ ಐದು ರಾಜ್ಯಗಳಾದ ಮಧ್ಯ ಪ್ರದೇಶ, ಉತ್ತರಖಂಡ್, ತಮಿಳುನಾಡು, ಉತ್ತರ ಪ್ರದೇಶ ಮತ್ತು ಸಿಕ್ಕಿಂ ರಾಜ್ಯಗಳಲ್ಲಿ "ಸ್ವದೇಶಿ ದರ್ಶನ" ಯೋಜನೆಯಡಿ ಪ್ರವಾಸೋದ್ಯಮವನ್ನು ಅಭಿವೃದ್ದಿಪಡಿಸುವ ಸಲುವಾಗಿ ಕೇಂದ್ರ ಸರ್ಕಾರ ರೂ 450 ಕೋಟಿಯನ್ನು ಬಿಡುಗಡೆಗೊಳಿಸಲು ಒಪ್ಪಿಗೆ ಸೂಚಿಸಿದೆ. ಅದರಂತೆ ಮಧ್ಯ ಪ್ರದೇಶ ಮತ್ತು ಉತ್ತರ ಪ್ರದೇಶದಲ್ಲಿ ಪರಂಪರಿಕ ವರ್ತುಲ (Heritage Circuit), ಉತ್ತರ ಪ್ರದೇಶದಲ್ಲಿ ರಾಮಾಯಣ ವರ್ತುಲ, ಸಿಕ್ಕಿಂನಲ್ಲಿ ಈಶಾನ್ಯ ವರ್ತುಲ ಮತ್ತು ತಮಿಳುನಾಡಿನಲ್ಲಿ ಕರಾವಳಿ ವರ್ತುಲ ಅಭಿವೃದ್ದಿಪಡಿಸಲು ಕೇಂದ್ರ ಪ್ರವಾಸೋದ್ಯಮ ಸಚಿವಾಲಯ ಸಮ್ಮತಿಸಿದೆ.

www.karunaduexams.com

76. ಇತ್ತೀಚೆಗೆ ಭಾರತ ಮತ್ತು ಚಿಲಿ ಸರ್ಕಾರ ಆದ್ಯತಾ ವ್ಯಾಪಾರ ಒಪ್ಪಂದವನ್ನು ವಿಸ್ತರಿಸಲು ಒಪ್ಪಂದಕ್ಕೆ ಸಹಿಹಾಕಿವೆ. ಈ ಕೆಳಗಿನ ಯಾವ ವರ್ಷದಲ್ಲಿ ಉಭಯ ದೇಶಗಳ ನಡುವೆ ಆದ್ಯತಾ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಲಾಗಿದೆ?

ಅ) 2006

ಆ) 2010

ಇ) 2012

ಈ) 2015

2006

ಭಾರತ ಮತ್ತು ಚಿಲಿ ನಡುವೆ ಪ್ರಸ್ತುತ ಚಾಲ್ತಿಯಲ್ಲಿರುವ ಆದ್ಯತಾ ವ್ಯಾಪಾರ ಒಪ್ಪಂದವನ್ನು ವಿಸ್ತರಿಸುವ ಒಡಂಬಡಿಕೆಗೆ ಭಾರತ-ಚಿಲಿ ಸಹಿ ಹಾಕಿದವು. ಆ ಮೂಲಕ ಮತ್ತಷ್ಟು ವಸ್ತುಗಳನ್ನು ಒಪ್ಪಂದಡಿ ಸೇರ್ಪಡೆಗೊಳಿಸಲಾಗಿದೆ. ಭಾರತ ಮತ್ತು ಚಿಲಿ ನಡುವೆ ಆದ್ಯತಾ ವ್ಯಾಪಾರ ಒಪ್ಪಂದಕ್ಕೆ ಮಾರ್ಚ್ 2006 ರಲ್ಲಿ ಸಹಿ ಮಾಡಲಾಗಿದ್ದು, ಆಗಸ್ಟ್ 2007 ರಿಂದ ಜಾರಿಗೆ ಬಂದಿದೆ.

77. ಭಾರತ ಮತ್ತು ಅಮೆರಿಕಾ ಸೇನಾ ಪಡೆಗಳ "ಯುದ್ದ್ ಅಭ್ಯಾಸ್" ಸಮರಾಭ್ಯಾಸ ಸೆಪ್ಟೆಂಬರ್ 14 ರಿಂದ ಯಾವ ರಾಜ್ಯದಲ್ಲಿ ನಡೆಯಲಿದೆ?

ಅ) ಗೋವಾ

ಆ) ಉತ್ತರಖಂಡ್

ಇ) ಉತ್ತರ ಪ್ರದೇಶ

ಈ) ರಾಜಸ್ತಾನ

ಭಾರತ ಮತ್ತು ಅಮೆರಿಕಾ ಸೇನಾಪಡೆಗಳ ಯುದ್ದ್ ಅಭ್ಯಾಸ್" ಜಂಟಿ ಸಮರಾಭ್ಯಾಸ ಉತ್ತರಖಂಡದ ಚೌಬಾಟಿಯಾದಲ್ಲಿ ಸೆಪ್ಟೆಂಬರ್ 14 ರಿಂದ 17 ವರೆಗೆ ನಡೆಯಲಿದೆ. ಭಾರತದ ಮದ್ರಾಸ್ ರೆಜಿಮೆಂಟ್ ಯೋಧರು ಈ ಅಭ್ಯಾಸದಲ್ಲಿ ಭಾಗವಹಿಸಲಿದ್ದಾರೆ.

78. ಇತ್ತೀಚೆಗೆ ಯಶಸ್ವಿಯಾಗಿ ಪ್ರಯೋಗಾರ್ಥ ಹಾರಾಟ ನಡೆಸಿ ಸುದ್ದಿಯಲ್ಲಿದ್ದ ಸ್ವದೇಶಿ ನಿರ್ಮಿತ "ಲೈಟ್ ಯುಟಿಲಿಟಿ ಹೆಲಿಕಾಪ್ಟರ್ (Light Utility Helicopter) ಅನ್ನು ಈ ಕೆಳಗಿನ ಯಾವ ಸಂಸ್ಥೆ ಅಭಿವೃದ್ದಿಪಡಿಸಿದೆ?

ಅ) ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (HAL)

ಆ) ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ದಿ ಸಂಸ್ಥೆ (DRDO)

ಇ) ಏರೋನಾಟಿಕ್ ಡೆವೆಲಪ್ಮೆಂಟ್ ಎಸ್ಟಾಬ್ಲಿಷ್ಮೆಂಟ್ (ADE)

ಈ) ಭಾರತ್ ಎಲೆಕ್ಟ್ರಿಕಲ್ಸ್ ಲಿಮೆಟೆಡ್ (BEL)

www.karunaduexams.com

ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (HAL)

ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (HAL) ಅಭಿವೃದ್ಧಿಪಡಿಸಿರುವ ಸ್ವದೇಶಿ ನಿರ್ಮಿತ ಲೈಟ್ ಯುಟಿಲಿಟಿ ಹೆಲಿಕಾಪ್ಟರ್ ಸಿದ್ಧವಾಗಿದ್ದು, ಹೆಎಚ್ ಎಲ್ ವಿಮಾನ ನಿಲ್ದಾಣದಲ್ಲಿ ಹೆಲಿಕಾಪ್ಟರ್ ತಾಂತ್ರಿಕ ಪರೀಕ್ಷಾರ್ಥ ಹಾರಾಟ ಯಶಸ್ವಿಯಾಗಿದೆ. ಹೆಚ್ ಎಎಲ್ ನ ಇಬ್ಬರು ನುರಿತ ಪೈಲಟ್ ಗಳು ಎಲ್ ಯು ಹೆಚ್ ಅನ್ನು ಸುಮಾರು 15 ನಿಮಿಷಗಳ ಕಾಲ ಚಲಾಯಿಸಿದ್ದು, ಹೆಲಿಕಾಪ್ಟರ್ ತಾಂತ್ರಿಕವಾಗಿ ಸಮರ್ಥವಾಗಿದೆ ಎಂದು ಹೇಳಿದ್ದಾರೆ. ರಕ್ಷಣಾ ಇಲಾಖೆಯ ಮೂಲಗಳು ತಿಳಿಸಿರುವಂತೆ ಹಾಲಿ ಇರುವ ಭಾರತೀಯ ಸೇನೆಯ ಹಳೆಯ ಚೀತಾ ಮತ್ತು ಚೇತಕ್ ಹೆಲಿಕಾಪ್ಟರ್ ಗಳಿಗೆ ಪರ್ಯಾಯವಾಗಿ ಕಾರ್ಯನಿರ್ವಹಿಸಲು ಹೆಚ್ಎಎಲ್ ಈ ಎಲ್ ಯುಹೆಚ್ ಹೆಲಿಕಾಪ್ಟರ್ ಅನ್ನು ಸಿದ್ಧಪಡಿಸಿದೆ ಎಂದು ಹೇಳಲಾಗುತ್ತಿದೆ. ಹೆಎಚ್ ಎಲ್ ನಿರ್ಮಿತ ಎಲ್ ಯುಹೆಚ್ ಹೆಲಿಕಾಪ್ಟರ್ 750 ಕಿ.ವ್ಯಾಟ್ನ ಸಫ್ರಾನ್ ಎಚ್ಇ ಆರ್ಡಿಡೆನ್ 1 ಯು. ಇಂಜಿನ್ ಹೊಂದಿದ್ದು, ತನ್ನ ಭಾರ ಸೇರಿದಂತೆ ಒಟ್ಟು 3,150 ಕೆ.ಜಿ. ತೂಕದ ಸಾಮಗ್ರಿ ಹೊತ್ತೊಯ್ಯಬಲ್ಲ ಸಾಮರ್ಥ್ಯ ಹೊಂದಿದೆ. ಈ ಹೆಲಿಕಾಪ್ಟರ್ ಗೆ ಒಮ್ಮೆ ಇಂಧನ ತುಂಬಿಸಿದರೆ ಸುಮಾರು 350 ಕಿ.ಮೀ ಗಳ ವರೆಗೂ ಸಾಗ ಬಲ್ಲ ಸಾಮರ್ಥ್ಯವನ್ನು ಈ ಕಾಪ್ಟರ್ ಹೊಂದಿದ್ದು, 6.5 ಕಿ.ಮೀ. ಎತ್ತರದಲ್ಲಿ ಹಾರಬಲ್ಲದಾಗಿದೆ. ಇಬ್ಬರು ಪೈಲಟ್ ಗಳು ಸೇರಿದಂತೆ ಒಟ್ಟು 8 ಮಂದಿ ಆಸೀನರಾಗಬಹುದಾಗಿದ್ದು, ಸಮುದ್ರ ಮಟ್ಟದಿಂದ ಹಿಮಾಲಯದ ಎತ್ತರದವರೆಗೂ ಈ ಲಘು ಹೆಲಿಕಾಪ್ಟರ್ ಹಾರುವ ಸಾಮರ್ಥ್ಯ ಹೊಂದಿದೆ.

79. ಇತ್ತೀಚೆಗೆ “ಶೌಕತ್ ಮಿರ್ಝಿಯೊಯೆವ್” ರವರು ಯಾವ ದೇಶದ ಉಸ್ತುವಾರಿ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ?

ಅ) ಇರಾನ್

ಆ) ಈಜಿಪ್ಟ್

ಇ) ಉಝ್ಬೆಕಿಸ್ತಾನ

ಈ) ಕಝಾಕಿಸ್ತಾನ

ಉಝ್ಬೆಕಿಸ್ತಾನ

ಉಝ್ಬೆಕಿಸ್ತಾನದ ಪ್ರಧಾನಿ ಶೌಕತ್ ಮಿರ್ಝಿಯೊಯೆವ್ ಅವರನ್ನು ಉಝ್ಬೆಕಿಸ್ತಾನದ ಉಸ್ತುವಾರಿ ಅಧ್ಯಕ್ಷರನ್ನಾಗಿ ದೇಶದ ಸಂಸತ್ತು ಗುರುವಾರ ನೇಮಿಸಿದೆ. ಸುದೀರ್ಘ ಕಾಲ ದೇಶವನ್ನಾಳಿದ ಅಧ್ಯಕ್ಷ ಇಸ್ಲಾಮ್ ಕರಿಮೊವ್ ಇತ್ತೀಚೆಗೆ ಮೆದುಳಿನ ರಕ್ತಸ್ರಾವದಿಂದ ನಿಧನರಾದ ಕಾರಣ ಅಧ್ಯಕ್ಷ ಹುದ್ದೆ ತೆರವಾಗಿತ್ತು.

80. ಈ ಕೆಳಗಿನ ಯಾರು ಆಕ್ಸಿಜನ್ ಪೂರೈಕೆ ಇಲ್ಲದೇ ಮೌಂಟ್ ಎವರೆಸ್ಟ್ ಏರಿದವರಲ್ಲಿ ಮೊದಲಿಗರೆನಿಸಿದ್ದಾರೆ?

ಅ) ರೈನ್ಹೋಲ್ಡ್ ಮೆಸ್ನರ್

ಆ) ಜೀನ್ ಟ್ರೊಯ್ಲೆಟ್

ಇ) ಡಂಕನ್ ಚೆಸೆಲ್

ಈ) ತೆರೆಸಾ ಸಿಂಗ್

www.karunaduexams.com

ರೈನ್ಹೋಲ್ಡ್ ಮೆಸ್ನರ್

ಜರ್ಮನಿಯ ರೈನ್ಹೋಲ್ಡ್ ಮೆಸ್ನರ್ ರವರು ಆಕ್ಸಿಜನ್ ಪೂರೈಕೆ ಇಲ್ಲದೇ ಮೌಂಟ್ ಎವರೆಸ್ಟ್ ಏರಿದವರಲ್ಲಿ ಮೊದಲಿಗರೆನಿಸಿದ್ದಾರೆ. ಮೆಸ್ನರ್ 1978 ರಲ್ಲಿ ಪೀಟರ್ ಹಬೆಲರ್ ಜೊತೆಗೂಡಿ ಈ ಸಾಧನೆಯನ್ನು ಮಾಡಿದ್ದಾರೆ.

81. ಇತ್ತೀಚೆಗೆ ನಡೆದ 9ನೇ ಕೃಷಿ ನಾಯಕತ್ವ ಶೃಂಗಸಭೆಯಲ್ಲಿ "ಅತ್ಯುತ್ತಮ ತೋಟಗಾರಿಕೆ ರಾಜ್ಯ (Best Horticulture State)" ಪ್ರಶಸ್ತಿ ಪಡೆದ ರಾಜ್ಯ ಯಾವುದು?

ಅ) ಕೇರಳ

ಆ) ಹರಿಯಾಣ

ಇ) ಮಧ್ಯ ಪ್ರದೇಶ

ಈ) ಕರ್ನಾಟಕ

ಹರಿಯಾಣ

ಹರಿಯಾಣ ರಾಜ್ಯ ಅತ್ಯುತ್ತಮ ತೋಟಗಾರಿಕೆ ರಾಜ್ಯ ಪ್ರಶಸ್ತಿಗೆ ಭಾಜನವಾಗಿದೆ. ಇಂಡಿಯನ್ ಕೌನ್ಸಿಲ್ ಆಫ್ ಫುಡ್ ಅಂಡ್ ಅಗ್ರಿಕಲ್ಚರ್ (ICFA) ಈ ಪ್ರಶಸ್ತಿಯನ್ನು ನೀಡುತ್ತಿದೆ. ನವದೆಹಲಿಯಲ್ಲಿ ICFA ಪ್ರಾಯೋಜಕತ್ವದ 9ನೇ ಕೃಷಿ ನಾಯಕತ್ವ ಶೃಂಗಸಭೆಯಲ್ಲಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ತೋಟಗಾರಿಕೆಯನ್ನು ಪ್ರೋತ್ಸಾಹಿಸಿ ರೈತರ ಆದಾಯವನ್ನು ಹೆಚ್ಚಿಸಲು ಹರಿಯಾಣ ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ಪರಿಗಣಿಸಿ ಈ ಪ್ರಶಸ್ತಿಯನ್ನು ನೀಡಲಾಗಿದೆ. ಇದೇ ವೇಳೆ ಅತ್ಯುತ್ತಮ ಕೃಷಿ ರಾಜ್ಯ ಪ್ರಶಸ್ತಿಯನ್ನು ಒಡಿಶಾ ರಾಜ್ಯ ಪಡೆದುಕೊಂಡಿದೆ.

82. ವಿಶ್ವದಲ್ಲೇ ಮೊದಲ ಬಾರಿಗೆ ಚಾಲಕ ರಹಿತ ಬಸ್ಸ್ ಸೇವೆಯನ್ನು ಯಾವ ದೇಶದಲ್ಲಿ ಆರಂಭಿಸಲಾಗಿದೆ?

ಅ) ಸಿಂಗಾಪುರ

ಆ) ಫ್ರಾನ್ಸ್

ಇ) ಬ್ರೆಜಿಲ್

ಈ) ಸ್ವಿಟ್ಜರ್ಲ್ಯಾಂಡ್

ಫ್ರಾನ್ಸ್

ವಿಶ್ವದ ಮೊದಲ ಚಾಲಕ ರಹಿತ ಬಸ್ಸ್ ಸೇವೆಗೆ ಫ್ರಾನ್ಸ್ನ ಲಿಯಾನ್ ನಗರದಲ್ಲಿ ಚಾಲನೆ ನೀಡಲಾಗಿದೆ. ಮೊದಲ ಹಂತದಲ್ಲಿ ಎರಡು ವಿದ್ಯುತ್ ಚಾಲಿತ ಬಸ್ಸ್ ಗಳನ್ನು ಆರಂಭಿಸಲಾಗಿದ್ದು, ಲೇಸರ್ ಸಂವೇದಕಗಳು, ಸ್ಟೀರಿಯೋ ದೃಷ್ಟಿ ಮತ್ತು ಜಿಪಿಎಸ್ ಸೇರಿದಂತೆ ಅತ್ಯಾಧುನಿಕ ಉಪಕರಣಗಳನ್ನು ಇವುಗಳಿಗೆ ಅಳವಡಿಸಲಾಗಿದೆ. 15 ಜನ ಪ್ರಯಾಣಿಕರನ್ನು ಕರೆದೊಯ್ಯಬಲ್ಲ ಸಾಮರ್ಥ್ಯವನ್ನು ಹೊಂದಿರುವ ಈ ಬಸ್ಸ್ ಗಳು ಗಂಟೆಗೆ 20 ಕಿ.ಮೀ ವೇಗದಲ್ಲಿ ಚಲಿಸಲಿವೆ.

www.karunaduexams.com

83. ರಿಯೋ ಪ್ಯಾರಾಲಿಂಫಿಕ್ಸ್ ಟಿ42 ಹೈಜಂಪ್ ನಲ್ಲಿ ಭಾರತಕ್ಕೆ ಮೊದಲ ಚಿನ್ನದ ಪದಕ ತಂದುಕೊಟ್ಟ ಆಟಗಾರ ಯಾರು?

ಅ) ವರುಣ್ ಸಿಂಗ್

ಆ) ಮರಿಯಪ್ಪನ್ ತಂಗವೇಲು

ಇ) ಪ್ರದೀಪ್ ಶೆಟ್ಟಿ

ಈ) ದೇವೇಂದ್ರ ಝಾರಿಯಾ

ಮರಿಯಪ್ಪನ್ ತಂಗವೇಲು

ಬ್ರೆಜಿಲ್ ನ ರಿಯೋದಲ್ಲಿ ನಡೆಯುತ್ತಿರುವ ಪ್ಯಾರಾಲಿಂಪಿಕ್ಸ್ ಟಿ42 ಹೈಜಂಪ್ ನಲ್ಲಿ ಭಾರತದ ಮರಿಯಪ್ಪನ್ ತಂಗವೇಲು ಚಿನ್ನದ ಪದಕ ಗೆದ್ದಿದ್ದಾರೆ. ಆ ಮೂಲಕ ಪ್ಯಾರಾಲಿಂಪಿಕ್ಸ್ ನಲ್ಲಿ ಭಾರತಕ್ಕೆ ಮೊದಲ ಪದಕ ತಂದುಕೊಟ್ಟರು. ಭಾರತದ ಮತ್ತೊಬ್ಬ ಕ್ರೀಡಾಪಟು ವರುಣ್ ಸಿಂಗ್ ಇದೇ ವಿಭಾಗದಲ್ಲಿ ಕಂಚು ಪದಕ ಗೆದ್ದು ಇತಿಹಾಸ ನಿರ್ಮಿಸಿದ್ದಾರೆ. ಹೈಜಂಪ್ ಸ್ಪರ್ಧೆಯಲ್ಲಿ ಮರಿಯಪ್ಪನ್ ತಂಗವೇಲು 1.89 ಮೀಟರ್ ದೂರ ಜಿಗಿದು ಚಿನ್ನದ ಗೆದ್ದಿದ್ದಾರೆ. ಇನ್ನು ಇದೇ ಸ್ಪರ್ಧೆಯಲ್ಲಿ ಭಾರತದ ವರುಣ್ ಸಿಂಗ್ ಭಾಟಿ 1.96 ಮೀಟರ್ ದೂರ ಜಿಗಿದು ಕಂಚು ಪದಕವನ್ನು ಗೆದ್ದು ದೇಶದ ಕೀರ್ತಿ ಹೆಚ್ಚಿಸಿದ್ದಾರೆ.

84. ಈ ಕೆಳಗಿನ ಯಾವ ದೇಶದೊಂದಿಗೆ ಭಾರತ ಇತ್ತೀಚೆಗೆ "ಓಪನ್ ಸ್ಕೈ (Open Sky)" ಒಪ್ಪಂದಕ್ಕೆ ಸಹಿ ಮಾಡಿದೆ?

ಅ) ಬ್ರೆಜಿಲ್

ಆ) ಗ್ರೀಸ್

ಇ) ಮೆಕ್ಸಿಕೊ

ಈ) ಇರಾಕ್

ಗ್ರೀಸ್

ಗ್ರೀಸ್ ಮತ್ತು ಭಾರತ ನಡುವೆ ಅಪರಿಮಿತಿ ವಿಮಾನ ಹಾರಾಟ ನಡೆಸುವ ಸಲುವಾಗಿ ಭಾರತ ಸರ್ಕಾರ ಗ್ರೀಸ್ ದೇಶದೊಂದಿಗೆ ಒಡಂಬಡಿಕೆಗೆ ಸಹಿಹಾಕಿದೆ. ಜೊತೆಗೆ ಮುಕ್ತ ಆಕಾಶ (Open Skies)ಕ್ಕೆ ಸಂಬಂಧಿಸಿದಂತೆ ಉಭಯ ದೇಶಗಳ ನಡುವೆ ವಾಯು ಸೇವೆ ಒಪ್ಪಂದಕ್ಕೂ ಸಹಿ ಮಾಡಿವೆ. ಆ ಮೂಲಕ ಭಾರತದ ಹೊಸ ನಾಗರಿಕ ವಿಮಾನಯಾನ ನೀತಿಯಡಿ ಒಪನ್ ಸ್ಕೈ ಒಪ್ಪಂದಕ್ಕೆ ಸಹಿ ಮಾಡಿದ ಮೊದಲ ದೇಶ ಗ್ರೀಸ್ ಆಗಿದೆ.

85. ಪ್ರತಿಷ್ಠಿತ ಸ್ಯಾಮ್ಸಂಗ್ 6 ರೆಡ್ ವಿಶ್ವ ಸ್ನೂಕರ್ ಚಾಂಪಿಯನ್ಶಿಪ್ ನಲ್ಲಿ ಕಂಚಿನ ಪದಕ ಗೆಲ್ಲುವ ಮೂಲಕ ಈ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದು ಇತಿಹಾಸ ನಿರ್ಮಿಸಿದ ಭಾರತದ ಸ್ನೂಕರ್ ಯಾರು?

ಅ) ಪಂಕಜ್ ಅಡ್ವಾಣಿ

ಆ) ಆದಿತ್ಯಾ ಮೆಹ್ತ

ಇ) ಗೀತ್ ಸೇತಿ

www.karunaduexams.com

ಈ) ಅಶೋಕ್ ಸಂಡಿಲಿ

ಪಂಕಜ್ ಅಡ್ವಾಣಿ

ಪ್ರತಿಷ್ಠಿತ ಸ್ಯಾಂಗ್ಸಮ್ 6 ರೆಡ್ ವಿಶ್ವ ಸ್ನೂಕರ್ ಚಾಂಪಿಯನ್ಶಿಪ್ನಲ್ಲಿ ಪಂಕಜ್ ಅಡ್ವಾಣಿ ಕಂಚಿನ ಪದಕಕ್ಕೆ ತೃಪ್ತಿಪಟ್ಟುಕೊಂಡಿದ್ದಾರೆ. ಈ ಟೂರ್ನಿಯ ಸೆಮಿಫೈನಲ್ನಲ್ಲಿ ಸೋಲುವ ಮೂಲಕ ಕಂಚಿನ ಪದವನ್ನು ಗೆಲ್ಲಲಷ್ಟೇ ಶಕ್ತರಾದರು. ಆದರೆ ಅಡ್ವಾಣಿ ಪ್ರತಿಷ್ಠಿತ ಟೂರ್ನಿಯಲ್ಲಿ ಪದಕ ಜಯಿಸಿದ ಭಾರತದ ಮೊದಲ ಸ್ನೂಕರ್ ಎನಿಸಿಕೊಳ್ಳುವ ಮೂಲಕ ಇತಿಹಾಸ ನಿರ್ಮಿಸಿದರು.

86. ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ (TRAI) ಅಂಕಿಅಂಶದ ಪ್ರಕಾರ ಜೂನ್ ತಿಂಗಳ ಅಂತ್ಯಕ್ಕೆ ಭಾರತದ ಒಟ್ಟಾರೆ ಟೆಲಿ ಸಾಂದ್ರತೆ ಎಷ್ಟಿದೆ?

ಅ) 89.0%

ಆ) 79.8%

ಇ) 83.20%

ಈ) 85.60%

83.20%

ಭಾರತದಲ್ಲಿ ಮೊಬೈಲ್ ಬಳಕೆದಾರರ ಸಂಖ್ಯೆ ಗಣನೀಯವಾಗಿ ಏರಿಕೆ ಕಂಡಿದ್ದು, ಜೂನ್ ಅಂತ್ಯದ ವೇಳೆಗೆ 103.5 ಕೋಟಿ ದಾಟಿದೆ ಎಂದು ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ(ಟ್ರಾಯ್) ಹೇಳಿದೆ.ಮೇ ತಿಂಗಳ ಕೊನೆಯಲ್ಲಿ 1058.03 ಮಿಲಿಯನ್ ಇದ್ದ ಒಟ್ಟು ಟೆಲಿಕಾಂ ಗ್ರಾಹಕರು (ನಿಸ್ತಂತು ಮತ್ತು ವೈರ್ಲೈನ್) ಜೂನ್ ಕೊನೆಯಲ್ಲಿ 1059.86 ಮಿಲಿಯನ್ ನಷ್ಟಿತ್ತು. ಭಾರತದ ಟೆಲಿ ಸಾಂದ್ರತೆ ಇದರೊಂದಿಗೆ ಭಾರತದ ಒಟ್ಟಾರೆ ಟೆಲಿ ಸಾಂದ್ರತೆ ಮೇ ಕೊನೆಯಲ್ಲಿ 83.14 ರಿಂದ 83.20 ಹೆಚ್ಚಳ ಆಗಿದೆಯೆಂದು ಜೂನ್ ತಿಂಗಳ ಮಾಸಿಕ ವರದಿಯಲ್ಲಿ ತಿಳಿಸಿದೆ.

87. ಕೇಂದ್ರ ಸರ್ಕಾರ ಬಿಡುಗಡೆಗೊಳಿಸಿದ ದೇಶದ ಸ್ವಚ್ಛ ಜಿಲ್ಲೆಗಳ ಪೈಕಿ ಬಯಲು ಪ್ರದೇಶ ವಿಭಾಗದಲ್ಲಿ ಈ ಕೆಳಗಿನ ಯಾವುದು ಅತ್ಯಂತ ಸ್ವಚ್ಛ ಜಿಲ್ಲೆ ಎನಿಸಿದೆ?

ಅ) ಸಿಂಧುದುರ್ಗ

ಆ) ರತ್ನಗಿರಿ

ಇ) ಥಾಣೆ

ಈ) ನಾದಿಯಾ

ಸಿಂಧುದುರ್ಗ

ಕೇಂದ್ರ ಸರ್ಕಾರ ಇತ್ತೀಚೆಗೆ ಕೈಗೊಂಡಿದ್ದ ಗ್ರಾಮೀಣ ಸ್ವಚ್ಛ ಸರ್ವೇಕ್ಷಣಾ ವರದಿಯನ್ನು ಬಿಡುಗಡೆಗೊಳಿಸಿದೆ. ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ನರೇಂದ್ರ ಸಿಂಗ್ ತೋಮರ್ ವರದಿಯನ್ನು ಬಿಡುಗಡೆ ಮಾಡಿದರು. ಸಮೀಕ್ಷೆಯನ್ನು ಬಯಲು

www.karunaduexams.com

ಪ್ರದೇಶ ಹಾಗೂ ಗುಡ್ಡಗಾಡು ಪ್ರದೇಶ ಎಂದು ಎರಡು ಭಾಗಗಳಲ್ಲಿ ಪ್ರತ್ಯೇಕಿಸಿ ನಡೆಸಲಾಗಿದೆ. ಬಯಲು ಪ್ರದೇಶದ ವಿಭಾಗದಲ್ಲಿ ಟಾಪ್ 10 ಜಿಲ್ಲೆಗಳಲ್ಲಿ ಮಹಾರಾಷ್ಟ್ರದ ಸಿಂಧುದುರ್ಗ ಜಿಲ್ಲೆ ಮೊದಲ ಸ್ಥಾನ ಪಡೆದಿದೆ. ನಂತರದ ಸ್ಥಾನಗಳಲ್ಲಿ ಸತಾರಾ, ಕೊಲ್ಹಾಪುರ, ರತ್ನಗಿರಿ ಮತ್ತು ಥಾಣೆ (ಮಹಾರಾಷ್ಟ್ರ), ನಾದಿಯಾ, ಮಿಡ್ನಾಪುರ ಪೂರ್ವ, ಹೂಗ್ಲಿ (ಪ.ಬಂಗಾಳ), ಉಡುಪಿ (ಕರ್ನಾಟಕ) ಮತ್ತು ಚುರು (ರಾಜಸ್ಥಾನ) ಜಿಲ್ಲೆಗಳಿವೆ. ಇನ್ನು ಗುಡ್ಡಗಾಡು ಜಿಲ್ಲೆಗಳಲ್ಲಿ ಹಿಮಾಚಲ ಪ್ರದೇಶದ ಮಂಡಿ ಮೊದಲ ಸ್ಥಾನದಲ್ಲಿದೆ. ಇನ್ನುಳಿದಂತೆ ಈಶಾನ್ಯ ಮತ್ತು ಹಿಮಾಲಯ ತಪ್ಪಲಿನ ಕೆಲ ಜಿಲ್ಲೆಗಳಿವೆ. ಕರ್ನಾಟಕದ ಉಡುಪಿ ಜಿಲ್ಲೆ 8ನೇ ಸ್ಥಾನವನ್ನು ಗಳಿಸುವ ಮೂಲಕ ಟಾಪ್ 10ರಲ್ಲಿ ಕಾಣಿಸಿಕೊಂಡ ಏಕೈಕ ಜಿಲ್ಲೆಯಾಗಿದೆ.

88. ಭಾರತದ ಉಪರಾಷ್ಟ್ರಪತಿ ಚುನಾವಣೆಗೆ ಸ್ಪರ್ಧಿಸಲು ಅಗತ್ಯವಿರುವ ಕನಿಷ್ಠ ವಯಸ್ಸೆಷ್ಟು?

ಅ) 25

ಆ) 30

ಇ) 35

ಈ) 40

35

ಭಾರತದ ಉಪರಾಷ್ಟ್ರಪತಿ ಹುದ್ದೆಯನ್ನು ಅಲಂಕರಿಸಲು ಕನಿಷ್ಠ 35 ವರ್ಷ ವಯಸ್ಸಾಗಿರಬೇಕು. ಭಾರತ ಸಂವಿಧಾನದ ಪರಿಚ್ಛೇದ 66ರ ಪ್ರಕಾರ ಭಾರತೀಯ ಪ್ರಜೆ ಆಗಿರಬೇಕು, ಯಾವುದೇ ಲಾಭದಾಯಕ ಹುದ್ದೆಗಳನ್ನು ಹೊಂದಿರಬಾರದು ಮತ್ತು ರಾಜ್ಯ ಸಭಾ ಸದಸ್ಯನಾಗಿ ನೇಮಕಗೊಳ್ಳಲು ಬೇಕಿರುವ ಎಲ್ಲಾ ಅರ್ಹತೆಯನ್ನು ಹೊಂದಿರತಕ್ಕದ್ದು.

89. ಇತ್ತೀಚೆಗೆ ಬಿಡುಗಡೆಗೊಂಡ "ಸಿಕ್ಸ್ ಮೆಷಿನ್ (Six Machine)" ಯಾವ ಕ್ರಿಕೆಟ್ ಆಟಗಾರನ ಆತ್ಮಚರಿತ್ರೆ?

ಅ) ಕ್ರಿಸ್ ಗೇಲ್

ಆ) ವಿರಾಟ್ ಕೊಹ್ಲಿ

ಇ) ಬ್ರೆಂಡಮ್ ಮ್ಯಾಕಲಂ

ಈ) ರಿಕಿ ಪಾಂಟಿಂಗ್

ಕ್ರಿಸ್ ಗೇಲ್

ವೆಸ್ಟ್ ಇಂಡೀಸ್ನ ಸ್ಫೋಟಕ ಬ್ಯಾಟ್ಸಮನ್ ಕ್ರಿಸ್ ಗೇಲ್ ಅವರ ಆತ್ಮ ಚರಿತ್ರೆ "ಸಿಕ್ಸ್ ಮೆಷಿನ್" ಬಿಡುಗಡೆಗೊಂಡಿದೆ. ಈ ಪುಸ್ತಕದಲ್ಲಿ ಕ್ರಿಸ್ ಗೇಲ್ ತಮ್ಮ ವೈಯುಕ್ತಿಕ ಮತ್ತು ವೃತ್ತಿ ಜೀವನದ ವಿವಿಧ ಮಜಲುಗಳನ್ನು ಇದರಲ್ಲಿ ಬಣ್ಣಿಸಲಾಗಿದೆ. ಮಾಜಿ ಕ್ರಿಕೆಟಿಗ ವಿರೇಂದ್ರ ಸೆಹ್ವಾಗ್ ಸಮ್ಮುಖದಲ್ಲಿ, ಬಿಸಿಸಿಐ ಅಧ್ಯಕ್ಷ ಅನುರಾಗ್ ಠಾಕೂರ್ ಈ ಆತ್ಮ ಚರಿತ್ರೆಯನ್ನು ಬಿಡುಗಡೆಗೊಳಿಸಿದರು.

www.karunaduexams.com

೯೦. ಜೋಳ ಮುಖ್ಯ ಆಹಾರ ಪದಾರ್ಥವಾಗಿರುವ ಪ್ರದೇಶ ಸಾಮಾನ್ಯವಾಗಿ ಕಂಡು ಬರುವ ಕಾಯಿಲೆ ಯಾವುದು?

ಅ) ಪೆಲ್ಲಾಗ್ರ

ಆ) ಬೆರಿ-ಬೆರಿ

ಇ) ಇರುಳು ಕುರುಡು

ಈ) ಸ್ಕರ್ವಿ

ಪೆಲ್ಲಾಗ್ರ

ಜೋಳವನ್ನು ಮುಖ್ಯ ಆಹಾರವನ್ನಾಗಿ ಬಳಸುವ ಪ್ರದೇಶದಲ್ಲಿ ಪೆಲ್ಲಾಗ್ರ ಕಾಯಿಲೆ ಸಾಮಾನ್ಯವಾಗಿ ಕಂಡುಬರುತ್ತದೆ. ಪೆಲ್ಲಾಗ್ರ ವಿಟಮಿನ್ B3 ಕೊರತೆಯಿಂದ ಬರುವ ಕಾಯಿಲೆ. ಜೋಳದಲ್ಲಿ ವಿಟಮಿನ್ B3 ಇದ್ದರೂ, ಮಾನವ ದೇಹ ಸುಲಭವಾಗಿ ಹೀರಿಕೊಳ್ಳುವ ರೂಪದಲ್ಲಿ ಇಲ್ಲದಿರುವುದರಿಂದ ಪೆಲ್ಲಾಗ್ರಕ್ಕೆ ಕಾರಣವಾಗಿದೆ.

91. ಈ ಕೆಳಗಿನ ಯಾವುದರ ಅಧ್ಯಯನಕ್ಕಾಗಿ ನಾಸಾ ಇತ್ತೀಚೆಗೆ "OSIRIS-Rex" ಬಾಹ್ಯಕಾಶ ನೌಕೆಯನ್ನು ಉಡಾಯಿಸಿತು?

ಅ) ಟೈಟಾನ್

ಆ) ಮಂಗಳ ಗ್ರಹ

ಇ) ಬೆನ್ನು ಕ್ಷುದ್ರಗ್ರಹ

ಈ) ಶುಕ್ರ ಗ್ರಹ

ಬೆನ್ನು ಕ್ಷುದ್ರಗ್ರಹ

ಅಮೆರಿಕಾದ ನ್ಯಾಷನಲ್ ಏರೋನಾಟಿಕ್ಸ್ ಅಂಡ್ ಸ್ಪೇಸ್ ಅಡ್ಮಿನಿಸ್ಟ್ರೇಷನ್ (ನಾಸಾ) "101955 ಬೆನ್ನು ಕ್ಷುದ್ರಗ್ರಹ (Bennu Asteroid)"ನ ಅಧ್ಯಯನಕ್ಕಾಗಿ "ಒಸಿರಿಸ್-ರೆಕ್ಸ್" ಬಾಹ್ಯಕಾಶ ನೌಕೆಯನ್ನು ಹಾರಿ ಬಿಟ್ಟಿದೆ. OSIRIS-Rex (Origins, Spectral Interpretation, Resource Identification, Security-Regolith Explorer) ಕ್ಷುದ್ರಗ್ರಹ ಅಧ್ಯಯನಕ್ಕಾಗಿ ಅಭಿವೃದ್ಧಿಪಡಿಸಿರುವ ಅಮೆರಿಕಾದ ಮೊದಲ ಬಾಹ್ಯಕಾಶ ನೌಕೆಯಾಗಿದೆ. ಅಟ್ಲಾಸ್ V ರಾಕೆಟ್ ಬಳಸಿ ಕೇಪ್ ಕನವರೆಲ್ ಏರ್ ಫೋರ್ಸ್ ಸ್ಟೇಷನ್ ನಿಂದ ಉಡಾಯಿಸಲಾಯಿತು. ಭೂಮಿಯ ಸಮೀಪದಲ್ಲಿರುವ 101955 ಬೆನ್ನು ಕ್ಷುದ್ರಗ್ರಹದಲ್ಲಿನ ಮಾದರಿಗಳನ್ನು ಸಂಗ್ರಹಿಸಿ ಭೂಮಿಗೆ ಮರಳಿ ತರುವ ಮಹತ್ವದ ಕಾರ್ಯಕ್ಕಾಗಿ ಈ ನೌಕೆಯನ್ನು ಕಳುಹಿಸಲಾಗಿದೆ. 2018 ರ ಅಂತ್ಯಕ್ಕೆ ಈ ನೌಕೆ ಕ್ಷುದ್ರಗ್ರಹವನ್ನು ತಲುಪಲಿದೆ. ಈ ಕ್ಷುದ್ರಗ್ರಹದ ಮೇಲಿನ ಮಣ್ಣು ಮತ್ತು ಧೂಳಿನ ಕಣಗಳನ್ನು ಸಂಗ್ರಹಿಸಿ ಸೌರ ಮಂಡಲದ ಉಗಮದ ಬಗ್ಗೆ ಅಧ್ಯಯನ ನಡೆಸಲಾಗುವುದು.

www.karunaduexams.com

92. 2016 ಪಂಗ್ಕೊರ್ ಡೈಲಾಗ್ ಪ್ರಶಸ್ತಿ (Pangkor Dialogue Award) ಪ್ರಶಸ್ತಿಯನ್ನು ಯಾವ ರಾಜ್ಯದ ಮುಖ್ಯಮಂತ್ರಿಗೆ ನೀಡಲಾಗಿದೆ?

ಅ) ಸರ್ಬನಂದ ಸೊನೊವಾಲ್

ಆ) ಮಮತಾ ಬ್ಯಾನರ್ಜಿ

ಇ) ಟಿ ಆರ್ ಝೆಲಿಯಾಂಗ್

ಈ) ಪೆಮ ಖಂಡು

ಟಿ ಆರ್ ಝೆಲಿಯಾಂಗ್

ಮಲೇಷಿಯಾ ಸರ್ಕಾರ ಪ್ರಾಯೋಜಕತ್ವದ ಪಂಗ್ಕೊರ್ ಡೈಲಾಗ್ ಪ್ರಶಸ್ತಿಯನ್ನು 2016ನೇ ಸಾಲಿಗೆ ನಾಗಾಲ್ಯಾಂಡ್ ಮುಖ್ಯಮಂತ್ರಿಯಾದ ಟಿ ಆರ್ ಝೆಲಿಯಾಂಗ್ ಅವರಿಗೆ ನೀಡಲಾಗಿದೆ. ಪರಿಸರ ಸಂರಕ್ಷಣೆಗಾಗಿ ನಾಗಲ್ಯಾಂಡ್ ಜನತೆ ಕೈಗೊಂಡಿರುವ ಕ್ರಮಗಳನ್ನು ಪರಿಗಣಿಸಿ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಪ್ರಶಸ್ತಿಯನ್ನು ಮಲೇಷಿಯಾದ ಇನ್ಸ್ ಟಿಟ್ಯೂಟ್ ದರುಲ್ ರುದ್ಝಯಾನ್ ಮತ್ತು ಮಲೇಷಿಯಾ ಸರ್ಕಾರ ಜಂಟಿಯಾಗಿ ಸ್ಥಾಪಿಸಿದೆ.

93. ಎರಡು ದಿನಗಳ "ಬ್ರಿಕ್ಸ್ ಆರೋಗ್ಯ ಕಾರ್ಯಾಗಾರ"ವನ್ನು ಯಾವ ನಗರದಲ್ಲಿ ಆಯೋಜಿಸಲಾಗಿದೆ?

ಅ) ಬೆಂಗಳೂರು

ಆ) ಮುಂಬೈ

ಇ) ಕೊಲ್ಕತ್ತ

ಈ) ನವದೆಹಲಿ

ಬೆಂಗಳೂರು

ಕೇಂದ್ರ ಆಯುಷ್ ಇಲಾಖೆ ಮತ್ತು ವಿದೇಶಾಂಗ ಇಲಾಖೆ ಆಶ್ರಯದಲ್ಲಿ ಎರಡು ದಿನಗಳ ಬ್ರಿಕ್ಸ್ ಆರೋಗ್ಯ ಕಾರ್ಯಾಗಾರ (BRICS Wellness Workshop) ಅನ್ನು ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿದೆ. ಸೆಪ್ಟೆಂಬರ್ 10-11 ರಂದು ನಡೆಯಲಿರುವ ಈ ಕಾರ್ಯಾಗಾರಕ್ಕೆ ಕೇಂದ್ರ ಆಯುಷ್ ಇಲಾಖೆ ರಾಜ್ಯ ಸಚಿವ ಶ್ರೀಪಾದ್ ಯಸ್ಸೋ ನಾಯ್ಕ್ ಉದ್ಘಾಟಿಸಿದರು. ಬ್ರಿಕ್ಸ್ ಕಾರ್ಯಾಗಾರಕ್ಕೆ ಪೂರಕವಾಗಿ ಅರಮನೆ ಮೈದಾನದ ಗಾಯತ್ರಿ ವಿಹಾರದಲ್ಲಿ ಶನಿವಾರದಿಂದ ಇದೇ 13ರವರೆಗೆ ಆಯುಷ್ ವಸ್ತುಪ್ರದರ್ಶನ ನಡೆಯಲಿದೆ.ಆಯುರ್ವೇದ, ಯೋಗ, ಯುನಾನಿ, ಸಿದ್ಧ ಹೋಮಿಯೋಪತಿ ಹಾಗೂ ಪ್ರಕೃತಿ ಚಿಕಿತ್ಸೆ ಬಗ್ಗೆ ಮಾಹಿತಿ ಒದಗಿಸಲಾಗುತ್ತದೆ. ಆಯುಷ್ ಔಷಧಗಳು ಮತ್ತು ಔಷಧೀಯ ಸಸ್ಯಗಳ ಬಗ್ಗೆ ವಿಚಾರ ಸಂಕಿರಣಗಳೂ ನಡೆಯಲಿವೆ.

www.karunaduexams.com

94. ಭಾರತದ ಮೊದಲ "ಲೇಸರ್ ಇಂಟರ್‌ಫೆರೊಮೀಟರ್ ಗ್ರಾವಿಟೇಷನಲ್ ವೇವ್ ಅಬ್ಸರ್ವೇಟರಿ (LIGO)" ಪ್ರಯೋಗಾಲಯ ಯಾವ ರಾಜ್ಯದಲ್ಲಿ ಸ್ಥಾಪನೆಯಾಗಲಿದೆ?

ಅ) ಕರ್ನಾಟಕ

ಆ) ಮಹಾರಾಷ್ಟ್ರ

ಇ) ಗುಜರಾತ್

ಈ) ಆಂಧ್ರ ಪ್ರದೇಶ

ಮಹಾರಾಷ್ಟ್ರ

ಗುರುತ್ವಾಕರ್ಷಣೆ ಅಲೆಗಳನ್ನು ಗುರುತಿಸುವ ಮಹತ್ವಾಕಾಂಕ್ಷಿ ಲೇಸರ್ ಇಂಟರ್‌ಫೆರೊಮೀಟರ್ ಗ್ರಾವಿಟೇಷನಲ್ ವೇವ್ ಅಬ್ಸರ್ವೇಟರಿ (ಲೀಗೋ) ಪ್ರಯೋಗಾಲಯವನ್ನು ಮಹಾರಾಷ್ಟ್ರದ ಹಿಂಗೋಲಿ ಜಿಲ್ಲೆಯ ಔಂಧಾದಲ್ಲಿ ಸ್ಥಾಪಿಸಲು ತೀರ್ಮಾನಿಸಲಾಗಿದೆ. ಆ ಮೂಲಕ ಅಮೆರಿಕಾದ ನಂತರ ವಿಶ್ವದ ಬೇರೆ ದೇಶಗಳಲ್ಲಿ ಸ್ಥಾಪನೆಗೊಳ್ಳುತ್ತಿರುವ ಮೊದಲ ಪ್ರಯೋಗಾಲಯ ಇದಾಗಿದೆ. ಬ್ರಹ್ಮಾಂಡದಲ್ಲಿರುವ ಗುರುತ್ವಾಕರ್ಷಕ ಅಲೆಗಳನ್ನು ಗುರುತಿಸುವುದು ಮತ್ತು ಖಗೋಳ ಅಧ್ಯಯನ ಸಾಧನವಾಗಿ ಗುರುತ್ವಾಕರ್ಷಕ ಅಲೆ ವೀಕ್ಷಣಾಲಯಗಳನ್ನು ಅಭಿವೃದ್ಧಿಪಡಿಸುವುದು. ಬೆಳಕು ಮತ್ತು ಆಕಾಶವನ್ನು ಬಳಸಿಕೊಂಡು ಗುರುತ್ವಾಕರ್ಷಕ ಅಲೆಗಳ ಮೂಲವನ್ನು ಗುರುತಿಸಿ ಅರ್ಥ ಮಾಡಿಕೊಳ್ಳುವುದು ಇದರ ಉದ್ದೇಶವಾಗಿದೆ. ಪ್ರಸ್ತುರ ಅಮೆರಿಕಾದ ಹ್ಯಾನ್ ಫೋರ್ಡ್, ವಾಷಿಂಗ್ಟನ್, ಲಿವಿಂಗಸ್ಟನ್ ಮತ್ತು ಲೂಸಿಯಾನದಲ್ಲಿ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗಿದ್ದು, ಕಾರ್ಯನಿರ್ವಹಿಸುತ್ತಿವೆ.

95. ಈ ಕೆಳಗಿನ ಯಾರು ಇತ್ತೀಚೆಗೆ ಬಿಲ್ ಗೇಟ್ಸ್ ಅವರನ್ನು ಹಿಂದಿಕ್ಕಿ ಜಗತ್ತಿನ ನಂ.1 ಶ್ರೀಮಂತ ವ್ಯಕ್ತಿ ಸ್ಥಾನವನ್ನು ಅಲಂಕರಿಸಿದ್ದಾರೆ?

ಅ) ಅಮ್ಯಾನ್ಸಿಯೋ ಅರ್ಟೆಗಾ

ಆ) ಕಾರ್ಲೋಸ್ ಸ್ಲಿಮ್

ಇ) ವಾರನ್ ಬಫೆಟ್

ಈ) ಮುಖೇಶ್ ಅಂಬಾನಿ

ಅಮ್ಯಾನ್ಸಿಯೋ ಅರ್ಟೆಗಾ

ಸ್ಪ್ಯಾನಿಷ್ ಉದ್ಯಮಿ ಅಮ್ಯಾನ್ಸಿಯೋ ಅರ್ಟೆಗಾ ಅವರು ಬಿಲ್ ಗೇಟ್ಸ್‌ರನ್ನ ಹಿಂದಿಟ್ಟು ಜಗತ್ತಿನ ಶ್ರೀಮಂತ ವ್ಯಕ್ತಿಯಾಗಿ ಹೊರಹೊಮ್ಮಿದ್ದಾರೆ. ಅಮ್ಯಾನ್ಸಿಯೋ ಅವರು ಇಂಡಿಟೆಕ್ಸ್ (ಝರಾ ಕ್ಲಾಥಿಂಗ್ ಎಂದೇ ಜನಪ್ರಿಯ)ಸಂಸ್ಥಾಪಕ ಮತ್ತು ಚೇರಮನ್ ಆಗಿದ್ದಾರೆ. ಇವರ ಷೇರುಗಳ ಒಟ್ಟು ಮೌಲ್ಯ ₹5.32 ಲಕ್ಷ ಕೋಟಿ (79.5 ಬಿಲಿಯನ್ ಡಾಲರ್) ತಲುಪಿದ್ದು, ಜಗತ್ತಿನ ಶ್ರೀಮಂತ ವ್ಯಕ್ತಿ ಎನಿಸಿದ್ದಾರೆ. 80 ವರ್ಷದ ಅರ್ಟೆಗಾ ಅವರು ಈ ಹಿಂದೆಯೇ ಯುರೋಪ್‌ನ ಅತಿ ಶ್ರೀಮಂತ ವ್ಯಕ್ತಿ ಸ್ಥಾನ ಪಡೆದಿದ್ದರು. ಇತ್ತೀಚೆಗೆ ಷೇರು ಪೇಟೆಯಲ್ಲಿ ಅರ್ಟೆಗಾ ಅವರ ಷೇರುಗಳಲ್ಲಿ ಶೇ.2.5ರಷ್ಟು ಏರಿಕೆ ಕಾಣುವ ಮೂಲಕ ಜಗತ್ತಿನ ಶ್ರೀಮಂತ ವ್ಯಕ್ತಿಯಾಗಿದ್ದಾರೆ ಎಂದು ಫೋರ್ಬ್ಸ್ ವರದಿ ಮಾಡಿದೆ.

www.karunaduexams.com

96. 2016 ಯುಎಸ್ ಓಪನ್ ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಚಾಂಪಿಯನ್ ಕಿರೀಟ ಮುಡಿಗೇರಿಸಿಕೊಂಡವರು _____?

ಅ) ಅಂಜಲಿಕ್ ಕೆರ್ಬರ್

ಆ) ಸೆರೆನಾ ವಿಲಿಯಮ್ಸ್

ಇ) ಕ್ಯಾರೋಲಿನಾ ಪಿಸ್ಕೋವ

ಈ) ಮಾರ್ಟಿನ್ ಹಿಂಗೀಸ್

ಅಂಜಲಿಕ್ ಕೆರ್ಬರ್

ಜರ್ಮನಿಯ ಅಂಜಲಿಕ್ ಕೆರ್ಬರ್ ಯುಎಸ್ ಓಪನ್ನಲ್ಲಿ ಮಹಿಳೆಯರ ಸಿಂಗಲ್ಸ್ ಚಾಂಪಿಯನ್ ಕಿರೀಟ ಮುಡಿಗೇರಿಸಿಕೊಂಡಿದ್ದಾರೆ. ಮಹಿಳೆಯರ ಸಿಂಗಲ್ಸ್ ಫೈನಲ್ನಲ್ಲಿ ದ್ವಿತೀಯ ಶ್ರೇಯಾಂಕಿತೆ ಕೆರ್ಬರ್ 10ನೇ ಶ್ರೇಯಾಂಕಿತೆ ಝೆಕ್ ಆಟಗಾರ್ತಿ ಕ್ಯಾರೋಲಿನಾ ಪಿಸ್ಕೋವಾರನ್ನು 6-3, 4-6, 6-4 ಸೆಟ್ಗಳಿಂದ ಮಣಿಸಿ ಪ್ರಶಸ್ತಿ ಎತ್ತಿ ಹಿಡಿದರು. ಮಾತ್ರವಲ್ಲ ವಿಶ್ವದ ನಂ.1 ಪಟ್ಟವನ್ನು ಏರಿದರು. ಅಂಜಲಿಕ್ ಕಳೆದ ಜನವರಿಯಲ್ಲಿ ಆಸ್ಟ್ರೇಲಿಯನ್ ಓಪನ್ ಪ್ರಶಸ್ತಿಯನ್ನೂ ಜಯಿಸಿದ್ದರು. ಮೆಲ್ಬೋರ್ನ್ನಲ್ಲಿ ನಡೆದ ಈ ವರ್ಷದ ಮೊದಲ ಗ್ರ್ಯಾನ್ಸ್ಲಾಮ್ ಟೂರ್ನಿ ಆಸ್ಟ್ರೇಲಿಯನ್ ಓಪನ್ ಫೈನಲ್ನಲ್ಲಿ ಅಮೆರಿಕದ ಸೆರೆನಾ ವಿಲಿಯಮ್ಸ್‌ರನ್ನು ಸೋಲಿಸಿ ಪ್ರಶಸ್ತಿ ಎತ್ತಿದ್ದ ಕೆರ್ಬರ್ ವಿಂಬಲ್ಡನ್ ಟೂರ್ನಿಯಲ್ಲೂ ಫೈನಲ್ಗೆ ತಲುಪಿದ್ದರು. ಆದರೆ, ಫೈನಲ್ನಲ್ಲಿ ಅಮೆರಿಕದ ಆಟಗಾರ್ತಿ ಸೆರೆನಾಗೆ ಸೋತಿದ್ದರು.

97. ಈ ಕೆಳಗಿನ ಯಾವುದರಲ್ಲಿ "ಟ್ರೈಕ್ಲೊಸನ್ (Triclosan)" ರಾಸಾಯನಿಕವನ್ನು ಬಳಸಲಾಗುತ್ತದೆ?

I) ಟೂಥ್ ಪೇಸ್ಟ್

II) ಟಾಲ್ಕಂ ಪೌಡರ್

III) ಹ್ಯಾಂಡ್ ವಾಶ್

IV) ಗೋಡೆ ಬಣ್ಣ

ಸರಿಯಾದ ಉತ್ತರವನ್ನು ಈ ಕೆಳಗೆ ನೀಡಿರುವ ಕೋಡ್ ಮೂಲಕ ಆರಿಸಿ:

ಅ) I & II

ಆ) I, II & III

ಇ) III & IV

ಈ) ಮೇಲಿನ ಎಲ್ಲವೂ

ಟ್ರೈಕ್ಲೊಸನ್ ಒಂದು ಆ್ಯಂಟಿ ಮೈಕ್ರೋಬಿಯಲ್ ಗುಣ ಹೊಂದಿರುವ ರಾಸಾಯನಿಕವಾಗಿದ್ದು, ನಾವು ದಿನ ನಿತ್ಯ ಬಳಸುವ ಸೋಪ್, ಟೂಥ್ ಪೇಸ್ಟ್, ಪೌಡರ್, ಹ್ಯಾಂಡ್ ವಾಶ್ ಮತ್ತು ಗೋಡೆ ಬಣ್ಣಗಳ ತಯಾರಿಕೆಯಲ್ಲೂ ಬಳಸಲಾಗುತ್ತಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಇದರ ಬಳಕೆಯನ್ನು ಕೈಬಿಡಬೇಕೆಂಬ ಕೂಗು ಎಲ್ಲೆಡೆ ಕೇಳಿ ಬರುತ್ತಿದೆ. ಬ್ಯಾಕ್ಟೀರಿಯಾಗಳು

www.karunaduexams.com

ಟ್ರೈಕ್ಲೊಸನ್ ಗೆ ವಿರೋಧತ್ವವನ್ನು ಬೆಳೆಸಿಕೊಂಡಿರುವುದು ಇದಕ್ಕೆ ಕಾರಣವಾಗಿದೆ. ಇತ್ತೀಚೆಗೆ ಅಮೆರಿಕಾದ FAO ಟ್ರೈಕ್ಲೊಸನ್ ಆಧಾರಿತ ಸೋಪ್ ಮಾರಾಟಗಳ ಮೇಲೆ ನಿಷೇಧ ಹೇರಿದೆ.

98. ಈ ಕೆಳಗಿನ ಯಾವುದು ಭಾರತದ ಮೊಟ್ಟ ಮೊದಲ ಕುಲಾಂತರಿ ಸಾಸಿವೆ (Genetically Modified Mustard)ತಳಿಯ ಹೆಸರೇನು?

ಅ) DMH-10

ಆ) DMH-11

ಇ) DMH-15

ಈ) DMH-20

DMH-11

DMH-11 ದೇಶದ ಮೊದಲ ಕುಲಾಂತರಿ ಸಾಸಿವೆ ತಳಿ. ದಿಲ್ಲಿಯ ವಿಶ್ವ ವಿದ್ಯಾನಿಲಯದಲ್ಲಿ ಮಾಜಿ ಉಪಕುಲಪತಿ ದೀಪಕ್ ಪೆಂಟಾಲ್ ಎಂಬುವವರ ನೇತೃತ್ವದಲ್ಲಿ ಇದನ್ನು ಅಭಿವೃದ್ದಿಪಡಿಸಲಾಗಿದೆ. ಪ್ರಸ್ತುತ ಕೇಂದ್ರ ಸರ್ಕಾರದ ಮಟ್ಟದಲ್ಲಿ ಈ ತಳಿಗೆ ಅನುಮೋದನೆ ನೀಡುವ ಕುರಿತಾಗಿ ಮಾತುಕತೆ ನಡೆಯುತ್ತಿದೆ. ಒಂದು ವೇಳೆ ಅನುಮತಿ ದೊರೆತರೆ ದೇಶದ ಮೊದಲ ಕುಲಾಂತರಿ ಆಹಾರ ಬೆಳೆ ಎಂಬ ಗೌರವಕ್ಕೆ ಪಾತ್ರವಾಗಲಿದೆ. ಈ ಹಿಂದೆ ಕುಲಾಂತರಿ ಬದನೆ ಅಭಿವೃದ್ದಿಪಡಿಸಲಾಗಿತ್ತಾದ್ದರೂ, ರೈತರಿಗೆ ಬೆಳೆಯಲು ಅವಕಾಶ ನೀಡಿರಲಿಲ್ಲ.

99. 2016 ಬ್ರೆಜಿಲ್ ಗ್ರ್ಯಾಂಡ್ ಪ್ರಿಕ್ಸ್ ಮಿಕ್ಸ್ ಡಬ್ಬಲ್ಸ್ ನಲ್ಲಿ ಪ್ರಶಸ್ತಿ ಗೆದ್ದ ಜೋಡಿ ಯಾವುದು?

ಅ) ಪ್ರಣಾವ್ ಚೋಪ್ರ ಮತ್ತು ಸಿಕ್ಕಿ ರೆಡ್ಡಿ

ಆ) ಟೊಬಿ ನ್ಗ್ ಮತ್ತು ರಾಚೆಲ್ ಹೊಂಡೆರಿಚ್

ಇ) ತರುಣ್ ಕೊನ ಮತ್ತು ಮನು ಅತ್ರಿ

ಈ) ಮನು ಅತ್ರಿ ಮತ್ತು ನಂದ ಗೋಪಾಲ್

ಪ್ರಣಾವ್ ಚೋಪ್ರ ಮತ್ತು ಸಿಕ್ಕಿ ರೆಡ್ಡಿ

ಭಾರತದ ಪ್ರಣಾವ್ ಜೆರಿ ಚೋಪ್ರ ಮತ್ತು ಎನ್. ಸಿಕ್ಕಿ ರೆಡ್ಡಿ ಜೋಡಿ 2016 ಬ್ರೆಜಿಲ್ ಗ್ರ್ಯಾಂಡ್ ಪ್ರಿಕ್ಸ್ ಮಿಕ್ಸ್ ಡಬ್ಬಲ್ಸ್ ನಲ್ಲಿ ಪ್ರಶಸ್ತಿಯನ್ನು ಗೆದ್ದುಕೊಂಡಿತು. ಇವರು ಕೆನಡಾದ ಟೊಬಿ ನ್ಗ್ ಮತ್ತು ರಾಚೆಲ್ ಹೊಂಡೆರಿಚ್ ಜೋಡಿಯನ್ನು ಮಣಿಸುವ ಮೂಲಕ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು.

www.karunaduexams.com

100.“ಬಲ್ಪಕ್ರಮ್ ರಾಷ್ಟ್ರೀಯ ಉದ್ಯಾನವನ (Balpakram National Park)” ಯಾವ ರಾಜ್ಯದಲ್ಲಿದೆ?

ಅ) ಮಣಿಪುರ

ಆ) ಸಿಕ್ಕಿಂ

ಇ) ಮೇಘಾಲಯ

ಈ) ಅರುಣಾಚಲ ಪ್ರದೇಶ

ಮೇಘಾಲಯ

ಬಲ್ಪಕ್ರಮ್ ರಾಷ್ಟ್ರೀಯ ಉದ್ಯಾನವನ ಮೇಘಾಲಯದಲ್ಲಿದೆ. ಈ ಉದ್ಯಾನವನವನ್ನು ಅಮೆರಿಕಾದ ಗ್ರ್ಯಾಂಡ್ ಕನ್ಯಾಯನ್ ರಾಷ್ಟ್ರೀಯ ಉದ್ಯಾನವನಕ್ಕೆ ಹೋಲಿಕೆ ಮಾಡಲಾಗಿದೆ. “ಲ್ಯಾಂಡ್ ಆಫ್ ಸ್ಪಿರಿಟ್” ಎಂತಲೂ ಇದನ್ನು ಕರೆಯಲಾಗುತ್ತದೆ. ಕರಡಿ, ಗೋಲ್ಡನ್ ಕ್ಯಾಟ್, ನೀರಾನೆ, ಆನೆ ಮತ್ತು ಹುಲಿಗಳಿಗೆ ಈ ಉದ್ಯಾನವನ ಆಶ್ರಯವಾಗಿದೆ.

101. ಕೇಂದ್ರ ಸಚಿವ ಸಂಪುಟವು “ಸರಕು ಮತ್ತು ಸೇವಾ ತೆರಿಗೆ ಮಂಡಳಿ”ಯನ್ನು ರಚನೆಗೆ ಒಪ್ಪಿಗೆ ಸೂಚಿಸಿದೆ. ಸಂವಿಧಾನದ ಯಾವ ಪರಿಚ್ಛೇದದಡಿ ಈ ಮಂಡಳಿ ರಚನೆಯಾಗಲಿದೆ?

ಅ) 278

ಆ) 279ಎ

ಇ) 280

ಈ) 281

279ಎ

ಕೇಂದ್ರ ಸಚಿವ ಸಂಪುಟವು ಸರಕು ಮತ್ತು ಸೇವಾ ತೆರಿಗೆ ಮಂಡಳಿ ರಚನೆಗೆ ಅನುಮೋದನೆ ನೀಡಿದೆ. ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಸರಕು ಮತ್ತು ಸೇವಾ ತೆರಿಗೆಗೆ ಜಾರಿಗೆ ಒಪ್ಪಿಗೆ ನೀಡಿದ ನಂತರ ಸಂಪುಟವು ಸರಕು ಮತ್ತು ಸೇವಾ ತೆರಿಗೆ ಮಂಡಳಿ ರಚನೆಗೆ ಸಹಮತ ವ್ಯಕ್ತಪಡಿಸಿದೆ. ಹೊಸ ತೆರಿಗೆ ನೀತಿ ಹೇಗೆ ಕಾರ್ಯ ನಿರ್ವಹಿಸುತ್ತದೆ, ಜಿಎಸ್‌ಟಿ ತೆರಿಗೆ ದರ ಸೇರಿದಂತೆ ಬೇರೆ ಬೇರೆ ವಿಚಾರಗಳನ್ನು ನಿರ್ಧರಿಸುವ ಜವಾಬ್ದಾರಿ ಸರಕು ಮತ್ತು ಸೇವಾ ಮಂಡಳಿ (ಜಿಎಸ್ ಟಿ) ಮೇಲಿದೆ. ಕೇಂದ್ರ ವಿತ್ತ ಸಚಿವ ಅರುಣ್ ಜೇಟ್ಲಿ ಈ ಮಂಡಳಿಯ ನೇತೃತ್ವ ವಹಿಸಲಿದ್ದಾರೆ. ರಾಜ್ಯ ಕಂದಾಯ ಖಾತೆ ಸಚಿವ ಮತ್ತು ಹಣಕಾಸು ಸಚಿವರುಗಳನ್ನು ಈ ಮಂಡಳಿ ಒಳಗೊಂಡಿರಲಿದೆ. ಸಂವಿಧಾನದ 122ನೇ ತಿದ್ದುಪಡಿ ಮೂಲಕ ಹೊಸದಾಗಿ ಸೇರ್ಪಡೆಗೊಳಿಸಲಾಗಿರುವ ಪರಿಚ್ಛೇದ 279ಎ ಅಡಿಯಲ್ಲಿ ಈ ಮಂಡಳಿಯನ್ನು ಸ್ಥಾಪಿಸಲಾಗಿದೆ.

www.karunaduexams.com

102. 2016 ಯುಎಸ್ ಓಪನ್ ಟೂರ್ನಿಯ ಪುರುಷರ ಸಿಂಗಲ್ಸ್ ನಲ್ಲಿ ಪ್ರಶಸ್ತಿ ಗೆದ್ದವರು ಯಾರು?

ಅ) ಸ್ಟಾನ್ ವಾವಿಂಕ್ರ

ಆ) ನೊವಾಕ್ ಜೊಕೊವಿಕ್

ಇ) ರೋಜರ್ ಫೆಡರರ್

ಈ) ರಫೆಲ್ ನಡಾಲ್

ಸ್ಟಾನ್ ವಾವಿಂಕ್ರ

ಸ್ವಿಸ್ ಆಟಗಾರ ಸ್ಟಾನ್ ವಾವ್ರಿಂಕಾ ಅವರು ಯುಎಸ್ ಓಪನ್ ಟೆನಿಸ್ ಪುರುಷರ ಫೈನಲ್‌ನಲ್ಲಿ ವಿಶ್ವದ ನಂಬರ್ ಒನ್ ಆಟಗಾರ ಸರ್ಬಿಯಾದ ನೊವಾಕ್ ಜೊಕೊವಿಕ್‌ರನ್ನು ಮಣಿಸಿ ಗ್ರ್ಯಾನ್ ಸ್ಲ್ಯಾಮ್ ಪ್ರಶಸ್ತಿ ಗೆದ್ದುಕೊಂಡಿದ್ದಾರೆ. ಮೂರನೇ ಶ್ರೇಯಾಂಕದ ವಾವ್ರಿಂಕಾ ನೊವಾಕ್‌ರನ್ನು 6-7(1/7), 6-4, 7-5, 6-3 ಸೆಟ್‌ಗಳಿಂದ ಪರಾಭವಗೊಳಿಸಿ ತಮ್ಮ ಮೂರನೇ ಗ್ರ್ಯಾನ್ ಸ್ಲಾಮ್ ಪ್ರಶಸ್ತಿ ಪಡೆದರು. 1970ರಲ್ಲಿ 35 ವರ್ಷದ ಕೆನ್ ರೋಸ್‌ವಾಲ್ ನಂತರ ಪುರುಷರ ಫೈನಲ್‌ನಲ್ಲಿ ಈ ಪ್ರಶಸ್ತಿಗೆ ಪಾತ್ರರಾದ ಎರಡನೇ ಹಿರಿಯ ಆಟಗಾರ ಎಂಬ ಹೆಗ್ಗಳಿಕೆಗೆ 31ರ ಹರೆಯದ ವಾವ್ರಿಂಕಾ ಪಾತ್ರರಾಗಿದ್ದಾರೆ.

103. ಯಾವ ಎರಡು ದೇಶಗಳು ವಿವಾದಿತ ದಕ್ಷಿಣ ಚೀನಾ ಸಮುದ್ರದಲ್ಲಿ ಇತ್ತೀಚೆಗೆ "Joint Sea-2016" ನೌಕಾಭ್ಯಾಸವನ್ನು ಆರಂಭಿಸಿವೆ?

ಅ) ಚೀನಾ ಮತ್ತು ರಷ್ಯಾ

ಆ) ಜಪಾನ್ ಮತ್ತು ರಷ್ಯಾ

ಇ) ಭಾರತ ಮತ್ತು ವಿಯಟ್ನಾಂ

ಈ) ವಿಯಟ್ನಾಂ ಮತ್ತು ಜಪಾನ್

ಚೀನಾ ಮತ್ತು ರಷ್ಯಾ

ಚೀನಾ ಮತ್ತು ರಷ್ಯಾ ದಕ್ಷಿಣ ಚೀನಾ ಸಮುದ್ರದಲ್ಲಿ ಜಂಟಿ ನೌಕಾಭ್ಯಾಸ "Joint Sea-2016" ಆರಂಭಿಸಿವೆ. ಉಭಯ ದೇಶಗಳ ನಡುವಿನ ಮೊದಲ ನೌಕಾಭ್ಯಾಸ ಇದಾಗಿದ್ದು, ಎರಡು ದೇಶಗಳ ಮಿಲಿಟರಿ ಮತ್ತು ರಾಜಕೀಯ ಸಂಬಂಧವನ್ನು ಬಲಗೊಳಿಸಲು ಇದು ವೇದಿಕೆಯಾಗಲಿದೆ ಎಂದು ಬಣ್ಣಿಸಲಾಗಿದೆ. ಎಂಟು ದಿನಗಳ ಕಾಲ ನಡೆಯಲಿರುವ Joint Sea-2016 ನೌಕಾಭ್ಯಾಸವು ದಕ್ಷಿಣ ಚೀನಾ ಸಮುದ್ರದ ಮೇಲೆ ಅಮೆರಿಕಾ ಶಕ್ತಿ ಕ್ರೋಢಿಕರಣ ಮಾಡುತ್ತಿರುವುದಕ್ಕೆ ಸೆಡ್ಡು ಹೊಡೆಯಲು ಆರಂಭಿಸಲಾಗಿದೆ ಎನ್ನಲಾಗಿದೆ.

www.karunaduexams.com

104.“ಮುರುಗಪ್ಪ ಗೋಲ್ಡ್ ಕಪ್” ಯಾವ ಕ್ರೀಡೆಗೆ ಸಂಬಂಧಿಸಿದೆ?

ಅ) ಪುಟ್ಬಾಲ್

ಆ) ಕ್ರಿಕೆಟ್

ಇ) ಹಾಕಿ

ಈ) ಗಾಲ್ಫ್

ಹಾಕಿ

ಮುರುಗಪ್ಪ ಗೋಲ್ಡ್ ಕಪ್ ಹಾಕಿ ಕ್ರೀಡೆಗೆ ಸಂಬಂಧಿಸಿದ ಟೂರ್ನಿಯಾಗಿದೆ. ಇತ್ತೀಚೆಗೆ ನಡೆದ ೯೦ನೇ ಅಖಿಲ ಭಾರತ ಮುರುಗಪ್ಪ ಗೋಲ್ಡ್ ಕಪ್ ನಲ್ಲಿ ರೈಲ್ವೇ ತಂಡ ಹಾಲಿ ಚಾಂಪಿಯನ್ ಇಂಡಿಯನ್ ಆಯಿಲ್ ಕಾರ್ಪೋರೇಷನ್ ತಂಡವನ್ನು ಮಣಿಸಿ ಪ್ರಶಸ್ತಿಯನ್ನು ಗೆದ್ದುಕೊಂಡಿತು.

105. ಈ ಕೆಳಗಿನ ಯಾರು ರಿಯೋ ಪ್ಯಾರಾಲಿಂಪಿಕ್ಸ್ ನಲ್ಲಿ ಷಾಟ್ಪುಟ್ ನಲ್ಲಿ ಬೆಳ್ಳಿ ಗೆಲ್ಲುವ ಮೂಲಕ ಪ್ಯಾರಾಲಿಂಪಿಕ್ಸ್ ನಲ್ಲಿ ಪದಕ ಗೆದ್ದ ಭಾರತದ ಪ್ರಪ್ರಥಮ ಮಹಿಳೆ ಎಂಬ ದಾಖಲೆ ಬರೆದರು?

ಅ) ದೀಪಾ ಮಲಿಕ್

ಆ) ಪೂಜಾ

ಇ) ಕರಮ್ ಜ್ಯೋತಿ ದಲಲ್

ಈ) ಜ್ಯೋತಿ ಸಿಂಗ್

ದೀಪಾ ಮಲಿಕ್

ರಿಯೋ ಪ್ಯಾರಾಲಿಂಪಿಕ್ಸ್ ನಲ್ಲಿ ಷಾಟ್ಪುಟ್ ನಲ್ಲಿ ಬೆಳ್ಳಿ ಗೆಲ್ಲುವ ಮೂಲಕ ಭಾರತದ ದೀಪಾ ಮಲಿಕ್ ಇತಿಹಾಸ ನಿರ್ಮಿಸಿದ್ದಾರೆ. ಆ ಮೂಲಕ ದೀಪಾ ಮಲಿಕ್ ಪ್ಯಾರಾಲಿಂಪಿಕ್ಸ್ ನಲ್ಲಿ ಪದಕ ಗೆದ್ದ ಭಾರತದ ಪ್ರಪ್ರಥಮ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಇದರೊಂದಿಗೆ ರಿಯೋ ಒಲಿಂಪಿಕ್ಸ್ ನಲ್ಲಿ ಭಾರತದ ಪದಕಗಳ ಸಂಖ್ಯೆ ಮೂರಕ್ಕೇರಿದೆ. ಆರು ಪ್ರಯತ್ನಗಳಲ್ಲಿ 4.61 ಮೀಟರ್ ದೂರದ ಎಸೆತ ದೀಪಾ ಅವರ ಅತ್ಯುತ್ತಮ ಪ್ರದರ್ಶನವಾಗಿತ್ತು. ಬಹರೈನ್ ನ ಫಾತಿಮಾ ನಿಧಾಮ್ ಚಿನ್ನ ಗೆದ್ದರೆ, ಗ್ರೀಸ್ ನ ದಿಮಿಟ್ರಾ ಕಂಚು ಪಡೆದರು.

www.karunaduexams.com

106. ಯಾವ ದೇಶದ ವೈದ್ಯರ ತಂಡ ವಿಶ್ವದಲ್ಲೇ ಮೊದಲ ಬಾರಿಗೆ ರೊಬೋಟ್ ಬಳಸಿ ಕಣ್ಣಿನ ಶಸ್ತ್ರ ಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸಿದ್ದಾರೆ?

ಅ) ಜಪಾನ್

ಆ) ಬ್ರಿಟನ್

ಇ) ಅಮೆರಿಕಾ

ಈ) ಚೀನಾ

ಬ್ರಿಟನ್

ಬ್ರಿಟನ್ ವೈದ್ಯರ ತಂಡವೊಂದು ರೋಬೋಟ್ ಬಳಸುವ ಮೂಲಕ ಅತ್ಯಂತ ಕ್ಲಿಷ್ಟವಾದ ಕಣ್ಣಿನ ಸರ್ಜರಿಯನ್ನು ಯಶಸ್ವಿಯಾಗಿ ನಡೆಸಿದೆ. ಕಣ್ಣಿನ ಸರ್ಜರಿಯಲ್ಲಿ ರೋಬೋಟ್ ಬಳಕೆ ಮಾಡಿದ್ದು ವಿಶ್ವದಲ್ಲೇ ಇದೇ ಮೊದಲು. ವ್ಯಕ್ತಿಯೊಬ್ಬರ ಕಣ್ಣಿನ ಅಕ್ಷಿಪಟ (ರೆಟಿನಾ)ದಲ್ಲಿ ಪೊರೆ ಬೆಳೆಯಲು ಶುರುವಾಗಿತ್ತು. ಈ ಪೊರೆಯನ್ನು ರೆಟಿನಾವು ತನ್ನತ್ತ ಸೆಳೆದುಕೊಂಡಿದ್ದರಿಂದ ಅದು ಅಸಮ ರೂಪ ಪಡೆದುಕೊಂಡಿತ್ತು. ಈ ಪೊರೆಯು 1 ಮಿಲಿಮೀಟರ್ನ 100ನೇ ಒಂದು ಭಾಗದಷ್ಟು ತೆಳುವಾಗಿತ್ತು. ಈ ಪೊರೆಯನ್ನು ರೆಟಿನಾದಿಂದ ಬೇರ್ಪಡಿಸುವಾಗ, ರೆಟಿನಾಕ್ಕೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಬೇಕಿತ್ತು. ಇದುವರೆಗೆ ಲಭ್ಯವಿದ್ದ ತಂತ್ರಜ್ಞಾನದ ಅನ್ವಯ ಮೈಕ್ರೋಸ್ಕೋಪ್ನಲ್ಲಿ ಅಕ್ಷಿಪಟ ನೋಡಿಕೊಂಡು, ಲೇಸರ್ ಸ್ಕ್ಯಾನರ್ಗಳ ಮೂಲಕ ಶಸ್ತ್ರಚಿಕಿತ್ಸೆ ನಡೆಸಬೇಕಿತ್ತು. ಹೀಗೆ ಮಾಡುವಾಗ ನಾಡಿ ಬಡಿತದ ವೇಗವನ್ನು ಕಡಿಮೆ ಮಾಡಬೇಕಿತ್ತು. ಆದರೆ ಆಕ್ಸ್ಫರ್ಡ್ನಲ್ಲಿರುವ ಜಾನ್ ರ್ಯಾಡ್ಕ್ಲಿಫ್ ಆಸ್ಪತ್ರೆಯ ವೈದ್ಯರ ತಂಡ ರೋಬೋಟ್ ಅನ್ನು ಶಸ್ತ್ರಚಿಕಿತ್ಸೆಗಾಗಿ ಬಳಸಿಕೊಂಡು, ಈ ಸರ್ಜರಿಯನ್ನು ಸುಲಭವಾಗಿ ನಡೆಸಿದೆ.

107. ಇತ್ತೀಚೆಗೆ ನಿಧನರಾದ "ರಾಮ್ ಸೇವಕ್ ಶ್ರೀವತ್ಸವ" ರವರು ಯಾವ ಕ್ಷೇತ್ರದಲ್ಲಿ ಪ್ರಸಿದ್ಧರಾಗಿದ್ದರು?

ಅ) ಕ್ರೀಡೆ

ಆ) ಶಾಸ್ತ್ರೀಯ ಸಂಗೀತಾ

ಇ) ಪ್ರತಿಕೋದ್ಯಮ

ಈ) ಸಿನಿಮಾ

ಪ್ರತಿಕೋದ್ಯಮ

ಹಿರಿಯ ಪತ್ರಕರ್ತ ರಾಮ್ ಸೇವಕ್ ಶ್ರೀವತ್ಸವ ರವರು ವಯೋಸಹಜ ಅನಾರೋಗ್ಯದಿಂದ ನಿಧನರಾದರು. ಶ್ರೀವತ್ಸವ ಅವರು ತಮ್ಮ 30 ವರ್ಷಗಳ ವೃತ್ತಿ ಜೀವನದಲ್ಲಿ ದಿನ್ಮಾನ್, ದೈನಿಕ್ ಜಾಗರಣ್, ನವಭಾರತ್ ಟೈಮ್ಸ್ ಸೇರಿದಂತೆ ಅನೇಕ ಪತ್ರಿಕೆಗಳಲ್ಲಿ ಕೆಲಸ ನಿರ್ವಹಿಸಿದ್ದರು. 1991ರಲ್ಲಿ ಟೈಮ್ಸ್ ಗ್ರೂಫ್ ನಿಂದ ನಿವೃತ್ತಿ ಹೊಂದಿದ್ದರು. ಆ ನಂತರ ಸುಲಭ್ ಇಂಟರ್ನ್ಯಾಷನಲ್ ಜೊತೆಗೂಡಿ ಸುಲಭ್ ಪತ್ರಿಕೆ ಯನ್ನು ಹೊರತಂದಿದ್ದರು.

www.karunaduexams.com

108. ಭಾರತೀಯ ಕರಾವಳಿ ಭದ್ರತಾಪಡೆ ಇತ್ತೀಚೆಗೆ ಸುಧಾರಿತ ಕರಾವಳಿ ಗಸ್ತು ನೌಕೆ "ಸಾರಥಿ"ಯನ್ನು ಎಲ್ಲಿ ಸೇರ್ಪಡೆಗೊಳಿಸಿತು?

ಅ) ಗೋವಾ

ಆ) ಚೆನ್ನೈ

ಇ) ಕೊಚ್ಚಿ

ಈ) ಮುಂಬೈ

ಗೋವಾ

ಸುಧಾರಿತ ಕರಾವಳಿ ಗಸ್ತು ನೌಕೆ "ಸಾರಥಿ"ಯನ್ನು ಭಾರತೀಯ ಕರಾವಳಿ ಭದ್ರತಾಪಡೆ ತನ್ನ ಕಾರ್ಯಾಚರಣೆಗೆ ಸೇರ್ಪಡೆಗೊಳಿಸಿದೆ. ಕೇಂದ್ರ ಗೃಹ ಸಚಿವ ರಾಜನಾಥ್ ಸಿಂಗ್ ಮತ್ತು ರಕ್ಷಣಾ ಸಚಿವ ಮನೋಹರ್ ಪರಿಕ್ಕರ್ ಅವರು ಗೋವಾದ ಗೋವಾ ಶಿಪ್ಯಾರ್ಡ್ ಲಿಮಿಟೆಡ್ ನಲ್ಲಿ ಇದಕ್ಕೆ ಚಾಲನೆ ನೀಡಿದರು. ಸಾರಥಿಯನ್ನು ಗೋವಾ ಶಿಪ್ಯಾರ್ಡ್ ಲಿಮಿಟೆಡ್ ವಿನ್ಯಾಸ ಹಾಗೂ ಅಭಿವೃದ್ಧಿಪಡಿಸಿದೆ. 105 ಮೀಟರ್ ಉದ್ದವಿರುವ ಈ ನೌಕೆ ಗಸ್ತು ಹೊಸ ಪೀಳಿಗೆಯ ಆತ್ಯಾಧುನಿಕ ಮತ್ತು ಸುಧಾರಿತ ಗಸ್ತು ನೌಕೆಯಾಗಿದೆ.

109. 2016 ಡುರಾಂಡ್ ಕಪ್ ಫುಟ್ಬಾಲ್ ಟೂರ್ನಮೆಂಟ್ ನಲ್ಲಿ ಪ್ರಶಸ್ತಿ ಗೆದ್ದ ತಂಡ _____?

ಅ) ಆರ್ಮಿ ಗ್ರೀನ್

ಆ) ನೆರೊಕ ಫುಟ್ಬಾಲ್ ಕ್ಲಬ್

ಇ) ಐಜ್ವಾಲ್ ಫುಟ್ಬಾಲ್ ಕ್ಲಬ್

ಈ) ಡಿಎಸ್ ಕೆ ಶಿವಾಜಿಯನ್ಸ್

ಆರ್ಮಿ ಗ್ರೀನ್

ಆರ್ಮಿ ಗ್ರೀನ್ ಫುಟ್ಬಾಲ್ ತಂಡ 2016 ಡುರಾಂಡ್ ಕಪ್ ಫುಟ್ಬಾಲ್ ಟೂರ್ನಮೆಂಟ್ ನಲ್ಲಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು. ಪೆನಾಲ್ಟಿ ಶೂಟೌಟ್ ನಲ್ಲಿ ನೆರೊಕ ಫುಟ್ಬಾಲ್ ಕ್ಲಬ್ ತಂಡವನ್ನು 6-5 ರಿಂದ ಸೋಲಿಸುವ ಮೂಲಕ ವಿಜೇತರಾಗಿ ಹೊರಹೊಮ್ಮಿತು.

110. ಜಗತ್ತಿನ ಅತಿ ಉದ್ದದ ಬುಲೆಟ್ ರೈಲು ಸಂಪರ್ಕ ವ್ಯವಸ್ಥೆ ಹೊಂದಿರುವ ದೇಶ ಯಾವುದು?

ಅ) ಜಪಾನ್

ಆ) ದಕ್ಷಿಣ ಕೊರಿಯಾ

ಇ) ಚೀನಾ

ಈ) ಸ್ವೀಡನ್

ಚೀನಾ

www.karunaduexams.com

ದೇಶಾದ್ಯಂತ 20 ಸಾವಿರ ಕಿ.ಮೀ. ಬುಲೆಟ್ ರೈಲು ಸಂಪರ್ಕ ಜಾಲವನ್ನು ನಿರ್ಮಿಸುವ ಮೂಲಕ ಚೀನಾ ಜಗತ್ತಿನ ಅತಿ ಉದ್ದದ ಬುಲೆಟ್ ರೈಲು ಸಂಪರ್ಕ ವ್ಯವಸ್ಥೆ ಹೊಂದಿರುವ ರಾಷ್ಟ್ರವೆನಿಸಿದೆ.ಝೆಂಗ್‌ಜೋವ್‌ನಿಂದ ಕ್ಸುಜೋವ್ ಪ್ರಾಂತ್ಯದ ನಡುವೆ ಸಂಪರ್ಕ ಕಲ್ಪಿಸುವ ರೈಲು ಮಾರ್ಗ ಇತ್ತೀಚೆಗೆ ಉದ್ಘಾಟನೆಯಾಗಿದೆ. ಈ ಮಾರ್ಗದಲ್ಲಿ ಗಂಟೆಗೆ 300 ಕಿ.ಮೀ ವೇಗದಲ್ಲಿ ಬುಲೆಟ್ ರೈಲು ಚಲಿಸುತ್ತಿದ್ದು ಪ್ರಯಾಣ ಸಮಯದಲ್ಲಿ ಅರ್ಧದಷ್ಟು ಉಳಿತಾಯವಾದಂತಾಗಿದೆ.

111. ಈ ಕೆಳಗಿನ ದೇಶಗಳನ್ನು ಗಮನಿಸಿ:

I) ಚೀನಾ

II) ಭಾರತ

III) ದಕ್ಷಿಣ ಕೊರಿಯಾ

IV) ಪಾಕಿಸ್ತಾನ

ಈ ಮೇಲಿನ ಯಾವ ರಾಷ್ಟ್ರಗಳು "ಏಷ್ಯಾ ಫೆಸಿಫಿಕ್ ವ್ಯಾಪಾರ ಒಪ್ಪಂದ (APTA)"ಕ್ಕೆ ಸಂಬಂಧಿಸಿವೆ?

ಅ) I & II

ಆ) II & III

ಇ) I, II & III

ಈ) ಮೇಲಿನ ಎಲ್ಲವೂ

I, II & III

ಏಷ್ಯಾ ಫೆಸಿಫಿಕ್ ವ್ಯಾಪಾರ ಒಪ್ಪಂದ (APTA)ಕ್ಕೆ 1975 ರಲ್ಲಿ ಸಹಿಹಾಕಲಾಗಿದೆ. ಮುಂಚೆ ಈ ಒಪ್ಪಂದವನ್ನು ಬ್ಯಾಂಕಾಕ್ ಒಪ್ಪಂದವೆಂದು ಕರೆಯಲಾಗುತ್ತಿದ್ದು, ನವೆಂಬರ್ 2, 2005 ರಲ್ಲಿ ಏಷ್ಯಾ ಫೆಸಿಫಿಕ್ ವ್ಯಾಪಾರ ಒಪ್ಪಂದವೆಂದು ಮರುನಾಮಕರಣ ಮಾಡಲಾಗಿದೆ. ಇದು ಏಷ್ಯಾ ಮತ್ತು ಫೆಸಿಫಿಕ್ ದೇಶಗಳ ನಡುವೆ ಸಹಿ ಹಾಕಲಾದ ಅತ್ಯಂತ ಹಳೆಯ ಆದ್ಯತಾ ವ್ಯಾಪಾರ ಒಪ್ಪಂದವಾಗಿದೆ. ಭಾರತ, ಚೀನಾ, ಲಾವೋಸ್, ಬಾಂಗ್ಲದೇಶ ಮತ್ತು ದಕ್ಷಿಣ ಕೊರಿಯಾ ಈ ಒಪ್ಪಂದಕ್ಕೆ ಸಹಿ ಹಾಕಿರುವ ಆರು ದೇಶಗಳಾಗಿವೆ. ಇತ್ತೀಚೆಗೆ ಮಂಗೋಲಿಯಾವನ್ನು ಈ ಒಪ್ಪಂದಕ್ಕೆ ಸೇರ್ಪಡೆಗೊಳಿಸಲು ನಿರ್ಧರಿಸಲಾಗಿದ್ದು, ಈ ಒಪ್ಪಂದಕ್ಕೆ ಕೈಜೋಡಿಸಲಿರುವ ಏಳನೇ ರಾಷ್ಟ್ರವಾಗಲಿದೆ.

112. 2016 ಭಾರತ-ಅಮೆರಿಕಾ ಆರ್ಥಿಕ ಶೃಂಗಸಭೆ ಈ ಕೆಳಗಿನ ಯಾವ ನಗರದಲ್ಲಿ ನಡೆಯಲಿದೆ?

ಅ) ನವದೆಹಲಿ

ಆ) ಡೆಹ್ರೂಡಾನ್

ಇ) ವಾಷಿಂಗ್ಟನ್

ಈ) ನ್ಯೂಯಾರ್ಕ್

ನವದೆಹಲಿ



www.karunaduexams.com

2016 ಭಾರತ-ಅಮೆರಿಕಾ ಆರ್ಥಿಕ ಶೃಂಗಸಭೆಯು ಸೆಪ್ಟೆಂಬರ್ 14 ರಿಂದ ಎರಡು ದಿನಗಳ ಕಾಲ ನವದೆಹಲಿಯಲ್ಲಿ ನಡೆಯಲಿದೆ. ಉಭಯ ದೇಶಗಳ ನಡುವೆ ವ್ಯಾಪಾರ ಮತ್ತು ಬಂಡವಾಳ ಹೂಡಿಕೆಯನ್ನು ಉತ್ತೇಜಿಸುವು ಸಲುವಾಗಿ ಶೃಂಗಸಭೆಯನ್ನು ಆಯೋಜಿಸಲಾಗುತ್ತಿದೆ. ಅಮೆರಿಕಾದ ಭಾರತದ ರಾಯಭಾರಿ ರಿಚರ್ಡ್ ವರ್ಮಾ ಅವರು ಈ ಶೃಂಗಸಭೆಯನ್ನು ಉದ್ಘಾಟಿಸಲಿದ್ದಾರೆ.

113. ಮೊಘಲರ ಕಾಲದಲ್ಲಿ ಈ ಕೆಳಗಿನ ಯಾವ ಬಂದರನ್ನು "ಗೇಟ್ ಆಫ್ ಮೆಕ್ಕಾ" ಎಂದು ಕರೆಯಲಾಗುತ್ತಿತ್ತು?

ಅ) ಸೂರತ್

ಆ) ಕ್ಯಾಲಿಕಟ್

ಇ) ಕ್ಯಾಂಬೆ

ಈ) ಕೊಚ್ಚಿ

ಸೂರತ್

ಸೂರತ್ ಬಂದರನ್ನು ಮೊಘಲರ ಕಾಲದಲ್ಲಿ "ಗೇಟ್ ಆಫ್ ಮೆಕ್ಕಾ" ಎಂದು ಕರೆಯಲಾಗುತ್ತಿತ್ತು. ಯಾಕೆಂದರೆ ಮೆಕ್ಕಾಗೆ ಯಾತ್ರೆಯನ್ನು ಇಲ್ಲಿಂದಲೇ ಕೈಗೊಳ್ಳಲಾಗುತ್ತಿದ್ದ ಕಾರಣ ಇದನ್ನು ಗೇಟ್ ಆಫ್ ಮೆಕ್ಕಾ ಎನ್ನಲಾಗುತ್ತಿತ್ತು.

114. ಉತ್ತರಪ್ರದೇಶದ ಮಹತ್ವಕಾಂಕ್ಷಿ "ಸಮಾಜವಾದಿ ಪಿಂಚಣಿ ಯೋಜನೆ"ಯ ರಾಯಭಾರಿಯನ್ನಾಗಿ ಯಾರನ್ನು ನೇಮಕಮಾಡಲಾಗಿದೆ?

ಅ) ಪಿ ವಿ ಸಿಂಧು

ಆ) ಸಚಿನ್ ತೆಂಡೂಲ್ಕರ್

ಇ) ವಿದ್ಯಾ ಬಾಲನ್

ಈ) ಸಲ್ಮಾನ್ ಖಾನ್

ವಿದ್ಯಾ ಬಾಲನ್

ಉತ್ತರ ಪ್ರದೇಶದ ಸರ್ಕಾರ ಇತ್ತೀಚೆಗೆ ಜಾರಿಗೊಳಿಸಿದ ಸಮಾಜವಾದಿ ಪಿಂಚಣಿ ಯೋಜನೆಯ ರಾಯಭಾರಿಯನ್ನಾಗಿ ಖ್ಯಾತ ನಟಿ ವಿದ್ಯಾ ಬಾಲನ್ ಅವರನ್ನು ನೇಮಕಮಾಡಲಾಗಿದೆ. ಈ ಯೋಜನೆಯಡಿ ರಾಜ್ಯದ ಬಡ ಮಹಿಳೆಯರಿಗೆ ಮಾಸಿಕ ರೂ 500 ಪಿಂಚಣಿ ರೂಪದಲ್ಲಿ ನೀಡಲಾಗುವುದು. ಸುಮಾರು 50 ಲಕ್ಷ ಮಹಿಳೆಯರಿಗೆ ಈ ಯೋಜನೆಯನ್ನು ತಲುಪಿಸುವ ಮಹದಾಸೆಯನ್ನು ಸರ್ಕಾರ ಹೊಂದಿದೆ.

www.karunaduexams.com

115. ಈ ಕೆಳಗಿನ ಯಾವುದು ವಿಶ್ವದ ಮೊದಲ ನವೀಕರಿಸಬಹುದಾದ ಇಂಧನ ಚಾಲಿತ ಹಡುಗಿನ ಹೆಸರಾಗಿದೆ?

ಅ) ಗ್ರೀನ್ ಈಗಲ್

ಆ) ಎನರ್ಜಿ ಅಬ್ಸರ್ವರ್

ಇ) ಸೋಲಾರ್ ಬೋಟ್

ಈ) ಎಕೋ ಗ್ರೀನ್

ಎನರ್ಜಿ ಅಬ್ಸರ್ವರ್

ಎನರ್ಜಿ ಅಬ್ಸರ್ವರ್ ((Energy Observer) ವಿಶ್ವದ ಮೊದಲ ನವೀಕರಿಸಬಹುದಾದ ಇಂಧನ ಮೂಲಗಳಿಂದ ಚಲಿಸುವ ಹಡಗು. ಈ ನೌಕೆಯು ಸಂಪೂರ್ಣವಾಗಿ ನವೀಕರಿಸಬಹುದಾದ ಇಂಧನ ಮೂಲಗಳಾದ ಸೌರ ವಿದ್ಯುತ್, ಪವನ ವಿದ್ಯುತ್ ಮತ್ತು ಜಲಜನಕದಿಂದ ಚಲಿಸಲಿದೆ. ಸೋಲಾರ್ ಇಂಪಲ್ಸ್ ಆಫ್ ದಿ ಸೀಸ್ (Solar Impulse of the Seas) ಎಂತಲೇ ಕರೆಯಲಾಗುತ್ತಿರುವ ಈ ಹಡಗು ಮುಂದಿನ ಫೆಬ್ರವರಿಯಲ್ಲಿ ವಿಶ್ವ ಪರ್ಯಟನೆಯನ್ನು ನಡೆಸಲಿದೆ. ಸುಮಾರು 6 ವರ್ಷಗಳ ಸಂಚರಿಸುವ ಮೂಲಕ ಶುದ್ದ ಇಂಧನದ ಪರಿಕಲ್ಪನೆ ಮತ್ತು ಮಹತ್ವವನ್ನು ಸಾರಲಿದೆ. ಈಗಾಗಲೇ ವಿಶ್ವದ ಮೊದಲ ಸೌರ ವಿದ್ಯುತ್ ಚಾಲಿತ ವಿಮಾನ "ಸೋಲಾರ್ ಇಂಪಲ್ಸ್" ವಿಶ್ವ ಪರ್ಯಟನೆಯನ್ನು ಯಶಸ್ವಿಯಾಗಿ ನಿರ್ವಹಿಸಿರುವುದನ್ನು ಸ್ಮರಿಸಬಹುದು.

116. ಇತ್ತೀಚೆಗೆ ಸುದ್ದಿಯಲ್ಲಿರುವ "ಹೆಝ್ಬ್-ಇ-ಇಸ್ಲಾಮಿ (Hezb-e Islami)" ಉಗ್ರಗಾಮಿ ಗುಂಪು ಯಾವ ದೇಶಕ್ಕೆ ಸಂಬಂಧಿಸಿದೆ?

ಅ) ಸಿರಿಯಾ

ಆ) ಆಫ್ಘಾನಿಸ್ತಾನ

ಇ) ಪಾಕಿಸ್ತಾನ

ಈ) ಇರಾನ್

ಆಫ್ಘಾನಿಸ್ತಾನ

ಹೆಝ್ಬ್-ಇ-ಇಸ್ಲಾಮಿ ಆಫ್ಘಾನಿಸ್ತಾನದ ಕಮ್ಯೂನಿಸ್ಟ್ ಸರ್ಕಾರದ ವಿರುದ್ದ ಹೋರಾಡುತ್ತಿರುವ ಉಗ್ರಗಾಮಿ ಗುಂಪು. ಗುಲ್ಬುದ್ದೀನ್ ಹೆಕ್ಮತ್ಯಾರ್ ಈ ಉಗ್ರಗಾಮಿ ಸಂಘಟನೆಯ ಮುಖಂಡ. ಹೆಝ್ಬ್-ಇ-ಇಸ್ಲಾಮಿಯನ್ನು 1975 ರಲ್ಲಿ ಸ್ಥಾಪಿಸಲಾಗಿದೆ. ಇತ್ತೀಚೆಗೆ ಆಫ್ಘಾನಿಸ್ತಾನ ಸರ್ಕಾರ ಮತ್ತು ಈ ಉಗ್ರಗಾಮಿ ಸಂಘಟನೆ ನಡುವೆ ಶಾಂತಿ ಒಪ್ಪಂದಕ್ಕೆ ಮಾತುಕತೆ ನಡೆಯುತ್ತಿದ್ದು, ಅಂತಿಮ ಹಂತದಲ್ಲಿದೆ ಎನ್ನಲಾಗಿದೆ.

www.karunaduexams.com

117. ಈ ಕೆಳಗಿನ ಸ್ಥಳಗಳನ್ನು ಗಮನಿಸಿ:

I) ಕೋನಾರ್ಕ್ ದೇವಸ್ಥಾನ

II) ಛತ್ರಪತಿ ಶಿವಾಜಿ ರೈಲ್ವೆ ನಿಲ್ದಾಣ

III) ಮಾನಸ್ ರಾಷ್ಟ್ರೀಯ ಉದ್ಯಾನವನ

ಈ ಮೇಲಿನ ಯಾವುವು ಯುನೆಸ್ಕೋ ವಿಶ್ವ ಪರಂಪರಿಕ ಪಟ್ಟಿಯಲ್ಲಿ ಸೇರ್ಪಡೆಗೊಂಡಿವೆ?

ಅ) I

ಆ) I & II

ಈ) II & III

ಈ) I, II & III

I, II & III

ಮೇಲಿನ ಎಲ್ಲವೂ ಯುನೆಸ್ಕೊ ವಿಶ್ವಪರಂಪರಿಕ ತಾಣಗಳಾಗಿವೆ

118. ತೆರಿಗೆ ಪಾವತಿದಾರರ ಕುಂದುಕೊರತೆಯನ್ನು ನಿವಾರಿಸುವ ಸಲುವಾಗಿ ಯಾವ ಸಂಸ್ಥೆ ಇತ್ತೀಚೆಗೆ "ಇ-ನಿವಾರಣ್" ಸೌಲಭ್ಯವನ್ನು ಜಾರಿಗೊಳಿಸಿದೆ?

ಅ) ಭಾರತೀಯ ರಿಸರ್ವ್ ಬ್ಯಾಂಕ್

ಆ) ಕೇಂದ್ರ ನೇರ ತೆರಿಗೆ ಮಂಡಳಿ

ಇ) ಕೇಂದ್ರ ಅಬಕಾರಿ ಸುಂಕ ಮಂಡಳಿ

ಈ) ಆದಾಯ ತೆರಿಗೆ ಇಲಾಖೆ

ಕೇಂದ್ರ ನೇರ ತೆರಿಗೆ ಮಂಡಳಿ

ಕೇಂದ್ರ ನೇರ ತೆರಿಗೆ ಮಂಡಳಿ (CBDT) ತೆರಿಗೆ ಪಾವತಿದಾರರ ಕುಂದುಕೊರತೆಯನ್ನು ಆನ್ ಲೈನ್ ಮೂಲಕ ನಿವಾರಿಸಲು "ಇ-ನಿವಾರಣ್" ಸೌಲಭ್ಯವನ್ನು ಜಾರಿಗೆ ತಂದಿದೆ. ತೆರಿಗೆ ಪಾವತಿ ವೇಳೆ ಸಾರ್ವಜನಿಕರಿಗೆ ಎದುರಾಗುತ್ತಿದ್ದ ಸಂಕಷ್ಟಗಳನ್ನು ಸುಲಭವಾಗಿ ಪರಿಹರಿಸುವ ಸಲುವಾಗಿ ಕೇಂದ್ರ ನೇರ ತೆರಿಗೆ ಮಂಡಳಿ ಈ ವಿಶೇಷ ವ್ಯವಸ್ಥೆಗೆ ಮುಂದಾಗಿದೆ. ಈ ಸೌಲಭ್ಯದಡಿ ತೆರಿಗೆದಾರರು ತಮ್ಮ ಕಂಪ್ಯೂಟರ್ ಬಳಸಿ ದೂರನ್ನು ದಾಖಲು ಮಾಡಬಹುದು. ದೂರು ದಾಖಲಾದ ನಂತರ ದೂರುದಾರರ ಮೊಬೈಲ್ ಮತ್ತು ಇ-ಮೇಲ್ ವಿಳಾಸಕ್ಕೆ ಪಿಸ್ ಸಂಖ್ಯೆಯನ್ನು ರವಾನಿಸಲಾಗುದು. ಈ ಸಂಖ್ಯೆಯ ಮೂಲಕ ತಮ್ಮ ದೂರಿನ ಸ್ಥಿತಿಯನ್ನು ತಿಳಿಯಬಹುದಾಗಿದೆ.

119. ಪ್ರಸಿದ್ಧ "ವಿಕ್ಟೋರಿಯಾ" ಜಲಪಾತವೂ ಈ ಕೆಳಗಿನ ಯಾವ ನದಿಗೆ ಸಂಬಂಧಿಸಿದೆ?

ಅ) ನೈಲ್

ಆ) ಅಮೆಜಾನ್

ಇ) ಝಾಂಬೆಝಿ

ಈ) ಮಿಸ್ಸೋರಿ

ಝಾಂಬೆಝಿ

ವಿಕ್ಟೋರಿಯಾ ಜಲಪಾತ ಆಫ್ರಿಕಾ ಖಂಡದ ದಕ್ಷಿಣ ಭಾಗದಲ್ಲಿದೆ. ಝಾಂಬೆಝಿ ನದಿಯಿಂದ ಈ ಜಲಪಾತ ಸೃಷ್ಟಿಯಾಗಿದೆ. ಈ ಜಲಪಾತವೂ ಜಿಂಬಾಬ್ವೆ ಮತ್ತು ಝಾಂಬಿಯಾ ದೇಶಗಳ ನಡುವೆ ಗಡಿ ಭಾಗವಾಗಿದೆ.

120. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಸಂಶೋಧನೆಗೆ ಹಣಕಾಸಿನ ನೆರವು ನೀಡಲು "ಎಚ್ಇಎಫ್ಎ(HEFA)" ಅನ್ನು ಸ್ಥಾಪಿಸಲು ಕೇಂದ್ರ ಸಚಿವ ಸಂಪುಟ ಸಮ್ಮತಿಸಿದೆ. "ಎಚ್ಇಎಫ್ಎ" ವಿಸ್ತ್ರತ ರೂಪವೇನು?

ಅ) ಹೈಯರ್ ಎಜುಕೇಷನ್ ಫೈನಾನ್ಸಿಂಗ್ ಏಜೆನ್ಸಿ

ಆ) ಹೈಯರ್ ಎಜುಕೇಷನ್ ಫಂಡಿಂಗ್ ಏಜೆನ್ಸಿ

ಇ) ಹೈಯರ್ ಎಜುಕೇಷನ್ ಫಂಡಮೆಂಟಲ್ ಏಜೆನ್ಸಿ

ಈ) ಮೇಲಿನ ಯಾವುದು ಅಲ್ಲ

ಹೈಯರ್ ಎಜುಕೇಷನ್ ಫೈನಾನ್ಸಿಂಗ್ ಏಜೆನ್ಸಿ

ಭಾರತೀಯ ತಂತ್ರಜ್ಞಾನ ಸಂಸ್ಥೆಗಳು (ಐಐಟಿ), ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆಗಳು (ಎನ್ಐಟಿ) ಹಾಗೂ ಭಾರತೀಯ ಆಡಳಿತ ನಿರ್ವಹಣಾ ಸಂಸ್ಥೆಗಳಲ್ಲಿ (ಐಐಎಂ) ಸಂಶೋಧನೆಗೆ ಬೇಕಿರುವ ಅನುದಾನ ನೀಡಲು 'ಉನ್ನತ ಶಿಕ್ಷಣ ಹಣಕಾಸು ಸಂಸ್ಥೆ (Higher Education Financing Agency)'ಯನ್ನು (ಎಚ್ಇಎಫ್ಎ) ಕೇಂದ್ರ ಸರ್ಕಾರ ಶೀಘ್ರದಲ್ಲೇ ಸ್ಥಾಪಿಸಲಿದೆ. ಎಚ್ಇಎಫ್ಎ ಸ್ಥಾಪನೆಗೆ ಅನುಮೋದನೆ ನೀಡಬೇಕು ಎಂದು ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯ ಪ್ರಸ್ತಾವನೆ ಸಲ್ಲಿಸಿತ್ತು. ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆ ಈ ಪ್ರಸ್ತಾವವನ್ನು ಒಪ್ಪಿದೆ. 2 ಸಾವಿರ ಕೋಟಿ ಬಂಡವಾಳದ ಎಚ್ಇಎಫ್ಎಯನ್ನು ಕೇಂದ್ರ ಸರ್ಕಾರವು ಎನ್ಬಿಎಫ್ಸಿ (ಬ್ಯಾಂಕೇತರ ಹಣಕಾಸು ಸಂಸ್ಥೆ) ಅಥವಾ ಸರ್ಕಾರಿ ಬ್ಯಾಂಕ್ ಜೊತೆ ಸೇರಿ ಆರಂಭಿಸಲಿದೆ. ಇದರಲ್ಲಿ ಕೇಂದ್ರದ ಪಾಲು ₹ 1 ಸಾವಿರ ಕೋಟಿ ಆಗಿರಲಿದೆ. ಎಚ್ಇಎಫ್ಎಯ ಬಂಡವಾಳವನ್ನು ₹ 20 ಸಾವಿರ ಕೋಟಿವರೆಗೆ ಹೆಚ್ಚಿಸಲು ಅವಕಾಶ ಇದೆ. ಈ ಹಣ ಬಳಸಿ ಐಐಟಿ, ಐಐಎಂ, ಎನ್ಐಟಿಗಳಲ್ಲಿ ವಿಶ್ವದರ್ಜೆಯ ಪ್ರಯೋಗಾಲಯಗಳು ಹಾಗೂ ಮೂಲಸೌಕರ್ಯ ನಿರ್ಮಿಸಲು ನೆರವು ನೀಡಲಾಗುವುದು.

www.karunaduexams.com

121. ಈ ಕೆಳಗಿನ ಯಾವ ರಾಜ್ಯ ಇತ್ತೀಚೆಗೆ ಶೇ.100% ವಿದ್ಯುದೀಕರಣ ಸಾಧಿಸದ ದಕ್ಷಿಣ ಭಾರತದ ಮೊದಲ ರಾಜ್ಯವೆನಿಸಿದೆ?

ಅ) ಕರ್ನಾಟಕ

ಆ) ಕೇರಳ

ಇ) ಆಂಧ್ರ ಪ್ರದೇಶ

ಈ) ಮಹಾರಾಷ್ಟ್ರ

ಆಂಧ್ರ ಪ್ರದೇಶ

ಆಂಧ್ರಪ್ರದೇಶ ಶೇ.100% ವಿದ್ಯುದೀಕರಣ ಸಾಧಿಸದ ದೇಶದ ಎರಡನೇ ರಾಜ್ಯ ಹಾಗೂ ದಕ್ಷಿಣ ಭಾರತದ ಮೊದಲ ರಾಜ್ಯವಾಗಿದೆ. ಗುಜರಾತ್ ಶೇ.100 ಗೃಹ ವಿದ್ಯುದೀಕರಣದ ಸಾಧನೆ ಮಾಡಿದ ದೇಶದ ಮೊದಲ ರಾಜ್ಯ. ಜೆ ಎಂ ಫಿನಾನ್ಶಿಯಲ್ಸ್ ವಿವಿಧ ರಾಜ್ಯಗಳಲ್ಲಿನ ವಿದ್ಯುದೀಕರಣ ಕುರಿತಾಗಿ ನಡೆಸಲಾದ ರಾಷ್ಟ್ರ ಮಟ್ಟದ ಸಮೀಕ್ಷೆಯಲ್ಲಿ ಈ ವಿಷಯವನ್ನು ಪ್ರಕಟಿಸಲಾಗಿದೆ. ರಾಜ್ಯದಲ್ಲಿನ ವಿದ್ಯುತ್ ಪ್ರಸರಣ ಮತ್ತು ವಿತರಣೆಯ ಜಾಲವನ್ನು ಬಲಪಡಿಸಲು ಮುಂದಿನ ಐದು ವರ್ಷಗಳಿಗೆ 20,000 ಕೋಟಿ ರೂ.ಗಳನ್ನು ಹೂಡಲು ಆಂಧ್ರ ಸರ್ಕಾರ ತೀರ್ಮಾನಿಸಿದೆ. ಉತ್ತರ ಪ್ರದೇಶ, ಮಧ್ಯಪ್ರದೇಶ, ಬಿಹಾರ, ಒಡಿಶಾ ಮತ್ತು ಅಸ್ಸಾಂ ರಾಜ್ಯಗಳಲ್ಲಿ ಶೇ 35% ಗ್ರಾಮೀಣ ಕುಟುಂಬಗಳು ವಿದ್ಯುತ್ ಸೌಲಭ್ಯದಿಂದ ವಂಚಿತವಾಗಿವೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

122. 3ನೇ "ಬ್ರಿಕ್ಸ್ ನಗರೀಕರಣ ವೇದಿಕೆ (BRICS Urbanisation Forum Meet)" ಸಭೆ ಈ ಕೆಳಗಿನ ಯಾವ ನಗರದಲ್ಲಿ ಆರಂಭಗೊಂಡಿತು?

ಅ) ಪುಣೆ

ಆ) ವಿಶಾಖ ಪಟ್ಟಣ

ಇ) ಚೆನ್ನೈ

ಈ) ಹೈದ್ರಾಬಾದ್

ವಿಶಾಖ ಪಟ್ಟಣಂ

ಮೂರನೇ ಬ್ರಿಕ್ಸ್ ನಗರೀಕರಣ ವೇದಿಕೆ ಸಭೆ ಆಂಧ್ರಪ್ರದೇಶ ವಿಶಾಖಪಟ್ಟಣದಲ್ಲಿ ಆರಂಭಗೊಂಡಿದೆ. ಮೂರು ದಿನಗಳ ಕಾಲ ನಡೆಯಲಿರುವ ಈ ಸಭೆಯನ್ನು ಕೇಂದ್ರ ಸಚಿವ ವೆಂಕಯನಾಯ್ಡು ಉದ್ಘಾಟನೆ ಭಾಷಣ ಮಾಡುವ ಮೂಲಕ ಚಾಲನೆ ನೀಡಿದರು. ಪರಿವರ್ತನೆ ಮತ್ತು ನಗರೀಕರಣದಿಂದ ಉದ್ಭವಿಸುತ್ತಿರುವ ಸವಾಲುಗಳನ್ನು ಪರಿಣಾಮಕಾರಿಯಾಗಿ ಎದುರಿಸುವ ಬಗ್ಗೆ ಬ್ರಿಕ್ಸ್ ಪಾಲುಗಾರಿಕೆ ರಾಷ್ಟ್ರಗಳು ಚರ್ಚಿಸಲಿವೆ. ಇದರ ಜೊತೆಗೆ ಹವಾಮಾನ ಬದಲಾವಣೆ, ನೈರ್ಮಲ್ಯ ನಿರ್ವಹಣೆ, ಸ್ಮಾರ್ಟ್ ನಗರ, ನಗರ ಮೂಲಸೌಕರ್ಯ ಆರ್ಥಿಕ ನೆರವು ಸೇರಿದಂತೆ ವಸತಿ ಸೌಕರ್ಯಗಳ ಬಗ್ಗೆ ಚರ್ಚಿಸಲಾಗುವುದು. ಬ್ರಿಕ್ಸ್ ರಾಷ್ಟ್ರಗಳ ನೂರು ಮತ್ತು ವಿಶ್ವದ ಇತರೆ ರಾಷ್ಟ್ರಗಳಿಂದ ಸುಮಾರು 400 ಪ್ರತಿನಿಧಿಗಳು ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ.

www.karunaduexams.com

123. _______ ದಿನದಂದು "ರಾಷ್ಟ್ರೀಯ ಹಿಂದಿ ದಿವಸ್" ಅನ್ನು ಆಚರಿಸಲಾಗುತ್ತದೆ?

ಅ) ಸೆಪ್ಟೆಂಬರ್ 10

ಆ) ಸೆಪ್ಟೆಂಬರ್ 11

ಇ) ಸೆಪ್ಟೆಂಬರ್ 13

ಈ) ಸೆಪ್ಟೆಂಬರ್ 14

ಸೆಪ್ಟೆಂಬರ್ 14

ಪ್ರತಿ ವರ್ಷ ಸೆಪ್ಟೆಂಬರ್ 14 ರಂದು "ರಾಷ್ಟ್ರೀಯ ಹಿಂದಿ ದಿವಸ್" ಅನ್ನು ರಾಷ್ಟ್ರವ್ಯಾಪ್ತಿ ಆಚರಿಸಲಾಗುತ್ತದೆ. ಈ ದಿನದಂದು 1949 ರಲ್ಲಿ ಹಿಂದಿಯನ್ನು ಕೇಂದ್ರದ ಅಧಿಕೃತ ಆಡಳಿತ ಭಾಷೆಯನ್ನಾಗಿ ಅಳವಡಿಸಿಕೊಳ್ಳಲಾಯಿತು. [ವಿಶ್ವ ಹಿಂದಿ ದಿನ: ವಿಶ್ವ ಹಿಂದಿ ದಿನವನ್ನು ಪ್ರತಿ ವರ್ಷ ಜನವರಿ 10ರಂದು ಆಚರಿಸಲಾಗುತ್ತದೆ. 2006ರಲ್ಲಿ ಮೊದಲ ಬಾರಿಗೆ ವಿಶ್ವ ಹಿಂದಿ ದಿವಸ್ ಅನ್ನು ಆಚರಿಸಲಾಯಿತು. ಹಿಂದಿ ಭಾಷೆ ವಿಶ್ವದ ನಾಲ್ಕನೇ ಅತಿ ದೊಡ್ಡ ಭಾಷೆ].

124. ಈ ಕೆಳಗಿನ ಯಾವ ದೇಶಕ್ಕೆ ಅಮೆರಿಕಾ ತನ್ನ ಇತಿಹಾಸದಲ್ಲೇ ಅತಿ ದೊಡ್ಡ ಒಪ್ಪಂದವೆನ್ನಲಾದ 38 ಬಿಲಿಯನ್ ಡಾಲರ್ ಮಿಲಿಟರಿ ನೆರವು ನೀಡಲು ಒಪ್ಪಿಗೆ ನೀಡಿದೆ?

ಅ) ಇರಾನ್

ಆ) ಸಿರಿಯಾ

ಇ) ಇಸ್ರೇಲ್

ಈ) ಪಾಕಿಸ್ತಾನ

ಇಸ್ರೇಲ್

ಇಸ್ರೇಲ್ ದೇಶಕ್ಕೆ ಮುಂದಿನ ಹತ್ತು ವರ್ಷಗಳ ಕಾಲ 38 ಬಿಲಿಯನ್ ಡಾಲರ್ ಮಿಲಿಟರಿ ನೆರವು ನೀಡುವ ಮಹತ್ವದ ಒಪ್ಪಂದಕ್ಕೆ ಅಮೆರಿಕಾ ಸಹಿ ಹಾಕಿದೆ. ಅಮೆರಿಕಾ ಇತಿಹಾಸ ಇಷ್ಟು ಮೊತ್ತದ ಮಿಲಿಟರಿ ನೆರವು ನೀಡುತ್ತಿರುವುದು ಇದೇ ಮೊದಲು ಎನ್ನಲಾಗಿದೆ. ಕಳೆದ ಹತ್ತು ತಿಂಗಳಿಂದ ನಡೆಯುತ್ತಿದ್ದ ಮಾತುಕತೆಗೆ ಅಂತಿಮವಾಗಿ ಅಮೆರಿಕಾ ಒಪ್ಪಿಗೆ ನೀಡಿದ್ದು, ಪ್ರಸ್ತುತ ಅಮೆರಿಕಾ ವಾರ್ಷಿಕ 3.1 ಬಿಲಿಯನ್ ಡಾಲರ್ ನೆರವನ್ನು ಇಸ್ರೇಲ್ ದೇಶಕ್ಕೆ ನೀಡುತ್ತಿದ್ದು, ಒಪ್ಪಂದದಿಂದ 3.8 ಬಿಲಿಯನ್ ಡಾಲರ್ಗೆ ಏರಿಕೆಯಾಗಲಿದೆ.

www.karunaduexams.com

125. ಈ ಕೆಳಗಿನ ಯಾವ ನಗರ “ಟ್ರಾಕ್ ಏಷ್ಯಾ ಸೈಕ್ಲಿಂಗ್ ಸ್ಪರ್ಧೆ”ಯ ಆತಿಥ್ಯವಹಿಸಲಿದೆ?

ಅ) ನವದೆಹಲಿ

ಆ) ಬೆಂಗಳೂರು

ಇ) ರಾಂಚಿ

ಈ) ಭುಬನೇಶ್ವರ್

ನವದೆಹಲಿ

ಭಾರತ ಈ ಬಾರಿಯ ಟ್ರಾಕ್ ಏಷ್ಯಾ ಸೈಕ್ಲಿಂಗ್ ಸ್ಪರ್ಧೆಯನ್ನು ಆಯೋಜಿಸುತ್ತಿದೆ. ನವದೆಹಲಿಯ ಇಂದಿರಾ ಗಾಂಧಿ ಸ್ಪೋರ್ಟ್ ಕಂಪ್ಲೆಕ್ಸ್ ನಲ್ಲಿ ಈ ಸ್ಪರ್ಧೆ ಸೆಪ್ಟೆಂಬರ್ 14 ರಂದು ಆರಂಭಗೊಂಡಿದೆ. ಅಂತಾರಾಷ್ಟ್ರೀಯ ಸೈಕ್ಲಿಂಗ್ ಫೆಡರೇಷನ್ ನಿಂದ ಮಾನ್ಯತೆ ಪಡೆದಿರುವ ಈ ಸ್ಪರ್ಧೆಯಲ್ಲಿ ಪಾಕಿಸ್ತಾನ ಸೇರಿದಂತೆ 11 ರಾಷ್ಟ್ರಗಳ 150 ಸ್ಪರ್ಧಿಗಳು ಭಾಗವಹಿಸಲಿದ್ದಾರೆ.

126. ಪ್ರತಿಷ್ಠಿತ “ಲೆಮೆಲ್ಸನ್-ಎಂಐಟಿ (Lemelson-MIT)” ಪ್ರಶಸ್ತಿ ಪಡೆದ ಭಾರತೀಯ ಮೂಲದ ವಿಜ್ಞಾನಿ ಯಾರು?

ಅ) ರವೀಂದ್ರ ಖಲೇಜ

ಆ) ರಮೇಶ್ ರಸ್ಕರ್

ಇ) ಕಿರಣ್ ಠಾಕೂರ್

ಈ) ವಿನಯ್ ಗುಪ್ತಾ

ರಮೇಶ್ ರಸ್ಕರ್

ಭಾರತ ಮೂಲದ ವಿಜ್ಞಾನಿ ರಮೇಶ್ ರಸ್ಕರ್ ಅವರು ಪ್ರತಿಷ್ಠಿತ ಲೆಮೆಲ್ಸನ್-ಎಂಐಟಿ (Lemelson-MIT)” ಪ್ರಶಸ್ತಿಗೆ ಭಾಜನರಾಗಿದ್ದಾರೆ. ವಿನೂತನ ಆವಿಷ್ಕಾರಗಳ ಮೂಲಕ ಜಾಗತಿಕ ಮಟ್ಟದಲ್ಲಿ ಜೀವನ ಸುಧಾರಿಸಲು ಇವರು ನೀಡಿರುವ ಕೊಡುಗೆಯನ್ನು ಗುರುತಿಸಿ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಪ್ರಶಸ್ತಿಯು ರೂ 5 ಲಕ್ಷ (500000 ಯುಸ್ ಡಾಲರ್) ಒಳಗೊಂಡಿದೆ. ನಾಸಿಕ್ ಮೂಲದ ರಸ್ಕರ್ ಎಂಐಟಿ ಮೀಡಿಯ ಲ್ಯಾಬ್ನಲ್ಲಿ ಕ್ಯಾಮರ ಕಲ್ಚರ್ ರಿಸರ್ಚ್ ಗ್ರೂಪ್ ಅನ್ನು ಸ್ಥಾಪಿಸಿದ್ದಾರೆ. ಸುಮಾರು 75ಕ್ಕೂ ಹೆಚ್ಚು ಪೇಟೆಂಟ್ ಗಳನ್ನು ತಮ್ಮ ಹೆಸರಿನಲ್ಲಿ ರಸ್ಕರ್ ಹೊಂದಿದ್ದಾರೆ. ತಂತ್ರಜ್ಞಾನ ಅನ್ವೇಷಣೆ ಮೂಲಕ ಸಮಾಜಕ್ಕೆ ಅಪಾರ ಕೊಡುಗೆ ನೀಡುವ ವ್ಯಕ್ತಿಗಳಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ.

127. ಭಾರತದ “ದೇವೇಂದ್ರ ಝುಝಾರಿಯಾ” ಅವರು ಯಾವ ಕ್ರೀಡೆಯಲ್ಲಿ ಪ್ಯಾರಾಲಿಂಪಿಕ್ಸ್ ನಲ್ಲಿ ಎರಡು ಬಾರಿ ಚಿನ್ನ ಗೆದ್ದು ಸಾಧನೆ ಮಾಡಿದ್ದಾರೆ?

ಅ) ಈಜು

ಆ) ಜಾವೆಲಿನ್

ಇ) ಹೈಜಂಪ್

www.karunaduexams.com

ಈ) ಲಾಂಗ್ ಜಂಪ್

ಜಾವೆಲಿನ್

ಪ್ಯಾರಾಲಿಂಪಿಕ್ಸ್ ನ ಜಾವಲಿನ್ ಎಸೆತದಲ್ಲಿ ಭಾರತದ ದೇವೇಂದ್ರ ಝುಝೂರಿಯಾ ಅವರು ಚಿನ್ನದ ಪದಕ ಗೆದ್ದಿದ್ದಾರೆ. ಆ ಮೂಲಕ ಎರಡನೇ ಬಾರಿ ಈ ಕ್ರೀಡಾಕೂಟದಲ್ಲಿ ಚಿನ್ನ ಗೆದ್ದು ದಾಖಲೆ ನಿರ್ಮಿಸಿದರು. ಝುಝೂರಿಯಾ 2004 ರ ಅಥೆನ್ಸ್ ಗೇಮ್ಸ್ನಲ್ಲಿ 62.15 ಮೀಟರ್ ಎಸೆದು ಪದಕ ಗೆದ್ದಿದ್ದರು. ದೇವೆಂದ್ರ ಈ ಬಾರಿ 63.97 ಮೀಟನ್ ದೂರ ಜಾವ್ಲಿನ್ ಎಸೆದು ತಮ್ಮದೇ ದಾಖಲೆ ಅಳಿಸಿ ಚಿನ್ನಕ್ಕೆ ಮುತ್ತಿಟ್ಟರು.

128. 21ನೇ ಕಾನೂನು ಆಯೋಗದ ಅಧ್ಯಕ್ಷರು_________?

ಅ) ಎ.ಪಿ. ಷಾ

ಆ) ಸತ್ಯ ಪಾಲ್ ಜೈನ್

ಇ) ಬಿ.ಎಸ್.ಚೌಹಣ್

ಈ) ರವಿ ಆರ್ ತ್ರಿಪಾಠಿ

ಬಿ.ಎಸ್.ಚೌಹಣ್

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಾಧೀಶರಾದ ಬಿ ಎಸ್ ಚೌಹಣ್ ಅವರು 21ನೇ ಕಾನೂನು ಆಯೋಗದ ಅಧ್ಯಕ್ಷರಾಗಿದ್ದಾರೆ. ಗುಜರಾತ್ ಹೈಕೋರ್ಟ್ನ ನಿವೃತ್ತ ನ್ಯಾಯಾಧೀಶ ರವಿ ಆರ್ ತ್ರಿಪಾಠಿ ಅವರು ಆಯೋಗದ ಪೂರ್ಣ ಅವಧಿ ಸದಸ್ಯರಾಗಿದ್ದಾರೆ. ಸತ್ಯ ಪಾಲ್ ಜೈನ್ ಆಯೋಗದ ಅರೆಕಾಲಿಕ ಸದಸ್ಯರಾಗಿದ್ದಾರೆ.

129. ಈ ಕೆಳಗಿನ ಯಾವುದು ಅಂಚೆ ದೂರುಗಳನ್ನು ದಾಖಲಿಸಲು ಕೇಂದ್ರ ಸರ್ಕಾರ ಜಾರಿಗೊಳಿಸಿರುವ "ಉಚಿತ ಟೋಲ್ ನಂಬರ್" ಆಗಿದೆ?

ಅ) 1900

ಆ) 1924

ಇ) 1933

ಈ) 1999

1924

ಅಂಚೆ ಸಂಬಂಧಿತ ದೂರುಗಳನ್ನು ದಾಖಲಿಸಲು ಕೇಂದ್ರ ಸರ್ಕಾರ "1924" ಸಂಖ್ಯೆಯ ಉಚಿತ ಟೋಲ್ ನಂಬರ್ ಅನ್ನು ಜಾರಿಗೊಳಿಸಿದೆ. ಪ್ರಾಥಮಿಕ ದಿನಗಳಲ್ಲಿ ದಿನದ 12 ಗಂಟೆಗಳ ಕಾಲ ಈ ನಂಬರ್ ಕಾರ್ಯನಿರ್ವಹಿಸಲಿದೆ. ಹಿಂದಿ, ಇಂಗ್ಲೀಷ್ ಮತ್ತು ಮಲೆಯಾಳಂ ಭಾಷೆಗಳಲ್ಲಿ ಈ ಸೇವೆ ಲಭ್ಯವಿದ್ದು, ಮುಂದಿನ ದಿನಗಳಲ್ಲಿ ಇತರೆ ಭಾಷೆಗಳಲ್ಲಿ ಸೇವೆ ದೊರೆಯಲಿದೆ.

www.karunaduexams.com

130. ದೇಶದಲ್ಲಿ ಬಡತನ ನಿರ್ಮೂಲನೆ ಕಾರ್ಯತಂತ್ರ ರೂಪಿಸುವ ಸಲುವಾಗಿ ಈ ಕೆಳಗಿನ ಯಾವ ಸಮಿತಿ ಇತ್ತೀಚೆಗೆ ವರದಿಯನ್ನು ಸಲ್ಲಿಸಿತು?

ಅ) ಸುರೇಶ್ ರಂಗರಾಜನ್ ಸಮಿತಿ

ಆ) ಅರವಿಂದ್ ಪನಗರಿಯಾ

ಇ) ವಿವೇಕ್ ದೇಬರಾಯ್ ಸಮಿತಿ

ಈ) ಚಿದಂಬರಂ ಸಮಿತಿ

ಅರವಿಂದ್ ಪನಗರಿಯಾ

ದೇಶದಲ್ಲಿ ಬಡತನ ನಿರ್ಮೂಲನೆ ಕಾರ್ಯತಂತ್ರ ರೂಪಿಸುವ ಸಲುವಾಗಿ ನೀತಿ ಆಯೋಗದ ಉಪಾಧ್ಯಕ್ಷ ಅರವಿಂದ್ ಪನಗರಿಯಾ ಅರವಿಂದ್ ಪನಗರಿಯಾ ನೇತೃತ್ವದ ಸಮಿತಿ ವರದಿಯನ್ನು ಸಲ್ಲಿಸಿದೆ. ಬಡತನ ರೇಖೆಗಿಂತ ಕೆಳಗಿನವರನ್ನು (ಬಿಪಿಎಲ್) ಗುರುತಿಸಲು ಹೊಸ ಸಮಿತಿಯೊಂದನ್ನು ರಚಿಸಬೇಕು ಎಂದು ಕಾರ್ಯ ಪಡೆಯು ಸಲಹೆ ಮಾಡಿದೆ. ಬಡತನ ನಿರ್ಮೂಲನೆಗೆ ಕಾರ್ಯತಂತ್ರ ರೂಪಿಸಲು ರಚಿಸ ಲಾಗಿರುವ ಕಾರ್ಯಪಡೆಯಲ್ಲಿ ನೀತಿ ಆಯೋಗದ ಸದಸ್ಯ ವಿವೇಕ್ ದೇಬರಾಯ್, ಗ್ರಾಮೀಣಾಭಿವೃದ್ಧಿ ಇಲಾಖೆ, ವಸತಿ ಮತ್ತು ನಗರ ಬಡತನ ನಿರ್ಮೂಲನೆ ಇಲಾಖೆಯ ಕಾರ್ಯದರ್ಶಿ ಸದಸ್ಯರಾಗಿದ್ದು, ಕಾರ್ಯಪಡೆಯು ಪ್ರಧಾನಿ ನರೇಂದ್ರ ಮೋದಿ ಅವರಿಗೆ ವರದಿ ಸಲ್ಲಿಸಿದೆ. ಬಡತನ ರೇಖೆಗಿಂತ ಕೆಳಗಿನವರನ್ನು ಗುರುತಿಸುವ ಸಮಿತಿಯಲ್ಲಿ ರಾಜ್ಯ ಸರ್ಕಾರಗಳ ಪ್ರತಿನಿಧಿಗಳನ್ನು ಸೇರಿಸಿ ಕೊಳ್ಳಬೇಕು ಎಂದು ವರದಿಯಲ್ಲಿ ಹೇಳಲಾಗಿದೆ. 2015ರ ಫೆಬ್ರುವರಿಯಲ್ಲಿ ಪ್ರಧಾನಿ ಅಧ್ಯಕ್ಷತೆಯಲ್ಲಿ ನಡೆದ ನೀತಿ ಆಯೋಗದ ಆಡಳಿತ ಮಂಡಳಿಯ ಪ್ರಥಮ ಸಭೆಯಲ್ಲಿ ಕಾರ್ಯ ತಂಡ ರಚಿಸುವ ನಿರ್ಧಾರ ತೆಗೆದುಕೊಳ್ಳಲಾಗಿತ್ತು.s

131. ಈ ಕೆಳಗಿನ ಯಾರು ಇತ್ತೀಚೆಗೆ ವಿಶ್ವ ಬ್ಯಾಂಕ್ (World Bank) ಅಧ್ಯಕ್ಷರಾಗಿ ನೇಮಕಗೊಂಡರು?

ಅ) ಜಿಮ್ ಯಾಂಗ್ ಕಿಮ್

ಆ) ನ್ಯಾನ್ಸಿ ಬರ್ಡ್ಸಲ್

ಇ) ಫಿಲಿಪ್ ಜೆ ಹ್ಯಾಲ್ಲನ್

ಈ) ಪಾಲ್ ಫಾರ್ಮರ್

ಜಿಮ್ ಯಾಂಗ್ ಕಿಮ್

ವಿಶ್ವಬ್ಯಾಂಕ್ನ ಹಾಲಿ ಅಧ್ಯಕ್ಷರಾಗಿರುವ ಜಿಮ್ ಯಾಂಗ್ ಕಿಮ್ ಅವರು ಎರಡನೇ ಅವಧಿಗೆ ವಿಶ್ವಬ್ಯಾಂಕ್ ಅಧ್ಯಕ್ಷರಾಗಿ ನೇಮಕಕೊಂಡಿದ್ದಾರೆ. ಕಿಮ್ ಮುಂದಿನ ಐದು ವರ್ಷಗಳ ತನಕ ಈ ಹುದ್ದೆಯಲ್ಲಿ ಮುಂದುವರೆಯಲಿದ್ದಾರೆ.ಕಿಮ್ ಅಧ್ಯಕ್ಷ ಸ್ಥಾನಕ್ಕೆ ನಾಮನಿರ್ದೇಶನಗೊಂಡ ಏಕೈಕ ವ್ಯಕ್ತಿಯಾಗಿದ್ದರು. 2012 ರಲ್ಲಿ ಕಿಮ್ ಅವರು ವಿಶ್ವಬ್ಯಾಂಕ್ ನ 12ನೇ

ಅಧ್ಯಕ್ಷರಾಗಿ ನೇಮಕಗೊಂಡಿದ್ದರು. ಇವರಿಗಿಂತಲೂ ಮುಂಚೆ ಅಧ್ಯಕ್ಷರಾಗಿದ್ದ ಜೇಮ್ಸ್ ವೊಲ್ಫೆನ್ಸೊಹನ್ ರವರು ಸಹ ಎರಡು ಅವಧಿಗೆ ಅಧ್ಯಕ್ಷರಾಗಿದ್ದರು.

132. ಅಮೆರಿಕಾ ಮೂಲದ ತಮಿಳು ಸಂಗಮ್ ನೀಡುವ ತಮಿಳು ರತ್ನ ಪ್ರಶಸ್ತಿಯನ್ನು ಯಾರಿಗೆ ನೀಡಲಾಯಿತು?

ಅ) ಪಿ. ಚಿದಂಬರಂ

ಆ) ಜಯಲಲಿತ

ಇ) ಸುಬ್ರಮಣ್ಯಯನ್ ಸ್ವಾಮಿ

ಈ) ಕಮಲ್ ಹಾಸನ್

ಸುಬ್ರಮಣ್ಯಯನ್ ಸ್ವಾಮಿ

ಹಿರಿಯ ಬಿಜೆಪಿ ನಾಯಕ ಮತ್ತು ರಾಜ್ಯ ಸಭಾ ಸದಸ್ಯ ಸುಬ್ರಮಣ್ಯಯನ್ ಸ್ವಾಮಿ ರವರಿಗೆ ತಮಿಳು ರತ್ನ ಪ್ರಶಸ್ತಿಯನ್ನು ನೀಡಲಾಗಿದೆ. ಅಮೆರಿಕಾದ ತಮಿಳು ಸಂಗಮ್ ಈ ಪ್ರಶಸ್ತಿಯನ್ನು ನೀಡುತ್ತಿದ್ದು, ಭ್ರಷ್ಟಚಾರ ಮತ್ತು ಸರ್ಕಾರದ ಆಡಳಿತದಲ್ಲಿ ಪಾರದರ್ಶಕತೆ ತರುವಲ್ಲಿ ಸ್ವಾಮಿ ರವರ ಶ್ರಮವನ್ನು ಪರಿಗಣಿಸಿ ಪ್ರಶಸ್ತಿಯನ್ನು ನೀಡಲಾಗಿದೆ. ಖ್ಯಾತ ಸಂಗೀತ ನಿರ್ದೇಶಕ ಎ.ಆರ್.ರೆಹಮಾನ್ ಮತ್ತು ನಿರ್ದೇಶಕ ಭಾರತಿ ರಾಜ ಅವರಿಗೆ ಈ ಹಿಂದೆ ಪ್ರಶಸ್ತಿಯನ್ನು ನೀಡಲಾಗಿದೆ.

133. "ಎನಿಥಿಂಗ್ ಎಬೌಟ್ ಖಮೋಶಿ (Anything About Khamoshi)" ಪುಸ್ತಕ ಈ ಕೆಳಗಿನ ಯಾವ ಗಣ್ಯವ್ಯಕ್ತಿಯ ಜೀವನ ಚರಿತ್ರೆ ಆಗಿದೆ?

ಅ) ಅಟಲ್ ಬಿಹಾರಿ ವಾಜಪೇಯಿ

ಆ) ಶತ್ರುಘ್ನ ಸಿನ್ಹಾ

ಇ) ನಿತಿನ್ ಗಡ್ಕಾರಿ

ಈ) ಮನ ಮೋಹನ್ ಸಿಂಗ್

ಶತ್ರುಘ್ನ ಸಿನ್ಹಾ

"ಎನಿಥಿಂಗ್ ಎಬೌಟ್ ಖಮೋಶಿ" ಪುಸ್ತಕ ನಟ ಮತ್ತು ರಾಜಕಾರಣಿಯಾದ ಶತ್ರುಘ್ನ ಸಿನ್ಹಾ ರವರ ಜೀವನ ಚರಿತ್ರೆ ಕುರಿತ ಪುಸ್ತಕವಾಗಿದೆ. ಭಾರತಿ ಎಸ್ ಪ್ರಧಾನ್ ಅವರು ಈ ಪುಸ್ತಕವನ್ನು ಬರೆದಿದ್ದಾರೆ.

www.karunaduexams.com

134. 2016-17 ದುಲೀಪ್ ಟ್ರೋಫಿಯನ್ನು ಗೆದ್ದುಕೊಂಡ "ಇಂಡಿಯಾ ಬ್ಲೂ" ತಂಡದ ನಾಯಕ ಯಾರು?

ಅ) ಗೌತಮ್ ಗಂಭೀರ್

ಆ) ಯುವರಾಜ್ ಸಿಂಗ್

ಇ) ವಿನಯ್ ಕುಮಾರ್

ಈ) ರಾಬಿನ್ ಉತ್ತಪ್ಪ

ಗೌತಮ್ ಗಂಭೀರ್

ಗೌತಮ್ ಗಂಭೀರ್ ನೇತೃತ್ವದ ಇಂಡಿಯಾ ಬ್ಲೂ ತಂಡಕ್ಕೆ 2016-17 ದುಲೀಪ್ ಟ್ರೋಫಿ ಲಭಿಸಿದೆ. ಪ್ರಶಸ್ತಿಗಾಗಿ ನಡೆದ ಅಂತಿಮ ಹಣಾಹಣಿಯಲ್ಲಿ ಇಂಡಿಯಾ ರೆಡ್ ವಿರುದ್ಧ ಇಂಡಿಯಾ ಬ್ಲೂ 355 ರನ್ ಗಳ ಅಮೋಘ ಜಯ ದಾಖಲಿಸಿತು. ಇದೇ ಮೊದಲ ಬಾರಿಗೆ ಪಿಂಕ್ ಬಾಲ್ ಅನ್ನು ಈ ಟೂರ್ನಿಯಲ್ಲಿ ಬಳಸಲಾಗಿತ್ತು.

135. ಗಲಭೆ ಪೀಡಿತ ಕಾಶ್ಮೀರದಲ್ಲಿ ಶಾಂತಿ ಸುವ್ಯವಸ್ಥೆ ಮರುಸ್ಥಾಪಿಸುವ ಸಲುವಾಗಿ ಭಾರತೀಯ ಸೇನೆ ಯಾವ ಹೆಸರಿನಲ್ಲಿ ಕಾರ್ಯಾಚರಣೆ ಆರಂಭಿಸಿದೆ?

ಅ) ಆಪರೇಷನ್ ಕಾಮ್ ಡೌನ್

ಆ) ಆಪರೇಷನ್ ಫಾರ್ ಪೀಸ್

ಇ) ಆಪರೇಷನ್ ರಕ್ಷಕ್

ಈ) ಆಪರೇಷನ್ ಸೆಕ್ಯೂರ್

ಆಪರೇಷನ್ ಕಾಮ್ ಡೌನ್

ಕಾಶ್ಮೀರದಲ್ಲಿ ನಿರಂತರವಾಗಿರುವ ಹಿಂಸಾಚಾರವನ್ನು ಹತ್ತಿಕ್ಕಲು ಭಾರತೀಯ ಸೇನೆ "ಆಪರೇಷನ್ ಕಾಮ್ ಡೌನ್" ಹೆಸರಿನಲ್ಲಿ ಕಾರ್ಯಾಚರಣೆ ಆರಂಭಿಸಿದೆ. ದಕ್ಷಿಣ ಕಾಶ್ಮೀರದಲ್ಲಿ ಉಗ್ರರು ಮತ್ತು ದಂಗೆಕೋರರನ್ನು ಮಟ್ಟಹಾಕುವ ಸಲುವಾಗಿ ನಾಲ್ಕು ಸಾವಿರ ಯೋಧರನ್ನು ಈ ಕಾರ್ಯಾಚರಣೆಯಡಿ ನಿಯೋಜಿಸಲಾಗಿದೆ.

136. ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನ (International Day for Democracy)ವನ್ನು ಯಾವಾ ದಿನದಂದು ಆಚರಿಸಲಾಗುತ್ತದೆ?

ಅ) ಸೆಪ್ಟೆಂಬರ್ 12

ಆ) ಆಗಸ್ಟ್ 15

ಇ) ಸೆಪ್ಟೆಂಬರ್ 15

ಈ) ಅಕ್ಟೋಬರ್ 15

ಸೆಪ್ಟೆಂಬರ್ 15

www.karunaduexams.com

ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನು ಸೆಪ್ಟೆಂಬರ್ 15 ರಂದು ಆಚರಿಸಲಾಗುತ್ತದೆ. ಪ್ರಜಾಪ್ರಭುತ್ವದ ಮೌಲ್ಯಗಳು ಮತ್ತು ತತ್ವಗಳನ್ನು ಎತ್ತಿಹಿಡಿಯುವ ಸಲುವಾಗಿ ವಿಶ್ವಸಂಸ್ಥೆ 2007 ರಲ್ಲಿ ಸೆಪ್ಟೆಂಬರ್ 15 ಅನ್ನು ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನವೆಂದು ಘೋಷಿಸಿತು. ಪ್ರಜಾಪ್ರಭುತ್ವ ಮತ್ತು 2030 ಸುಸ್ಥಿರಿ ಅಭಿವೃದ್ಧಿ ಅಜೆಂಡ (Democracy and the 2030 Agenda for Sustainable Development) ಇದು ಈ ವರ್ಷದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನದ ಧ್ಯೇಯವಾಕ್ಯ.

137. ಈ ಕೆಳಗಿನ ಯಾವ ಎರಡು ದೇಶಗಳು ದಕ್ಷಿಣ ಅಮೆರಿಕಾ ಖಂಡದ ನೆಲಾವೃತವಾದ (Landlocked Countries) ದೇಶಗಳಾಗಿವೆ?

ಅ) ಈಕ್ವಡಾರ್ ಮತ್ತು ಬೊಲಿವಿಯ

ಆ) ಕೊಲುಂಬಿಯ ಮತ್ತು ಗುಯಾನ

ಇ) ಬೊಲಿವಿಯ ಮತ್ತು ಪರಾಗ್ವೆ

ಈ) ಸುರಿನಮ್ ಮತ್ತು ಕೊಲುಂಬಿಯ

ಬೊಲಿವಿಯ ಮತ್ತು ಪರಾಗ್ವೆ

ಬೊಲಿವಿಯ ಮತ್ತು ಪರಾಗ್ವೆ ದಕ್ಷಿಣ ಅಮೆರಿಕಾದ ನೆಲಾವೃತವಾದ ಎರಡು ದೇಶಗಳಾಗಿವೆ.

138. ಇತ್ತೀಚೆಗೆ "ಮೆರಂಟಿ ಚಂಡಮಾರುತ (Typhoon Meranti)" ಯಾವ ದೇಶಕ್ಕೆ ಅಪ್ಪಳಿಸಿತು?

ಅ) ಚೀನಾ

ಆ) ಮೆಕ್ಸಿಕೊ

ಇ) ಅಮೆರಿಕಾ

ಈ) ಇಂಡೊನೇಷ್ಯಾ

ಚೀನಾ

ಈ ವರ್ಷದ ಬಲಿಷ್ಠ ಚಂಡಮಾರುತ ಎನ್ನಲಾದ "ಮೆರಂಟಿ" ಚೀನಾಗೆ ಅಪ್ಪಳಿಸಿದೆ. ಗಂಟೆಗೆ 250 ಕಿ.ಮೀ ವೇಗದಲ್ಲಿ ಈ ಚಂಡಮಾರುತ ಬೀಸುತ್ತಿದ್ದು, ಸಾವಿರಾರು ಜನರು ಅಪಾಯ ಸಿಲುಕ್ಕಿದ್ದಾರೆ.

139. ಫೋರ್ಬ್ಸ್ ವಿಶ್ವದ ಅತಿ ಹೆಚ್ಚು ಸಂಭಾವನೆ ಪಡೆವ ಟಿವಿ ನಟಿಯರ ಪಟ್ಟಿಯಲ್ಲಿ ಸ್ಥಾನ ಪಡೆದ ಭಾರತದ ಮೊದಲ ನಟಿ ಯಾರು?

ಅ) ಪ್ರಿಯಾಂಕ ಚೋಪ್ರಾ

ಆ) ರಾಗಿಣಿ ಖನ್ನಾ

ಇ) ದೃಷ್ಟಿ ದಾಮಿ

www.karunaduexams.com

ಈ) ಕೃತಿಕಾ ಕಮ್ರಾ

ಪ್ರಿಯಾಂಕ ಚೋಪ್ರಾ

ಬಾಲಿವುಡ್ ನಟಿ ಪ್ರಿಯಾಂಕ ಚೋಪ್ರಾ ಫೋರ್ಬ್ಸ್ ವಿಶ್ವದ ಅತಿ ಹೆಚ್ಚು ಸಂಭಾವನೆ ಪಡೆವ ಕಿರುತೆರೆ ನಟಿಯರ ಪಟ್ಟಿಯಲ್ಲಿ ಸ್ಥಾನ ಪಡೆದ ಭಾರತದ ಮೊದಲ ನಟಿ ಎನಿಸಿದ್ದಾರೆ. ಅಮೆರಿಕಾದ ಕಿರುತೆರೆ ಥ್ರಿಲ್ಲರ್ ಸರಣಿ "ಕ್ವಾಂಟಿಕೊ (Quantico)" ದಲ್ಲಿ ಅಭಿನಯಿಸುವ ಮೂಲಕ ಪ್ರಿಯಾಂಕ ಕಿರುತೆರೆಗೆ ಪಾದಾರ್ಪಣೆ ಮಾಡಿದ್ದರು. ಚೋಪ್ರಾ ಅವರು ಈ ಪಟ್ಟಿಯಲ್ಲಿ ಎಂಟನೇ ಸ್ಥಾನವನ್ನು ಗಳಿಸಿದ್ದಾರೆ. ಅಮೆರಿಕಾದ ಪ್ರಖ್ಯಾತ ಕಿರುತೆರೆ ನಟಿ ಸೋಫಿಯಾ ವೆರ್ಗರ ಮೊದಲ ಸ್ಥಾನವನ್ನು ಪಡೆದುಕೊಂಡಿದ್ದಾರೆ.

140. ಈ ಕೆಳಗಿನ ಯಾವ ಜೋಡಿ ಸರಿಯಾಗಿ ಹೊಂದಾಣಿಕೆ ಆಗಿದೆ?

I) ವಿಟಮಿನ್ B2 -ರೈಬೊಫ್ಲೇವಿನ್

II) ವಿಟಮಿನ್ B3 - ನಿಯಾಸಿನ್

III) ವಿಟಮಿನ್ B7 - ಬಯೋಟಿನ್

IV) ವಿಟಮಿನ್ B12 -ಸೈನೊಕೊಬಲಮೈನ್

ಸರಿಯಾದ ಉತ್ತರವನ್ನು ಈ ಕೆಳಗೆ ನೀಡಿರುವ ಕೋಡ್ ಮೂಲಕ ಗುರುತಿಸಿ:

ಅ) I & II

ಆ) II & III

ಇ) I, II & III

ಈ) ಮೇಲಿನ ಎಲ್ಲವೂ

ಮೇಲಿನ ಎಲ್ಲವೂ ಸರಿಯಾಗಿವೆ.

141. ಜೇರುಸಲೇಂ ಮಾನವ ಹಕ್ಕು ಸಂಘಟನೆ "ಸೈಮನ್ ವಿಸೆಂಥಲ್ ಮಾನವತಾವಾದಿ ಪ್ರಶಸ್ತಿ"ಗೆ ಯಾರನ್ನು ಆಯ್ಕೆಮಾಡಲಾಗಿದೆ?

ಅ) ಅಮಿತಾಬ್ ಬಚ್ಚನ್

ಆ) ಶ್ರೀರವಿಶಂಕರ್ ಗುರೂಜಿ

ಇ) ನರೇಂದ್ರ ಮೋದಿ

ಈ) ಅಟಲ್ ಬಿಹಾರಿ ವಾಜಪೇಯಿ

ಶ್ರೀರವಿಶಂಕರ್ ಗುರೂಜಿ

ಆರ್ಟ್ ಆಫ್ ಲೀವಿಂಗ್ ಸಂಸ್ಥಾಪಕ ಶ್ರೀಶ್ರೀ ರವಿಶಂಕರ್ ಗುರೂಜಿ ಅವರನ್ನು ಜೇರುಸಲೇಂ ಮಾನವ ಹಕ್ಕುಗಳ ಸಂಘಟನೆ 'ಸೈಮನ್ ವಿಸೆಂಥಲ್ ಮಾನವತಾವಾದಿ ಪ್ರಶಸ್ತಿ (Simon Wiesenthal Humanitarian Laureate')'ಗೆ ಆಯ್ಕೆ

www.karunaduexams.com

ಮಾಡಿದೆ. ಮಾನವನ ಘನತೆ, ಅಂತರ್ ಧರ್ಮೀಯ ಸಂಬಂಧಗಳು ಮತ್ತು ಜನರಲ್ಲಿ ಸಹನೆ ಪಸರಿಸುವ ನಿಟ್ಟಿನಲ್ಲಿ ಅವರು ಸಲ್ಲಿಸಿದ ಸೇವೆಯನ್ನು ಗಮನಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಸೆಪ್ಟೆಂಬರ್ 21ರಂದು ದೆಹಲಿಯಲ್ಲಿ "ಜನರು ಪುಸ್ತಕ, ಭೂಮಿ: ಪವಿತ್ರನಾಡಿನೊಂದಿಗೆ 3500 ವರ್ಷಗಳ ಯಹೂದಿಗಳ ಬಾಂದವ್ಯ" ಹೆಸರಿನ ಕಾರ್ಯಕ್ರಮದಲ್ಲಿ ಈ ಪ್ರಶಸ್ತಿ ಪ್ರದಾನ ನಡೆಯಲಿದೆ. ಮಾನವ ಹಕ್ಕುಗಳ ರಕ್ಷಣೆಗೆ ಜೇರುಸಲೇಂ ಮಾನಹ ಹಕ್ಕು ಸಂಘಟನೆ ಕೈಗೊಂಡ ಕಾರ್ಯಕ್ಕೆ ರವಿಶಂಕರ್ ಗುರೂಜಿ ಕೈಜೋಡಿಸಿದ್ದರು. ಅಲ್ಲದೇ, ಭಾರತದಲ್ಲಿ 2009ರಿಂದ ವ್ಯವಹಾರದ ಪ್ರಮುಖ ಸಾಧನವಾಗಿ ಬಳಸಲಾಗುತ್ತಿರುವ ಹಿಟ್ಲರ್ನ ಪುಸ್ತಕ 'ಮೈನ್ ಕಾಂಫ್'ನ ಮಾರಾಟಕ್ಕೆ ಈ ಸಂಘಟನೆ ವಿರೋಧ ವ್ಯಕ್ತಪಡಿಸಿತ್ತು ಇದನ್ನು ರವಿಶಂಕರ್ ಗುರೂಜಿ ಬೆಂಬಲಿಸಿದ್ದರು. ಸೈಮನ್ ವಿಸೆಂಥಲ್ ಕೇಂದ್ರ ನೀಡುವ ದೊಡ್ಡ ಗೌರವ ಇದಾಗಿದೆ..

142. "ಸತ್ಕೋಸಿಯಾ ಹುಲಿ ಸಂರಕ್ಷಣ ಪ್ರದೇಶ (Satkosia Tiger Reserve) ಯಾವ ರಾಜ್ಯದಲ್ಲಿದೆ?

ಅ) ಬಿಹಾರ

ಆ) ಒಡಿಶಾ

ಇ) ಕೇರಳ

ಈ) ಪಶ್ಚಿಮ ಬಂಗಾಳ

ಒಡಿಶಾ

ಸತ್ಕೋಸಿಯಾ ಹುಲಿ ಸಂರಕ್ಷಣ ಪ್ರದೇಶವು ಒಡಿಶಾದ ಅಂಗುಲ್ ಜಿಲ್ಲೆಯಲ್ಲಿದೆ. 2007 ರಲ್ಲಿ ಇದನ್ನು ಹುಲಿ ಸಂರಕ್ಷಣ ಪ್ರದೇಶವೆಂದು ಘೋಷಿಸಲಾಗಿದೆ. ಸತ್ಕೋಸಿಯಾ ಗೋರ್ಜ್ ವನ್ಯಜೀವಿ ಅಭಯಾರಣ್ಯ ಮತ್ತು ಬೈಸಿಪಲ್ಲಿ ವನ್ಯಜೀವಿ ಅಭಯಾರಣ್ಯ ಈ ಸಂರಕ್ಷಣ ಪ್ರದೇಶದ ಭಾಗವಾಗಿವೆ.

143. ಫಿಪಾ (FIFA) ಸಂಸ್ಥೆ ಇತ್ತೀಚೆಗೆ ಬಿಡುಗಡೆ ಮಾಡಿದ ವಿಶ್ವ ಶ್ರೇಯಾಂಕ ಪಟ್ಟಿಯಲ್ಲಿ ಯಾವ ದೇಶ ಅಗ್ರಸ್ಥಾನವನ್ನು ಪಡೆದುಕೊಂಡಿದೆ?

ಅ) ಜರ್ಮನಿ

ಆ) ಅರ್ಜೆಂಟೀನಾ

ಇ) ಕೋಲಂಬಿಯ

ಈ) ಬ್ರೆಜಿಲ್

ಅರ್ಜೆಂಟೀನಾ

ಫಿಪಾ ಸಂಸ್ಥೆ ಬಿಡುಗಡೆಗೊಳಿಸಿರುವ ವಿಶ್ವ ಶ್ರೇಯಾಂಕ ಪಟ್ಟಿಯಲ್ಲಿ ಲಿಯೊನೆಲ್ ಮೆಸ್ಸಿ ಒಳಗೊಂಡ ಅರ್ಜೆಂಟೀನಾ ತಂಡ ನಂ.1 ಸ್ಥಾನವನ್ನು ಪಡೆದುಕೊಂಡಿದೆ. ಪಟ್ಟಿಯಲ್ಲಿ ಭಾರತ ನಾಲ್ಕು ಸ್ಥಾನ ಮೇಲೇರಿದ್ದು, 205 ಅಂಕದೊಂದಿಗೆ

www.karunaduexams.com

ಭಾರತ 148ನೇ ಸ್ಥಾನಕ್ಕೆ ಬಡ್ತಿ ಪಡೆದುಕೊಂಡಿದೆ. ಬೆಲ್ಜಿಯಂ ತಂಡ ಎರಡನೇ ಸ್ಥಾನವನ್ನು ಕಾಯ್ದುಕೊಂಡರೆ, ಜರ್ಮನ್ ತಂಡ ಕೋಲಂಬಿಯಾ ತಂಡವನ್ನು ಹಿಂದಿಕ್ಕಿ ಮೂರನೇ ಸ್ಥಾನವನ್ನು ದಕ್ಕಿಸಿಕೊಂಡಿದೆ.

144. ಈ ಕೆಳಗಿನ ಯಾವ ಪರ್ವತ ಶ್ರೇಣಿ ಜಗತ್ತಿನ ಅತಿ ಉದ್ದದ ಪರ್ವತ ಶ್ರೇಣಿಯಾಗಿದೆ?

ಅ) ಉತ್ತರ ಅಮೆರಿಕಾದ ರಾಕೀಸ್ ಪರ್ವತ

ಆ) ದಕ್ಷಿಣ ಅಮೆರಿಕಾದ ಆಂಡಿಸ್

ಇ) ಆಸ್ಟ್ರೇಲಿಯಾದ ಗ್ರೇಟ್ ಡಿವೈಡೆಂಡ್ ಪರ್ವತ

ಈ) ಹಿಮಾಲಯ ಪರ್ವತ ಶ್ರೇಣಿ

ದಕ್ಷಿಣ ಅಮೆರಿಕಾದ ಆಂಡಿಸ್

ದಕ್ಷಿಣ ಅಮೆರಿಕಾದ ಆಂಡಿಸ್ ಶ್ರೇಣಿ ವಿಶ್ವದ ಅತಿ ಉದ್ದದ ಪರ್ವತ ಶ್ರೇಣಿಯಾಗಿದೆ.

145. ಇಂಗ್ಲೆಂಡ್ನ ಮಾಜಿ ಬ್ಯಾಟ್ಸಮನ್ ಗ್ರೇಮ್ ಹಿಕ್ ಅವರು ಯಾವ ದೇಶದ ಬ್ಯಾಟಿಂಗ್ ಕೋಚ್ ಆಗಿ ನೇಮಕಗೊಂಡಿದ್ದಾರೆ?

ಅ) ನ್ಯೂಜಿಲ್ಯಾಂಡ್

ಆ) ಆಸ್ಟ್ರೇಲಿಯ

ಇ) ದಕ್ಷಿಣ ಆಫ್ರಿಕಾ

ಈ) ಜಿಂಬಾಂಬ್ವೆ

ಆಸ್ಟ್ರೇಲಿಯಾ

ಇಂಗ್ಲೆಂಡ್ನ ಮಾಜಿ ಬ್ಯಾಟ್ಸ್ಮನ್ ಗ್ರೇಮ್ ಹಿಕ್ ಆಸ್ಟ್ರೇಲಿಯದ ಬ್ಯಾಟಿಂಗ್ ಕೋಚ್ ಆಗಿ ನೇಮಕಗೊಂಡಿದ್ದಾರೆ. ಮುಂಬರುವ ದಕ್ಷಿಣ ಆಫ್ರಿಕ ವಿರುದ್ಧ ಸರಣಿಯಲ್ಲಿ ತನ್ನ ಕೋಚಿಂಗ್ ವೃತ್ತಿ ಆರಂಭಿಸಲಿದ್ದಾರೆ. ಇಂಗ್ಲೆಂಡ್ನ ಪರ 65 ಟೆಸ್ಟ್ ಹಾಗೂ 120 ಏಕದಿನ ಅಂತಾರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದ ಹಿಕ್, 2013ರಲ್ಲಿ ಕ್ರಿಕೆಟ್ ಆಸ್ಟ್ರೇಲಿಯದ ಉನ್ನತ ಪ್ರದರ್ಶನ ಅಧಿಕಾರಿಯಾಗಿ ನೇಮಕಗೊಂಡಿದ್ದರು. ಹಿಕ್ 1987ರಲ್ಲಿ ವರ್ಷದ ವಿಸ್ಡನ್ ಕ್ರಿಕೆಟಿಗ ಪ್ರಶಸ್ತಿಗೆ ಭಾಜನರಾಗಿದ್ದರು. ಪ್ರಥಮ ದರ್ಜೆ ಕ್ರಿಕೆಟ್ನಲ್ಲಿ 136 ಶತಕಗಳ ಸಹಿತ 41,112 ರನ್ ಗಳಿಸಿರುವ ಹಿಕ್ 2008ರಲ್ಲಿ ನಿವೃತ್ತಿಯಾಗಿದ್ದರು. ಇದೀಗ 2020ರ ತನಕ ಆಸ್ಟ್ರೇಲಿಯದ ಬ್ಯಾಟಿಂಗ್ ಕೋಚ್ ಆಗಿ ನೇಮಕಗೊಂಡಿದ್ದಾರೆ.

www.karunaduexams.com

146. ಯಾವ ರಾಜ್ಯದಲ್ಲಿ "ಬ್ರಿಕ್ಸ್ ಪರಿಸರ ಸಚಿವರ (Environment Minister) ಸಭೆ" ಇತ್ತೀಚೆಗೆ ಆರಂಭಗೊಂಡಿತು?

ಅ) ಗೋವಾ

ಆ) ಕೇರಳ

ಇ) ಮಹಾರಾಷ್ಟ್ರ

ಈ) ತೆಲಂಗಣ

ಗೋವಾ

ಬ್ರಿಕ್ಸ್ ರಾಷ್ಟ್ರಗಳ ಪರಿಸರ ಸಚಿವರ ಸಭೆ ಸೆಪ್ಟೆಂಬರ್ 16ರಂದು ಗೋವಾದ ಪಣಜಿಯಲ್ಲಿ ಆರಂಭಗೊಂಡಿತು. ವಾಯು ಹಾಗೂ ಜಲ ಮಾಲಿನ್ಯ ಮತ್ತು ಹವಾಮಾನ ಬದಲಾವಣೆಯ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರವನ್ನು ಬಲಪಡಿಸುವ ಕುರಿತು ಈ ಸಭೆಯಲ್ಲಿ ಚರ್ಚಿಸಲಲಾಗುವುದು. ಕೇಂದ್ರ ಪರಿಸರ, ಅರಣ್ಯ ಹಾಗೂ ಹವಾಮಾನ ಬದಲಾವಣೆಯ ಸಹಾಯಕ ಸಚಿವ ಅನಿಲ್ ಮಾಧವ ದವೆ, ಸಭೆಯಲ್ಲಿ ಭಾಗವಹಿಸಲಿದ್ದಾರೆ. ಮುಂದಿನ ತಿಂಗಳು ಗೋವಾದಲ್ಲಿ ನಡೆಯಲಿರುವ ಬ್ರಿಕ್ಸ್ ರಾಷ್ಟ್ರಗಳ ಮುಖ್ಯಸ್ಥರ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಕೇಂದ್ರದ ವಿವಿಧ ಸಚಿವಾಲಯಗಳು ಹಮ್ಮಿಕೊಳ್ಳುತ್ತಿರುವ ಸರಣಿ ಸಭೆಗಳಲ್ಲಿ ಇದು ಒಂದಾಗಿದೆ. [ಗಮನಿಸಿ: ಬ್ರಿಕ್ಸ್ ಆರೋಗ್ಯ ಕಾರ್ಯಾಗಾರ: ಬೆಂಗಳೂರಿನಲ್ಲಿ ನಡೆಯಿತು, ಬ್ರಿಕ್ಸ್ ಸಿನಿಮೋತ್ಸವ: ದೆಹಲಿಯಲ್ಲಿ ಆಯೋಜಿಸಲಾಗಿತ್ತು, ಬ್ರಿಕ್ಸ್ ಎಂಪ್ಲಾಯ್ಮೆಂಟ್ ವರ್ಕಿಂಗ್ ಗ್ರೂಫ್ ಸಭೆ: ಹೈದ್ರಾಬಾದ್ ನಲ್ಲಿ ಆಯೋಜಿಸಲಾಗಿತ್ತು, ಬ್ರಿಕ್ಸ್ ಮಹಿಳಾ ಸಂಸದರ ಸಭೆ: ಜೈಪುರದಲ್ಲಿ ನಡೆಯಿತು, ಬ್ರಿಕ್ಸ್ ವಿಪತ್ತು ನಿರ್ವಹಣೆ ಸಭೆ: ಉದಯಪುರದಲ್ಲಿ ನಡೆಯಿತು, ಇತ್ತೀಚೆಗೆ ಬ್ರಿಕ್ಸ್ ನಗರೀಕರಣ ವೇದಿಕೆ ಸಭೆ: ಆಂಧ್ರದ ವಿಶಾಖಪಟ್ಟಣದಲ್ಲಿ ಮುಕ್ತಾಯಗೊಂಡಿತು].

147. ಇತ್ತೀಚೆಗೆ ನಿಧನರಾದ "ರೋಸ್ ಮೊಫೊರ್ಡ್ (Rose Mofford) ಅಮೆರಿಕಾದ ಯಾವ ರಾಜ್ಯದ ಮೊದಲ ಮಹಿಳಾ ಗವರ್ನರ್ ಆಗಿದ್ದರು?

ಅ) ಫ್ಲೋರಿಡಾ

ಆ) ಅರಿಝೋನ

ಇ) ಅಲಸ್ಕ

ಈ) ಹವಾಯಿ

ಅರಿಝೋನ

ಅರಿಝೋನ ರಾಜ್ಯದ ಮೊದಲ ಮಹಿಳಾ ಗವರ್ನರ್ ರೋಸ್ ಮೊಫೊರ್ಡ್ ನಿಧನರಾದರು. 94 ವರ್ಷದ ಮೊಫೊರ್ಡ್ ಇತ್ತೀಚೆಗೆ ಆಕಸ್ಮಿಕವಾಗಿ ಜಾರಿ ಬಿದ್ದ ಕಾರಣ ಆಸ್ಪತ್ರೆಯಲ್ಲಿ ದಾಖಲಾಗಿದ್ದರು. 1988 ರಿಂದ 1991 ರವರೆಗೆ ಮೊಫೊರ್ಡ್ ಅರಿಝೋನದ ಗವರ್ನರ್ ಆಗಿ ಸೇವೆ ಸಲ್ಲಿಸಿದ್ದರು. ಜೊತೆಗೆ ಈ ಹುದ್ದೆಯನ್ನು ಅಲಂಕರಿಸಿದ ಮೊದಲ ಮಹಿಳೆ ಎನಿಸಿದ್ದರು.

www.karunaduexams.com

148. ಈ ಕೆಳಗಿನ ಯಾರು “2016 ಮಾರ್ಕೋನಿ ಸೊಸೈಟಿ ಪೌಲ್ ಬ್ಯಾರನ್ ಯುವ ವಿದ್ಯಾರ್ಥಿ (2016 Marconi Society Paul Baran Young Scholar Award) ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ?

ಅ) ದಿನೇಶ್ ಭರಡಿಯ

ಆ) ರಮೇಶ್ ರಸ್ಕರ್

ಇ) ಸತೀಶ್ ಜೈನ್

ಈ) ಸುರೇಂದ್ರ ನಾಥ್

ಭಾರತದ ದಿನೇಶ್ ಭರಡಿಯ ಅವರನ್ನು ಪ್ರತಿಷ್ಠಿತ “2016 ಮಾರ್ಕೋನಿ ಸೊಸೈಟಿ ಪೌಲ್ ಬ್ಯಾರನ್ ಯುವ ವಿದ್ಯಾರ್ಥಿ” ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಐಐಟಿ ಕಾನ್ಪುರದಲ್ಲಿ ಎಲೆಕ್ಟ್ರಿಕಲ್ ಎಂಜನಿಯರಿಂಗ್ ಪದವಿ ಪಡೆದಿರುವ ಭರಡಿಯ ಪ್ರಸ್ತುತ ಅಮೆರಿಕಾದ ಎಂಐಟಿಯಲ್ಲಿ ಸಂಶೋಧಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ರೇಡಿಯೋ ತರಂಗ ಕ್ಷೇತ್ರದಲ್ಲಿ ವಿಶೇಷ ಅನ್ವೇಷಣೆಗಾಗಿ ಇವರನ್ನು ಈ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಪ್ರಶಸ್ತಿಯನ್ನು ನವೆಂಬರ್ 2 ರಂದು ಕ್ಯಾಲಿಫೋರ್ನಿಯಾದಲ್ಲಿ ನಡೆಯಲಿರುವ ಸಮಾರಂಭದಲ್ಲಿ ನೀಡಲಾಗುವುದು.

149. ದಕ್ಷಿಣ ಭಾರತದ ಅತಿ ಎತ್ತರದ ವಸತಿ ಸಮುಚ್ಚಯ ಯಾವ ನಗರದಲ್ಲಿ ಸ್ಥಾಪನೆಯಾಗಲಿದೆ?

ಅ) ಕೊಚ್ಚಿ

ಆ) ಮಂಗಳೂರು

ಇ) ಬೆಂಗಳೂರು

ಈ) ಹೈದ್ರಾಬಾದ್

ಮಂಗಳೂರು

ಮಂಗಳೂರಿನಲ್ಲಿ ದಕ್ಷಿಣ ಭಾರತದ ಅತಿ ಎತ್ತರದ ವಸತಿ ಸಮುಚ್ಚಯ ಸ್ಥಾಪನೆಯಾಗಲಿದೆ. ನಗರದ ನಂತೂರು ಬಳಿ ಅತ್ಯಾಧುನಿಕ ಸೌಲಭ್ಯಗಳೊಂದಿಗೆ 53 ಮಹಡಿಗಳ ಪ್ರೀಮಿಯಂ ವಸತಿ ಸಮುಚ್ಚಯವನ್ನು ವೆಸ್ಟ್ಲೈನ್ ಬಿಲ್ಡರ್ಸ್ ಆಯಂಡ್ ಡೆವಲಪರ್ಸ್ ನಿರ್ಮಾಣ ಮಾಡುತ್ತಿದೆ. ದಕ್ಷಿಣ ಭಾರತದಲ್ಲೇ ಅತೀ ಎತ್ತರದಿಂದ ಕೂಡಿರುವ ವೆಸ್ಟ್ಲೈನ್ ಸಿಗ್ನೇಚರ್ ಸಂಪೂರ್ಣವಾಗಿ ಆವಿಷ್ಕಾರಿ ವಿನ್ಯಾಸದಿಂದ ಕೂಡಿರುವ ವಸತಿ ಸಮುಚ್ಚಯವಾಗಿದೆ. ಬಿಸಿಲಿನ ಪ್ರಖರತೆಯಿಂದ ಮನೆಯೊಳಗಿನ ಶಾಖ ಕಡಿಮೆ ಮತ್ತು ಮನೆ ತಂಪಾಗಿರುವಂತೆ ಮಾಡುವ ಉದ್ದೇಶದಿಂದ ಕಟ್ಟಡದ ಗೋಡೆಗಳನ್ನು ವಿನ್ಯಾಸಗೊಳಿಸಲಾಗಿದೆ. ಈ ಅಲ್ಟ್ರಾ ಐಷಾರಾಮಿ ಯೋಜನೆಯಲ್ಲಿ ಒಟ್ಟು 135 ವಸತಿಗಳಿದ್ದು, 4 ಬೆಡ್ ರೂಂನ ಡ್ಯುಪ್ಲೆಕ್ಸ್, 3 ಬೆಡ್ ರೂಂನ ಡ್ಯುಪ್ಲೆಕ್ಸ್, 3 ಬೆಡ್ ರೂಂ ಹಾಗೂ ಎರಡು ಬೆಡ್ ರೂಂನ ವಸತಿಗಳು ಇವೆ.

www.karunaduexams.com

150. ಈ ಕೆಳಗಿನ ಯಾವುವು ಸಕ್ರಿಯ ಜ್ವಾಲಮುಖಿಗಳಾಗಿವೆ?

I) ಮೌಂಟ್ ಕಿಲಿಮಂಜಾರೊ

II) ಮೌಂಟ್ ಕೊಟೊಪಾಕ್ಸಿ

III) ಮೌನಾ ಲೊವಾ

ಈ ಕೆಳಗೆ ನೀಡಿರುವ ಕೋಡ್ ಮೂಲಕ ಸರಿಯಾದ ಉತ್ತರವನ್ನು ಆರಿಸಿ:

ಅ) I & II

ಆ) II & III

ಇ) I & III

ಈ) ಮೇಲಿನ ಎಲ್ಲವೂ

II & III

ಮೌಂಟ್ ಕೊಟೊಪಾಕ್ಸಿ ಮತ್ತು ಮೌನಾ ಲೊವಾ ಜೀವಂತ ಜ್ವಾಲಮುಖಿಗಳಾಗಿವೆ. ಮೌಂಟ್ ಕಿಲಿಮಂಜಾರೊ ಕಳೆದ 400 ವರ್ಷಗಳಿಂದ ಸ್ಪೋಟಿಸಿದ ಕಾರಣ ಇದನ್ನು ಸಕ್ರಿಯವಲ್ಲದ ಜ್ವಾಲಾಮುಖಿ ಎಂದು ಪರಿಗಣಿಸಲಾಗಿದೆ.

151. "2015 ರಾಷ್ಟ್ರೀಯ ಮಾನವತಾ ಪದಕ (2015 National Humanities Medal)"ಕ್ಕೆ ಆಯ್ಕೆಯಾಗಿರುವ ಭಾರತೀಯ ಅಮೆರಿಕನ್ ವೈದ್ಯ ಯಾರು?

ಅ) ಅಬ್ರಹಾಂ ವರ್ಗೀಸ್

ಆ) ಜೊಕೊಬ್ ವರ್ಗೀಸ್

ಇ) ಸುವರ್ಣನಾಥ್ ಜೈನ್

ಈ) ಜಗನ್ನಾಥ್ ಸಿಂಗ್

ಅಬ್ರಹಾಂ ವರ್ಗೀಸ್

ಭಾರತೀಯ ಅಮೆರಿಕನ್ ವೈದ್ಯ ಹಾಗೂ ಲೇಖಕ ಅಬ್ರಹಾಂ ವರ್ಗೀಸ್, 2015ರ ಪ್ರತಿಷ್ಠಿತ ರಾಷ್ಟ್ರೀಯ ಮಾನವತಾ ಪದಕಕ್ಕೆ ಆಯ್ಕೆಯಾಗಿದ್ದಾರೆ. ಸೆ.21ರಂದು ನಡೆಯಲಿರುವ ಸಮಾರಂಭದಲ್ಲಿ ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮ, ವರ್ಗೀಸ್ರಿಗೆ ಈ ಪ್ರಶಸ್ತಿಯನ್ನು ಪ್ರದಾನಿಸಲಿದ್ದಾರೆ. ಇತರೆ 11 ಮಂದಿ ಜೊತೆಗೆ ವರ್ಗೀಸ್ ರವರು ಈ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಇವರು ಸದ್ಯ ಸ್ಟಾಂಡರ್ಡ್ ಸ್ಕೂಲ್ ಆಫ್ ಮೆಡಿಸಿನ್ನಲ್ಲಿ ಔಷಧ ಶಾಸ್ತ್ರ ಪ್ರೊಫೆಸರ್ ಆಗಿದ್ದಾರೆ. 61ರ ಹರೆಯದ ವರ್ಗೀಸ್, 'ಮೈ ಓನ್ ಕಂಟ್ರಿ' ಹಾಗೂ 'ಕಟ್ಟಿಂಗ್ ಫಾರ್ ಸ್ಟೋನ್' ಸಹಿತ ಅನೇಕ ಜನಪ್ರಿಯ ಪುಸ್ತಕಗಳನ್ನು ಬರೆದಿದ್ದಾರೆ.

www.karunaduexams.com

152. ಇತ್ತೀಚಿನ ವರದಿಯೊಂದರ ಪ್ರಕಾರ ಭಯೋತ್ಪಾದನೆ ದಾಳಿಗೆ ತುತ್ತಾಗಿರುವ ರಾಷ್ಟ್ರಗಳ ಪೈಕಿ ಭಾರತ ಎಷ್ಟನೇ ಸ್ಥಾನದಲ್ಲಿದೆ?

ಅ) ಎರಡು

ಆ) ಮೂರು

ಇ) ನಾಲ್ಕು

ಈ) ಐದು

ನಾಲ್ಕು

ಕಳೆದ ವರ್ಷ ಭಯೋತ್ಪಾದನೆ ಒಳಗಾದ ರಾಷ್ಟ್ರಗಳ ಪೈಕಿ ಭಾರತ ನಾಲ್ಕನೇ ಸ್ಥಾನದಲ್ಲಿದೆ. ಇರಾಕ್, ಅಫ್ಘಾನಿಸ್ತಾನ ಮತ್ತು ಪಾಕಿಸ್ತಾನದ ನಂತರ ಭಯೋತ್ಪಾದಕರ ದಾಳಿಗೆ ಒಳಗಾದ ದೇಶಗಳ ಸ್ಥಾನದಲ್ಲಿ ಭಾರತ ನಾಲ್ಕನೇ ಸ್ಥಾನದಲ್ಲಿದೆ. ವಿಶ್ವದ ವಿವಿಧೆಡೆ ಕಳೆದ ವರ್ಷ ನಡೆದ 11,774 ಭಯೋತ್ಪಾದಕರ ದಾಳಿಯಲ್ಲಿ, 28,328 ಮಂದಿ ಹತರಾಗಿದ್ದು, 35,320 ಜನ ತೀವ್ರ ಗಾಯಗೊಂಡಿದ್ದಾರೆ. ಭಾರತದಲ್ಲಿ ನಡೆದ 791 ದಾಳಿಗಳಲ್ಲಿ ಶೇಕಡ 43ರಷ್ಟು ನಕ್ಸಲೀಯರಿಂದ ನಡೆದ ಕೃತ್ಯವಾಗಿದ್ದು, ಭಯೋತ್ಪಾದಕರ ಕೌರ್ಯಕ್ಕೆ 289 ಭಾರತೀಯರು ಕೊಲ್ಲಲ್ಪಟ್ಟಿದ್ದಾರೆ. ಅಮೆರಿಕದ ವಿದೇಶಾಂಗ ಇಲಾಖೆಯೊಂದಿಗೆ ಕರಾರು ಮಾಡಿಕೊಂಡು ಭಯೋತ್ಪಾದನೆ ಕುರಿತ ಅಧ್ಯಯನಕ್ಕಾಗಿ ನ್ಯಾಷನಲ್ ಕನ್ಸೊರ್ಟಿಯಂ ಸಂಗ್ರಹಿಸಿದ ಅಂಕಿ-ಅಂಶಗಳಿಂದ ಈ ಮಾಹಿತಿ ಬಹಿರಂಗಗೊಂಡಿದೆ. ತಾಲಿಬಾನ್, ಇಸ್ಲಾಮಿಕ್ ಸ್ಟೇಟ್ ಮತ್ತು ಬೋಕೋ ಹರಾಂ-ಈ ಮೂರು ವಿಶ್ವದ ಅತ್ಯಂತ ಅಪಾಯಕಾರಿ ಭಯೋತ್ಪಾದನೆ ಸಂಘಟನೆಗಳೆಂದು ಕುಖ್ಯಾತಿ ಪಡೆದಿವೆ.

153. ಭಾರತದ ಸಂಸತ್ತು ಈ ಕೆಳಕಂಡವುಗಳನ್ನು ಒಳಗೊಂಡಿದೆ _____?

ಅ) ಲೋಕಸಭೆ

ಆ) ರಾಜ್ಯಸಭೆ

ಇ) ಲೋಕಸಭೆ ಮತ್ತು ರಾಜ್ಯಸಭೆ

ಈ) ರಾಷ್ಟ್ರಪತಿ, ಲೋಕಸಭೆ ಮತ್ತು ರಾಜ್ಯಸಭೆ

ರಾಷ್ಟ್ರಪತಿ, ಲೋಕಸಭೆ ಮತ್ತು ರಾಜ್ಯಸಭೆ

ಭಾರತದ ಸಂಸತ್ತು ಭಾರತದ ಗಣರಾಜ್ಯದ ಒಕ್ಕೂಟ ಸರ್ಕಾರದ ಎರಡು ಶಾಸನಸಭೆಗಳುಳ್ಳ (ಉಭಯ ಸದನಿಕ) ಸರ್ವೋಚ್ಚ ವಿಧಾಯಕ ಘಟಕವಾಗಿದೆ. ಭಾರತದ ರಾಷ್ಟ್ರಪತಿಯವರ ಕಚೇರಿ, "ರಾಜ್ಯಸಭಾ" ಎಂದು ಕರೆಯಲ್ಪಡುವ ರಾಜ್ಯಗಳ ಪರಿಷತ್ತು ಆಗಿರುವ ಒಂದು ಮೇಲ್ಮನೆ, ಮತ್ತು "ಲೋಕಸಭಾ" ಎಂದು ಕರೆಯಲ್ಪಡುವ ಪ್ರಜಾಪ್ರತಿನಿಧಿಗಳ ಸಭೆಯಾಗಿರುವ ಒಂದು ಕೆಳಮನೆಯನ್ನು ಇದು ಒಳಗೊಂಡಿದೆ.

www.karunaduexams.com

154. ಈ ಕೆಳಗಿನ ಯಾವ ಕ್ರೀಡಾಂಗಣದಲ್ಲಿ ಭಾರತ ಕ್ರಿಕೆಟ್ ತಂಡ ತನ್ನ 500ನೇ ಟೆಸ್ಟ್ ಪಂದ್ಯವನ್ನು ಆಡಲಿದೆ?

ಅ) ಗ್ರೀನ್ ಪಾರ್ಕ್ ಸ್ಟೇಡಿಯಂ, ಕಾನ್ಪುರ

ಆ) ಫಿರೋಜ್ ಷಾ ಕೋಟ್ಲಾ, ದೆಹಲಿ

ಇ) ಈಡನ್ ಗಾರ್ಡನ್, ಕೊಲ್ಕತ್ತ

ಈ) ಸರ್ದಾರ್ ಪಟೇಲ್, ಅಹಮದಬಾದ್

ಗ್ರೀನ್ ಪಾರ್ಕ್ ಸ್ಟೇಡಿಯಂ, ಕಾನ್ಪುರ

ಭಾರತ ಕ್ರಿಕೆಟ್ ತಂಡಕ್ಕೆ ಸೆಪ್ಟಂಬರ್ 22 ಮಹತ್ವದ ದಿನವಾಗಿದ್ದು, ಅಂದು ಕಾನ್ಪುರದ ಗ್ರೀನ್ ಪಾರ್ಕ್ ಸ್ಟೇಡಿಯಂನಲ್ಲಿ ಆರಂಭವಾಗಲಿರುವ ನ್ಯೂಜಿಲೆಂಡ್ ವಿರುದ್ಧದ ಟೆಸ್ಟ್ ಪಂದ್ಯ ಭಾರತದ 500 ನೇ ಟೆಸ್ಟ್ ಪಂದ್ಯವಾಗಿದೆ. ಭಾರತ ಟೆಸ್ಟ್ ನಲ್ಲಿ 499 ಪಂದ್ಯಗಳನ್ನು ಆಡಿದ್ದು, 129 ಪಂದ್ಯಗಳಲ್ಲಿ ಗೆಲುವು ಸಾಧಿಸಿದೆ. 157 ಪಂದ್ಯಗಳನ್ನು ಸೋತಿದೆ. 212 ಪಂದ್ಯಗಳು ಡ್ರಾ ಆಗಿದ್ದರೆ, 1 ಪಂದ್ಯ ಟೈ ಆಗಿದೆ. 976 ಪಂದ್ಯಗಳನ್ನಾಡುವ ಮೂಲಕ ಅಇ ಹೆಚ್ಚು ಟೆಸ್ಟ್ ಪಂದ್ಯವಾಡಿ ಇಂಗ್ಲೆಂಡ್ ಮೊದಲ ಸ್ಥಾನದಲ್ಲಿದೆ. ಆಸ್ಟ್ರೇಲಿಯಾ 791 ಹಾಗೂ ವೆಸ್ಟ್ ಇಂಡೀಸ್ 517 ಟೆಸ್ಟ್ ಪಂದ್ಯಗಳನ್ನಾಡುವ ಮೂಲಕ ಕ್ರಮವಾಗಿ 2 ಹಾಗೂ 3 ನೇ ಸ್ಥಾನದಲ್ಲಿವೆ

155. ಕುಲಾಂತರಿ ತಳಿ ಅಭಿವೃದ್ದಿಯಲ್ಲಿ ಮುಂಚೂಣಿಯಲ್ಲಿದ್ದ ಜೈವಿಕ ತಂತ್ರಜ್ಞಾನ ಸಂಸ್ಥೆ ಮಾನ್ಸಾಂಟೊವನ್ನು ಯಾವ ಸಂಸ್ಥೆ ಇತ್ತೀಚೆಗೆ ಖರೀದಿಸಿದೆ?

ಅ) ಮಹೀಂದ್ರ ಅಂಡ್ ಮಹೀಂದ್ರ

ಆ) ಬೇಯರ್

ಇ) ಮೈಕೊ

ಈ) ಪಯನಿಯರ್

ಬೇಯರ್

ವಿಶ್ವದ ಪ್ರಸಿದ್ಧ ಜೈವಿಕ ತಂತ್ರಜ್ಞಾನ ಸಂಸ್ಥೆಗಳಲ್ಲಿ ಒಂದಾದ ಮಾನ್ಸಾಂಟೊವನ್ನು ಜರ್ಮನಿಯ ರಾಸಾಯನಿಕ ಮತ್ತು ಔಷಧ ತಯಾರಿಕಾ ದೈತ್ಯ ಸಂಸ್ಥೆ ಬೇಯರ್ ಸ್ವಾಧೀನಪಡಿಸಿಕೊಂಡಿದೆ. ಅಂದಾಜು ರೂ 4.42 ಲಕ್ಷ ಕೋಟಿಗಳಷ್ಟು ಮೊತ್ತದ ಸಂಪೂರ್ಣ ನಗದು ರೂಪದಲ್ಲಿನ ಈ ಸ್ವಾಧೀನ ಪ್ರಕ್ರಿಯೆಯು ಅತಿದೊಡ್ಡ ವಹಿವಾಟು ಆಗಿದೆ. ಬೇಯರ್, ಮಾನ್ಸೊಂಟೊದ ಪ್ರತಿ ಷೇರನ್ನು ತಲಾ ರೂ 8,576 ದರದಲ್ಲಿ ಖರೀದಿಸಿದೆ. ಎರಡೂ ಸಂಸ್ಥೆಗಳ ಆಡಳಿತ ಮಂಡಳಿಗಳು ವಿಲೀನ ಪ್ರಕ್ರಿಯೆಯನ್ನು ಅನುಮೋದಿಸಿವೆ. ಈ ಪ್ರಕ್ರಿಯೆ 2017ರ ಅಂತ್ಯಕ್ಕೆ ಪೂರ್ಣಗೊಳ್ಳಲಿದೆ ಎಂದು ನಿರೀಕ್ಷಿಸಲಾಗಿದೆ. ವಿಲೀನದ ನಂತರ ವಿಶ್ವದ ಅತಿದೊಡ್ಡ ಬೀಜ ಮತ್ತು ಕೀಟನಾಶಕ ಸಂಸ್ಥೆ ಅಸ್ತಿತ್ವಕ್ಕೆ ಬರಲಿದೆ. ಅಮೆರಿಕದ ಮಾನ್ಸಾಂಟೊ, ಹತ್ತು ವರ್ಷಗಳಿಂದ ದೇಶದಲ್ಲಿ ಕುಲಾಂತರಿ ಹತ್ತಿ ಬೀಜಗಳ ವಹಿವಾಟು ನಡೆಸುತ್ತಿದೆ.

www.karunaduexams.com

156. ಇತ್ತೀಚೆಗೆ ಸುದ್ದಿಯಲ್ಲಿದ್ದ ಚೀನಾದ “ಟಿಯಾಂಗಾಂಗ್-2” ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ?

ಅ) ಹವಾಮಾನ ಕುರಿತ ಅಧ್ಯಯನಕ್ಕಾಗಿ ಚೀನಾದ ನೂತನ ಉಪಗ್ರಹ

ಆ) ಪ್ರಾಯೋಗಿಕ ಬಾಹ್ಯಕಾಶ ಕೇಂದ್ರ

ಇ) ವಿಶ್ವದ ಅತಿದೊಡ್ಡ ಜಲಂತರ್ಗಾಮಿ ನೌಕೆ

ಈ) ಅತ್ಯಾಧುನಿಕ ತಂತ್ರಜ್ಞಾನ ಹೊಂದಿರುವ ಕ್ಷಿಪಣಿ

ಪ್ರಾಯೋಗಿಕ ಬಾಹ್ಯಕಾಶ ಕೇಂದ್ರ

ಚೀನಾ ಇತ್ತೀಚೆಗೆ ಟಿಯಾಂಗಾಂಗ್-2 ಹೆಸರಿನ ಬಾಹ್ಯಾಕಾಶ ಕೇಂದ್ರ (Space Lab)ವನ್ನು ಯಶಸ್ವಿಯಾಗಿ ನೆರವೇರಿಸಿದೆ. ಗೋಬಿ ಮರುಭೂಮಿಯಲ್ಲಿರು ಜಿಯೊಕ್ವಾನ್ ಉಪಗ್ರಹ ಉಡಾವಣಾ ಕೇಂದ್ರದಿಂದ ಲಾಂಗ್ ಮಾರ್ಚ್-2ಎಫ್ ರಾಕೆಟ್ ಮೂಲಕ ಯಶಸ್ವಿಯಾಗಿ ಉಡಾಯಿಸಲಾಯಿತು. ಭೂಮಿಯಿಂದ 400 ಕಿ.ಮೀ ಎತ್ತರದ ಕಕ್ಷೆಯಲ್ಲಿ ಈ ಬಾಹ್ಯಕಾಶ ಕೇಂದ್ರ ಕಾರ್ಯನಿರ್ವಹಿಸಲಿದೆ. ಅಕ್ಟೋಬರ್ ತಿಂಗಳಲ್ಲಿ ಇಬ್ಬರು ವಿಜ್ಞಾನಿಗಳನ್ನು ಈ ಕೇಂದ್ರಕ್ಕೆ ಕಳುಹಿಸಲು ಚೀನಾ ಸಿದ್ದತೆ ನಡೆಸಿದ್ದು, ವಿವಿಧ ಸಂಸೋಧನೆಯಲ್ಲಿ ತೊಡಗಲಿದ್ದಾರೆ.

157. ಅಂತಾರಾಷ್ಟ್ರೀಯ ಕ್ರಿಕೆಟ್ಗೆ ವಿದಾಯ ಹೇಳಿದ ನರೇಶ್ ಸರವಣ್ ಯಾವ ದೇಶದವರು?

ಅ) ದಕ್ಷಿಣ ಆಫ್ರಿಕಾ

ಆ) ವೆಸ್ಟ್ ಇಂಡೀಸ್

ಇ) ಬಾಂಗ್ಲದೇಶ

ಈ) ಶ್ರೀಲಂಕಾ

ವೆಸ್ಟ್ ಇಂಡೀಸ್ ನ ಮಧ್ಯಮ ಕ್ರಮಾಂಕ ಬ್ಯಾಟ್ಸ್ ಮನ್ ರಾಮ್ ನರೇಶ್ ಸರವಣ್ ಅವರು ಅಂತಾರಾಷ್ಟ್ರೀಯ ಕ್ರಿಕೆಟಿಗೆ ವಿದಾಯ ಹೇಳಿದ್ದಾರೆ. 36 ವರ್ಷ ವಯಸ್ಸಿನ ಸರವಣ್ 2013ರಿಂದ ಯಾವುದೇ ಪಂದ್ಯಗಳಲ್ಲಿ ಆಡಿರಲಿಲ್ಲ. 2000ರಲ್ಲಿ ಪಾಕಿಸ್ತಾನ ವಿರುದ್ಧದಲ್ಲಿ ಬಾರ್ಬಡೋಸ್ ನಲ್ಲಿ ಟೆಸ್ಟ್ ಪಂದ್ಯಕ್ಕೆ ಪದಾರ್ಪಣೆ ಮಾಡಿದ್ದ ಸರವಣ್ ಅವರಿಗೆ ವೆಸ್ಟ್ ಇಂಡೀಸ್ ನ ದಿಗ್ಗಜ ಬ್ರಿಯನ್ ಲಾರಾ ಅವರ ನಿವೃತ್ತಿಯ ನಂತರ 3ನೇ ಕ್ರಮಾಂಕದಲ್ಲಿ ಆಡುವ ಅವಕಾಶ ಸಿಕ್ಕಿತ್ತು. ಒಟ್ಟಾರೆ 87 ಟೆಸ್ಟ್ ಪಂದ್ಯಗಳು, 181 ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯ, 18 ಟ್ವೆಂಟಿ20ಗಳನ್ನು ಆಡಿ ಒಟ್ಟು 11,994 ಅಂತಾರಾಷ್ಟ್ರೀಯ ರನ್ ಕಲೆ ಹಾಕಿದ್ದಾರೆ. 2009ರಲ್ಲಿ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಪಂದ್ಯದಲ್ಲಿ ರಾಮ್ನರೇಶ್ 291 ರನ್ಗಳಿಸಿದ್ದು ವೈಯಕ್ತಿಕ ಗರಿಷ್ಠ ಮೊತ್ತವಾಗಿದೆ. ನಾಯಕರಾಗಿ ರಾಮ್ನರೇಶ್ 5 ಏಕದಿನ, 4 ಟೆಸ್ಟ್ ಮತ್ತು 2 ಟಿ20 ಪಂದ್ಯಗಳಲ್ಲಿ ಕಾಣಿಸಿಕೊಂಡಿದ್ದರು. ಐಪಿಎಲ್ ನಲ್ಲಿ ಕೇವಲ 4 ಪಂದ್ಯಗಳನ್ನಾಡಿದ್ದರು. ಪಾರ್ಟ್ ಟೈಮ್ ಲೆಗ್ ಸ್ಪಿನ್ ಬೌಲರ್ ಆಗಿದ್ದ ಸರವಣ್ ಏಕದಿನದಲ್ಲಿ 16, ಟೆಸ್ಟ್ ನಲ್ಲಿ 23 ಹಾಗೂ ಟಿ20ಯಲ್ಲಿ 2 ವಿಕೆಟ್ ಪಡೆದಿದ್ದಾರೆ.

www.karunaduexams.com

158. ಕರ್ಕಾಟಕ ಸಂಕ್ರಾಂತಿ ವೃತ್ತ (Tropic of Cancer) ಈ ಕೆಳಗಿನ ಯಾವ ರಾಜ್ಯದ ಮೂಲಕ ಹಾದು ಹೋಗುವುದಿಲ್ಲ?

ಅ) ಗುಜರಾತ್

ಆ) ಪಶ್ಚಿಮ ಬಂಗಾಳ

ಇ) ಮಣಿಪುರ

ಈ) ಜಾರ್ಖಂಡ್

ಮಣಿಪುರ

ಕರ್ಕಾಟಕ ಸಂಕ್ರಾಂತಿ ವೃತ್ತ ಭಾರತವನ್ನು ಎರಡು ಭಾಗವಾಗಿ ವಿಭಜಿಸಿದೆ. ಇದು ಭಾರತದ ಎಂಟು ರಾಜ್ಯಗಳಲ್ಲಿ ಹಾದು ಹೋಗುತ್ತದೆ. ಅವುಗಳೆಂದರೆ ಗುಜರಾತ್, ರಾಜಸ್ಥಾನ, ಮಧ್ಯಪ್ರದೇಶ, ಜಾರ್ಖಂಡ್, ಪಶ್ಚಿಮ ಬಂಗಾಳ, ತ್ರಿಪುರ ಚತ್ತೀಸ್ ಘರ್ ಮತ್ತು ಮಿಜೋರಂ

159. ವಯೋವೃದ್ದರು ಮತ್ತು ವಿಕಲಚೇತನ ಪ್ರಯಾಣಿಕರ ಅನುಕೂಲಕ್ಕಾಗಿ ಭಾರತೀಯ ರೈಲ್ವೆ ಯಾವ ಸೇವೆಯನ್ನು ಇತ್ತೀಚೆಗೆ ಆರಂಭಿಸಿದೆ?

ಅ) ರೈಲು ಮಿತ್ರ

ಆ) ಯಾತ್ರಿ ಮಿತ್ರ

ಇ) ಪ್ರಯಾಣ್ ಸಾಥಿ

ಈ) ಸುಲಭ್ ಯಾತ್ರಿ

ಯಾತ್ರಿ ಮಿತ್ರ

ರೈಲು ಪ್ರಯಾಣವನ್ನು ಮತ್ತಷ್ಟು ಸ್ನೇಹಮಯಗೊಳಿಸುವ ಸಲುವಾಗಿ ಭಾರತೀಯ ರೈಲ್ವೆ "ಯಾತ್ರಿ ಮಿತ್ರ" ಹೆಸರಿನ ಹೊಸ ಸೇವೆಯನ್ನು ಆರಂಭಿಸಿದೆ. ಈ ಸೇವೆಯನ್ನು ವಿಶೇಷವಾಗಿ ವಯೋವೃದ್ದರು, ವಿಕಲಚೇತನರು ಮತ್ತು ರೋಗಗ್ರಸ್ಥ ಪ್ರಯಾಣಿಕರ ಅನುಕೂಲಕ್ಕಾಗಿ ಆರಂಭಿಸಲಾಗಿದೆ. ಈ ಸೇವೆಯಡಿ ವೃದ್ದ ಮತ್ತು ವಿಕಲಚೇತನರು ವೀಲ್ ಚೇರ್ ಮತ್ತು ಬ್ಯಾಟರಿ ಚಾಲಿತ ಕಾರುಗಳ ಬಳಕೆಯನ್ನು ಸುಲಭವಾಗಿಸಲಾಗುವುದು. ಪ್ರಮುಖ ರೈಲ್ವೆ ನಿಲ್ದಾಣಗಳಲ್ಲಿ ಈ ಸೇವೆ ಲಭ್ಯವಿರಲಿದೆ. ಇದರಡಿ ಸೇವೆಯನ್ನು ಒದಗಿಸುವ ಸಲುವಾಗಿ ರೈಲು ಮಿತ್ರರರನ್ನು ನೇಮಕಮಾಡಲಾಗುವುದು.

160. ಇತ್ತೀಚೆಗೆ ರಿಲಯನ್ಸ್ ಕಮ್ಯೂನಿಕೇಷನ್ ಮತ್ತು ಈ ಕೆಳಗಿನ ಯಾವ ಸಂಸ್ಥೆ ತಮ್ಮ ವೈರ್ಲೆಸ್ ವಹಿವಾಟನ್ನು ವಿಲೀನಗೊಳಿಸಲು ನಿರ್ಧರಿಸಿವೆ?

ಅ) ಯೂನಿನಾರ್

ಆ) ಏರ್ ಸೆಲ್

ಇ) ಎಂಟಿಎಸ್

www.karunaduexams.com

ಈ) ಟಾಟಾ ಡೊಕೊಮೊ

ಏರ್ ಸೆಲ್

ಅನಿಲ್ ಅಂಬಾನಿ ಒಡೆತನದ ರಿಲಯನ್ಸ್ ಕಮ್ಯುನಿಕೇಷನ್ಸ್ (ಆರ್ಕಾಂ) ಮತ್ತು ಏರ್ಸೆಲ್ ತಮ್ಮ ವೈರ್ಲೆಸ್ ವಹಿವಾಟನ್ನು ಪರಸ್ಪರ ವಿಲೀನಗೊಳಿಸಲುನಿರ್ಧರಿಸಿವೆ. ಏರ್ಸೆಲ್ನ ಪ್ರವರ್ತಕ ಸಂಸ್ಥೆಯಾಗಿರುವ ಮ್ಯಾಕ್ಸಿಸ್ ಕಮ್ಯುನಿಕೇಷನ್ಸ್ ಬೆರ್ಹಾಡ್ (ಎಂಸಿಬಿ) ಮತ್ತು ಆರ್ಕಾಂ, ವಿಲೀನದ ನಂತರ ಅಸ್ತಿತ್ವಕ್ಕೆ ಬರಲಿರುವ ಹೊಸ ಸಂಸ್ಥೆಯಲ್ಲಿ ತಲಾ ಶೇ 50ರಷ್ಟು ಪಾಲು ಬಂಡವಾಳ ಹೊಂದಿರಲಿವೆ. ಆಡಳಿತ ಮಂಡಳಿಯಲ್ಲಿ ಎರಡೂ ಸಂಸ್ಥೆಗಳಿಗೆ ಸಮಾನ ಪ್ರಾತಿನಿಧ್ಯ ಇರಲಿದೆ. ದೇಶಿ ದೂರಸಂಪರ್ಕ ವಲಯದಲ್ಲಿನ ಅತಿದೊಡ್ಡ ವಿಲೀನ ಇದಾಗಿದ್ದು, ಜಂಟಿ ಸಂಸ್ಥೆಯ ಒಟ್ಟು ಆಸ್ತಿ ಮೌಲ್ಯವು ರೂ 65 ಸಾವಿರಕೋಟಿಗಳಷ್ಟಾಗಲಿದೆ.

161. ಈ ಕೆಳಗಿನ ಯಾವ ನಗರದಲ್ಲಿ ಭಾರತದ ಸಾಂಸ್ಕೃತಿಕ ಉತ್ಸವ "ನಮಸ್ತೆ ಫ್ರಾನ್ಸ್" ಆರಂಭಗೊಂಡಿತು?

ಅ) ಪ್ಯಾರಿಸ್

ಆ) ನವದೆಹಲಿ

ಇ) ಲಿಯಾನ್

ಈ) ಮುಂಬೈ

ಪ್ಯಾರಿಸ್

ಭಾರತದ ಸಾಂಸ್ಕೃತಿಕ ಉತ್ಸವ "ನಮಸ್ತೆ ಫ್ರಾನ್ಸ್" ಪ್ಯಾರಿಸ್ ನಲ್ಲಿ ಆರಂಭಗೊಂಡಿದೆ. ಎರಡುವರೆ ತಿಂಗಳ ಕಾಲ ನಡೆಯುವ ಈ ಉತ್ಸವದಲ್ಲಿ ಭಾರತದ ಸಂಪ್ರಾದಾಯಿಕ ಕಲೆ, ಸಂಗೀತ, ನೃತ್ಯ, ಸಾಹಿತ್ಯ ಮತ್ತು ಸಿನಿಮಾವನ್ನು ಪ್ರದರ್ಶಿಸಲಾಗುವುದು. ಸೆಪ್ಟೆಂಬರ್ 15 ರಿಂದ ನವೆಂಬರ್ 30 ರವರೆಗೆ ಈ ಉತ್ಸವ ಫ್ರಾನ್ಸ್ನ ವಿವಿಧ ನಗರಗಳಲ್ಲಿ ನಡೆಯಲಿದೆ. ಭಾರತ ಮತ್ತು ಫ್ರಾನ್ಸ್ ನಡುವೆ ಸಂಸ್ಕೃತಿ ವಿನಿಮಯಕ್ಕೆ ಈ ಉತ್ಸವ ವೇದಿಕೆಯಾಗಲಿದೆ.

162. ಮೊದಲ "ವಿಶ್ವ ಕಿವುಡರ ಶೂಟಿಂಗ್ ಚಾಂಪಿಯನ್ ಷಿಪ್ (Worlds Deaf Shooting Championship)" ಯಾವ ದೇಶದಲ್ಲಿ ನಡೆಯಿತು?

ಅ) ಭಾರತ

ಆ) ರಷ್ಯಾ

ಇ) ಚೀನಾ

ಈ) ಜಪಾನ್

ರಷ್ಯಾ

ಮೊದಲ "ವಿಶ್ವ ಕಿವುಡರ ಶೂಟಿಂಗ್ ಚಾಂಪಿಯನ್ ಷಿಪ್" ರಷ್ಯಾದ ಕಝುನ್ ಅಲ್ಲಿ ಸೆಪ್ಟೆಂಬರ್ 7 ರಿಂದ 17 ವರೆಗೆ ನಡೆಯಿತು. ಭಾರತದ ಶೂಟರ್ ಪ್ರಿಯೇಷ್ ದೇಶಮುಖ್ ಅವರು ಈ ಸ್ಪರ್ಧೆಯಲ್ಲಿ ಮೂರನೇ ಸ್ಥಾನ ಪಡೆದು ಕಂಚು



www.karunaduexams.com

ಗೆದ್ದುಕೊಂಡರು. ಉಕ್ರೇನ್ ನ ಸ್ವಿಟ್ಲಾನ ಯಾಟ್ಸೆಂಕೊ ಪ್ರಥಮ ಸ್ಥಾನ ಮತ್ತು ಸೆರ್ಬಿಯಾದ ಗೊರ್ಡನಾ ಮಿಕೊವಿಕ್ ಎರಡನೇ ಸ್ಥಾನವನ್ನು ಗಳಿಸಿದರು.

163. 2016 ವಿಶ್ವ ಆರ್ಥಿಕ ಸ್ವಾತಂತ್ರ್ಯ ಸೂಚ್ಯಂಕ (World Economic Freedom Index)ದಲ್ಲಿ ಭಾರತ ಎಷ್ಟನೇ ಸ್ಥಾನವನ್ನು ಪಡೆದುಕೊಂಡಿದೆ?

ಅ) 96

ಆ) 110

ಇ) 112

ಈ) 121

112

2016 ವಿಶ್ವ ಆರ್ಥಿಕ ಸ್ವಾತಂತ್ರ್ಯ ಸೂಚ್ಯಂಕದಲ್ಲಿ ಭಾರತ 112 ನೆ ಸ್ಥಾನ ಪಡೆದುಕೊಂಡಿದೆ. 159 ದೇಶಗಳ ಪಟ್ಟಿಯಲ್ಲಿ ಭಾರತ 10 ಸ್ಥಾನ ಕೆಳಗೆ ಇಳಿದಿದೆ. ಆರ್ಥಿಕ ಸ್ವಾತಂತ್ರ್ಯ ವಿಷಯದಲ್ಲಿ ಹಾಂಕಾಂಗ್ ಮೊದಲ ಸ್ಥಾನದಲ್ಲಿದ್ದು, ಸಿಂಗಪುರ, ನ್ಯೂಜಿಲೆಂಡ್, ಸ್ವಿಟ್ಜರ್ಲೆಂಡ್, ಕೆನಡಾ, ಮಾರಿಷಸ್, ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ನಂತರದ ಸ್ಥಾನದಲ್ಲಿ ಇವೆ. ಕಾನೂನು ವ್ಯವಸ್ಥೆ, ನಿಯಂತ್ರಣವೂ ಸೇರಿದಂತೆ ಹಲವಾರು ವಿಭಾಗಗಳಲ್ಲಿ ಭಾರತದ ಸಾಧನೆ ಕಳಪೆಯಾಗಿದೆ ಎಂದು ಆರ್ಥಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ವಾರ್ಷಿಕ ವರದಿ 2016ರಲ್ಲಿ ಹೇಳಲಾಗಿದೆ. ಕಾನೂನು ವ್ಯವಸ್ಥೆ ಮತ್ತು ಆಸ್ತಿ ಹಕ್ಕು (86ನೇ ಸ್ಥಾನ), ಕರೆನ್ಸಿಯ ಸ್ಥಿರ ಮೌಲ್ಯ (136ನೇ ಸ್ಥಾನ), ಅಂತರರಾಷ್ಟ್ರೀಯ ವ್ಯಾಪಾರದ ಸ್ವಾತಂತ್ರ್ಯ (144ನೇ ಸ್ಥಾನ)ಮತ್ತು ನಿಯಂತ್ರಣ ವಿಷಯಗಳಲ್ಲಿ 132 ನೇ ಸ್ಥಾನವನ್ನು ಭಾರತದ ಪಡೆದುಕೊಂಡು ಕಳಪೆ ಸಾಧನೆ ಕಳಪೆ ಸಾಧನೆ ಮಾಡಿದೆ. ವೆನೆಜುವೆಲಾ ಪಟ್ಟಿಯಲ್ಲಿ ಕೊನೆಯ ಸ್ಥಾನವನ್ನು ಪಡೆದುಕೊಂಡಿದೆ.

164. ವಿಶ್ವ ಸಂಸ್ಥೆಯ ಮಾನವ ಕಳ್ಳಸಾಗಣಿಕೆ ವಿರುದ್ದ ಅಭಿಯಾನಕ್ಕೆ ಈ ಕೆಳಗಿನ ಯಾರನ್ನು ಸದ್ಭಾವನಾ ರಾಯಭಾರಿಯನ್ನಾಗಿ ನೇಮಕಮಾಡಲಾಗಿದೆ?

ಅ) ನಾದಿಯಾ ಮುರಾದ್ ಬಸಿ

ಆ) ಮಲಾಲ ಯೂಸೆಫ್

ಇ) ಬಸಿಯಾ ಸುಲ್ತಾನ್

ಈ) ನಿರಾಣಿ ಮುಕ್ತಯಾರ್

ನಾದಿಯಾ ಮುರಾದ್ ಬಸಿ

ಐಎಸ್ಐಎಸ್ ಭಯೋತ್ಪಾದಕರ ಲೈಂಗಿಕ ಗುಲಾಮಕ್ಕೆ ಬಲಿಯಾಗಿ ಬದುಕುಳಿದಿರುವ ಇರಾಕ್ ನ ಯಾಜಿದಿ ಜನಾಂಗಕ್ಕೆ ಸೇರಿದ ನಾದಿಯಾ ಮುರಾದ್  ಬಸಿ ಅವರನ್ನು ವಿಶ್ವ ಸಂಸ್ಥೆಯ ಮಾನವ ಕಳ್ಳಸಾಗಣಿಕೆ ವಿರುದ್ದ ಅಭಿಯಾನಕ್ಕೆ ರಾಯಭಾರಿಯನ್ನಾಗಿ ನೇಮಕ ಮಾಡಲಾಗಿದೆ. ಇಪ್ಪತ್ಮೂರು ವರ್ಷದ ನಾದಿಯಾ ಕೂಡ ಮಾನವ ಕಳ್ಳಸಾಗಣೆಯಿಂದ

ಬಚಾವಾದ ಹೆಣ್ಣುಮಗಳು. ಈ ರೀತಿ ಸಂತ್ರಸ್ತೆಯೊಬ್ಬಳಿಗೆ ಇಂಥ ಗೌರವ ಸಿಗುತ್ತಿರುವುದು ಸಹ ಇದೇ ಮೊದಲು. ನಾದಿಯಾ ಅವರು ಮಾನವ ಕಳ್ಳಸಾಗಣಿಕೆಯಲ್ಲಿ ಬದುಕುಳಿದವರ ಘನತೆ ಹೆಚ್ಚಿಸುವ ಕೆಲಸವನ್ನು ಅಭಿಯಾನದಲ್ಲಿ ಹಮ್ಮಿಕೊಳ್ಳಲ್ಲಿದ್ದಾರೆ.

165. ಇತ್ತೀಚೆಗೆ ಮುಕ್ತಾಯಗೊಂಡ "2016 ಟ್ರಾಕ್ ಏಷ್ಯಾ ಸೈಕ್ಲಿಂಗ್ ಕಪ್"ನ ಪದಕಗಳ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದ ದೇಶ ಯಾವುದು?

ಅ) ಹಾಂಕ್ ಕಾಂಗ್

ಆ) ಭಾರತ

ಇ) ಪಾಕಿಸ್ತಾನ

ಈ) ಜಪಾನ್

2016 ಟ್ರಾಕ್ ಏಷ್ಯಾ ಸೈಕ್ಲಿಂಗ್ ಕಪ್ ನಲ್ಲಿ ಹಾಂಕ್ ಕಾಂಗ್ 18 ಪದಕ (11 ಚಿನ್ನ, 4 ಬೆಳ್ಳಿ, 3 ಕಂಚು)ಗಳನ್ನು ಗೆಲ್ಲುವ ಮೂಲಕ ಪ್ರಥಮ ಸ್ಥಾನವನ್ನು ಪಡೆದುಕೊಂಡಿತು. ಭಾರತ ಐದು ಚಿನ್ನ, ನಾಲ್ಕು ಬೆಳ್ಳಿ ಮತ್ತು ಮೂರು ಕಂಚು ಗೆಲ್ಲುವ ಮೂಲಕ ಒಟ್ಟು 16 ಪದಕಗಳನ್ನು ಗೆದ್ದು ಎರಡನೇ ಸ್ಥಾನವನ್ನು ಪಡೆದುಕೊಂಡಿತು. ಈ ಬಾರಿಯ ಟ್ರಾಕ್ ಏಷ್ಯಾ ಸೈಕ್ಲಿಂಗ್ ಕಪ್ ಅನ್ನು ಭಾರತ ಆಯೋಜಿಸಿದ್ದು, ನವದೆಹಲಿಯಲ್ಲಿ ನಡೆಯಿತು.

166. ಯಾವ ಸಮಿತಿ ಇತ್ತೀಚೆಗೆ ದೇಶದಲ್ಲಿ ಬೇಳೆಕಾಳುಗಳ ಉತ್ಪಾದನೆ ಮತ್ತು ಬೆಲೆ ಏರಿಕೆ ತಡೆಯುವ ಸಲುವಾಗಿ ತನ್ನ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿತು?

ಅ) ಅರವಿಂದ್ ಪನಗರಿಯಾ ಸಮಿತಿ

ಆ) ರತ್ನಾಕರ್ ಕುಲಕರ್ಣಿ ಸಮಿತಿ

ಇ) ಅರವಿಂದ್ ಸುಬ್ರಮಣಿಯನ್ ಸಮಿತಿ

ಈ) ಈಶ್ವರ್ ಚಂದ್ರ ಸಮಿತಿ

ಅರವಿಂದ್ ಸುಬ್ರಮಣ್ಯಂ ಸಮಿತಿ

ಮುಖ್ಯ ಆರ್ಥಿಕ ಸಲಹೆಗಾರ ಅರವಿಂದ್ ಸುಬ್ರಮಣಿಯನ್ ಸಮಿತಿ ದೇಶದಲ್ಲಿ ಬೇಳೆಕಾಳುಗಳ ಉತ್ಪಾದನೆ ಮತ್ತು ಬೆಲೆ ಏರಿಕೆ ತಡೆಯುವ ಸಲುವಾಗಿ ತನ್ನ ಶಿಫಾರಸನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿತು. ಬೇಳೆಕಾಳುಗಳ ಉತ್ಪಾದನೆ ಹೆಚ್ಚಿಸಲು ಮತ್ತು ಬೆಲೆ ಏರಿಕೆ ತಡೆಯಲು ಕನಿಷ್ಠ ಬೆಂಬಲ ಬೆಲೆಯನ್ನು(ಎಂಎಸ್‌ಪಿ) ಪ್ರತಿಕ್ವಿಂಟಲ್‌ಗೆ ₹1 ಸಾವಿರದವರೆಗೆ ಹೆಚ್ಚಿಸುವುದೂ ಸೇರಿದಂತೆ ವ್ಯಾಪಕ ಸುಧಾರಣಾ ಕ್ರಮಗಳನ್ನು ಸಮಿತಿಯು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದೆ.ಉತ್ಪಾದನೆ ಹೆಚ್ಚಿಸಲು ರೈತರಿಗೆ ಉತ್ತೇಜನ ನೀಡಬೇಕು. ಇದಕ್ಕಾಗಿ ಕನಿಷ್ಠ ಬೆಂಬಲ ಬೆಲೆ ಏರಿಕೆ ಮಾಡಬೇಕಿದೆ. ಜತೆಗೆ ರಫ್ತು ನಿಷೇಧ ಮತ್ತು ದಾಸ್ತಾನು ಮಿತಿಯನ್ನು ಹಿಂದಕ್ಕೆ ಪಡೆಯಬೇಕು ಎಂದೂ ಸಮಿತಿಯು ತನ್ನ ಶಿಫಾರಸಿನಲ್ಲಿ ತಿಳಿಸಿದೆ.ತ್ವರಿತವಾಗಿ ಬೇಳೆಕಾಳುಗಳನ್ನು ಸಂಗ್ರಹಿಸಲು ಮತ್ತು ರೈತರಿಗೆ ಉತ್ಪಾದನಾ ಸಬ್ಸಿಡಿ ನೀಡಲು



www.karunaduexams.com

ಅನುಕೂಲವಾಗುವಂತೆ ಆಹಾರಧಾನ್ಯಗಳನ್ನು ಸಂಗ್ರಹಿಸುವ ಸಂಸ್ಥೆಗಳಿಗೆ ಹೆಚ್ಚುವರಿಯಾಗಿ ₹10 ಸಾವಿರ ಕೋಟಿ ನೀಡುವಂತೆಯೂ ಸಮಿತಿ ಸಲಹೆ ನೀಡಿದೆ.'

167. ಅಂತಾರಾಷ್ಟ್ರೀಯ ಕರಾವಳಿ ಸ್ವಚ್ಛದಿನ (Coastal Clean Up Day)ವನ್ನು ಯಾವ ದಿನದಂದು ಆಚರಿಸಲಾಗುತ್ತದೆ?

ಅ) ಸೆಪ್ಟೆಂಬರ್ 14

ಆ) ಸೆಪ್ಟೆಂಬರ್ 17

ಇ) ಸೆಪ್ಟೆಂಬರ್ 16

ಈ) ಸೆಪ್ಟೆಂಬರ್ 19

ಸೆಪ್ಟೆಂಬರ್ 17

ಅಂತಾರಾಷ್ಟ್ರೀಯ ಕರಾವಳಿ ಸ್ವಚ್ಛದಿನವನ್ನು ಸೆಪ್ಟೆಂಬರ್ 17 ರಂದು ಆಚರಿಸಲಾಗುತ್ತದೆ. ಓಷಿಯನ್ ಕನ್ಸರ್ವೆನ್ಸಿ ಸಂಸ್ಥೆ ಅಂತಾರಾಷ್ಟ್ರೀಯ ಕರಾವಳಿ ದಿನವನ್ನು ಆಚರಿಸುತ್ತಿದ್ದು, ಈ ದಿನದಂದು ಸಮುದ್ರ ಸ್ವಚ್ಛತೆ ಬಗ್ಗೆ ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು.

168. ಈ ಕೆಳಗಿನ ಯಾರು "ಭಾರತೀಯ ಪ್ರಾಣಿ ದಯಾ ಮಂಡಳಿ"ಯ ರಾಯಭಾರಿಯಾಗಿ ನೇಮಕಗೊಂಡಿದ್ದಾರೆ?

ಅ) ಕತ್ರೀನಾ ಕೈಫ್

ಆ) ಸೌಂದರ್ಯ ರಜನಿಕಾಂತ್

ಇ) ವಿದ್ಯಾ ಬಾಲನ್

ಈ) ಶೃತಿ ಹಾಸನ್

ಸೌಂದರ್ಯ ರಜನಿಕಾಂತ್

ತಮಿಳು ಸೂಪರ್ ಸ್ಟಾರ್ ರಜನಿಕಾಂತ್ ಅವರ ಪುತ್ರಿ ಸೌಂದರ್ಯ ಅವರು ಭಾರತೀಯ ಪ್ರಾಣಿ ದಯಾ ಮಂಡಳಿಯ ರಾಯಭಾರಿಯಾಗಿ ಹಾಗೂ ಮಂಡಳಿಯ ಸಹ ಸದಸ್ಯರಾಗಿ ನೇಮಕಗೊಂಡಿದ್ದಾರೆ.ಸೌಂದರ್ಯ ಅವರು ಭಾರತೀಯ ಪ್ರಾಣಿ ದಯಾ ಮಂಡಳಿಯ ರಾಯಭಾರಿಯಾಗಿ ಸಿನಿಮಾಗಳಲ್ಲಿ ಬಳಸುವ ಪ್ರಾಣಿಗಳ ರಕ್ಷಣೆ ಬಗ್ಗೆ ಕಾಳಜಿ ವಹಿಸಲಿದ್ದಾರೆ. ಚೆನ್ನೈನಲ್ಲಿ ಮುಖ್ಯ ಕಚೇರಿಯನ್ನು ಹೊಂದಿರುವ ಭಾರತೀಯ ಪ್ರಾಣಿ ದಯಾ ಮಂಡಳಿ,ಪರಿಸರ ಮತ್ತು ಅರಣ್ಯ ಸಚಿವಾಲಯದಡಿ ಕಾರ್ಯನಿರ್ವಹಿಸುತ್ತದೆ.

www.karunaduexams.com

169. ಇತ್ತೀಚೆಗೆ ನಿಧನರಾದ “ಎಡ್ವರ್ಡ್ ಅಲ್ಬೀ” ರವರು ಯಾವ ಕ್ಷೇತ್ರದಲ್ಲಿ ಪ್ರಸಿದ್ಧಿ ಹೊಂದಿದ್ದರು?

ಅ) ಸಿನಿಮಾ

ಆ) ನಾಟಕಕಾರ

ಇ) ಕಲೆ

ಈ) ಪತ್ರಿಕೋದ್ಯಮ

ನಾಟಕಕಾರ

ಪುಲಿಟ್ಜರ್ ಪ್ರಶಸ್ತಿ ವಿಜೇತ ಅಮೆರಿಕಾದ ನಾಟಕಕಾರ “ಎಡ್ವರ್ಡ್ ಅಲ್ಬೀ” ನಿಧನರಾದರು. ಅಲ್ಬೀ ಅವರ “ವೂ ಅಫ್ರೆಡ್ ಆಫ್ ವರ್ಜಿನಿಯಾ ವೂಲ್ಫ್ಸ್(Who Afraid of Virginia Woolf's)” ಅವರಿಗೆ ಸಾಕಷ್ಟು ಮನ್ನಣೆ ತಂದು ಕೊಟ್ಟ ನಾಟಕವಾಗಿದೆ. ಎಡ್ವರ್ಡ್ ಅವರು ಮೂರು ಬಾರಿ ಪುಲಿಟ್ಜರ್ ಪ್ರಶಸ್ತಿಯನ್ನು ಪಡೆದುಕೊಂಡಿದ್ದರು.

170. “His Bloody Project” ಪುಸ್ತಕದ ಲೇಖಕರು_______?

ಅ) ಗ್ರಾಮೆ ಮಕ್ರೆ ಬರ್ನೆಟ್

ಆ) ವಿಲಿಯಂ ಜೋನ್ಸ್

ಇ) ಕಿರಣ್ ದೇಸಾಯಿ

ಈ) ಡೇವಿಡ್ ಫಿಲಿಫ್ಸ್

ಗ್ರಾಮೆ ಮಕ್ರೆ ಬರ್ನೆಟ್ (Gramae Macrae Burnet) “His Bloody Project” ಪ್ರಸ್ತಕದ ಲೇಖಕರು. His Bloody Project ಪುಸ್ತಕ 2016 ಮ್ಯಾನ್ ಬುಕರ್ ಸಾಹಿತ್ಯ ಪ್ರಶಸ್ತಿಗೆ ನಾಮನಿರ್ದೇಶನಗೊಂಡಿರುವ ಪುಸ್ತಕಗಳಲ್ಲಿ ಅಂತಿಮ ಪಟ್ಟಿಯಲ್ಲಿದ್ದು, ಪ್ರಶಸ್ತಿ ಪಡೆಯುವ ನಿರೀಕ್ಷೆ ಮೂಡಿಸಿದೆ.

171. ಬ್ಯಾಂಕಿಂಗ್ ಶಿಕ್ಷಣ ಪರಿಚಯಿಸುವ ಸಲುವಾಗಿ ಯಾವ ಬ್ಯಾಂಕ್ ಇತ್ತೀಚೆಗೆ “ಬನಾರಸ್ ಹಿಂದೂ ವಿಶ್ವವಿದ್ಯಾಲಯ ಜೊತೆ ಒಪ್ಪಂದಕ್ಕೆ ಸಹಿ ಹಾಕಿತು?

ಅ) ಭಾರತೀಯ ಸ್ಟೇಟ್ ಬ್ಯಾಂಕ್

ಆ) ಎಕ್ಸಿಸ್ ಬ್ಯಾಂಕ್

ಇ) ಐಸಿಐಸಿಐ ಬ್ಯಾಂಕ್

ಈ) ದೇನಾ ಬ್ಯಾಂಕ್

ಎಕ್ಸಿಸ್ ಬ್ಯಾಂಕ್

ದೇಶದ ಎರಡನೇ ಅತಿ ದೊಡ್ಡ ಖಾಸಗಿ ವಲಯ ಬ್ಯಾಂಕ್ ಆಗಿರುವ ಎಕ್ಸಿಸ್ ಬ್ಯಾಂಕ್ ವಿಶೇಷ ಬ್ಯಾಂಕಿಂಗ್ ಶಿಕ್ಷಣ ಪರಿಚಯಿಸುವ ಸಲುವಾಗಿ ಬನಾರಸ್ ಹಿಂದೂ ವಿಶ್ವವಿದ್ಯಾಲಯದೊಂದಿಗೆ ಒಪ್ಪಂದಕ್ಕೆ ಸಹಿಹಾಕಿದೆ. ಒಪ್ಪಂದದಂತೆ

ವಿಶ್ವವಿದ್ಯಾಲಯ ಮತ್ತು ಎಕ್ಸಿಸ್ ಬ್ಯಾಂಕ್ ಜೊತೆಯಾಗಿ ವಿಶೇಷ ಬ್ಯಾಂಕಿಂಗ್ ಕೋರ್ಸ್ ಅನ್ನು ವಿನ್ಯಾಸಗೊಳಿಸಲಿವೆ. ಅದರಂತೆ ಬ್ಯಾಂಕಿಂಗ್ ವಲಯಕ್ಕೆ ಸಂಬಂಧಿಸಿದ ವಿಶಿಷ್ಟ ಪದವಿಗಳನ್ನು ನೀಡಲಿವೆ.

172. ವೆನೆಜುವೆಲಾದನಲ್ಲಿ ನಡೆಯಲಿರುವ "2016 ಅಲಿಪ್ತ ಚಳುವಳಿ (NAM)" ಶೃಂಗಸಭೆಯಲ್ಲಿ ಭಾಗವಹಿಸಲಿರುವ ಭಾರತದ ನಿಯೋಗದ ಮುಂದಾಳತ್ವವನ್ನು ಯಾರು ವಹಿಸಲಿದ್ದಾರೆ?

ಅ) ಅರುಣ್ ಜೇಟ್ಲಿ

ಆ) ಹಮೀದ್ ಅನ್ಸಾರಿ

ಇ) ನರೇಂದ್ರ ಮೋದಿ

ಈ) ಜಾವೇದಕರ್

ಭಾರತದ ಉಪರಾಷ್ಟ್ರಪತಿ ಹಮೀದ್ ಅನ್ಸಾರಿ ಅವರು "2016 ಅಲಿಪ್ತ ಚಳುವಳಿ (NAM)" ಶೃಂಗಸಭೆಯಲ್ಲಿ ಭಾಗವಹಿಸಲಿರುವ ಭಾರತದ ನಿಯೋಗದ ಮುಂದಾಳತ್ವವನ್ನು ವಹಿಸಿದ್ದಾರೆ. 17ನೇ ಅಲಿಪ್ತ ಚಳುವಳಿ ವೆನೆಜುವೆಲಾದ ಮಾರ್ಗರಿಟ ದ್ವೀಪದಲ್ಲಿ ಸೆಪ್ಟೆಂಬರ್ 17 ರಿಂದ ಆರಂಭಗೊಂಡಿದೆ. ಭಾರತ ಅಲಿಪ್ತ ಚಳುವಳಿಯ ಸದಸ್ಯ ರಾಷ್ಟ್ರವಾಗಿದೆ.

173. 2016 ಅಂತಾರಾಷ್ಟ್ರೀಯ ಓಝೋನ್ ಪದರ ಸಂರಕ್ಷಣಾ ದಿನ (International Day for the Preservation of the Ozone Layer)ದ ಧ್ಯೇಯವಾಕ್ಯ ______?

ಅ) Ozone and climate: restored by a world united

ಆ) Come together to preserve Ozone

ಇ) No Ozone No Tomorrow

ಈ) Ozone: Let's preserve it

Ozone and climate: restored by a world united

ಅಂತಾರಾಷ್ಟ್ರೀಯ ಓಝೋನ್ ಪದರ ಸಂರಕ್ಷಣಾ ದಿನವನ್ನು ಪ್ರತಿ ವರ್ಷ ಸೆಪ್ಟೆಂಬರ್ 16 ರಂದು ಆಚರಿಸಲಾಗುತ್ತದೆ. 1987 ಸೆಪ್ಟೆಂಬರ್ 16 ರಂದು ಓಝೋನ್ ಪದರ ಸಂರಕ್ಷಣೆಗಾಗಿ ಮಾಂಟ್ರಿಯಲ್ ಪ್ರೊಟೊಕಾಲ್ ಅಂತಾರಾಷ್ಟ್ರೀಯ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಆಗಾಗಿ ಸೆಪ್ಟೆಂಬರ್ 16ರನ್ನು ಓಝೋನ್ ಪದರ ಸಂರಕ್ಷಣಾ ದಿನವನ್ನಾಗಿ ಆಚರಿಸಲಾಗುತ್ತಿದೆ.

www.karunaduexams.com

174. ಸ್ವಚ್ಛ ಭಾರತ ಅಭಿಯಾನದ ಸಂಕೇತ (Mascot)ವಾಗಿ ಈ ಕೆಳಗಿನ ಯಾರು ಆಯ್ಕೆಯಾಗಿದ್ದಾರೆ?

ಅ) ಕುನ್ವಾರ್ ಬಾಯಿ

ಆ) ಕಿಶೋರ್ ಸಿಂಗ್

ಇ) ಮಲ್ಲಮ್ಮ

ಈ) ಸಂದೀಪ್ ಚವ್ಹಾಣ್

ಸಾಕಿದ್ದ ಮೇಕೆಗಳನ್ನು ಮಾರಿ ಶೌಚಾಲಯ ನಿರ್ಮಿಸಿ ಸುದ್ದಿಯಲ್ಲಿದ್ದ ಕುನ್ವಾರ್ ಬಾಯಿ ಅವರನ್ನು ಸ್ವಚ್ಛ ಭಾರತ ಅಭಿಯಾನದ ಚಿನ್ಹೆಯಾಗಿ ಆಯ್ಕೆಮಾಡಲಾಗಿದೆ. ಅಲ್ಲದೇ, ಸ್ವಚ್ಛ ಭಾರತ ದಿವಸ್ (ಸೆಪ್ಟೆಂಬರ್ 17) ರಂದು ಪ್ರಧಾನಿ ಮೋದಿ ರವರು ಕುನ್ವರ್ ಬಾಯಿ ಅವರನ್ನು ಸನ್ಮಾನ ಮಾಡಲಿದ್ದಾರೆ.

175. ಈ ಕೆಳಗಿನ ಯಾರು "ಫೆಲೊಸ್ ಆಫ್ ನೇಚರ್ ದಕ್ಷಿಣ ಏಷ್ಯಾ ಸಣ್ಣ ಕಥೆ ಪ್ರಶಸ್ತಿ (Fellows of Nature (FON) South Asia Short Story)"ಗೆ ಭಾಜನರಾಗಿದ್ದಾರೆ?

ಅ) ರಸಿಕ್ ರವೀಂದ್ರ

ಆ) ಮೇಘನ ಪಂತ್

ಇ) ನಿರ್ಮಲ ಜ್ಯೋತಿ

ಈ) ಕಿಶೋರಿ ಚಂದ್ರ

ಮೇಘನ ಪಂತ್

ಮೇಘ್ನ ಪಂತ್ ಫೆಲೊಸ್ ಆಫ್ ನೇಚರ್ ದಕ್ಷಿಣ ಏಷ್ಯಾ ಸಣ್ಣ ಕಥೆ ಪ್ರಶಸ್ತಿಯನ್ನು ಗೆದ್ದುಕೊಂಡಿದ್ದಾರೆ. ಅವರು ಸಣ್ಣ ಕಥೆ "ಫೀಪಲ್ ಆಫ್ ದಿ ಸನ್" ಗೆ ಈ ಪ್ರಶಸ್ತಿ ದೊರೆತಿದೆ. ಅಕ್ಟೋಬರ್ 2016 ರಲ್ಲಿ ನಡೆಯಲಿರುವ ಕುಮೊನ್ ಸಾಹಿತ್ಯ ಸಮ್ಮೇಳನದಲ್ಲಿ ಪ್ರಶಸ್ತಿಯನ್ನು ನೀಡಲಾಗುವುದು.

176. ರಿಯೋ ಪ್ಯಾರಾಲಿಂಪಿಕ್ಸ್ ಮುಕ್ತಾಯ ಸಮಾರಂಭದಲ್ಲಿ ಭಾರತದ ಧ್ವಜ ಪಥ ಮುನ್ನೆಡಿಸಿದವರು ಯಾರು?

ಅ) ದೇವೇಂದ್ರ ಜಝಾರಿಯಾ

ಆ) ತಂಗವೇಲು ಮರಿಯಪ್ಪನ್

ಇ) ದೀಪಾ ಮಲಿಕ್

ಈ) ವರುಣ್ ಸಿಂಗ್ ಭಾಟಿ

ತಂಗವೇಲು ಮರಿಯಪ್ಪನ್

ರಿಯೋ ಪ್ಯಾರಾಲಿಂಪಿಕ್ಸ್ ಹೈಜಂಪ್ ವಿಭಾಗದಲ್ಲಿ ಚಿನ್ನ ಗೆದ್ದು ಭಾರತಕ್ಕೆ ಪದಕ ತಂದ ತಂಗವೇಲು ಮರಿಯಪ್ಪನ್ ಅವರು ರಿಯೋ ಪ್ಯಾರಾಲಿಂಪಿಕ್ಸ್ ಮುಕ್ತಾಯ ಸಮಾರಂಭದಲ್ಲಿ ಭಾರತದ ಧ್ವಜ ಪಥ ಮುನ್ನೆಡಿಸಿದರು.

www.karunaduexams.com

177. ಕ್ಷಿಪಣಿ ನಾಶಕ ಸಾಮರ್ಥ್ಯ ಹೊಂದಿರುವ ಅತ್ಯಾಧುನಿಕ ಯುದ್ದನೌಕೆ "ಐಎನ್‌ಎಸ್ ಮರ್ಮಗೋವಾ"ಗೆ ಎಲ್ಲಿ ಚಾಲನೆ ನೀಡಲಾಯಿತು?

ಅ) ಗೋವಾ

ಆ) ಮುಂಬೈ

ಇ) ಚೆನ್ನೈ

ಈ) ಕಾಂಡ್ಲ

ಮುಂಬೈ

ಸ್ವದೇಶಿ ತಂತ್ರಜ್ಞಾನ ನಿರ್ಮಿತ ಮರ್ಮಗೋವಾ ಯುದ್ದನೌಕೆ ಭಾರತೀಯ ನೌಕಪಡೆಗೆ ಸೇರ್ಪಡೆಯಾಗಿದೆ. ಅತ್ಯಾಧುನಿಕ ತಂತ್ರಜ್ಞಾನ ಮತ್ತು ಕ್ಷಿಪಣಿ ನಾಶಕ ಸಾಮರ್ಥ್ಯ ಹೊಂದಿರುವ ಈ ಹೊಸ ಯುದ್ಧನೌಕೆ ಮುಂಬೈನ ಮಝ್ ಗಾಂವ್ ಬಂದರಿನಲ್ಲಿ ಚಾಲನೆ ನೀಡಲಾಗಿದೆ. ಸಂಪೂರ್ಣವಾಗಿ ಸ್ವದೇಶಿಯಾಗಿ ನಿರ್ಮಾಣವಾಗುತ್ತಿರುವ ಈ ಯುದ್ಧನೌಕೆ ಅತ್ಯಂತ ಹೊಸ ತಂತ್ರಜ್ಞಾನವನ್ನು ಹೊಂದಿದೆ. 2015ರಲ್ಲಿ ಭಾರತೀಯ ನೌಕಪಡೆಗೆ ಐಎನ್ ಎಸ್ ವಿಶಾಖಪಟ್ಟಣಂ ಎಂಬ ಶತ್ರುಸಂಹಾರಕ ಯುದ್ಧನೌಕೆ ಸೇರ್ಪಡೆಯಾಗಿದ್ದರೆ, ಮರ್ಮಗೋವಾ ಭಾರತದಲ್ಲಿ ನಿರ್ಮಾಣವಾದ 2ನೇ ಕ್ಷಿಪಣಿ ನಾಶಕ ಯುದ್ಧನೌಕೆಯಾಗಿದೆ. ಒಟ್ಟು 29,700 ಕೋಟಿ ರೂಪಾಯಿ ವೆಚ್ಚದಲ್ಲಿ ನಾಲ್ಕು ನೂತನ ಯುದ್ಧನೌಕೆ ತಯಾರಾಗಲಿದೆ. ಮರ್ಮಗೋವಾ ಯುದ್ಧನೌಕೆ 7,300 ಟನ್ಸ್ ತೂಕ ಇದೆ. ಗಂಟೆಗೆ ಸುಮಾರು 56 ಕಿಲೋ ಮೀಟರ್ ವೇಗದಲ್ಲಿ ಚಲಿಸಲಿದ್ದು, ಕ್ಷಿಪಣಿ ನಾಶಕ ಸಾಮರ್ಥ್ಯ ಹೊಂದಿದೆ.

178. 2016 ವಿಶ್ವ ಆರ್ಥಿಕ ಸ್ವಾತಂತ್ರ್ಯ ಸೂಚ್ಯಂಕದಲ್ಲಿ ಈ ಕೆಳಗಿನ ದಕ್ಷಿಣ ಏಷ್ಯಾ ರಾಷ್ಟ್ರಗಳ ಪೈಕಿ ಪ್ರಥಮ ಸ್ಥಾನದಲ್ಲಿರುವ ರಾಷ್ಟ್ರ ಯಾವುದು?

ಅ) ಚೀನಾ

ಆ) ಭೂತಾನ್

ಇ) ನೇಪಾಳ

ಈ) ಶ್ರೀಲಂಕಾ

ಭೂತಾನ್

2016 ವಿಶ್ವ ಆರ್ಥಿಕ ಸ್ವಾತಂತ್ರ್ಯ ಸೂಚ್ಯಂಕ ಬಿಡುಗಡೆಗೊಂಡಿದ್ದು, 159 ದೇಶಗಳ ಪೈಕಿ ಭಾರತ 112ನೇ ಸ್ಥಾನವನ್ನು ಪಡೆದುಕೊಂಡಿದೆ. ಕಳೆದ ಸೂಚ್ಯಂಕಕ್ಕೆ ಹೋಲಿಸಿದರೆ ಭಾರತ 10 ಸ್ಥಾನಗಳ ಕುಸಿತಕಂಡಿದ್ದು, ಕಳಪೆ ಸಾಧನೆ ತೋರಿದೆ. ಸೂಚ್ಯಂಕದಲ್ಲಿ ಹಾಂಕಾಂಗ್ ಮೊದಲ ಸ್ಥಾನ ಪಡೆದುಕೊಂಡಿದೆ. ಸಿಂಗಪುರ, ನ್ಯೂಜಿಲೆಂಡ್, ಸ್ವಿಟ್ಜರ್ಲೆಂಡ್, ಕೆನಡಾ, ಮಾರಿಷಸ್, ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ನಂತರದ ಸ್ಥಾನದಲ್ಲಿ ಇವೆ. ಚೀನಾ (113), ಬಾಂಗ್ಲದೇಶ (121) ಪಾಕಿಸ್ತಾನ (133) ಭಾರತಕ್ಕಿಂತ ಪಟ್ಟಿಯಲ್ಲಿ ಹಿಂದೆ ಬಿದ್ದಿವೆ. ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿ ಭೂತಾನ್ 78ನೇ

www.karunaduexams.com

ಸ್ಥಾನಗಳಿಸುವ ಮೂಲಕ ಮುಂಚೂಣಿಯಲ್ಲಿದೆ. ನೇಪಾಳ 108 ನೇ ಸ್ಥಾನ ಮತ್ತು ಶ್ರೀಲಂಕಾ 111 ನೇ ಸ್ಥಾನಗಳಿಸುವ ಮೂಲಕ ಭಾರತಕ್ಕಿಂತ ಮುಂದಿವೆ.

179. ಅರುಣಾಚಲ ಪ್ರದೇಶದ ನೂತನ ರಾಜ್ಯಪಾಲರಾಗಿ ಯಾರು ಪ್ರಮಾಣ ವಚನ ಸ್ವೀಕರಿಸಿದರು?

ಅ) ಶಂಕರ ಮೂರ್ತಿ

ಆ) ವಿ ಷಣ್ಮುಗನಾಥಂ

ಇ) ಸೋಮಶೇಖರ್

ಈ) ರಾಮ್ ನಾಥ್ ಕೋವಿಂದ್

ವಿ ಷಣ್ಮುಗನಾಥಂ

ವಿ ಷಣ್ಮುಗನಾಥಂ ರವರು ಅರುಣಾಚಲ ಪ್ರದೇಶದ ನೂತನ ರಾಜ್ಯಪಾಲರಾಗಿ ಪ್ರಮಾಣ ವಚನ ಸ್ವೀಕರಿಸಿದರು. ವಿ ಷಣ್ಮುಗನಾಥಂ ಪ್ರಸ್ತುತ ಮೇಘಾಲಯದ ರಾಜ್ಯಪಾಲರಾಗಿದ್ದು, ಅರುಣಾಚಲ ಪ್ರದೇಶದ ರಾಜ್ಯಪಾಲರಾಗಿ ಹೆಚ್ಚುವರಿಯಾಗಿ ನಿಯೋಜಿಸಲಾಗಿದೆ.

180. ಇತ್ತೀಚೆಗೆ ಪರೀಕ್ಷಿಸಲಾದ ಅತ್ಯಾಧುನಿಕ ಭೂಮಿಯಿಂದ ಗಾಳಿಗೆ ಚಿಮ್ಮುವ ದೂರವ್ಯಾಪ್ತಿಯ "ಬಾರಕ್-8 ಕ್ಷಿಪಣಿ (Barak Missile)"ಯನ್ನು ಭಾರತ ಯಾವ ದೇಶದ ಸಹಾಯದೊಂದಿಗೆ ಅಭಿವೃದ್ಧಿಪಡಿಸಿದೆ?

ಅ) ರಷ್ಯಾ

ಆ) ಅಮೆರಿಕಾ

ಇ) ಇಸ್ರೇಲ್

ಈ) ಮೆಕ್ಸಿಕೊ

ಇಸ್ರೇಲ್

ಭಾರತ ಮತ್ತು ಇಸ್ರೇಲ್ ಜಂಟಿಯಾಗಿ ಅಭಿವೃದ್ಧಿಪಡಿಸಿರುವ ದೂರವ್ಯಾಪ್ತಿಯ "ಬಾರಕ್-8 ಕ್ಷಿಪಣಿ"ಯನ್ನು ಒಡಿಶಾದ ಬಾಲಸೋರ್ ನಲ್ಲಿ ಯಶಸ್ವಿಯಾಗಿ ಪರೀಕ್ಷಿಸಲಾಗಿದೆ. ಮುಂದಿನ ದಿನಗಳಲ್ಲಿ ಹಲವು ಹಂತಗಳ ಪರೀಕ್ಷೆಯನ್ನು ನಡೆಸಲಾಗುವುದುದಾಗಿ DRDO ತಿಳಿಸಿದೆ. ಕಳೆದ ಜೂನ್ ಮತ್ತು ಜುಲೈ ತಿಂಗಳಲ್ಲಿ ಮಧ್ಯಮ ಶ್ರೇಣಿಯ ಬಾರಕ್ ಕ್ಷಿಪಣಿಗಳ ಪರೀಕ್ಷೆಯನ್ನು ಕೈಗೊಳ್ಳಲಾಗಿತ್ತು.

www.karunaduexams.com

181. ಈ ಕೆಳಗಿನ ಯಾರು ಭಾರತೀಯ ಜೀವಾ ವಿಮಾ ನಿಗಮ (LIC)ದ ನೂತನ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ?

ಅ) ವಿ ಕೆ ಶರ್ಮಾ

ಆ) ಸುಪ್ರಿಯಾ ಚೌಧರಿ

ಇ) ಎಸ್.ಕೆ. ಮಾಥಯ್

ಈ) ಚರಣ್ ರಾಥೋಡ್

ವಿ ಕೆ ಶರ್ಮಾ

ಭಾರತೀಯ ಜೀವಾ ವಿಮಾ ನಿಗಮ (LIC)ದ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದ ವಿ ಕೆ ಶರ್ಮಾ ಅವರನ್ನು ನಿಗಮದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ಎಸ್.ಕೆ.ರಾಯ್ ಅವರಿಂದ ತೆರವಾಗಿದ್ದ ಸ್ಥಾನವನ್ನು ಶರ್ಮಾ ತುಂಬಲಿದ್ದಾರೆ. ಹರಣವೊಂದರಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಕಾರಣ ಎಸ್.ಕೆ. ಶರ್ಮಾ ಅವರ ವಿರುದ್ಧ ಪ್ರಕರಣ ದಾಖಲಾಗಿದ್ದು, ರಾಜೀನಾಮೆ ನೀಡಿದ್ದರು.

182. "ಡೆಮೋಕ್ರಾಟ್ಸ್ ಅಂಡ್ ಡಿಸೆಂಟರ್ಸ್ (Democrats and Dissenters)" ಪುಸ್ತಕದ ಲೇಖಕರು _____?

ಅ) ಶೇಖರ್ ಭಾಟಿಯಾ

ಆ) ರಾಮಚಂದ್ರ ಗುಹಾ

ಇ) ಮನೀಶ್ ಅಗರವಾಲ್

ಈ) ಸುರೇಶ್ ಸಿಸೋಡಿಯಾ

ರಾಮಚಂದ್ರ ಗುಹಾ

ಖ್ಯಾತ ಇತಿಹಾಸಗಾರ ರಾಮಚಂದ್ರ ಗುಹಾ ಅವರು "ಡೆಮೋಕ್ರಾಟ್ಸ್ ಅಂಡ್ ಡಿಸೆಂಟರ್ಸ್" ಪುಸ್ತಕದ ಲೇಖಕರು. ಪುಸ್ತವು ಹದಿನಾರು ಪ್ರಬಂಧಗಳನ್ನು ಒಳಗೊಂಡಿದ್ದು, ನೆರೆಹೊರೆ ದೇಶಗಳೊಂದಿಗೆ ಭಾರತದ ಸಂಬಂಧ, ಅಭಿವ್ಯಕ್ತಿ ಸ್ವಾಂತಂತ್ರ್ಯ ಮತ್ತು ಬುಡಕಟ್ಟು ಜನರ ಮೇಲಾಗುತ್ತಿರುವ ತಾರತಮ್ಯದ ಬಗ್ಗೆ ಪುಸ್ತಕದಲ್ಲಿ ಹೇಳಲಾಗಿದೆ.

183. "2016 ಸಿಂಗಾಪುರ ಗ್ರಾಂಡ್ ಪ್ರಿಕ್ಸ್ ಫಾರ್ಮುಲಾ-1" ರೇಸ್ ನಲ್ಲಿ ಪ್ರಶಸ್ತಿ ಗೆದ್ದವರು ಯಾರು?

ಅ) ನಿಕೊ ರೋಸ್ಬರ್ಗ್

ಆ) ಡೇನಿಯಲ್ ರಿಕಿಯಾರ್ಡೊ

ಇ) ಸೆಬೆಸ್ಟಿಯನ್ ವೆಟ್ಟಲ್

ಈ) ಲೆವಿಸ್ ಹ್ಯಾಮಿಲ್ಟನ್

ನಿಕೊ ರೋಸ್ಬರ್ಗ್

www.karunaduexams.com

ಮರ್ಸಿಡೀಸ್ನ ಜರ್ಮನಿಯ ಚಾಲಕ ನಿಕೊ ರೋಸ್ಬರ್ಗ್ ಅವರು 2016ರ ಸಿಂಗಪುರ ಗ್ರಾಂಡ್ ಪ್ರೀಯಲ್ಲಿ ವಿಜೇತರಾಗಿದ್ದಾರೆ. ಈ ರೇಸ್ನಲ್ಲಿ ಗೆಲ್ಲುವ ಮೂಲಕ ಫಾರ್ಮ್ಯೂಲಾ ಒನ್ ವಿಶ್ವ ಚಾಂಪಿಯನ್ ಶಿಪ್ ನಲ್ಲಿ ಅಗ್ರಸ್ಥಾನಕ್ಕೇರಿದ್ದಾರೆ. ತಮ್ಮದೇ ತಂಡದ ಲೂಯಿಸ್ ಹ್ಯಾಮಿಲ್ಟನ್ ಅವರನ್ನು ಎರಡನೇ ಸ್ಥಾನಕ್ಕೆ ದೂಡಿದ್ದಾರೆ. ಚಾಲಕರ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದ ಮರ್ಸಿಡಿಸ್ ನ ಹ್ಯಾಮಿಲ್ಟನ್ ಅವರು 8.038 ಸೆಕೆಂಡುಗಳು ತಡವಾಗಿ ಮೂರನೇ ಸ್ಥಾನದಲ್ಲಿ ರೇಸ್ ಮುಗಿಸಿದರು.

184. ಇತ್ತೀಚೆಗೆ ನಡೆದ ರಷ್ಯಾದ ಸಂಸತ್ತು ಚುನಾವಣೆಯಲ್ಲಿ ಗೆಲುವು ಸಾಧಿಸಿದ ಪಕ್ಷ ಯಾವುದು?

ಅ) ಯುನೈಟೆಡ್ ರಷ್ಯಾ ಪಕ್ಷ

ಆ) ಲಿಬರಲ್ ಡೆಮಾಕ್ರೆಟಿಕ್ ಪಕ್ಷ

ಇ) ಕಮ್ಯುನಿಷ್ಟ್ ಪಕ್ಷ

ಈ) ಜಸ್ಟ್ ರಷ್ಯಾ ಪಕ್ಷ

ಯುನೈಟೆಡ್ ರಷ್ಯಾ ಪಕ್ಷ

ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ನೇತೃತ್ವದ ಆಡಳಿತರೂಢ "ಯುನೈಟೆಡ್ ರಷ್ಯಾ ಪಕ್ಷ" ಗೆಲುವು ಸಾಧಿಸಿದ್ದು, ನಾಲ್ಕನೇ ಬಾರಿಗೆ ಪುಟಿನ್ ಅಧ್ಯಕ್ಷರಾಗಿ ನೇಮಕಗೊಳ್ಳವುದು ಖಚಿತವಾಗಿದೆ. ಕಮ್ಯುನಿಷ್ಟ್ ಪಕ್ಷ ಎರಡನೇ ಸ್ಥಾನವನ್ನು ಪಡೆದುಕೊಂಡರೆ, ಲಿಬರಲ್ ಡೆಮಾಕ್ರೆಟಿಕ್ ಪಕ್ಷ ಮತ್ತು ಜಸ್ಟ್ ರಷ್ಯಾ ಪಕ್ಷ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನವನ್ನು ಪಡೆದುಕೊಂಡಿವೆ.

185. ಕೇಂದ್ರ ಲೋಕ ಸೇವಾ ಆಯೋಗ (UPSC)ಯ ಅಧ್ಯಕ್ಷರಾಗಿ ಯಾರು ನೇಮಕಗೊಂಡಿದ್ದಾರೆ?

ಅ) ದೀಪಕ್ ಗುಪ್ತಾ

ಆ) ರಮೇಶ್ ಕುಲಕರ್ಣಿ

ಇ) ಅಲಾಕ ಸಿರೋಹಿ

ಈ) ಮಮತಾ ಪಾಂಡೆ

ಅಲಾಕ ಸಿರೋಹಿ

ನಿವೃತ್ತ ಐಎಎಸ್ ಅಧಿಕಾರಿ ಅಲಕಾ ಸಿರೋಹಿ ಅವರು ಕೇಂದ್ರ ಲೋಕಸೇವಾ (ಯುಪಿಎಸ್ಸಿ) ಆಯೋಗದ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಅಲಕಾ ಅವರು ಪ್ರಸ್ತುತ ಕೇಂದ್ರ ಲೋಕಸೇವಾ ಆಯೋಗದ ಹಾಲಿ ಸದಸ್ಯರು. ಇವರ ಅಧಿಕಾರ ಅವಧಿ 2017 ಜನವರಿ 3 ರವರೆಗೂ ಇರಲಿದೆ .ದೀಪಕ್ ಗುಪ್ತಾ ಅವರ ರಾಜೀನಾಮೆಯಿಂದ ಯುಪಿಎಸ್ಸಿ ಅಧ್ಯಕ್ಷ ಸ್ಥಾನ ತೆರವಾಗಿತ್ತು.

www.karunaduexams.com

186. ಜಗತ್ತಿನ ಅತಿ ಎತ್ತರದ ದೇವಾಲಯ ಎನಿಸಲಿರುವ "ಚಂದ್ರೋದಯ ದೇವಾಲಯ" ಯಾವ ರಾಜ್ಯದಲ್ಲಿ ಸ್ಥಾಪನೆಯಾಗಲಿದೆ?

ಅ) ಮಹಾರಾಷ್ಟ್ರ

ಆ) ಕರ್ನಾಟಕ

ಇ) ಉತ್ತರ ಪ್ರದೇಶ

ಈ) ಗುಜರಾತ್

ಉತ್ತರ ಪ್ರದೇಶ

ಜಗತ್ತಿನಲ್ಲೇ ಅತೀ ಎತ್ತರದ ದೇವಾಲಯ ಉತ್ತರ ಪ್ರದೇಶದ ವೃಂದಾವನದಲ್ಲಿ ಸ್ಥಾಪನೆಯಾಗುತ್ತಿದೆ. ವಿಶ್ವದ ಎತ್ತರ ಕಟ್ಟಡ ಎಂಬ ಖ್ಯಾತಿಗೆ ಪಾತ್ರವಾಗಿರುವ ದುಬೈನ ಬುರ್ಜ್ ಖಲೀಫಾಗಿಂತ ಇದು ಎತ್ತರವಿರಲಿದೆ. ಬೆಂಗಳೂರು ಮೂಲದ ಅಂತಾರಾಷ್ಟ್ರೀಯ ಕೃಷ್ಣ ಪ್ರಜ್ಞಾ ಸಂಘ (ಇಸ್ಕಾನ್) ಈ ಅತಿ ಎತ್ತರದ ಚಂದ್ರೋದಯ ಮಂದಿರ ನಿರ್ಮಾಣ ಮಾಡುತ್ತಿದೆ. ದೇಗುಲದ ಗೋಪುರ 700 ಅಡಿ ಎತ್ತರವಿರಲಿದ್ದು, ದುಬೈನ ಅತಿ ಎತ್ತರದ ಕಟ್ಟಡ ಬುರ್ಜ್ ಖಲೀಫಾಗಿಂತ 5 ಅಡಿ ಹೆಚ್ಚು ಆಳದ ಅಡಿಪಾಯ ಈ ಮಂದಿರಕ್ಕಿರಲಿದೆ.ಮೂಲಗಳ ಪ್ರಕಾರ ಬುರ್ಜ್ ಖಲೀಫಾ ಕಟ್ಟಡಕ್ಕೆ 50 ಮೀಟರ್ ಆಳದ ಅಡಿಪಾಯ ಹಾಕಲಾಗಿದ್ದು, ಪ್ರಸ್ತುತ ನಿರ್ಮಾಣವಾಗುತ್ತಿರುವ ಚಂದ್ರೋದಯ ಮಂದಿರಕ್ಕೆ 55 ಮೀಟರ್ ಆಳದ ಅಡಿಪಾಯ ಹಾಕಲಾಗುತ್ತಿದೆ. ಈ ವಿಶೇಷ ಅಡಿಪಾಯದಲ್ಲಿ 511 ಅಂಕಣಗಳಿದ್ದು, ಅಡಿಪಾಯದಲ್ಲಿನ 140 ಅಂಕಣಗಳ ಕಾಮಗಾರಿ ಪೂರ್ಣಗೊಂಡಿದೆ. ಉಳಿದ ಅಂಕಣಗಳ ನಿರ್ಮಾಣ ಕಾರ್ಯ ಭರದಿಂದ ಸಾಗಿದ್ದು, ಮುಂದಿನ ವರ್ಷದ ಮಾರ್ಚ್ ವೇಳೆಗೆ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ಇಸ್ಕಾನ್ ಆಡಳಿತ ಮಂಡಳಿ ತಿಳಿಸಿದೆ.

187. ಈ ಕೆಳಗಿನ ಯಾವ ಐಐಟಿಯಲ್ಲಿ "ಪರಂ ಇಶಾನ್ (Param Ishan)" ಹೆಸರಿನ ಸೂಪರ್ ಕಂಪ್ಯೂಟರ್ ಗೆ ಚಾಲನೆ ನೀಡಲಾಯಿತು?

ಅ) ಐಐಟಿ ಖರಗಪುರ್

ಆ) ಐಐಟಿ ಕಾನ್ಪುರ

ಇ) ಐಐಟಿ ಗುವಾಹಟಿ

ಈ) ಐಐಟಿ ರಾಂಚಿ

ಐಐಟಿ ಗುವಾಹಟಿ

ಈಶಾನ್ಯ ಭಾರತದ ಅತ್ಯಂತ ವೇಗದ ಮತ್ತು ಅಧಿಕ ಸಾಮರ್ಥ್ಯದ ಸೂಪರ್ ಕಂಪ್ಯೂಟರ್ "ಪರಂ ಇಶಾನ್"ಗೆ ಐಐಟಿ ಗುವಾಹಟಿಯಲ್ಲಿ ಚಾಲನೆ ನೀಡಲಾಯಿತು. ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವ ಪ್ರಕಾಶ್ ಜಾವೇದಕರ್ ಅವರು ಉದ್ಘಾಟಿಸಿದರು. ಗಣಕೀಕೃತ ರಸಾಯನಶಾಸ್ತ್ರ, ಗಣಕೀಕೃತ ಪ್ಲೂಯಿಡ್ ಡೈನಾಮಿಕ್ಸ್, ಸಿವಿಲ್ ಇಂಜನಿಯರಿಂಗ್ ವಿಭಾಗದಲ್ಲಿ ಈ ಸೂಪರ್ ಕಂಪ್ಯೂಟರ್ ಬಳಸಬಹುದಾಗಿದೆ. ಅಲ್ಲದೇ ಈಶಾನ್ಯ ರಾಜ್ಯಗಳಲ್ಲಿ ಅಧಿಕ ಮಳೆಯಿಂದ ಉಂಟಾಗುವ ಪ್ರವಾಹ, ಭೂಕುಸಿತ ಮತ್ತು ಹವಾಮಾನ ಬದಲಾವಣೆ ಅಧ್ಯಕನಕ್ಕೂ ಇದರ

ಬಳಕೆಯಾಗಲಿದೆ. ಗಾಳಿಯಲ್ಲಿ ಶತ್ರು ಕ್ಷಿಪಣಿ, ಹೆಲಿಕಾಪ್ಟರ್ ನಂತಹವುಗಳನ್ನು ನಿಖರವಾಗಿ ಹೊಡೆದು ಉರುಳಿಸುವ ಸಾಮರ್ಥ್ಯವನ್ನು ಈ ಕ್ಷಿಪಣಿ ಹೊಂದಿದೆ.

188. ಬೌದ್ದರ ಪ್ರಸಿದ್ದ ಹಬ್ಬ "ನರೋಪ ಹಬ್ಬ (Naropa Festival)" ಇತ್ತೀಚೆಗೆ ಯಾವ ರಾಜ್ಯದಲ್ಲಿ ಆರಂಭಗೊಂಡಿತು?

ಅ) ಮಹಾರಾಷ್ಟ್ರ

ಆ) ಗುಜರಾತ್

ಇ) ಜಮ್ಮು ಮತ್ತು ಕಾಶ್ಮೀರ

ಈ) ರಾಜಸ್ತಾನ

ಜಮ್ಮು ಮತ್ತು ಕಾಶ್ಮೀರ

ಬೌದ ದರ್ಮದ ಪ್ರಸಿದ್ದ ಹಬ್ಬ "ನರೋಪ" ಜಮ್ಮು ಮತ್ತು ಕಾಶ್ಮೀರದ ಬೌದ್ಧ ಧಾರ್ಮಿಕ ಕೇಂದ್ರ ಹೆಮಿಸ್ ನಲ್ಲಿ ಆರಂಭಗೊಂಡಿದೆ. ನರೋಪ ಹಬ್ಬವನ್ನು ಪ್ರತಿ 12 ವರ್ಷಗಳಿಗೊಮ್ಮೆ ಆಚರಿಸಲಾಗುತ್ತದೆ. ಈ ವರ್ಷ ಬೌದ್ದ ದಾರ್ಮಿಕ ಗುರು ನರೋಪ ಅವರ 1000 ನೇ ಜನ್ಮ ವಾರ್ಷಿಕೋತ್ಸವ ಹಬ್ಬದ ಮುಖ್ಯ ಆಕರ್ಷಣೆಯಾಗಿದೆ.

189. ಯಾವ ದೇಶ "2017 ಆಫ್ರಿಕಾ ಅಭಿವೃದ್ದಿ ಬ್ಯಾಂಕ್ (African Development Bank)"ನ ವಾರ್ಷಿಕ ಸಭೆಯನ್ನು ಆಯೋಜಿಸಲಿದೆ?

ಅ) ಕೀನ್ಯಾ

ಆ) ಭಾರತ

ಇ) ಶ್ರೀಲಂಕಾ

ಈ) ನೈಜೀರಿಯಾ

ಭಾರತ

2017 ಆಫ್ರಿಕಾ ಅಭಿವೃದ್ದಿ ಬ್ಯಾಂಕ್ (African Development Bank)ನ ವಾರ್ಷಿಕ ಸಭೆ ಭಾರತದಲ್ಲಿ ನಡೆಯಲಿದೆ. ಈ ಸಂಬಂಧ ಭಾರತ ಮತ್ತು ಆಫ್ರಿಕಾ ಅಭಿವೃದ್ದಿ ಬ್ಯಾಂಕ್ ಒಪ್ಪಂದಕ್ಕೆ ಇತ್ತೀಚೆಗೆ ಸಹಿ ಹಾಕಿವೆ. ಗುಜರಾತ್ ನ ಅಹಮದಬಾದನಲ್ಲಿರುವ ಮಹಾತ್ಮ ಗಾಂಧಿ ಭವನದಲ್ಲಿ ಮೇ 22-26 ರಂದು ನಡೆಯಲಿದೆ. ಈ ಸಭೆಯಲ್ಲಿ ಆಫ್ರಿಕಾ ಅಭಿವೃದ್ದಿ ಬ್ಯಾಂಕ್ 80 ಸದಸ್ಯ ರಾಷ್ಟ್ರಗಳ ಗವರ್ನರ್ಗಳು, ಉದ್ಯಮಿಗಳು, ಆರ್ಥಿಕ ಚಿಂತಕರು ಸೇರಿದಂತೆ ಸುಮಾರು 5000 ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

www.karunaduexams.com

190. ಇತ್ತೀಚೆಗೆ ದಿನಪತ್ರಿಕೆಗಳಲ್ಲಿ ಸುದ್ದಿಯಲ್ಲಿದ್ದ "ನ್ಯೂಯಾರ್ಕ್ ಘೋಷಣೆ (New York Declaration) ಈ ಕೆಳಗಿನ ಯಾವುದಕ್ಕೆ ಸಂಬಂಧಿಸಿದೆ?

ಅ) ನಿರಾಶ್ರಿತರ ಮತ್ತು ವಲಸಿತರ ಹಕ್ಕು ಸರಂಕ್ಷಣೆ

ಆ) ಪರಮಾಣು ಶಸ್ತ್ರಾಸ್ತ್ರ ಮೇಲೆ ನಿಷೇಧ ಹೇರುವುದು

ಇ) ಜಾಗತಿಕ ಭಯೋತ್ಪಾದನೆ ತಡೆಯುವುದು

ಈ) ವಲಸೆ ಹಕ್ಕಿಗಳ ಸಂರಕ್ಷಣೆ

ನಿರಾಶ್ರಿತರ ಮತ್ತು ವಲಸಿತರ ಹಕ್ಕು ಸರಂಕ್ಷಣೆ

ಇತ್ತೀಚೆಗೆ ಆರಂಭಗೊಂಡ ವಿಶ್ವಸಂಸ್ಥೆಯ 71ನೇ ಅಧಿವೇಶನದಲ್ಲಿ ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳು "ನ್ಯೂಯಾರ್ಕ್ ಘೋಷಣೆ"ಯನ್ನು ಅಳವಡಿಸಿಕೊಂಡಿವೆ. ನ್ಯೂಯಾರ್ಕ್ ಘೋಷಣೆಯು ನಿರಾಶ್ರಿತರ ಮತ್ತು ವಲಸಿತರ ಹಕ್ಕು ಸಂರಕ್ಷಿಸುವುದು, ಜೀವ ಉಳಿಸುವುದು ಮತ್ತು ಜಾಗತಿಕ ಮಟ್ಟದಲ್ಲಿ ಜವಾಬ್ದಾರಿಯನ್ನು ಹಂಚಿಕೊಳ್ಳುವ ಉದ್ದೇಶವನ್ನು ಒಳಗೊಂಡಿದೆ. ಈ ಘೋಷಣೆಯನ್ನು ಅಳವಡಿಸಿಕೊಳ್ಳುವ ಮೂಲಕ ಸದಸ್ಯ ರಾಷ್ಟ್ರಗಳು ನಿರಾಶ್ರಿತರ ಮತ್ತು ವಲಸಿತರ ಹಕ್ಕು ರಕ್ಷಣೆಗೆ ಬದ್ಧವಾಗಿವೆ ಎಂದು ಬಾನ್-ಕಿ-ಮೂನ್ ತಿಳಿಸಿದ್ದಾರೆ.

191. ಇತ್ತೀಚೆಗೆ ಬಿಡುಗಡೆಯಾದ ಭೂಕಂಪ ನಕ್ಷೆಯಲ್ಲಿ ಭಾರತದ ಒಟ್ಟು ಭೂಪ್ರದೇಶದಲ್ಲಿ ಶೇ ____ರಷ್ಟು ಭಾಗ ಸಾಮಾನ್ಯ ಅಥವಾ ತೀವ್ರತರ ಭೂಕಂಪ ಸಾಧ್ಯತೆಗೆ ಒಳಪಟ್ಟಿದೆ?

ಅ) ಶೇ 35

ಆ) ಶೇ 48

ಇ) ಶೇ 59

ಈ) ಶೇ 60

ಶೇ 59

ಇತ್ತೀಚೆಗೆ ಬಿಡುಗಡೆಯಾದ ಭೂಕಂಪ ನಕ್ಷೆ ಪ್ರಕಾರ ಭಾರತದ ಒಟ್ಟು ಭೂಪ್ರದೇಶದಲ್ಲಿ ಶೇ.59ರಷ್ಟು ಭಾಗದಲ್ಲಿ ಸಾಮಾನ್ಯ ಅಥವಾ ತೀವ್ರತರ ಭೂಕಂಪ ಸಾಧ್ಯತೆ ಇದೆ ಎನ್ನಲಾಗಿದೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಮತ್ತು ಬಿಲ್ಡಿಂಗ್ ಮೆಟಿರಿಯಲ್ಸ್ ಮತ್ತು ಟೆಕ್ನಾಲಜಿ ಪ್ರೊಮೊಷನ್ ಕೌನ್ಸಿಲ್ ಈ ನಕ್ಷೆಯನ್ನು ಸಿದ್ಧಪಡಿಸಿದೆ. ಮುಂದಿನ ಮೂರು ತಿಂಗಳಲ್ಲಿ ಈ ನಕ್ಷೆ ಮೊಬೈಲ್ನಲ್ಲೇ ಲಭ್ಯವಾಗಲಿದೆ. ದೇಶದ ಒಟ್ಟು 30.4 ಕೋಟಿ ಕುಟುಂಬಗಳ ಪೈಕಿ 28.8 ಕೋಟಿ ಕುಟುಂಬಗಳು (ಶೇ. 95) ವಿವಿಧ ಪ್ರಮಾಣದ ಭೂಕಂಪಕ್ಕೆ ತುತ್ತಾಗುವ ಸಂಭವವಿದೆ.

www.karunaduexams.com

192. ಹಾರ್ವರ್ಡ್ ಫೌಂಡೇಶನ್ ನ 2016 ವರ್ಷದ ಮಾನವೀಯ ಪ್ರಶಸ್ತಿ (Humanitarian Award of the Year)ಯನ್ನು ಯಾರಿಗೆ ನೀಡಲಾಗಿದೆ?

ಅ) ಆಂಗ್ ಸನ್ ಸೂಕಿ

ಆ) ಮಲಾಲ್ ಯೂಸಫ್ ಝೈ

ಇ) ನರೇಂದ್ರ ಮೋದಿ

ಈ) ವ್ಲಾಡಿಮಿರ್ ಪುಟಿನ್

ಆಂಗ್ ಸನ್ ಸೂಕಿ

ನೊಬೆಲ್ ಶಾಂತಿ ಪ್ರಶಸ್ತಿ ವಿಜೇತೆ ಮಯನ್ಮಾರ್ ನ ಆಂಗ್ ಸನ್ ಸೂಕಿ ಅವರಿಗೆ ಹಾರ್ವಡ್ ಫೌಂಡೇಶನ್ ನೀಡುವ 2016 ವರ್ಷದ ಮಾನವೀಯ ಪ್ರಶಸ್ತಿಯನ್ನು ನೀಡಲಾಯಿತು. ಈ ಹಿಂದೆ ಈ ಪ್ರಶಸ್ತಿಯನ್ನು ಪಾಕಿಸ್ತಾನದ ಸಾಮಾಜಿಕ ಕಾರ್ಯಕರ್ತೆ ಮಲಾಲ ಯೂಸಫ್ ಝೈ ಮತ್ತು ವಿಶ್ವಸಂಸ್ಥೆಯ ಕಾರ್ಯದರ್ಶಿ ಬಾನ್-ಕಿ-ಮೂನ್ ಅವರಿಗೆ ನೀಡಲಾಗಿದೆ. ಜೀವನ ಗುಣಮಟ್ಟವನ್ನು ಸುಧಾರಿಸಲು ಗಣನೀಯ ಸೇವೆ ನೀಡಿದ ವ್ಯಕ್ತಿಗಳಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

193. ಇಸ್ಲಾಮಿಕ್ ಸಹಕಾರ ಸಂಘಟನೆ (Organisation of Islamic Cooperation)ಯ ಈಗಿನ ಅಧ್ಯಕ್ಷರು ಯಾರು?

ಅ) ರಿಸೆಪ್ ತಯ್ಯಿಪ್ ಎರ್ಡೋಗನ್

ಆ) ಅಮೀನ್ ಮದನಿ

ಇ) ಸಯ್ಯದ್ ಕಿರ್ಮಾನಿ ಖಾನ್

ಈ) ಇಯದ್ ಚಾಂದ್ ಬೀವಿ

ಟರ್ಕಿಯ ಅಧ್ಯಕ್ಷ ರಿಸೆಪ್ ತಯ್ಯಿಪ್ ಎರ್ಡೋಗನ್ ಅವರು ಪ್ರಸ್ತುತ ಇಸ್ಲಾಮಿಕ್ ಸಹಕಾರ ಸಂಘಟನೆಯ ಅಧ್ಯಕ್ಷರಾಗಿದ್ದಾರೆ. ಇಸ್ಲಾಮಿಕ್ ಸಹಕಾರ ಸಂಘಟನೆ ಒಂದು ಅಂತಾರಾಷ್ಟ್ರೀಯ ಸಂಘಟನೆಯಾಗಿದ್ದು, 1969 ರಲ್ಲಿ ಸ್ಥಾಪಿಸಲಾಗಿದೆ. ಪ್ರಸ್ತುತ ಈ ಸಂಘಟನೆ 57 ಸದಸ್ಯ ರಾಷ್ಟ್ರಗಳನ್ನು ಹೊಂದಿದೆ. ಮುಸ್ಲಿಂರ ಹಿತರಕ್ಷಣೆ ಕಾಯುವ ಮೂಲಕ ಅಂತಾರಾಷ್ಟ್ರೀಯ ಶಾಂತಿ ಮತ್ತು ಸಾಮರಸ್ಯವನ್ನು ಎತ್ತಿಹಿಡಿಯುವುದು ಈ ಸಂಘಟನೆಯ ಮುಖ್ಯ ಧ್ಯೇಯ. ಸೌಧಿ ಅರೇಬಿಯಾದ ಜೆಡ್ಡಾದಲ್ಲಿ ಇದರ ಆಡಳಿತ ಕಚೇರಿ ಇದೆ. ಅರೇಬಿಕ್, ಇಂಗ್ಲೀಷ್ ಮತ್ತು ಫ್ರೆಂಚ್ ಈ ಸಂಘಟನೆಯ ಅಧಿಕೃತ ಭಾಷೆಗಳಾಗಿವೆ.

194. ಭಾರತೀಯ ಕ್ರಿಕೆಟ್ ಆಯ್ಕೆ ಸಮಿತಿಯ ನೂತನ ಅಧ್ಯಕ್ಷರಾಗಿ ಯಾರು ಆಯ್ಕೆಯಾಗಿದ್ದಾರೆ?

ಅ) ಎಂ.ಎಸ್.ಕೆ ಪ್ರಸಾದ್

ಆ) ವೆಂಕಟೇಶ್ ಪ್ರಸಾದ್

ಇ) ಜತಿನ್ ಪರಾಂಜಪೆ

ಈ) ಸರಣ್ ದೀಪ್ ಸಿಂಗ್

www.karunaduexams.com

ಎಂ.ಎಸ್.ಕೆ ಪ್ರಸಾದ್

ಮಾಜಿ ವಿಕೆಟ್ ಕೀಪರ್ ಬ್ಯಾಟ್ಸ್ ಮನ್ ಎಂಎಸ್ ಕೆ ಪ್ರಸಾದ್ ಅವರನ್ನು ಭಾರತೀಯ ಕ್ರಿಕೆಟ್ ಆಯ್ಕೆ ಸಮಿತಿಯ ನೂತನ ಅಧ್ಯಕ್ಷರನ್ನಾಗಿ ಬಿಸಿಸಿಐ ಆಯ್ಕೆಮಾಡಿದೆ. ದಕ್ಷಿಣ ವಲಯದಿಂದ ಈ ಬಾರಿ ಬಿಸಿಸಿಐ ಅಧ್ಯಕ್ಷ ಸ್ಥಾನಕ್ಕೇರಿದ್ದಾರೆ. ಸಂದೀಪ್ ಪಾಟೀಲ್ ಅವರಿಂದ ತೆರವಾದ ಸ್ಥಾನದಲ್ಲಿ ಪ್ರಸಾದ್ ಕಾರ್ಯನಿರ್ವಹಿಸಲಿದ್ದಾರೆ. 41 ವರ್ಷ ವಯಸ್ಸಿನ ಪ್ರಸಾದ್ ಅವರು ಆಂಧ್ರಪ್ರದೇಶ ಮೂಲದವರಾಗಿದ್ದು, ಭಾರತದ ಪರ 6 ಟೆಸ್ಟ್ ಹಾಗೂ 17 ಏಕದಿನ ಅಂತಾರಾಷ್ಟ್ರೀಯ ಪಂದ್ಯಗಳನ್ನಾಡಿದ್ದಾರೆ.

195. ಏಷ್ಯನ್ ಬ್ಯುಸಿನೆಸ್ ಪಬ್ಲಿಕೇಷನ್ ನೀಡುವ ಜೀವಮಾನ ಸಾಧನೆ ಗೌರವ ಪ್ರಶಸ್ತಿಗೆ ಭಾಜನರಾದ ಭಾರತೀಯ ಮೂಲಕ ಬ್ರಿಟನ್ ಸಂಸದ ಯಾರು?

ಅ) ಲಾರ್ಡ್ ಸ್ವರಾಜ್ ಪಾಲ್

ಆ) ಲಾರ್ಡ್ ನರೇಂದ್ರ ಬಾಬುಭಾಯ್

ಇ) ಲಾರ್ಡ್ ನಂದನ್ ಕುಲಕರ್ಣಿ

ಈ) ಚೇತನ್ ಬಡಿಗೇರ್

ಲಾರ್ಡ್ ನರೇಂದ್ರ ಬಾಬುಭಾಯ್

ಭಾರತೀಯ ಮೂಲದ ವ್ಯಕ್ತಿ ಹಾಗೂ ಬ್ರಿಟನ್ ಸಂಸದ ಲಾರ್ಡ್ ನರೇಂದ್ರ ಬಾಬುಭಾಯ್ ಅವರಿಗೆ ಏಷ್ಯನ್ ಬ್ಯುಸಿನೆಸ್ ಪಬ್ಲಿಕೇಷನ್ ನ ಜೀವಮಾನ ಸಾಧನೆ ಗೌರವ ಪ್ರಶಸ್ತಿಯನ್ನು ನೀಡಲಾಗಿದೆ. ವೈದ್ಯಕೀಯ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಹಲವು ವರ್ಷಗಳಿಂದ ಬ್ರಿಟನ್ನಲ್ಲಿ ಅವರು ಸಲ್ಲಿಸಿದ ಸಾಮಾಜಿಕ ಸೇವೆಯನ್ನು ಪರಿಗಣಿಸಿ ಅವರಿಗೆ ಈ 'ಏಷ್ಯಾ ಅಚೀವರ್ಸ್ ಅವಾರ್ಡ್' ನೀಡಲಾಗಿದೆ. ಶಿಕ್ಷಣ ಮತ್ತು ಕೌಶಲಾಭಿವೃದ್ಧಿ ಕ್ಷೇತ್ರದ ಸಾಧನೆಗಾಗಿ ಸೆಲ್ವ ಪಂಕಜ್, ಏಷ್ಯಾ ಮತ್ತು ಆಫ್ರಿಕಾದ ರಾಷ್ಟ್ರಗಳಲ್ಲಿ ಮಹಿಳಾ ಸಬಲೀಕರಣಕ್ಕಾಗಿ ದುಡಿಯುತ್ತಿರುವ ಬಿಂತಿ ಸಂಸ್ಥೆಯ ಮಂಜಿತ್ ಗಿಲ್ ಹಾಗೂ ಕ್ರೀಡಾಪಟು ರ್ಯಾನ್ ರಘು ಅವರಿಗೂ ಜೀವಮಾನದ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

196. ಈ ಕೆಳಗಿನ ಯಾರು “ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (BEL)” ನ ಮೊದಲ ಮಹಿಳಾ ನಿರ್ದೇಶಕರಾಗಿ ನೇಮಕಗೊಂಡಿದ್ದಾರೆ?

ಅ) ಆನಂದಿ ರಾಮಲಿಂಗಂ

ಆ) ಸುರೇಖಾ ವಿಜಯಕೃಷ್ಣ

ಇ) ನಂದಿತಾ ದಾಸ್

ಈ) ಸುಮಿತ್ರಾ ಜೈನ್

ಆನಂದಿ ರಾಮಲಿಂಗಂ

ನವರತ್ನ ಕೇಂದ್ರೋದ್ಯಮ'ಗಳಲ್ಲಿ ಒಂದಾಗಿರುವ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ನ (ಬಿಇಎಲ್)ಮೊದಲ ನಿರ್ದೇಶಕಿಯಾಗಿ ಆನಂದಿ ರಾಮಲಿಂಗಂ ಅವರು ಅಧಿಕಾರ ಸ್ವೀಕರಿಸಿದ್ದಾರೆ. ಇದಕ್ಕೂ ಮೊದಲು ಸಂಸ್ಥೆಯ ಜನರಲ್ ಮ್ಯಾನೇಜರ್ ಆಗಿದ್ದ ಆನಂದಿ ಅವರು, ಇನ್ನು ಮುಂದೆ ಮಾರುಕಟ್ಟೆ ವಿಭಾಗದ ನಿರ್ದೇಶಕಿ ಹುದ್ದೆ ನಿಭಾಯಿಸಲಿದ್ದಾರೆ.

197. ಇತ್ತೀಚೆಗೆ ನಿಧನರಾದ ಗೋಪಾಲ ವಾಜಪೇಯಿ ಯಾವ ಕ್ಷೇತ್ರದಲ್ಲಿ ಹೆಚ್ಚು ಪ್ರಸಿದ್ಧಿ ಹೊಂದಿದ್ದಾರೆ?

ಅ) ಸಂಗೀತ

ಆ) ಕಲೆ

ಇ) ಸಾಹಿತ್ಯ

ಈ) ಕ್ರೀಡೆ

ಸಾಹಿತ್ಯ

ಸಾಹಿತಿ ಗೋಪಾಲ ವಾಜಪೇಯಿ ಅವರು ಅನಾರೋಗದಿಂದ ನಿಧನರಾದರು. ಸಂಯುಕ್ತ ಕರ್ನಾಟಕ, ಕಸ್ತೂರಿ, ಕರ್ಮವೀರದಲ್ಲಿ ಗೋಪಾಲ ವಾಜಪೇಯಿ ಅವರು ಕಾರ್ಯ ನಿರ್ವಹಿಸಿದ್ದರು. ಹುಬ್ಬಳ್ಳಿಯಲ್ಲಿ 'ಅಭಿನಯ ಭಾರತಿ' ಹೆಸರಿನಲ್ಲಿ ಕಲಾ ತಂಡವೊಂದನ್ನು ಅವರು ಕಟ್ಟಿದ್ದರು. ದೊಡ್ಡಪ್ಪ ಎಂಬುದು ವಾಜಪೇಯಿ ಅವರ ಖ್ಯಾತಿ ಪಡೆದ ನಾಟಕ. ನಾಗಮಂಡಲ, ಸಂತ ಶಿಶುನಾಳ ಶರೀಫ, ಸಂತೆಯಲ್ಲಿ ನಿಂತ ಕಬೀರ ಸಿನಿಮಾಗಳಿಗೆ ಇವರು ಗೀತ ರಚನೆ ಮಾಡಿದ್ದರು.

198. ಈ ಕೆಳಗಿನ ಯಾರನ್ನು ಪ್ರಸ್ತುಕ ಸಾಲಿನ "ಲಲಿತ್ ಅರ್ಪಣ್ ಸಮ್ಮಾನ"ಕ್ಕೆ ಆಯ್ಕೆಮಾಡಲಾಗಿದೆ?

ಅ) ಲತಾ ಮಂಗೇಶ್ಕರ್

ಆ) ಶುಭಾ ಮುದ್ಗಲ್

ಇ) ಲಕ್ಷ್ಮೀ ಗೋಪಾಲಸ್ವಾಮಿ

ಈ) ಮೃಣನಿ ಮಲಿಕ್

ಶುಭಾ ಮುದ್ಗಲ್

ಖ್ಯಾತ ಹಿಂದೂಸ್ತಾನಿ ಶಾಸ್ತ್ರೀಯ ಗಾಯಕಿ ಶುಭಾ ಮುದ್ಗಲ್ ಅವರನ್ನು ಪ್ರಸ್ತುಕ ಸಾಲಿನ "ಲಲಿತ್ ಅರ್ಪಣ್ ಸಮ್ಮಾನ"ಕ್ಕೆ ಆಯ್ಕೆಮಾಡಲಾಗಿದೆ. ಶುಭಾ ಮದ್ಗಲ್ ಅವರು ಹಿಂದೂಸ್ತಾನಿ ಸಂಗೀತದ ಖಾಯಲ್, ಥುಮ್ರಿ ಮತ್ತು ದಾದ್ರಾ ಪ್ರಕಾರಗಳ ಗಾಯನದಲ್ಲಿ ಪ್ರಸಿದ್ಧಿ ಹೊಂದಿದ್ದಾರೆ. ಪ್ರಶಸ್ತಿಯನ್ನು ಇದೇ ತಿಂಗಳಲ್ಲಿ ನಡೆಯಲಿರು 15ನೇ ಲಲಿತ್ ಅರ್ಪಣ ಉತ್ಸವದಲ್ಲಿ ಪ್ರಶಸ್ತಿಯನ್ನು ವಿತರಿಸಲಾಗುವುದು.

www.karunaduexams.com

199. ಭಾರತ ಸಂವಿಧಾನದಲ್ಲಿ ಈ ಕೆಳಗಿನ ಯಾವುದರ ಸ್ಥಾಪನೆಯ ಬಗ್ಗೆ ಉಲ್ಲೇಖಿಸಲಾಗಿಲ್ಲ?

ಅ) ಹಣಕಾಸು ಆಯೋಗ

ಆ) ಚುನಾವಣಾ ಆಯೋಗ

ಇ) ರಾಷ್ಟ್ರೀಯ ಮಾನವ ಹಕ್ಕು ಆಯೋಗ

ಈ) ಲೋಕ ಸಭಾ ಸಚಿವಾಲಯ

ರಾಷ್ಟ್ರೀಯ ಮಾನವ ಹಕ್ಕು ಆಯೋಗ

200. ನ್ಯಾಯಾಮೂರ್ತಿ ಮೋಹನ್ ಎಂ ಶಾಂತನಗೌಡರ್ ಅವರು ಯಾವ ರಾಜ್ಯ ಮುಖ್ಯನ್ಯಾಯಾಮೂರ್ತಿಯಾಗಿ ನೇಮಕಗೊಂಡರು?

ಅ) ಕೇರಳ

ಆ) ಪಂಜಾಬ್

ಇ) ಗುಜರಾತ್

ಈ) ಮಧ್ಯ ಪ್ರದೇಶ

ನ್ಯಾಯಾಮೂರ್ತಿ ಮೋಹನ್ ಎಂ ಶಾಂತನಗೌಡರ್ ರವರು ಕೇರಳ ಹೈಕೋರ್ಟ್ ಮುಖ್ಯನ್ಯಾಯಮೂರ್ತಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಕೇರಳದ ರಾಜ್ಯಪಾಲರಾದ ಪಿ ಸಾಥಸಿವಂ ಅವರು ನೂತನ ನ್ಯಾಯಾಮೂರ್ತಿಗೆ ಪ್ರಮಾಣ ವಚನ ಭೋದಿಸಿದರು.

201. ದೇಶದ ಮೊದಲ ಅಂತರ್ ರಾಜ್ಯ ನದಿ ಜೋಡಣೆ ಯೋಜನೆಯಾದ "ಕೆನ್-ಬೇತ್ವಾ"ದಡಿ ಯಾವ ಎರಡು ರಾಜ್ಯಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು?

ಅ) ಮಧ್ಯಪ್ರದೇಶ ಮತ್ತು ಗುಜರಾತ್

ಆ) ಉತ್ತರ ಪ್ರದೇಶ ಮತ್ತು ಉತ್ತರಖಂಡ್

ಇ) ಮಧ್ಯಪ್ರದೇಶ ಮತ್ತು ಉತ್ತರ ಪ್ರದೇಶ

ಈ) ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರ

ಮಧ್ಯಪ್ರದೇಶ ಮತ್ತು ಉತ್ತರ ಪ್ರದೇಶ

"ಕೆನ್-ಬೇತ್ವಾ (Ken-Betwa)" ನದಿ ಜೋಡಣೆ ದೇಶದ ಮೊದಲ ಅಂತರ್ ರಾಜ್ಯ ನದಿ ಜೋಡಣೆ ಯೋಜನೆಯಾಗಿದೆ. ಇತ್ತೀಚೆಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿ ಯೋಜನೆಯ ಮೊದಲ ಹಂತದ ಅನುಷ್ಠಾನಕ್ಕೆ ಹಸಿರು ನಿಶಾನೆ ತೋರಿದೆ. ದೇಶದ ಅತ್ಯಂತ ಬರಪೀಡಿತ ಪ್ರದೇಶವೆನಿಸಿರುವ ಬುಂದೇಲಖಂಡ್ ಪ್ರದೇಶಕ್ಕೆ ನೀರಾವರಿ ವ್ಯವಸ್ಥೆ ಕಲ್ಪಿಸುವುದು ಈ ಯೋಜನೆಯ ಪ್ರಮುಖ ಉದ್ದೇಶ. ಈ ಯೋಜನೆಯು ಮಧ್ಯಪ್ರದೇಶದ 3.5 ಲಕ್ಷ ಹೇಕ್ಟೆರ್ ಪ್ರದೇಶ ಹಾಗೂ ಉತ್ತರ ಪ್ರದೇಶದ 14,000 ಹೇಕ್ಟೆರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲಿದೆ.

www.karunaduexams.com

202. ಈ ಕೆಳಗಿನ ಯಾವ ಚಿತ್ರ "2017 ಆಸ್ಕರ್"ನ ವಿದೇಶಿ ಭಾಷಾ ಚಿತ್ರಗಳ ವಿಭಾಗದಲ್ಲಿ ಭಾರತವನ್ನು ಪ್ರತಿನಿಧಿಸಲು ಆಯ್ಕೆಯಾಗಿದೆ?

ಅ) ತಿಥಿ

ಆ) ಉಡ್ತಾ ಪಂಜಾಬ್

ಇ) ವಿಸಾರಣೈ

ಈ) ಸೈರತ್

ವಿಸಾರಣೈ

ರಾಷ್ಟ್ರಪ್ರಶಸ್ತಿ ಮನ್ನಣೆಗಳಿಸಿರುವ ತಮಿಳಿನ "ವಿಸಾರಣೈ" ಸಿನಿಮಾ 2017 ಆಸ್ಕರ್ ನ ವಿದೇಶಿ ಭಾಷಾ ಚಿತ್ರಗಳ ವಿಭಾಗದಲ್ಲಿ ಭಾರತವನ್ನು ಪ್ರತಿನಿಧಿಸಲು ಅಧಿಕೃತವಾಗಿ ಆಯ್ಕೆಯಾಗಿದೆ. ವೆಟ್ರಿಮಾರನ್ ಈ ಚಿತ್ರವನ್ನು ನಿರ್ದೇಶಿಸಿದ್ದು, ಈಗಾಗಲೇ ಮೂರು ರಾಷ್ಟ್ರ ಪ್ರಶಸ್ತಿಗಳನ್ನು ಪಡೆದುಕೊಂಡಿದೆ. ವಿಚಾರಣೆ ನೆಪದಲ್ಲಿ ಕೈದಿ ಅನುಭವಿಸುವ ಯಾತನೆ, ಪೊಲೀಸ್ ಇಲಾಖೆಯಲ್ಲಿನ ಲೋಪ, ಭ್ರಷ್ಟಾಚಾರದಂತಹ ವಿಷಯವನ್ನು ಪ್ರತಿಬಿಂಬಿಸುತ್ತದೆ. ಕನ್ನಡದ 'ತಿಥಿ' ಸಿನಿಮಾ, ಉಡ್ತಾ ಪಂಜಾಬ್, ನೀರ್ಜಾ, ಸೈರತ್, ಧಾನಕ್ ಸೇರಿದಂತೆ ದೇಶದ 29 ಅತ್ಯುತ್ತಮ ಸಿನಿಮಾಗಳ ಪೈಕಿ ಆಸ್ಕರ್‌ಗೆ ವಿಸಾರಣೈ ಸಿನಿಮಾ ಅಧಿಕೃತ ಪ್ರವೇಶ ಪಡೆದಿದೆ. ಕೇತನ್ ಮೆಹ್ತಾ ನೇತೃತ್ವದ ಭಾರತೀಯ ಚಲನಚಿತ್ರ ಒಕ್ಕೂಟ(ಎಫ್ ಎಫ್‌ಐ)ದ ಸಮಿತಿಯು ಗುರುವಾರ ಆಯ್ಕೆ ಪ್ರಕಟಿಸಿದೆ. 2017ರ ಫೆಬ್ರವರಿ 27ರಂದು ಲಾಸ್ ಏಂಜಲೀಸ್‌ನಲ್ಲಿ 89ನೇ ಅಕಾಡೆಮಿ ಅವಾರ್ಡ್ಸ್(ಆಸ್ಕರ್) ಸಮಾರಂಭ ನಡೆಯಲಿದೆ.

203. ಯಾವ ರಾಜ್ಯದಲ್ಲಿ ಇತ್ತೀಚೆಗೆ ವಿಶ್ವದ ಅತಿ ದೊಡ್ಡ ಸೌರ ವಿದ್ಯುತ್ ಘಟಕಕ್ಕೆ ಚಾಲನೆ ನೀಡಲಾಯಿತು?

ಅ) ತಮಿಳುನಾಡು

ಆ) ಗುಜರಾತ್

ಇ) ಜಾರ್ಖಂಡ್

ಈ) ಹರಿಯಾಣ

ತಮಿಳುನಾಡು

ಜಗತ್ತಿನ ದೊಡ್ಡ ಸೌರ ವಿದ್ಯುತ್ ಸ್ಥಾವರ ತಮಿಳುನಾಡಿನ ರಾಮನಾಥಪುರಂ ಜಿಲ್ಲೆಯ ಕಮುಥಿಯಲ್ಲಿ ಆರಂಭಗೊಂಡಿದೆ. 648 ಮೆಗಾವ್ಯಾಟ್ ಸಾಮರ್ಥ್ಯದ ಸೌರ ವಿದ್ಯುತ್ ಘಟಕವನ್ನ ಅದಾನಿ ಗ್ರೂಪ್ ನ ಭಾಗವಾಗಿರುವ ಅದಾನಿ ಗ್ರೀನ್ ಎನರ್ಜಿ(ತಮಿಳುನಾಡು) ಲಿಮಿಟೆಡ್ ರೂ. 4,550 ಕೋಟಿ ವೆಚ್ಚದಲ್ಲಿ ಘಟಕ ಸ್ಥಾಪಿಸಿದೆ. 8 ತಿಂಗಳುಗಳ ದಾಖಲೆಯ ಅವಧಿಯಲ್ಲಿ ಘಟಕ ಸ್ಥಾಪಿಸಲಾಗಿದ್ದು, ಇದಕ್ಕಾಗಿ ಒಟ್ಟು 8500 ಜನರು ಶ್ರಮಿಸಿದ್ದಾರೆ.

www.karunaduexams.com

204. "ಇನ್ಕ್ರೆಡಿಬಲ್ ಇಂಡಿಯಾ ಪ್ರವಾಸೋದ್ಯಮ ಹೂಡಿಕೆದಾರರ ಶೃಂಗಸಭೆ (Incredible India Tourism Investors Summit)" ಯಾವ ನಗರದಲ್ಲಿ ಆರಂಭಗೊಂಡಿತು?

ಅ) ಮುಂಬೈ

ಆ) ಬೆಂಗಳೂರು

ಇ) ನವ ದೆಹಲಿ

ಈ) ಕೊಚ್ಚಿ

ನವ ದೆಹಲಿ

ಇನ್ಕ್ರೆಡಿಬಲ್ ಇಂಡಿಯಾ ಪ್ರವಾಸೋದ್ಯಮ ಹೂಡಿಕೆದಾರರ ಶೃಂಗಸಭೆ ನವದೆಹಲಿಯಲ್ಲಿ ಆರಂಭಗೊಂಡಿದೆ. ಇದೇ ಮೊದಲ ಬಾರಿಗೆ ಇಂತಹ ಶೃಂಗಸಭೆಯನ್ನು ಭಾರತ ಹಮ್ಮಿಕೊಂಡಿದೆ. ಮೂರು ದಿನದ ಸಮ್ಮೇಳನವನ್ನ ಕೇಂದ್ರ ಪ್ರವಾಸೋದ್ಯಮ ಸಚಿವಾಲಯವೂ ಟೂರಿಸಂ ಕಾರ್ಪೋರೇಷನ್ ಆಫ್ ಇಂಡಿಯಾ ಮತ್ತು ಭಾರತೀಯ ಕೈಗಾರಿಕ ಒಕ್ಕೂಟ (CII) ಸಹಯೋಗದಡಿ ಆರಂಭಿಸಿದೆ. ಪ್ರವಾಸೋದ್ಯಮ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆ ಮಾಡಿ ದೇಶವನ್ನು ವಿಶ್ವದ ಪ್ರಮುಖ ಪ್ರವಾಸೋದ್ಯಮ ತಾಣವನ್ನಾಗಿ ಮಾಡುವ ಮಹಾದಾಸೆಯೊಂದಿಗೆ ಶೃಂಗಸಭೆಯನ್ನು ಆಯೋಜಿಸಲಾಗಿದೆ.

205. ಅಂತಾರಾಷ್ಟ್ರೀಯ ಶಾಂತಿ ದಿನ (International Day of Peace)ವನ್ನು ಯಾವ ದಿನದಂದು ಆಚರಿಸಲಾಗುತ್ತದೆ?

ಅ) ಸೆಪ್ಟೆಂಬರ್ 20

ಆ) ಸೆಪ್ಟೆಂಬರ್ 21

ಇ) ಸೆಪ್ಟೆಂಬರ್ 22

ಈ) ಸೆಪ್ಟೆಂಬರ್ 23

ಸೆಪ್ಟೆಂಬರ್ 21

ಅಂತಾರಾಷ್ಟ್ರೀಯ ಶಾಂತಿ ದಿನವನ್ನು ಪ್ರತಿ ವರ್ಷ ಸೆಪ್ಟೆಂಬರ್ 21 ರಂದು ಆಚರಿಸಲಾಗುತ್ತದೆ. ವಿಶ್ವಸಂಸ್ಥೆಯ ಕರೆಯಂತೆ 1981ರಿಂದ ಸೆಪ್ಟಂಬರ್ 21ರಂದು "ಅಂತಾರಾಷ್ಟ್ರೀಯ ಶಾಂತಿ ದಿನ" ಆಚರಿಸಲಾಗುತ್ತಿದೆ. The Sustainable Development Goals: Building Blocks for Peace" ಇದು ಈ ವರ್ಷದ ಶಾಂತಿ ದಿನದ ಧ್ಯೇಯವಾಕ್ಯ. [ನೆನಪಿಡಿ: 2016 ಜಾಗತಿಕ ಶಾಂತಿ ಸೂಚ್ಯಂಕದಲ್ಲಿ ಭಾರತ 163 ದೇಶಗಳ ಪೈಕಿ 141ನೇ ಸ್ಥಾನಗಳಿಸಿದೆ. ಐಸ್ ಲ್ಯಾಂಡ್, ಡೆನ್ಮಾರ್ಕ್, ಮತ್ತು ಆಸ್ಟ್ರೀಯಾ ಮೊದಲ ಮೂರು ಸ್ಥಾನದಲ್ಲಿವೆ.

www.karunaduexams.com

206. ಈ ಕೆಳಗಿನ ಯಾವ ಆನ್ಲೈನ್ ಮಾರುಕಟ್ಟೆ ಸಂಸ್ಥೆ (ಇ-ಕಾಮರ್ಸ್) 10 ಕೋಟಿ ನೊಂದಾಯಿತ ಬಳಕೆದಾರರನ್ನು ತಲುಪಿದ ಮೊದಲ ಭಾರತೀಯ ಸಂಸ್ಥೆಯಾಗಿದೆ?

ಅ) ಸ್ನಾಪ್ ಡೀಲ್

ಆ) ಫ್ಲಿಪ್ಕಾರ್ಟ್

ಇ) ಶಾಪ್ ಕ್ಲೂ

ಈ) ಇ-ಬೇ

ಫ್ಲಿಪ್ಕಾರ್ಟ್

ಬೆಂಗಳೂರು ಮೂಲದ ಇ-ಕಾಮರ್ಸ್ ಕಂಪೆನಿಯ ಗ್ರಾಹಕರ ಸಂಖ್ಯೆಯು 10 ಕೋಟಿ ಮೀರಿದ್ದು , ಈ ಸಾಧನೆ ಮಾಡಿದ ದೇಶದ ಮೊದಲ ಇ-ಕಾಮರ್ಸ್ ಕಂಪೆನಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಕಳೆದ ವರ್ಷ ಬಳಕೆದಾರರ ಸಂಖ್ಯೆ ದುಪ್ಪಟ್ಟಾಗಿತ್ತು. ಈ ವರ್ಷದ ಕಳೆದ ಆರು ತಿಂಗಳಿನಲ್ಲಿ 2.5 ಕೋಟಿ ಗ್ರಾಹಕರು ನೋಂದಾಯಿಸಿಕೊಂಡಿದ್ದಾರೆ.' ಅಮೆರಿಕಾ ಮತ್ತು ಚೀನಾವನ್ನು ಹೊರತುಪಡಿಸಿದರೆ ಒಂದು ದೇಶದಲ್ಲಿ ಈ ಮೈಲಿಗಲ್ಲನ್ನು ತಲುಪಿದ ಮೊದಲ ಸಂಸ್ಥೆ ಫ್ಲಿಪ್ಕಾರ್ಟ್ ಎಂದು ಕಂಪನಿ ಹೇಳಿದೆ.

207. ಪ್ರತಿಷ್ಠಿತ ಕ್ರಿಕೆಟ್ ನಿಯತಕಾಲಿಕೆ "ವಿಸ್ಡನ್ ಸಾರ್ವಕಾಲಿಕ" ಇತ್ತೀಚೆಗೆ ಪ್ರಕಟಿಸಿರುವ ಬಾರತ ಟೆಸ್ಟ್ ಶ್ರೇಷ್ಠ ಇಲೆವೆನ್ ತಂಡದ ನಾಯಕರಾಗಿ ಯಾರು ಆಯ್ಕೆಯಾಗಿದ್ದಾರೆ?

ಅ) ರಾಹುಲ್ ದ್ರಾವಿಡ್

ಆ) ಮಹೇಂದ್ರ ಸಿಂಗ್ ಧೋನಿ

ಇ) ಸಚಿನ್ ತೆಂಡೂಲ್ಕರ್

ಈ) ವಿವಿಎಸ್ ಲಕ್ಷಣ್

ಮಹೇಂದ್ರ ಸಿಂಗ್ ಧೋನಿ

ಭಾರತ ಕ್ರಿಕೆಟ್ ತಂಡ 500ನೇ ಟೆಸ್ಟ್ ಸಂಭ್ರಮದಲ್ಲಿರುವ ಹಿನ್ನಲೆಯಲ್ಲಿ ಪ್ರತಿಷ್ಠಿತ ಕ್ರಿಕೆಟ್ ನಿಯತಕಾಲಿಕೆ ವಿಸ್ಡನ್ ಸಾರ್ವಕಾಲಿಕ ಬಾರತ ಟೆಸ್ಟ್ ಶ್ರೇಷ್ಠ ಇಲೆವೆನ್ ತಂಡವನ್ನು ಪ್ರಕಟಿಸಿದೆ. ಈ ಶ್ರೇಷ್ಠ ಇಲೆವೆನ್ ತಂಡಕ್ಕೆ ಕೂಲ್ ಕ್ಯಾಪ್ಟನ್ ಮಹೇಂದ್ರ ಸಿಂಗ್ ಧೋನಿ ನಾಯಕರಾಗಿ ಆಯ್ಕೆಯಾಗಿದ್ದಾರೆ. ತಂಡದಲ್ಲಿ ಟೀಂ ಇಂಡಿಯಾದ ಮಾಜಿ ಟೆಸ್ಟ್ ನಾಯಕ ಸುನಿಲ್ ಗವಾಸ್ಕರ್ ಮತ್ತು ವೀರೇಂದ್ರ ಸೆಹ್ವಾಗ್ ಜೋಡಿ ಆರಂಭಿಕ ಆಟಗಾರರಾಗಿ ಆಯ್ಕೆಗೊಂಡಿದ್ದಾರೆ. ಭಾರತದ ಕ್ರಿಕೆಟ್ ದಂತಕಥೆಗಳಾದ ರಾಹುಲ್ ದ್ರಾವಿಡ್, ಸಚಿನ್ ತೆಂಡೂಲ್ಕರ್, ವಿವಿಎಸ್ ಲಕ್ಷ್ಮಣ್ ಮಧ್ಯಮ ಕ್ರಮಾಂಕದ ಬ್ಯಾಟ್ಸ್ ಮನ್ ಗಳಾಗಿ ಸ್ಥಾನ ಪಡೆದಿದ್ದಾರೆ. ಭಾರತ ಏಕದಿನ ಕ್ರಿಕೆಟ್ ತಂಡದ ನಾಯಕ ಮಹೇಂದ್ರ ಸಿಂಗ್ ಧೋನಿ ಅವರು ಈ ವಿಶೇಷ ತಂಡದ ವಿಕೆಟ್ ಕೀಪರ್ ಆಗಿದ್ದಾರೆ.

www.karunaduexams.com

208. "ತೆಲುಗು ಗಂಗಾ ಯೋಜನೆ"ಯು ಈ ಕೆಳಗಿನ ಯಾವ ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಯೋಜನೆಯಾಗಿದೆ?

ಅ) ವಿಶಾಖಪಟ್ಟಣ

ಆ) ವಿಜಯವಾಡ

ಇ) ಚೆನ್ನೈ

ಈ) ನಾಸಿಕ್

ಚೆನ್ನೈ

ತೆಲುಗು ಗಂಗಾ ಯೋಜನೆಯನ್ನು ಆಂಧ್ರಪ್ರದೇಶ ಅನುಷ್ಠಾನಗೊಳಿಸಿದ್ದು, ಇದರ ತಮಿಳುನಾಡಿನ ರಾಜಧಾನಿ ಚೆನ್ನೈಗೆ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. ಯೋಜನೆಯಡಿ ಶ್ರೀಶೈಲಂ ಅಣೆಕಟ್ಟಿನಿಂದ ನೀರನ್ನು ಕೊಳವೆ ಮಾರ್ಗದ ಮೂಲಕ ಸುಮಾರು 406 ಕಿ.ಮೀ ಸಾಗಿಸಿ ಚೆನ್ನೈಗೆ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಕೃಷ್ಣಾ ನದಿ ಹರಿಯುವ ರಾಜ್ಯಗಳಾದ ಮಹಾರಾಷ್ಟ್ರ, ಆಂಧ್ರಪ್ರದೇಶ, ಕರ್ನಾಟಕ ರಾಜ್ಯಗಳೊಂದಿಗೆ ತಮಿಳುನಾಡು ರಾಜ್ಯ ಒಪ್ಪಂದ ಮಾಡಿಕೊಂಡು ಈ ಯೋಜನೆಯನ್ನು ಜಾರಿಗೆ ತರಲಾಗಿದೆ.

209. ನಾಸಾದ "ಕ್ಯಾಸಿನಿ" ನೌಕೆ ಯಾವ ಗ್ರಹದ ಅಧ್ಯಯನಕ್ಕೆ ಸಂಬಂಧಿಸಿದೆ?

ಅ) ಗುರು

ಆ) ಶನಿ

ಇ) ಶುಕ್ರ

ಈ) ನೆಪ್ಚೂನ್

ಶನಿ

ಕ್ಯಾಸಿನಿ ನೌಕೆಯನ್ನು ನಾಸಾ ಅಕ್ಟೋಬರ್ 15, 1997 ರಂದು ಶನಿ ಗ್ರಹದ ಅಧ್ಯಯನಕ್ಕಾಗಿ ಹಾರಿಬಿಡಲಾಗಿತ್ತು. 1 ಜುಲೈ 2004 ರಲ್ಲಿ ನೌಕೆ ಶನಿಯ ಕಕ್ಷೆಯನ್ನು ಸೇರ್ಪಡೆಗೊಂಡಿತ್ತು. ಸದ್ಯ ಕ್ಯಾಸಿನಿ ನೌಕೆ ತನ್ನ ಅಂತಿಮ ಹಂತಕ್ಕೆ ತಲುಪಿದೆ. 1997 ರಲ್ಲಿ ಹಾರಿಸಿ ಬಿಟ್ಟ ಕ್ಯಾಸಿನಿ ನೌಕೆ ಹನ್ನೆರಡು ವರ್ಷಗಳಿಂದ ಶನಿಗ್ರಹ, ಅದರ ಸುತ್ತಲಿನ ಉಂಗುರಗಳು ಮತ್ತು ಉಪಗ್ರಹಗಳ ಬಗ್ಗೆ ಅಧ್ಯಯನ ನಡೆಸುತ್ತಿದೆ. 2017ರ ಸೆಪ್ಟೆಂಬರ್ ತಿಂಗಳಲ್ಲಿ ನೌಕೆಯು ತನ್ನ ಐತಿಹಾಸಿಕ ಯಾತ್ರೆಗೆ ಮಂಗಳಹಾಡುವ ಸಾಧ್ಯತೆ ಇದೆ. ಅದಕ್ಕೂ ಮೊದಲಿನ ಒಂದು ವರ್ಷದ ಅವಧಿಯಲ್ಲಿ ನೌಕೆಯು ಶನಿಗ್ರಹದ ಇನ್ನಷ್ಟು ಸನಿಹಕ್ಕೆ ತೆರಳಿ ಮತ್ತಷ್ಟು ಮಾಹಿತಿಗಳನ್ನು ಕಲೆ ಹಾಕಲಿದೆ.

www.karunaduexams.com

210. ಭಾರತದ ಮೊದಲ ಕರಾವಳಿ ಕೈಗಾರಿಕಾ ಕಾರಿಡಾರ್ (Coastal Industrial Corridor) ಈ ಕೆಳಗಿನ ಯಾವ ಎರಡು ನಗರಗಳ ನಡುವೆ ಸ್ಥಾಪನೆಯಾಗಲಿದೆ?

ಅ) ಮಂಗಳೂರು ಮತ್ತು ಮುಂಬೈ

ಆ) ಪಣಜಿ ಮತ್ತು ಕಾರವಾರ

ಇ) ವಿಶಾಖಪಟ್ಟಣ ಮತ್ತು ಚೆನ್ನೈ

ಈ) ಕೊಚ್ಚಿ ಮತ್ತು ಮಂಗಳೂರು

ವಿಶಾಖಪಟ್ಟಣ ಮತ್ತು ಚೆನ್ನೈ

ದೇಶದ ಮೊದಲ ಕರಾವಳಿ ಕೈಗಾರಿಕಾ ಕಾರಿಡಾರ್ ವಿಶಾಖಪಟ್ಟಣ ಮತ್ತು ಚೆನ್ನೈ ನಡುವೆ ಅಭಿವೃದ್ದಿಪಡಿಸಲಾಗುತ್ತಿದೆ. ಸುಮಾರು 2,500 ಕಿ.ಮೀ ಉದ್ದದ ಕಾರಿಡಾರ್ ಇದಾಗಿದ್ದು, ದೇಶದ ಪೂರ್ವ ಕರಾವಳಿ ಅಭಿವೃದ್ಧಿಗೆ ಇದು ಮಹತ್ವದ ಪಾತ್ರವಹಿಸಲಿದೆ. ಇತ್ತೀಚೆಗೆ ಈ ಯೋಜನೆಯ 800 ಕಿ.ಮೀ ಕಾರಿಡಾರ್ ಅಭಿವೃದ್ಧಿಗೆ ಏಷ್ಯಾ ಅಭಿವೃದ್ಧಿ ಬ್ಯಾಂಕ್ ರೂ 4228.9 ಕೋಟಿ ನೆರವು ನೀಡಲು ಒಪ್ಪಿಗೆ ಸೂಚಿಸಿದೆ. ಈ ಯೋಜನೆಯ ಒಟ್ಟು ವೆಚ್ಚ ರೂ 5669.75 ಕೋಟಿ ಎಂದು ಅಂದಾಜಿಸಲಾಗಿದ್ದು, ಉಳಿದ ಮೊತ್ತವನ್ನು ಆಂಧ್ರಪ್ರದೇಶ ಸರ್ಕಾರ ಭರಿಸಲಿದೆ. ಈ ಯೋಜನೆ 2031ಕ್ಕೆ ಪೂರ್ಣಗೊಳ್ಳಲಿದೆ. ಪೂರ್ಣಗೊಂಡ ನಂತರ ಈ ಕಾರಿಡಾರ್ ಅನ್ನು ಪಶ್ಚಿಮ ಬಂಗಾಳದ ಕೊಲ್ಕತ್ತಾದಿಂದ ತಮಿಳುನಾಡಿನ ಟ್ಯೂಟಿಕುರಿನ್ ವರೆಗೂ ವಿಸ್ತರಿಸಲಾಗುವುದು.

211. “ಮಲಕಸ್ (Malakas) ಚಂಡಮಾರುತ” ದಿಂದ ಇತ್ತೀಚೆಗೆ ತೀವ್ರ ಸಂಕಷ್ಟಕ್ಕೆ ಒಳಗಾಗಿರುವ ದೇಶ_____?

ಅ) ಚೀನಾ

ಆ) ಜಪಾನ್

ಇ) ಫಿಲಿಫೈನ್ಸ್

ಈ) ಇಂಡೋನೇಷಿಯಾ

ಜಪಾನ್

ಪ್ರಬಲ ಚಂಡಮಾರುತ “ಮಲಕಸ್” ಜಪಾನ್ನ ದಕ್ಷಿಣ ಭಾಗಕ್ಕೆ ಅಪ್ಪಳಿಸಿದ್ದು ಅಪಾರ ಹಾನಿ ಉಂಟುಮಾಡಿದೆ. ಮಲಕಸ್ ಚಂಡಮಾರುತ ಹಿನ್ನಲೆಯಲ್ಲಿ ಸುಮಾರು 5,00,000 ಲಕ್ಷಕ್ಕೂ ಹೆಚ್ಚು ಜನರು ನಿರಾಶ್ರಿತರಾಗಿದ್ದಾರೆ ಎಂದು ತಿಳಿದು ಬಂದಿದೆ.

www.karunaduexams.com

212. ವಿಶ್ವ ಬ್ಯಾಂಕ್ ನ ಭಾರತ ದೇಶದ ನಿರ್ದೇಶಕ (World Bank's new Country Director for India)ರಾಗಿ ಯಾರು ನೇಮಕಗೊಂಡಿದ್ದಾರೆ?

ಅ) ಒನ್ನೊ ರುಹಲ್

ಆ) ಜುನೈದ್ ಅಹಮ್ಮದ್

ಇ) ಅನ್ನೆಟೆ ಡಿಕ್ಸನ್

ಈ) ಡೇವಿಡ್ ಜೇಮ್ಸ್

ಬಾಂಗ್ಲದೇಶ ಮೂಲದ ಜುನೈದ್ ಅಹಮ್ಮದ್ ಅವರನ್ನು ವಿಶ್ವಬ್ಯಾಂಕ್ ನ ಭಾರತ ದೇಶದ ನಿರ್ದೇಶಕರಾಗಿ ನೇಮಕಮಾಡಲಾಗಿದೆ. ಜುನೈದ್ ಅವರು ಒನ್ನೊ ರುಹಲ್ ಅವರ ಉತ್ತರಾಧಿಕಾರಿಯಾಗಿದ್ದಾರೆ. ಇದಕ್ಕೂ ಮುಂಚೆ ಇವರು ವಿಶ್ವ ಬ್ಯಾಂಕ್ ಅಧ್ಯಕ್ಷ ಜಿಮ್ ಯಾಂಗ್ ಕಿಮ್ ರವರ ಸಿಬ್ಬಂದಿಗೆ ಮುಖ್ಯಸ್ಥರಾಗಿದ್ದರು.

213. 2015-16ನೇ ಹಣಕಾಸು ವರ್ಷದಲ್ಲಿ ಯಾವ ರಾಜ್ಯ ದೇಶದಲ್ಲೇ ಅತ್ಯಧಿಕ ಕೈಗಾರಿಕಾ ಬಂಡವಾಳ ಆಕರ್ಷಿಸಿದ ರಾಜ್ಯವೆನಿಸಿದೆ?

ಅ) ತೆಲಂಗಣ

ಆ) ಮಹಾರಾಷ್ಟ್ರ

ಇ) ಆಂಧ್ರಪ್ರದೇಶ

ಈ) ಕರ್ನಾಟಕ

ಆಂಧ್ರಪ್ರದೇಶ

ಆಂಧ್ರಪ್ರದೇಶ 2015-16ನೇ ಹಣಕಾಸು ವರ್ಷದಲ್ಲಿ ದೇಶದಲ್ಲೇ ಅತ್ಯಧಿಕ ಕೈಗಾರಿಕಾ ಬಂಡವಾಳ ಆಕರ್ಷಿಸಿದ ರಾಜ್ಯವೆಂಬ ಖ್ಯಾತಿಗೆ ಪಾತ್ರವಾಗಿದೆ. ಕಳೆದ ವರ್ಷ ಅಗ್ರಸ್ಥಾನದಲ್ಲಿದ್ದ ಮಹಾರಾಷ್ಟ್ರವನ್ನು ಹಿಂದಿಕ್ಕಿ ಆಂಧ್ರಪ್ರದೇಶ ಈ ಸಾಧನೆ ಮಾಡಿದೆ. ಕಳೆದ ವರ್ಷದ ದೇಶದಲ್ಲಿ ರೂ 1,38,700 ಕೋಟಿ ಬಂಡವಾಳ ಆಕರ್ಷಿಸಲಾಗಿದೆ, ಇದರಲ್ಲಿ ಆಂಧ್ರಪ್ರದೇಶ ರೂ 21914 ಕೋಟಿ ಆಕರ್ಷಿಸುವ ಮೂಲಕ ಅಗ್ರಸ್ಥಾನವನ್ನು ಗಳಿಸಿದೆ. ಗುಜರಾತ್ ಮತ್ತು ಮಹಾರಾಷ್ಟ್ರ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿವೆ. ಕರ್ನಾಟಕ ಐದನೇ ಸ್ಥಾನದಲ್ಲಿದೆ ಗುರುತಿಸಿಕೊಂಡಿದೆ.

214. "ರೇಖಾ: ದಿ ಅನ್ಟೋಲ್ಡ್ ಸ್ಟೋರಿ (Rekha: The Untold Story)" ಪುಸ್ತಕದ ಲೇಖಕರು ____?

ಅ) ಅರ್ಪಿತ್ ಸಿಂಗ್

ಆ) ಯಾಸಿರ್ ಉಸ್ಮಾನ್

ಇ) ದೇವೇಂದ್ರ ಭಾಟಿಯಾ

ಈ) ಮೈಥಿಲಿ ಗುಪ್ತಾ

ಯಾಸಿರ್ ಉಸ್ಮಾನ್

www.karunaduexams.com

ಯಾಸಿರ್ ಉಸ್ಮಾನ್ ಅವರು "ರೇಖಾ: ದಿ ಅನ್ಟೋಲ್ಡ್ ಸ್ಟೋರಿ" ಪುಸ್ತಕದ ಲೇಖಕರು. ಇದು ಖ್ಯಾತ ಬಾಲಿವುಡ್ ನಟಿ ರೇಖಾ ಅವರ ಜೀವನ ಚರಿತ್ರೆ. ರೇಖಾ ಅವರ ಸಿನಿಮಾ ಹೊರತಾದ ಜೀವನದ ಬಗ್ಗೆ ಪುಸ್ತಕದಲ್ಲಿ ಬಣ್ಣಿಸಲಾಗಿದೆ.

215. ಮೊಟ್ಟಮೊದಲ ಭಾರತೀಯ ಸಂಗೀತ ಮತ್ತು ನೃತ್ಯ ಉತ್ಸವ "ಸಂಗಮ: ಭಾರತದ ಉತ್ಸವ (Confluence: Festival of India)" ಯಾವ ದೇಶದಲ್ಲಿ ಆರಂಭಗೊಂಡಿತು?

ಅ) ಆಸ್ಟ್ರೇಲಿಯಾ

ಆ) ಟರ್ಕಿ

ಇ) ಇಸ್ರೇಲ್

ಈ) ಫ್ರಾನ್ಸ್

ಆಸ್ಟ್ರೇಲಿಯಾ

ಚೊಚ್ಚಲ ಭಾರತೀಯ ಸಂಗೀತ ಮತ್ತು ನೃತ್ಯ ಉತ್ಸವ "ಸಂಗಮ: ಭಾರತದ ಉತ್ಸವ" ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ಆರಂಭಗೊಂಡಿತು. ಕೇಂದ್ರ ಪ್ರವಾಸ ಮತ್ತು ಸಂಸ್ಕೃತಿ ಖಾತೆ ಸಚಿವ ಮಹೇಶ್ ಶರ್ಮಾ ಅವರು ಈ ಹಬ್ಬವನ್ನು ಉದ್ಘಾಟಿಸಿದರು. 10 ವಾರಗಳ ಕಾಲ ನಡೆಯಲಿರುವ ಈ ಉತ್ಸವದಲ್ಲಿ ಭಾರತದ ಶ್ರೀಮಂತ ಮತ್ತು ವೈವಿಧ್ಯ ಸಂಸ್ಕೃತಿಯನ್ನು ಪ್ರದರ್ಶಿಸಲಾಗುವುದು. ಸಿಡ್ನಿ ಹೊರತುಪಡಿಸಿ ಆಸ್ಟ್ರೇಲಿಯಾದ ಏಳು ನಗರಗಳಲ್ಲಿ ಈ ಉತ್ಸವ ನಡೆಯಲಿದೆ.

216. ಇತ್ತೀಚೆಗೆ ಈ ಕೆಳಗಿನ ಯಾವ ಷೇರು ವಿನಿಮಯ ಸಂಸ್ಥೆ ಷೇರು ಮಾರುಕಟ್ಟೆ ಬಗ್ಗೆ ನೇರ ಮಾಹಿತಿ ಒದಗಿಸುವ ಸಲುವಾಗಿ ಟ್ವಿಟರ್ ಜೊತೆ ಕೈಜೋಡಿಸಿದೆ?

ಅ) ಬಾಂಬೆ ಸ್ಟಾಕ್ ಎಕ್ಸಚೇಂಜ್

ಆ) ನ್ಯಾಷನಲ್ ಸ್ಟಾಕ್ ಎಕ್ಸಚೇಂಜ್

ಇ) ಕೊಲ್ಕತ್ತ ಸ್ಟಾಕ್ ಎಕ್ಸಚೇಂಜ್

ಈ) ಮಲ್ಟಿ ಕಮಡಿಟಿ ಎಕ್ಸಚೇಂಜ್ ಆಫ್ ಇಂಡಿಯಾ

ಬಾಂಬೆ ಸ್ಟಾಕ್ ಎಕ್ಸಚೇಂಜ್

ಬಂಡವಾಳ ಹೂಡಿಕೆದಾರರಿಗೆ ಷೇರು ಮಾರುಕಟ್ಟೆಯ ನೇರ ಮಾಹಿತಿ ಒದಗಿಸುವ ಸಲುವಾಗಿ ಬಾಂಬೆ ಸ್ಟಾಕ್ ಎಕ್ಸಚೇಂಜ್ (BSE) ಸಾಮಾಜಿಕ ತಾಣ ಟ್ವಿಟರ್ ನೊಂದಿಗೆ ಕೈಜೋಡಿಸಿದೆ. ಅದರಂತೆ ಟ್ವಿಟರ್ ಸೆನ್ಸೆಕ್ಸ್ ಮಟ್ಟ, ಷೇರು ದರ, ಷೇರು ಮಾರುಕಟ್ಟೆಯ ಆರಂಭ ಮತ್ತು ಮುಕ್ತಾಯ ಅಂಕಿಅಂಶಗಳ ನೇರ ಮಾಹಿತಿಯನ್ನು ಮಿಲಿಯನ್ ಬಂಡವಾಳ ಹೂಡಿಕೆದಾರರಿಗೆ ಒದಗಿಸಲಿದೆ. ಷೇರು ವಿನಿಮಯ ಸಂಸ್ಥೆ ಮತ್ತು ಸಾಮಾಜಿಕ ತಾಣ ಮಧ್ಯೆ ಇಂತಹ ಒಪ್ಪಂದ ಏರ್ಪಟ್ಟಿರುವದು ಏಷ್ಯಾದಲ್ಲೇ ಮೊಟ್ಟ ಮೊದಲನೇಯದಾಗಿದೆ.

www.karunaduexams.com

217. ಕೊಲ್ಕತ್ತಾ ಹೈಕೋರ್ಟ್ ನ ಮುಖ್ಯನ್ಯಾಯಾಧೀಶರಾಗಿ ಈ ಕೆಳಗಿನ ಯಾರು ಪ್ರಮಾಣ ವಚನ ಸ್ವೀಕರಿಸಿದರು?

ಅ) ಗಿರೀಶ್ ಚಂದ್ರ ಗುಪ್ತಾ

ಆ) ಮೋಹನ್ ಶಾಂತನಗೌಡರ್

ಇ) ಕಿರಣ್ ಚಂದ್ರ

ಈ) ನಾಗಮೂರ್ತಿ ಶೇಖರ್

ಗಿರೀಶ್ ಚಂದ್ರ ಗುಪ್ತಾ

ಗಿರೀಶ್ ಚಂದ್ರ ಗುಪ್ತಾ ಕೊಲ್ಕತ್ತಾ ಹೈಕೋರ್ಟ್ನ ಮುಖ್ಯನ್ಯಾಯಾಧೀಶರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಡಿಸೆಂಬರ್ 2016 ರಲ್ಲಿ ಇವರು ನಿವೃತ್ತಿ ಹೊಂದಲಿದ್ದು, ಅಲ್ಪ ಅವಧಿಯ ಕಾಲ ಹುದ್ದೆಯಲ್ಲಿ ಇರಲಿದ್ದಾರೆ.

218. ಅಮೆರಿಕಕ್ಕೆ ಭಾರತದ ನೂತನ ರಾಯಭಾರಿಯಾಗಿ ಯಾರು ನೇಮಕಗೊಂಡಿದ್ದಾರೆ?

ಅ) ನವತೇಜ್ ಸರನಾ

ಆ) ಗೌತಮ್ ವರ್ಮಾ

ಇ) ಕೌಶಿಕ್ ಮುಖರ್ಜಿ

ಈ) ಸುಜಾತ ಗೊಯೆಲ್

ನವತೇಜ್ ಸರನಾ

ಭಾರತ ವಿದೇಶಾಂಗ ಸೇವೆಯ 1980ನೇ ತಂಡದ ಅಧಿಕಾರಿ ನವತೇಜ್ ಸರನಾ ಅವರು ಅಮೆರಿಕಕ್ಕೆ ಭಾರತದ ನೂತನ ರಾಯಭಾರಿಯಾಗಿ ನೇಮಕಗೊಂಡಿದ್ದಾರೆ. ಪ್ರಸ್ತುತ ಇವರು ಇಂಗ್ಲೆಂಡ್ ನಲ್ಲಿ ಭಾರತದ ಹೈಕಮೀಷನರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ.

219. ಸರಕು ಮತ್ತು ಸೇವಾ ತೆರಿಗೆ ಮಂಡಳಿಯ ಮೊದಲ ಸಭೆಯನ್ನು ಈ ಕೆಳಗಿನ ಯಾವ ನಗರದಲ್ಲಿ ಆಯೋಜಿಸಲಾಗಿತ್ತು?

ಅ) ಮುಂಬೈ

ಆ) ನವದೆಹಲಿ

ಇ) ಪುಣೆ

ಈ) ಹೈದ್ರಾಬಾದ್

ನವದೆಹಲಿ

ಸರಕು ಮತ್ತು ಸೇವಾ ತೆರಿಗೆ ಮಂಡಳಿಯ ಮೊಟ್ಟ ಮೊದಲ ಸಭೆ ನವದೆಹಲಿಯಲ್ಲಿ ನಡೆಯಿತು. ಕೇಂದ್ರ ಹಣಕಾಸು ಸಚಿವ ಅರುಣ್ ಜೇಟ್ಲಿ ಅವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಎರಡು ದಿನಗಳ ಸಭೆಯಲ್ಲಿ ಜಿಎಸ್ಟಿ ಮುಂದಿನ ಹಣಕಾಸು ವರ್ಷದಿಂದ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಜಾರಿಗೆ ತರುವುದಕ್ಕೆ ಪೂರಕವಾಗಿ ವೇಳಾಪಟ್ಟಿಗೆ ಅನುಗುಣವಾಗಿ ತೆರಿಗೆ ದರ ನಿಗದಿಪಡಿಸಲು, ಶಾಸನಾತ್ಮಕ ಪ್ರಕ್ರಿಯೆ ಪೂರ್ಣಗೊಳಿಸಲು ಕೇಂದ್ರ ಮತ್ತು ರಾಜ್ಯ

www.karunaduexams.com

ಸರ್ಕಾರಗಳು ಸಮ್ಮತಿಸಿವೆ. ಆದರೆ, ಹೊಸ ತೆರಿಗೆಯಿಂದ ವಿನಾಯ್ತಿ ನೀಡುವ ವಹಿವಾಟಿನ ಮಿತಿಗೆ ಸಂಬಂಧಿಸಿದಂತೆ ಒಮ್ಮತಕ್ಕೆ ಬರುವಲ್ಲಿ ಜಿಎಸ್‌ಟಿ ಮಂಡಳಿ ಸಭೆ ವಿಫಲಗೊಂಡಿದೆ.

220. ಪಶ್ಚಿಮ ಬಂಗಾಳದ ಅತ್ಯುನ್ನತ ನಾಗರೀಕ ಪ್ರಶಸ್ತಿಯಾದ "ಬಂಗ ಬಿಭೂಷಣ್ (Banga Bibhushan)" ಪ್ರಶಸ್ತಿಯನ್ನು ಯಾರಿಗೆ ನೀಡಲಾಗುತ್ತಿದೆ?

ಅ) ಅಮಿತಾಬ್ ಬಚ್ಚನ್

ಆ) ಲತಾ ಮಂಗೇಶ್ಕರ್

ಇ) ಸೌರವ್ ಗಂಗೂಲಿ

ಈ) ಶಾರುಖ್ ಖಾನ್

ಲತಾ ಮಂಗೇಶ್ಕರ್

ಖ್ಯಾತ ಗಾಯಕಿ ಲತಾ ಮಂಗೇಶ್ಕರ್ ಅವರನ್ನು ಪಶ್ಚಿಮ ಬಂಗಾಳದ ಅತ್ಯುನ್ನತ ನಾಗರೀಕ ಪ್ರಶಸ್ತಿಯಾದ "ಬಂಗ ಬಿಭೂಷಣ್" ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಈ ವಿಷಯವನ್ನು ಖಚಿತಪಡಿಸಿದ್ದಾರೆ. ಬಂಗಾಳಿ ಸಂಗೀತಕ್ಕೆ ಲತಾ ಅವರು ನೀಡಿರುವ ಅಪಾರ ಕೊಡುಗೆಯನ್ನು ಗಮನಿಸಿ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಪ್ರಶಸ್ತಿಯನ್ನು ಮುಂದಿನ ತಿಂಗಳು ಸ್ವತಃ ಮಮತಾ ಬ್ಯಾನರ್ಜಿ ಅವರೇ ಲತಾ ಮಂಗೇಶ್ಕರ್ ಅವರ ಮನೆಗೆ ತೆರಳಿ ನೀಡಲಿದ್ದಾರೆ ಎಂದು ವರದಿಯಾಗಿದೆ.

221. ಇತ್ತೀಚೆಗೆ ಬಿಡುಗಡೆಗೊಂಡ "ಸಿಟಿಜೆನ್ ಅಂಡ್ ಸೊಸೈಟಿ (Citizen and Society)" ಪುಸ್ತಕದ ಲೇಖಕರು____?

ಅ) ಮನಮೋಹನ್ ಸಿಂಗ್

ಆ) ಜೈರಾಮ್ ರಮೇಶ್

ಇ) ಹಮೀದ್ ಅನ್ಸಾರಿ

ಈ) ಪ್ರಣಬ್ ಮುಖರ್ಜಿ

ಹಮೀದ್ ಅನ್ಸಾರಿ

ಉಪರಾಷ್ಟ್ರಪತಿ  ಮೊಹಮ್ಮದ್ ಹಮೀದ್ ಅನ್ಸಾರಿ ಅವರು 'ಸಿಟಿಜೆನ್ ಅಂಡ್ ಸೊಸೈಟಿ' ಪುಸ್ತಕದ ಲೇಖಕರು. ಈ ಪುಸ್ತಕವನ್ನ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಮತ್ತು ಪ್ರಧಾನಿ ನರೇಂದ್ರ ಮೋದಿ ರವರು ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ಬಿಡುಗಡೆ ಮಾಡಿದರು. ಉಪರಾಷ್ಟರಪತಿ ಹಮೀದ್ ಅನ್ಸಾರಿ ಬೇರೆ ಬೇರೆ ವಿಚಾರಗಳಿಗೆ ಸಂಬಂಧಿಸಿ ನೀಡಿದ ಉಪನ್ಯಾಸಗಳ ಸಂಗ್ರಹಿಸಿ ಸಿಟಿಜೆನ್ ಅಂಡ್ ಸೊಸೈಟಿ ಪುಸ್ತಕವನ್ನು ಹೊರತಂದಿದ್ದಾರೆ.

www.karunaduexams.com

222. “2016 ಕ್ಲಿಂಟನ್ ಜಾಗತಿಕ ನಾಗರೀಕ ಪ್ರಶಸ್ತಿ (Clinton Global Citizen Award)” ಯಾರಿಗೆ ನೀಡಲಾಗಿದೆ?

ಅ) ಆದಿ ಗೋದ್ರೆಜ್

ಆ) ಸುಧಾ ಮೂರ್ತಿ

ಇ) ಅಜೀಂ ಪ್ರೇಮ್ಜಿ

ಈ) ರತನ್ ಟಾಟಾ

ಆದಿ ಗೋದ್ರೆಜ್

ಗೋದ್ರೆಜ್ ಗ್ರೂಫ್ ನ ಮುಖ್ಯಸ್ಥ ಆದಿ ಗೋದ್ರೆಜ್ ಅವರಿಗೆ 2016 ಕ್ಲಿಂಟನ್ ಜಾಗತಿಕ ನಾಗರೀಕ ಪ್ರಶಸ್ತಿಯನ್ನು ನೀಡಲಾಗಿದೆ. ವ್ಯವಹಾರ ಮತ್ತು ಜನಪೋಕಾರಿ ಕ್ಷೇತ್ರದಲ್ಲಿ ಗೋದ್ರೆಜ್ ಅವರ ನಾಯಕತ್ವದ ಗುಣವನ್ನು ಪರಿಗಣಿಸಿ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ.

223. “ಇಂದ್ರ-2016 (INDRA-2016)” ಮಿಲಿಟರಿ ಸಮರಾಭ್ಯಾಸ ಇತ್ತೀಚೆಗೆ ಭಾರತ ಮತ್ತು ಯಾವ ದೇಶದ ನಡುವೆ ಆರಂಭಗೊಂಡಿತು?

ಅ) ಇಸ್ರೇಲ್

ಆ) ಜಪಾನ್

ಇ) ರಷ್ಯಾ

ಈ) ಆಸ್ಟ್ರೇಲಿಯಾ

ರಷ್ಯಾ

ಭಾರತ ಮತ್ತು ರಷ್ಯಾ ನಡುವಿನ ಜಂಟಿ ಮಿಲಿಟರಿ ಸಮರಾಭ್ಯಾಸ “ಇಂದ್ರ-2016” ರಷ್ಯಾದ ವ್ಲಾಡಿವೋಸ್ಟಾಕ್ ನಲ್ಲಿ ಆರಂಭಗೊಂಡಿದೆ. ಈ ಜಂಟಿ ಸಮರಾಭ್ಯಾಸದಲ್ಲಿ ಉಭಯ ದೇಶಗಳು ಅರೆ ಪರ್ವತ ಮತ್ತು ಜಂಗಲ್ ಪ್ರದೇಶದಲ್ಲಿ ಭಯೋತ್ಪಾದನೆ ವಿರುದ್ದ ಕಾರ್ಯಾಚರಣೆ ಅಭ್ಯಾಸ ನಡೆಸಲಿವೆ.

224. “ಭಾರತೀಯ ಅಂಕಿ-ಅಂಶ ಸಂಸ್ಥೆಯ(Indian Statistical Institute (ISI)) ಅಧ್ಯಕ್ಷರಾಗಿ ಯಾರು ಚುನಾಯಿತಗೊಂಡಿದ್ದಾರೆ?

ಅ) ವಿಜಯ್ ಕೇಳ್ಕರ್

ಆ) ಕೌಶಿಕ್ ಬಸು

ಇ) ವೆಂಕಟ್ ರಮಣ್

ಈ) ಸಂತೋಷ್ ಮೌದ್ಗಿಲ್

ವಿಜಯ್ ಕೇಳ್ಕರ್

www.karunaduexams.com

ಮಾಜಿ ಪೆಟ್ರೋಲಿಯಂ ಕಾರ್ಯದರ್ಶಿ ವಿಜಯ್ ಕೇಳ್ಕರ್ ಪ್ರತಿಷ್ಠಿತ ಭಾರತೀಯ ಅಂಕಿ-ಅಂಶ ಸಂಸ್ಥೆಯ(ಐಎಸ್ಐ) ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ಕೇಳ್ಕರ್ ಅವರು ಭಾರತೀಯ ರಿಸರ್ವ್ ಬ್ಯಾಂಕ್ನ ಮಾಜಿ ಗವರ್ನರ್ ಸಿ. ರಂಗರಾಜನ್ ಅವರ ಉತ್ತರಾಧಿಕಾರಿಯಾಗಲಿದ್ದಾರೆ. ಭಾರತೀಯ ಅಂಕಿ-ಅಂಶ ಸಂಸ್ಥೆಯು ಅಂಕಿ-ಅಂಶ ಮತ್ತು ಕಾರ್ಯಕ್ರಮ ಜಾರಿ ಸಚಿವಾಲಯದ ಅಧೀನದಲ್ಲಿ ಕೆಲಸ ಮಾಡುತ್ತಿದೆ.

225.ಭಾರತೀಯ ವಾಯುಪಡೆ ಇತ್ತೀಚೆಗೆ "MICA" ಕ್ಷಿಪಣಿಯನ್ನು ಯಶಸ್ವಿಯಾಗಿ ಪರೀಕ್ಷಿಸಿದೆ. MICA ಕ್ಷಿಪಣಿ _____?

ಅ) ಗಾಳಿಯಿಂದ ಗಾಳಿಗೆ ಚಿಮ್ಮುವ ಕ್ಷಿಪಣಿ

ಆ) ಭೂಮಿಯಿಂದ ಗಾಳಿಗೆ ಚಿಮ್ಮುವ ಕ್ಷಿಪಣಿ

ಇ) ನೀರಿನಿಂದ ಗಾಳಿಗೆ ಚಿಮ್ಮುವ ಕ್ಷಿಪಣಿ

ಈ) ಮೇಲಿನ ಯಾವುದು ಅಲ್ಲ

ಗಾಳಿಯಿಂದ ಗಾಳಿಗೆ ಚಿಮ್ಮುವ ಕ್ಷಿಪಣಿ

ಭಾರತೀಯ ವಾಯುಪಡೆಯ ಟೈಗರ್ ಸ್ಕ್ವಾಡ್ರನ್ ಗಾಳಿಯಿಂದ ಗಾಳಿಗೆ ಚಿಮ್ಮುವ MICA ಕ್ಷಿಪಣಿಯನ್ನು ಯಶಸ್ವಿಯಾಗಿ ಪರೀಕ್ಷಿಸಿದೆ. MICA ಕ್ಷಿಪಣಿಯನ್ನು ಭಾರತ ಯುರೋಪ್ ನ ಪ್ರಮುಖ ಕ್ಷಿಪಣಿ ತಯಾರಿಕೆ ಸಂಸ್ಥೆ MBDA ಯಿಂದ ಖರೀದಿಸಿದೆ. ಈ ಕ್ಷಿಪಣಿಗಳನ್ನು ಭಾರತ ಫ್ರಾನ್ಸ್ ನಿಂದ ಖರೀದಿಸಲಿರುವ ರಫೆಲ್ ಜೆಟ್ ಗಳಲ್ಲಿ ಅಳವಡಿಸಲಾಗುವುದು.

226. ಕೇಂದ್ರ ಸಚಿವ ಸಂಪುಟ ಇತ್ತೀಚೆಗೆ ರೈಲ್ವೆ ಬಜೆಟ್ ಅನ್ನು ಸಾಮಾನ್ಯ ಬಜೆಟ್ ನೊಂದಿಗೆ ವಿಲೀನಗೊಳಿಸಲು ಒಪ್ಪಿಗೆ ನೀಡಿದೆ. ಈ ಕೆಳಗಿನ ಯಾವ ಸಮಿತಿಯು ರೈಲ್ವೆ ಬಜೆಟ್ ಅನ್ನು ವಿಲೀನಗೊಳಿಸಲು ಶಿಫಾರಸ್ಸು ಮಾಡಿತ್ತು?

ಅ) ಕಮಲೇಶ್ ಚಂದ್ರ ಸಮಿತಿ

ಆ) ಬಿಬೇಕ್ ದೇಬ್ ರಾಯ್ ಸಮಿತಿ

ಇ) ಅರವಿಂದ್ ಪನಗರಿಯ ಸಮಿತಿ

ಈ) ಅರವಿಂದ್ ಸುಬ್ರಮಣಿಯನ್ ಸಮಿತಿ

ಬಿಬೇಕ್ ದೇಬ್ ರಾಯ್ ಸಮಿತಿ

ರೈಲ್ವೆ ಬಜೆಟ್ ಅನ್ನು ಪ್ರತ್ಯೇಕವಾಗಿ ಮಂಡಿಸಿದೆ ಹಣಕಾಸು ಬಜೆಟ್ ನೊಂದಿಗೆ ವಿಲೀನಗೊಳಿಸುವ ಹಣಕಾಸು ಇಲಾಖೆಯ ಪ್ರಸ್ತಾವನೆಗೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಅದರಂತೆ ಮುಂದಿನ ಹಣಕಾಸು ಬಜೆಟ್ ನಲ್ಲಿ ರೈಲ್ವೆ ಬಜೆಟ್ ಅನ್ನು ವಿಲೀನಗೊಳಿಸಲಾಗುವುದು. ಆ ಮೂಲಕ 92 ವರ್ಷಗಳ ಚರಿತ್ರೆ ಹೊಂದಿರುವ ಪ್ರತ್ಯೇಕ ರೈಲ್ವೆ ಬಜೆಟ್ ಮಂಡನೆ ಸಂಪ್ರದಾಯಕ್ಕೆ ಅಂತ್ಯ ಹಾಡಲಾಗುವುದು. ನೀತಿ ಆಯೋಗದ ಸದಸ್ಯ ಬಿಬೇಕ್ ದೇಬ್ ರಾಯ್ ನೇತೃತ್ವದ ಸಮಿತಿ ರೈಲ್ವೆ ಬಜೆಟ್ ಅನ್ನು ಸಾಮಾನ್ಯ ಬಜೆಟ್ನಲ್ಲಿ ವಿಲೀನಗೊಳಿಸುವಂತೆ ಶಿಫಾರಸ್ಸು ಮಾಡಿತ್ತು.

www.karunaduexams.com

227. ಈ ಕೆಳಗಿನ ನದಿಗಳನ್ನು ಗಮನಿಸಿ:

I) ರಾವಿ

II) ಜೀಲಂ

III) ಚೀನಾಬ್

ಇಂಡಸ್ ಜಲ ಒಪ್ಪಂದದ ಪ್ರಕಾರ ಈ ಮೇಲಿನ ಯಾವ ನದಿಗಳ ನೀರನ್ನು ಪಾಕಿಸ್ತಾನ ಬಳಸಿಕೊಳ್ಳಬಹುದಾಗಿದೆ?

ಅ) I & II

ಆ) II & III

ಇ) I & III

ಈ) I, II & III

II & III

ಭಾರತ ಮತ್ತು ಪಾಕಿಸ್ತಾನ 1960 ರಲ್ಲಿ ಇಂಡಸ್ ಜಲ ಒಪ್ಪಂದಕ್ಕೆ ಸಹಿ ಹಾಕಿವೆ. ಒಪ್ಪಂದದ ಪ್ರಕಾರ ರಾವಿ, ಬಿಯಾಸ್ ಮತ್ತು ಸಟ್ಲೇಜ್ ನದಿಗಳ ನೀರನ್ನ ಭಾರತ ಬಳಸಿಕೊಳ್ಳಬಹುದಾಗಿದೆ. ಇಂಡಸ್, ಜೀಲಂ ಮತ್ತು ಚೀನಾಬ್ ನದಿಯ ನೀರನ್ನ ಪಾಕ್ ಬಳಕೆ ಮಾಡಿಕೊಳ್ಳಬಹುದಾಗಿದೆ.

228. "ಕರ್ಬಿ ಪೀಪಲ್ಸ್ ಲಿಬರೇಷನ್ ಟೈಗರ್ (Karbi People's Liberation Tiger)" ಬಂಡಕೋರ ಪಡೆ ಯಾವ ರಾಜ್ಯದಲ್ಲಿ ಸಕ್ರಿಯವಾಗಿದೆ?

ಅ) ಅಸ್ಸಾಂ

ಆ) ಅರುಣಾಚಲ ಪ್ರದೇಶ

ಇ) ಸಿಕ್ಕಿಂ

ಈ) ಮಣಿಪುರ

ಕರ್ಬಿ ಪೀಪಲ್ಸ್ ಲಿಬರೇಷನ್ ಟೈಗರ್ ಬಂಡುಕೋರ ಪಡೆ ಅಸ್ಸಾಂನಲ್ಲಿ ಸಕ್ರಿಯವಾಗಿರುವ ಬಂಡುಕೋರ ಗುಂಪು. ಜನವರಿ 8, 2011 ರಲ್ಲಿ ಇದು ಸ್ಥಾಪಿತಗೊಂಡಿದೆ. ಅಸ್ಸಾಂನಿಂದ ಕರ್ಬಿ ಪ್ರಾಂತ್ಯವನ್ನು ಬೇರ್ಪಡಿಸಿ ಪ್ರತ್ಯೇಕ ಸ್ವಾಯತತ ರಾಜ್ಯವನ್ನು ಸ್ಥಾಪಿಸುವ ಉದ್ದೇಶದೊಂದಿಗೆ ಇದು ಸಂಘರ್ಷಕ್ಕೆ ಇಳಿದಿದೆ.

www.karunaduexams.com

229. ಈ ಕೆಳಗಿನ ಯಾವುದು ಪಾಕಿಸ್ತಾನ ಮತ್ತು ರಷ್ಯಾ ನಡುವೆ ಇತ್ತೀಚೆಗೆ ಆರಂಭಗೊಂಡ ಜಂಟಿ ಸಮರಾಭ್ಯಾಸವಾಗಿದೆ?

ಅ) ಫ್ರೆಂಡ್ ಶಿಪ್-2016

ಆ) ಈಗಲ್ ಐ-2016

ಇ) ಕೋಬ್ರಾ-2016

ಈ) ಸ್ಟೆಪ್ ಇನ್-2016

ಫ್ರೆಂಡ್ ಶಿಪ್-2016

ಪಾಕಿಸ್ತಾನ ಮತ್ತು ರಷ್ಯಾ ನಡುವೆ "ಫ್ರೆಂಡ್ ಶಿಪ್-2016" ಜಂಟಿ ಸಮರಾಭ್ಯಾಸ ಪ್ರಾರಂಭವಾಗಿದೆ. ಉತ್ತರ ಪಾಕಿಸ್ತಾನದ ಪ್ರದೇಶದಲ್ಲಿ ಈ ಸಮರಾಭ್ಯಾಸ ಸೆ.24 ರಿಂದ ಅಕ್ಟೋಬರ್ 7 ವರೆಗೆ ನಡೆಯಲಿದೆ.

230. 2016 ರೈಟ್ ಲೈವ್ಲಿಹುಡ್ ಪ್ರಶಸ್ತಿಗೆ ಆಯ್ಕೆಯಾಗಿರುವ "ದಿ ವೈಟ್ ಹೆಲ್ಮೆಟ್ಸ್ (The White Helmets)" ಯಾವ ದೇಶದ ನಾಗರೀಕ ರಕ್ಷಣಾ ಪಡೆಯಾಗಿದೆ?

ಅ) ಸಿರಿಯಾ

ಆ) ಟರ್ಕಿ

ಇ) ನೈಜೀರಿಯಾ

ಈ) ಈಜಿಪ್ಟ್

ಸಿರಿಯಾ

ಪರ್ಯಾಯ ನೊಬೆಲ್ ಎಂದೇ ಪ್ರಸಿದ್ದಿ ಹೊಂದಿರುವ ರೈಟ್ ಲೈವ್ಲಿಹುಡ್ ಪ್ರಶಸ್ತಿಯನ್ನು 2016ನೇ ಸಾಲಿಗೆ ಸ್ವೀಡನ್ನ ಸ್ಟಾಕ್ ಹೋಮ್ ನಲ್ಲಿ ಪ್ರಕಟಿಸಲಾಗಿದೆ. ಸಿರಿಯಾದ ನಾರೀಕ ರಕ್ಷಣಾ ಪಡೆ "ದಿ ವೈಟ್ ಹೆಲ್ಮೆಟ್ಸ್" ಈ ಬಾರಿ ಪ್ರಶಸ್ತಿಗೆ ಆಯ್ಕೆಯಾಗಿದೆ. ಇದರೊಂದಿಗೆ ಟರ್ಕಿಯ ಸುದ್ದಿಪತ್ರಿಕ ಕುಮ್ಹುರಿಯತ್ (Cumhuriyat), ರಷ್ಯಾದ ಮಾನಮ ಹಕ್ಕು ಹೋರಾಟಗಾರ್ತಿ ಸ್ವೆಟಲಾನ ಗನ್ನುಷ್ಕಿನ ಮತ್ತು ಈಜಿಪ್ಟ್ನ ಮೊಝ್ನ ಹಸ್ಸನ್ ಮತ್ತು ನಝ್ರ ರವರಿಗೆ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

231. ಇತ್ತೀಚೆಗೆ ಜಾಗತಿಕ ಮಟ್ಟದ ಅಧ್ಯಯನವೊಂದು ಬಿಡುಗಡೆಗೊಳಿಸಿದ ವಿಶ್ವದ ಆರೋಗ್ಯ ಸ್ಥಿತಿಯಲ್ಲಿ ಭಾರತ ಎಷ್ಟನೇ ಸ್ಥಾನಗಳಿಸಿದೆ?

ಅ) 120

ಆ) 134

ಇ) 143

ಈ) 150



www.karunaduexams.com

143

ಜಾಗತಿಕ ಮಟ್ಟದ ಅಧ್ಯಯನವೊಂದರ ಪ್ರಕಾರ ಆರೋಗ್ಯ ಸ್ಥಿತಿಯಲ್ಲಿ ಭಾರತ ವಿಶ್ವದ 188 ದೇಶಗಳ ಪೈಕಿ 143ನೇ ಸ್ಥಾನದಲ್ಲಿದೆ. ಅತ್ಯಧಿಕ ಮರಣ ಪ್ರಮಾಣ, ಮಲೇರಿಯಾ, ನೈರ್ಮಲ್ಯ ಕೊರತೆ ಹಾಗೂ ವಾಯು ಮಾಲಿನ್ಯದ ಕಾರಣಗಳಿಂದಾಗಿ ಭಾರತದ ಆರೋಗ್ಯ ಸ್ಥಿತಿ ಚಿಂತಾಜನಕವಾಗಿದೆ ಎಂದು ವರದಿ ಹೇಳಿದೆ. ಹಲವು ಆರೋಗ್ಯ ಸೂಚಕಗಳನ್ನು ಮಾನದಂಡವಾಗಿ ಇಟ್ಟುಕೊಂಡು ನಡೆಸಿದ ಅಧ್ಯಯನ ವರದಿಯನ್ನು ಲ್ಯಾನ್ಸೆಟ್ ಮೆಡಿಕಲ್ ಜರ್ನಲ್ನಲ್ಲಿ ಪ್ರಕಟಿಸಲಾಗಿದೆ. ವಿಶ್ವಸಂಸ್ಥೆಯ ಸಾಮಾನ್ಯ ಅಧಿವೇಶನದ ವೇಳೆ ನಡೆದ ವಿಶೇಷ ಸಮಾರಂಭದಲ್ಲಿ ಈ ವರದಿ ಬಿಡುಗಡೆ ಮಾಡಲಾಗಿದೆ. ಭಾರತವು ನೆರೆ ದೇಶಗಳಾದ ಪಾಕಿಸ್ತಾನ ಹಾಗೂ ಬಾಂಗ್ಲಾಕ್ಕಿಂತ ತುಸು ಮುಂದಿದ್ದು, ಈ ಎರಡು ದೇಶಗಳು ಕ್ರಮವಾಗಿ 149 ಹಾಗೂ 151ನೇ ಸ್ಥಾನದಲ್ಲಿವೆ. ಪ್ರಮುಖ ಆರೋಗ್ಯ ಸೂಚಕಗಳಲ್ಲೊಂದಾದ ಮಲೇರಿಯಾದಲ್ಲಿ ಭಾರತ 10 ಅಂಕ ಪಡೆದು ಅಪಾಯಕಾರಿ ವಲಯದಲ್ಲಿದೆ. ಅಂತೆಯೇ ನೈರ್ಮಲ್ಯದಲ್ಲಿ ಎಂಟು ಅಂಕ ಪಡೆದಿದ್ದು, ನೀರಿನ ಗುಣಮಟ್ಟ ಸೂಕಕವಾದ ಪಿಎಂ 2.5ರಲ್ಲಿ (ದಶಲಕ್ಷ ಕಣಗಳಲ್ಲಿ ಕಲುಶಿತ ಅಂಶ) 18 ಅಂಕ ಪಡೆದಿದ್ದು, ಐಸ್ಲೆಂಡ್ ಅತ್ಯಧಿಕ ಎಸ್ಡಿಜಿ ಸೂಚ್ಯಂಕ ಪಡೆದಿದ್ದು, ಸಿಂಗಾಪುರ ಹಾಗೂ ಸ್ವೀಡನ್ ನಂತರದ ಸ್ಥಾನಗಳಲ್ಲಿವೆ. ಬ್ರಿಟನ್ ಐದನೇ ಸ್ಥಾನದಲ್ಲಿದ್ದು, ಫಿನ್ಲ್ಯಾಂಡ್ ಮುಂದಿನ ಸ್ಥಾನದಲ್ಲಿದೆ. ಕೇಂದ್ರ ಆಫ್ರಿಕನ್ ರಿಪಬ್ಲಿಕ್, ಸೋಮಾಲಿಯಾ ಹಾಗೂ ದಕ್ಷಿಣ ಸೂಡಾನ್ ಕೊನೆಯ ಸ್ಥಾನಗಳಲ್ಲಿವೆ.

232. ಆಡಿಟ್ ಬ್ಯೂರೋ ಆಫ್ ಸರ್ಕ್ಯುಲೇಷನ್ (ABC)ನ 2016-17ನೇ ಸಾಲಿಗೆ ಅಧ್ಯಕ್ಷರಾಗಿ ಯಾರು ನೇಮಕಗೊಂಡಿದ್ದಾರೆ?

ಅ) ಐ ವೆಂಕಟ್

ಆ) ರಜತ್ ಶರ್ಮಾ

ಇ) ಆಶೀಶ್ ಬಗ್ಗಾ

ಈ) ಭಾಸ್ಕರ್ ದಾಸ್

ಐ ವೆಂಕಟ್

ಈನಾಡು ಗ್ರೂಫ್ ಅಧ್ಯಕ್ಷ ಐ ವೆಂಕಟ್ ಅವರು ಆಡಿಟ್ ಬ್ಯೂರೋ ಆಫ್ ಸರ್ಕ್ಯುಲೇಷನ್ 2016-17ನೇ ಸಾಲಿನ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ವೆಂಕಟ್ ಅವರು ಮೀಡಿಯಾ ರಿಸರ್ಚ್ ಯುಸರ್ಸ್ ಕೌನ್ಸಿಲ್ ನ ಅಧ್ಯಕ್ಷರು ಸಹ ಆಗಿದ್ದಾರೆ. ಈ ಹಿಂದೆ ಅವರು ಅಡ್ವರ್ಟೈಸ್ಮೆಂಟ್ ಸ್ಟಾಂಡರ್ಡ್ಸ್ ಕೌನ್ಸಿಲ್ ಆಫ್ ಇಂಡಿಯಾದ ಅಧ್ಯಕ್ಷರಾಗಿದ್ದರು.

233.ಅತ್ಯಾಧುನಿಕ ರಫೆಲ್ ಜೆಟ್ ಖರೀದಿಸುವ ಸಂಬಂಧ ಭಾರತ ಇತ್ತೀಚೆಗೆ ಈ ಕೆಳಗಿನ ಯಾವ ದೇಶದೊಂದಿಗೆ ಸಹಿ ಹಾಕಿತು?

ಅ) ರಷ್ಯಾ

ಆ) ಇಸ್ರೇಲ್

ಇ) ಫ್ರಾನ್ಸ್

ಈ) ಅಮೆರಿಕ

ಫ್ರಾನ್ಸ್

ಫ್ರಾನ್ಸ್ ನಿಂದ 36 ರಾಫೆಲ್ ಫೈಟರ್ ಜೆಟ್ ಗಳನ್ನು ಖರೀದಿಸುವ ಒಪ್ಪಂದಕ್ಕೆ ಭಾರತ ಸಹಿ ಹಾಕಿದೆ. ಫ್ರೆಂಚ್ ನ ರಕ್ಷಣಾ ಸಚಿವ ಜೀನ್ ಯೆಸ್ ಲೆ ಡ್ರಿಯಾನ್ ನವದೆಹಲಿಗೆ ಆಗಮಿಸಿದ್ದು, ರಕ್ಷಣಾ ಸಚಿವ ಮನೋಹರ್ ಪರಿಕ್ಕರ್ ರಾಫೆಲ್ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ಒಪ್ಪಂದದ ಭಾಗವಾಗಿ ಇನ್ನು ಕೆಲವೇ ತಿಂಗಳುಗಳಲ್ಲಿ ಮೊದಲ ಎರಡು ಬ್ಯಾಚ್ ನ ರಾಫೆಲ್ ಜೆಟ್ ಗಳು ಭಾರತದ ಕೈ ಸೇರಲಿವೆ. ಒಪ್ಪಂದ ನಡೆದ 66 ತಿಂಗಳಲ್ಲಿ ಒಟ್ಟು 36 ರಾಫೆಲ್ ಜೆಟ್ ಗಳು ಭಾರತದ ಕೈಸೇರಲಿವೆ. ಈ ರಾಫೆಲ್ ಮೆಟೊರೊ ಶ್ರೇಣಿಯ (ದೂರವ್ಯಾಪಿ) ಕ್ಷಿಪಣಿಯಾಗಿದ್ದು, 150 ಕಿ.ಮೀ ಸಾಗುವ ಸಾಮರ್ಥ್ಯ ಹೊಂದಿದೆ.

234. ಸಿಖ್ಖರ ಪವಿತ್ರ ಧಾರ್ಮಿಕ ಪುಸ್ತಕ "ದಾಸಮ್ ಗ್ರಂಥ (Dasam Granth)"ವನ್ನು ರಚಿಸಿದ ಸಿಖ್ ಗುರು _____?

ಅ) ಗುರು ಗೋಬಿಂದ್ ಸಿಂಗ್

ಆ) ಗುರು ತೇಜ್ ಬಹುದ್ದೂರ್

ಇ) ಗುರು ಅರ್ಜುನ್ ಸಿಂಗ್

ಈ) ಗುರು ಹರ್ ಗೋಬಿಂದ್

ಸಿಖ್ಖರ ಹತ್ತನೇ ಗುರು ಗುರು ಗೋಬಿಂದ್ ಸಿಂಗ್ ಅವರು ಸಿಖ್ಖರ ಧರ್ಮದ ಪವಿತ್ರ ಪುಸ್ತಕ ಎನಿಸಿದರುವ "ದಾಸಮ್ ಗ್ರಂಥ"ವನ್ನು ರಚಿಸಿದ್ದಾರೆ.

235. ಪ್ರಪ್ರಥಮ "ಜೆಸ್ಸೆ ಒವೆನ್ಸ್ ಒಲಪಿಂಕ್ ಸ್ಪಿರಿಟ್ ಪ್ರಶಸ್ತಿ (Jesse Owens Olympic Spirit Award)"ಯನ್ನು ಯಾರಿಗೆ ನೀಡಲಾಗುತ್ತಿದೆ?

ಅ) ಉಸೇನ್ ಬೋಲ್ಟ್

ಆ) ಮುಹಮ್ಮದ್ ಅಲಿ

ಇ) ಮೈಕಲ್ ಫೆಲ್ಪ್

ಈ) ಸೆರೆನಾ ವಿಲಿಯಮ್ಸ್

ಬಾಕ್ಸಿಂಗ್ ದಂತಕತೆ ದಿವಂಗತ ಮುಹಮ್ಮದ್ ಅಲಿ ಅವರಿಗೆ ಮರಣೋತ್ತರವಾಗಿ ಪ್ರಪ್ರಥಮ "ಜೆಸ್ಸೆ ಒವೆನ್ಸ್ ಒಲಂಪಿಕ್ ಸ್ಪಿರಿಟ್ ಪ್ರಶಸ್ತಿ"ಯನ್ನು ನೀಡಲಾಗುತ್ತಿದೆ. ಒವೆನ್ ಅವರು 1936ರ ಬರ್ಲಿನ್ ಒಲಂಪಿಕ್ಸ್ ನಲ್ಲಿ ನಾಲ್ಕು ಚಿನ್ನ ಗೆದ್ದ 80ನೇ ವರ್ಷದ ಸ್ಮರಣಾರ್ಥ ಸ್ಥಾಪಿಸಿರುವ ಈ ಪ್ರಶಸ್ತಿಯನ್ನು ಈ ವರ್ಷದಿಂದ ನೀಡಲಾಗುತ್ತಿದೆ. ಮುಹಮ್ಮದ್ ಅಲಿ 1960ರಲ್ಲಿ ನಡೆದ ಒಲಂಪಿಕ್ಸ್ ನಲ್ಲಿ ಚಿನ್ನ ಗೆದ್ದಿದ್ದರು. ಅಲ್ಲದೇ ಮೂರು ಬಾರಿ ವಿಶ್ವ ಹೆವಿವೈಟ್ ಚಾಂಪಿಯನ್ ಆಗಿದ್ದರು.

www.karunaduexams.com

236. ಇದೇ ಮೊದಲ ಬಾರಿಗೆ ಯಾವ ಹುಲಿ ಸಂರಕ್ಷಣ ಧಾಮದಲ್ಲಿ "ಡ್ರೋನ್" ಬಳಸಿ ಹುಲಿ ಸಂರಕ್ಷಣೆ ಮತ್ತು ಪುನರ್ವಸತಿ ಕಲ್ಪಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು?

ಅ) ಪೆನ್ನಾ ಹುಲಿಸಂರಕ್ಷಣಾ ಧಾಮ

ಆ) ಸಿಮಿಲಿಪಾಲ್ ಹುಲಿಸಂರಕ್ಷಣಾ ಧಾಮ

ಇ) ಭದ್ರಾ ಹುಲಿಸಂರಕ್ಷಣಾ ಧಾಮ

ಈ) ಪೆಂಚ್ ಹುಲಿಸಂರಕ್ಷಣಾ ಧಾಮ

ಸಿಮಿಲಿಪಾಲ್ ಹುಲಿಸಂರಕ್ಷಣಾ ಧಾಮ

ಒಡಿಶಾದ ಸಿಮಿಲಿಪಾಲ್ ಹುಲಿಸಂರಕ್ಷಣಾ ಧಾಮದಲ್ಲಿ ಡ್ರೋನ್ ಬಳಸಿ ಹುಲಿ ಸಂರಕ್ಷಣೆ ಮತ್ತು ಪುನರ್ವಸತಿ ಕಲ್ಪಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದೆ. ಇದೇ ಮೊದಲ ಬಾರಿಗೆ ಹುಲಿಸಂರಕ್ಷಣೆಗೆ ಡ್ರೋನ್ ಬಳಸಲಾಗುತ್ತಿದೆ. ವೈಲ್ಡ್ಲೈಪ್ ಟ್ರಸ್ಟ್ ಆಫ್ ಇಂಡಿಯಾ ಮತ್ತು ಅರಣ್ಯ ಇಲಾಖೆ ಸಹಯೋಗದಡಿ ಇದಕ್ಕೆ ಚಾಲನೆ ನೀಡಲಾಯಿತು.

237. "2016 ಕ್ಲಾರ್ಕ್ ಆರ್ ಭಾವಿನ್ ವೈಲ್ಡ್ ಲೈಫ್ ಲಾ ಎನ್ಫೋರ್ಸ್ಮೆಂಟ್ (Clark R. Bavin Wildlife Law Enforcement Awards)" ಪ್ರಶಸ್ತಿಗೆ ಆಯ್ಕೆಯಾಗಿರುವ ಇಬ್ಬರು ಭಾರತೀಯರು ಯಾರು?

ಅ) ಉಲ್ಲಾಸ್ ಕಾರಂತ್ ಮತ್ತು ಅಶ್ವಿನ್ ಜೈನ್

ಆ) ಸಂಜಯ್ ದತ್ತಾ ಮತ್ತು ರಿತೇಶ್ ಸರೊಥಿಯ

ಇ) ಪ್ರಕಾಶ್ ಸಿಂಗ್ ಮತ್ತು ಅಶ್ವಿನ್ ಜೈನ್

ಈ) ಮಾಧವ್ ದರ್ಪಣ್ ಮತ್ತು ರಿತೇಶ್ ಸರೊಥಿಯ

ಸಂಜಯ್ ದತ್ತಾ ಮತ್ತು ರಿತೇಶ್ ಸರೊಥಿಯ

ಸಮರ್ಪಕವಾಗಿ ಕಾನೂನು ಜಾರಿಗೊಳಿಸಿ ವನ್ಯಜೀವಿ ಸಂರಕ್ಷಿಸಲು ದಿಟ್ಟ ಧೈರ್ಯ ತೋರಿರುವ ಸಂಜಯ್ ದತ್ತಾ ಮತ್ತು ರಿತೇಶ್ ಸರೊಥಿಯ ಅವರನ್ನು "2016 ಕ್ಲಾರ್ಕ್ ಆರ್ ಭಾವಿನ್ ವೈಲ್ಡ್ ಲೈಫ್ ಲಾ ಎನ್ಫೋರ್ಸ್ಮೆಂಟ್ ಪ್ರಶಸ್ತಿ"ಗೆ ಆಯ್ಕೆಮಾಡಲಾಗಿದೆ. ಸರೋಥಿಯ ಮಧ್ಯಪ್ರದೇಶ ಅರಣ್ಯ ಇಲಾಖೆಯ ಸಹಾಕಯ ಅರಣ್ಯ ಸಂರಕ್ಷರಾಗಿದ್ದಾರೆ. ಸಂಜಯ್ ದತ್ತಾ ಅವರು ಪಶ್ಚಿಮ ಬಂಗಾಳದ ಬೆಳಕೊಬ ಅರಣ್ಯ ಪ್ರದೇಶದಲ್ಲಿ ರೇಂಜ್ ಆಫೀಸರ್ ಆಗಿದ್ದಾರೆ.

238. ಇತ್ತೀಚೆಗೆ ನಿಧನರಾದ "ರೆಹೊತಿ ಶರಣ್ ಶರ್ಮಾ" ಅವರು ಯಾವ ಕ್ಷೇತ್ರಕ್ಕೆ ಸಂಬಂಧಿಸಿದ್ದಾರೆ?

ಅ) ಸಾಹಿತ್ಯ

ಆ) ರಾಜಕೀಯ

ಇ) ಕ್ರೀಡೆ

ಈ) ವಿಜ್ಞಾನ

ಸಾಹಿತ್ಯ



www.karunaduexams.com

ಖ್ಯಾತ ಹಿಂದಿ ಮತ್ತು ಉರ್ದು ಸಾಹಿತಿ ರೆಹೊತಿ ಶರಣ್ ಶರ್ಮಾ ನವದೆಹಲಿಯಲ್ಲಿ ನಿಧನರಾದರು. ಶರ್ಮಾ ಅವರಿಗೆ 2007 ರಲ್ಲಿ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿಯನ್ನು ನೀಡಲಾಗಿತ್ತು. ಸಾಹಿತ್ಯ ಕಲಾ ಪರಿಷದ್ ಮತ್ತು ಗಲೀಬ್ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

239. "ಡೆತ್ ವ್ಯಾಲಿ (Death Valley)" ಈ ಕೆಳಗಿನ ಯಾವ ಮರುಭೂಮಿಯಲ್ಲಿ ಕಾಣಬಹುದಾಗಿದೆ ____?

ಅ) ಕೊಲೊರಾಡೊ

ಆ) ಮೊಜಾವೆ

ಇ) ಅಮರ್ಗೋಸ

ಈ) ತಕ್ಲಮಕನ್

ಮೊಜಾವೆ ಮರುಭೂಮಿ

240. ಇಸ್ರೋ ಇತ್ತೀಚೆಗೆ ಯಶಸ್ವಿಯಾಗಿ ಉಡಾಯಿಸಿದ "ಪ್ರಥಮ್" ಉಪಗ್ರಹವನ್ನು ಈ ಕೆಳಗಿನ ಯಾವ ಶೈಕ್ಷಣಿಕ ಸಂಸ್ಥೆ ಅಭಿವೃದ್ಧಿಪಡಿಸಿದೆ?

ಅ) ಐಐಟಿ ಖರಗಪುರ

ಆ) ಐಐಎಸ್ಸಿ, ಬೆಂಗಳೂರು

ಇ) ಐಐಟಿ, ಬಾಂಬೆ

ಈ) ಎಸ್‌ಆರ್ ಎಂ, ಚೆನ್ನೈ

ಐಐಟಿ, ಬಾಂಬೆ

ಭಾರತೀಯ ಬಾಹ್ಯಕಾಶ ಸಂಶೋಧನಾ ಸಂಸ್ಥೆ ಎಂಟು ಉಪಗ್ರಹಗಳನ್ನು ಕಕ್ಷೆಗೆ ಸೇರಿಸುವ ಮೂಲಕ ಮತ್ತೊಮ್ಮೆ ದಾಖಲೆ ನಿರ್ಮಿಸಿದೆ. ಉಪಗ್ರಹ ಉಡಾವಣಾ ವಾಹಕ PSLV-ಸಿ35 ಬಳಸಿ ಈ ಉಪಗ್ರಹಗಳನ್ನು ಯಶಸ್ವಿಯಾಗಿ ಕಕ್ಷೆ ಹಾರಿಸಿತು. ಎಂಟು ಉಪಗ್ರಹಗಳ ಪೈಕಿ ಐದು ವಿದೇಶಿ ಉಪಗ್ರಹಗಳು ಸೇರಿವೆ. ಇಂಡಿಯನ್ ಇನ್ಸ್ಟಿಟ್ಯೂಟ್ ಟೆಕ್ನಾಲಜಿ, ಬಾಂಬೆ ಅಭಿವೃದ್ಧಿಪಡಿಸಿರುವ ಪ್ರಥಮ್ ಉಪಗ್ರಹ ಹಾಗೂ ಬೆಂಗಳೂರಿನ ಪಿಇಎಸ್ ವಿಶ್ವವಿದ್ಯಾಲಯದ PISAT ಉಪಗ್ರಹ ಸಹ ಸೇರಿವೆ. ಪ್ರಥಮ ಉಪಗ್ರಹ 10 ಕೆಜಿ ತೂಕವಿದ್ದು, ಬಾಹ್ಯಕಾಶದಲ್ಲಿ ಒಟ್ಟು ಎಲೆಕ್ಟ್ರಾನ್ ಗಣನೆಯನ್ನ ಅಧ್ಯಯನ ಮಾಡಲಿದೆ.

241. ಸರಕು ಮತ್ತು ಸೇವಾ ತೆರಿಗೆ (GST)ಯಡಿ ವರ್ತಕರ ವಹಿವಾಟಿನ ಗರಿಷ್ಠ ವಿನಾಯ್ತಿ ಮಿತಿಯನ್ನು ಎಷ್ಟು ಲಕ್ಷಕ್ಕೆ ನಿಗದಿಪಡಿಸಲಾಗಿದೆ?

ಅ) 15 ಲಕ್ಷ

ಆ) 20 ಲಕ್ಷ



www.karunaduexams.com

ಇ) 25 ಲಕ್ಷ

ಈ) 30 ಲಕ್ಷ

20 ಲಕ್ಷ

ಸರಕು ಮತ್ತು ಸೇವಾ ತೆರಿಗೆ (GST)ಯಡಿ ವರ್ತಕರ ವಹಿವಾಟಿನ ಗರಿಷ್ಠ ವಿನಾಯ್ತಿ ಮಿತಿಯನ್ನು ರೂ 20 ಲಕ್ಷಕ್ಕೆ ನಿಗದಿಪಡಿಸಲಾಗಿದೆ. ಈಶಾನ್ಯ ರಾಜ್ಯಗಳಿಗೆ ಈ ಮಿತಿಯನ್ನು ರೂ 10 ಲಕ್ಷಕ್ಕೆ ನಿಗದಿಪಡಿಸಲಾಗಿದೆ.

242. ಭಾರತೀಯ ಬಾಕ್ಸಿಂಗ್ ಫೆಡರೇಷನ್ (BFI) ಅಧ್ಯಕ್ಷರಾಗಿ ಯಾರು ನೇಮಕಗೊಂಡಿದ್ದಾರೆ?

ಅ) ರೋಹಿತ್ ಜೈನ್

ಆ) ಅಜಯ್ ಸಿಂಗ್

ಇ) ರವಿ ಕುಲಕರ್ಣಿ

ಈ) ಜಾಧವ್ ಸಿಂಗ್

ಅಜಯ್ ಸಿಂಗ್

ಭಾರತೀಯ ಬಾಕ್ಸಿಂಗ್ ಫೆಡರೇಶನ್(ಬಿಎಫ್ಐ) ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಉದ್ಯಮಿ ಅಜಯ್ ಸಿಂಗ್ ಭಾರೀ ಅಂತರದ ಮತಗಳಿಂದ ಚುನಾಯಿತರಾದರು. ಅಜಯ್ 49 ಮತಗಳನ್ನು ಪಡೆದರೆ, ಪ್ರತಿ ಸ್ಪರ್ಧಿ ದಿಲ್ಲಿಯ ರೋಹಿತ್ ಜೈನ್ ಕೇವಲ 15 ಮತ ಪಡೆದರು. ಅಂತಾರಾಷ್ಟ್ರೀಯ ಬಾಕ್ಸಿಂಗ್ ಅಸೋಸಿಯೇಶನ್ನ ವೀಕ್ಷಕರು ಹಾಗೂ ಕ್ರೀಡಾ ಸಚಿವಾಲಯದ ಮೇಲುಸ್ತುವಾರಿಯಲ್ಲಿ ಚುನಾವಣೆ ಪ್ರಕ್ರಿಯೆ ನಡೆಯಿತು. 51ರ ಹರೆಯದ ಸಿಂಗ್ ಉತ್ತರ ಖಂಡವನ್ನು ಪ್ರತಿನಿಧಿಸುತ್ತಿದ್ದು, ಈ ಹಿಂದೆ ಸ್ಪೈಸ್ ಜೆಟ್ ಏರ್ವೇಸ್ನ ಚೇರ್ಮನ್ ಹಾಗು ಆಡಳಿತ ನಿರ್ದೇಶಕರಾಗಿದ್ದರು.

243. 2016 ಪಾನ್ ಫೆಸಿಪಿಕ್ ಓಪನ್ ಮಹಿಳೆಯರ ಸಿಂಗಲ್ಸ್ ನಲ್ಲಿ ಪ್ರಶಸ್ತಿಯನ್ನು ಗೆದ್ದವರು ಯಾರು?

ಅ) ನಯೊಮಿ ಒಸಾಕ

ಆ) ಕ್ಯಾರೊಲಿನ್ ವೋಝ್ನಿಯಾಕಿ

ಇ) ವಿಕ್ಟೋರಿಯಾ ಅಝುರೆಕಾ

ಈ) ಮಾರ್ಟಿನಾ ಹಿಂಗೀಸ್

ಕ್ಯಾರೊಲಿನ್ ವೋಝ್ನಿಯಾಕಿ

ವಿಶ್ವದ ಮಾಜಿ ನಂ.1 ಆಟಗಾರ ಕ್ಯಾರೊಲಿನ್ ವೋಝ್ನಿಯಾಕಿ ಪಾನ್ ಪೆಸಿಫಿಕ್ ಓಪನ್ನಲ್ಲಿ ಮಹಿಳೆಯರ ಸಿಂಗಲ್ಸ್ ಪ್ರಶಸ್ತಿಯನ್ನು ಗೆದ್ದುಕೊಂಡಿದ್ದಾರೆ. ಮಹಿಳೆಯರ ಸಿಂಗಲ್ಸ್ ಫೈನಲ್ನಲ್ಲಿ ಡೆನ್ಮಾರ್ಕ್ನ ವೋಝ್ನಿಯಾಕಿ ಜಪಾನ್ನ ನಯೊಮಿ ಒಸಾಕಾರನ್ನು 7-5, 6-3 ನೇರ ಸೆಟ್ಗಳ ಅಂತರದಿಂದ ಮಣಿಸಿದರು. ಈ ಮೂಲಕ ಈ ವರ್ಷ ಚೊಚ್ಚಲ ಪ್ರಶಸ್ತಿಯನ್ನು ಜಯಿಸಿದರು. ಎರಡನೆ ಬಾರಿ ಪಾನ್ ಫೆಸಿಫಿಕ್ ಓಪನ್ನಲ್ಲಿ ಚಾಂಪಿಯನ್ ಆದರು.

www.karunaduexams.com

244. ಈ ಕೆಳಗಿನ ಯಾವ ನಗರ 10 ಲಕ್ಷ ಜನಸಂಖ್ಯೆ ದಾಟಿದ ನಗರಗಳ ಪೈಕಿ "ಬಯಲು ಶೌಚ ಮುಕ್ತ ನಗರ" ಎಂಬ ಗೌರವಕ್ಕೆ ಪಾತ್ರವಾಗಿದೆ?

ಅ) ಮೈಸೂರು

ಆ) ನವದೆಹಲಿ

ಇ) ಪುಣೆ

ಈ) ವಿಜಯವಾಡ

ಮೈಸೂರು

10 ಲಕ್ಷ ಜನಸಂಖ್ಯೆ ದಾಟಿದ ದೇಶದ ನಗರಗಳ ಪೈಕಿ ಮೈಸೂರು ದೇಶದ ಮೊದಲ ಬಯಲು ಶೌಚ ಮುಕ್ತ ನಗರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಸ್ವಚ್ಛತೆ ಮತ್ತು ನೈರ್ಮಲ್ಯ ಮಟ್ಟವನ್ನು ಸುಧಾರಿಸುವ ನಿಟ್ಟಿನಲ್ಲಿ ಕೇಂದ್ರ ನಗರಾಭಿವೃದ್ಧಿ ಇಲಾಖೆಯ ಅಧೀನದಲ್ಲಿ ಭಾರತೀಯ ಗುಣಮಟ್ಟ ಮಂಡಳಿಯು (ಕ್ಯೂಸಿಐ) 75 ನಗರಗಳಲ್ಲಿ ನಡೆಸಿದ ಸಮೀಕ್ಷೆಯಲ್ಲಿ ಮೈಸೂರಿಗೆ ಈ ಗೌರವ ದೊರೆತಿದೆ.

245. ಇತ್ತೀಚೆಗೆ ನಿಧನರಾದ "ಕಿಂಗ್ ಆಫ್ ಗಾಲ್ಫ್" ಎಂದೇ ಖ್ಯಾತರಾಗಿದ್ದ "ಅರ್ನಾಲ್ಡ್ ಪಾಲ್ಮರ್" ಯಾವ ದೇಶದವರು?

ಅ) ಅಮೆರಿಕ

ಆ) ರಷ್ಯಾ

ಇ) ಸ್ವೀಡನ್

ಈ) ಭಾರತ

ಅಮೆರಿಕ

ಅಮೆರಿಕಾದ ವೃತ್ತಿಪರ ಗಾಲ್ಫರ್ ಅರ್ನಾಲ್ಡ್ ಪಾಲ್ಮರ್ ನಿಧನರಾದರು. ಪಾಲ್ಮರ್ ಅವರು "ಕಿಂಗ್ ಆಫ್ ಗಾಲ್ಫ್" ಎಂದೇ ಪ್ರಸಿದ್ದರಾಗಿದ್ದರು. ಅರ್ನಾಲ್ಡ್ ಪಾಲ್ಮರ್ ಅವರು ತಮ್ಮ ಸುದೀರ್ಘ ವೃತ್ತಿಪರ ಗಾಲ್ಫ್ ನಲ್ಲಿ ವಿಶ್ವಾದ್ಯಂತ ಸುಮಾರು 90ಕ್ಕೂ ಅಧಿಕ ಟೂರ್ನಮೆಂಟ್ ಗಳನ್ನು ಜಯಿಸಿದ್ದರು.

246. "ಫಾರ್ಮೋಸ (Formosa)" ಎಂಬುದು ಯಾವ ದೇಶದ ಮೊದಲ ಹೆಸರು?

ಅ) ತೈವಾನ್

ಆ) ಈಜಿಪ್ಟ್

ಇ) ನ್ಯೂಜಿಲ್ಯಾಂಡ್

ಈ) ಕ್ಯೂಬಾ

ತೈವಾನ್

www.karunaduexams.com

247. 5ನೇ ಏಷ್ಯಾ ಬೀಚ್ ಗೇಮ್ಸ್ (Asia Beach Games) ನಲ್ಲಿ ಭಾರತದ "ಪಿಂಕಿ ಬಲ್ಹರ" ರವರು ಯಾವ ಕ್ರೀಡೆಯಲ್ಲಿ ಬೆಳ್ಳಿ ಪದಕ ಗೆದ್ದರು?

ಅ) ಕಬಡ್ಡಿ

ಆ) ಈಜು

ಇ) ಕುರಷ್

ಈ) ಹ್ಯಾಂಡ್ ಬಾಲ್

ಕುರಷ್

ಭಾರತದ ಪಿಂಕಿ ಬಲ್ಹರ ರವರು 5ನೇ ಏಷ್ಯಾ ಬೀಚ್ ಗೇಮ್ಸ್ ನ ಕುರಷ್ ಕ್ರೀಡೆಯಲ್ಲಿ ಎರಡನೇ ಸ್ಥಾನ ಪಡೆಯುವ ಮೂಲಕ ಭಾರತಕ್ಕೆ ಮೊದಲ ಪದಕ ತಂದಿದ್ದಾರೆ. 5ನೇ ಏಷ್ಯಾ ಬೀಚ್ ಗೇಮ್ಸ್ ವಿಯಟ್ನಾಂನ ಡ ನಂಗ್ ನಲ್ಲಿ ಆರಂಭಗೊಂಡಿದೆ. ಭಾರತದಿಂದ 208 ಕ್ರೀಡಾಪಟುಗಳು ಈ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದಾರೆ. ಕುರಷ್ ಎಂಬುದು ಕುಸ್ತಿಯ ವಿಧವಾಗಿದ್ದು, ಉಜ್ಬೇಕಿಸ್ತಾನದಲ್ಲಿ ಹುಟ್ಟಿದೆ.

248. ಯಾವ ದೇಶದಲ್ಲಿ ಜಗತ್ತಿನ ಅತಿ ದೊಡ್ಡ ರೇಡಿಯೊ ಟೆಲಿಸ್ಕೋಪ್ ಇತ್ತೀಚೆಗೆ ಕಾರ್ಯಾರಂಭ ಮಾಡಿತು?

ಅ) ಜಪಾನ್

ಆ) ಚೀನಾ

ಇ) ಮೆಕ್ಸಿಕೊ

ಈ) ಇರಾಕ್

ಚೀನಾ

ಚೀನಾದಲ್ಲಿ ಸ್ಥಾಪಿಸಲಾದ ವಿಶ್ವದ ಅತಿ ದೊಡ್ಡ ರೇಡಿಯೊ ಟೆಲಿಸ್ಕೋಪ್ ಕಾರ್ಯಾರಂಭ ಮಾಡಿದೆ. 4.5 ಕೋಟಿ ವರ್ಷಗಳ ಹಿಂದೆ ಗುಜಿಯೋ ಪ್ರಾಂತ್ಯದ ಪರ್ವತದಲ್ಲಿ ಇದ್ದ ಗುಹೆಯೊಂದು ಕುಸಿದುಬಿದ್ದು ಉಂಟಾಗಿರುವ ಬೃಹದಾಕಾರದ ಗುಳಿಯಲ್ಲಿ ಟೆಲಿಸ್ಕೋಪ್ ನಿರ್ಮಿಸಲಾಗಿದೆ. 1200 ಕೋಟಿ ವೆಚ್ಚದ ಈ ಟೆಲಿಸ್ಕೋಪ್‌ನ ತಟ್ಟೆ 30 ಫುಟ್ಬಾಲ್ ಮೈದಾನಗಳಷ್ಟು ವಿಶಾಲವಾಗಿದೆ. ಒಟ್ಟು 4,450 ಫಲಕಗಳನ್ನು ಜೋಡಿಸಲಾಗಿದ್ದು, ಪ್ರತಿ ಫಲಕವೂ ತ್ರಿಕೋನಾಕೃತಿಯಲ್ಲಿ 11 ಮೀಟರ್ ಉದ್ದವಿದೆ. ದೂರದ ಆಕಾಂಶಗಂಗೆಯಲ್ಲಿರುವ ನೈಸರ್ಗಿಕ ಜಲಜನಕ ಹಾಗೂ ಸಾಮಾನ್ಯ ಟೆಲಿಸ್ಕೋಪ್‌ಗಳ ಪತ್ತೆ ಮಾಡದ ಆಕಾಶಕಾಯಗಳನ್ನು ಇದು ಪತ್ತೆ ಮಾಡಲಿದೆ. ಇದಕ್ಕಿಂತ ಹೆಚ್ಚಾಗಿ ಇನ್ನಿತರ ಆಕಾಶಕಾಯ, ಜನವಸತಿ ಪ್ರದೇಶಗಳಿಂದ ಹೊರಹೊಮ್ಮುವ ಸೂಕ್ಷ್ಮಾತೀಸೂಕ್ಷ್ಮ ತರಂಗಗಳನ್ನು ಈ ಟೆಲಿಸ್ಕೋಪ್ ಗ್ರಹಿಸುವ ಸಾಮರ್ಥ್ಯ ಹೊಂದಿದೆ.

249. 2016-17ನೇ ಸಾಲಿನ ಕೆ.ಕೆ.ಪೈ ರಾಷ್ಟ್ರೀಯ ಬ್ಯಾಂಕಿಂಗ್ ಪ್ರಶಸ್ತಿ ಯಾರಿಗೆ ಲಭಿಸಿದೆ?



www.karunaduexams.com

ಅ) ರಾಘವೇಂದ್ರ ರಾವ್

ಆ) ಪ್ರಕಾಶ್ ಮಲ್ಯ

ಇ) ಕೆ ಪಿ ಭಟ್

ಈ) ಅರುಂಧತಿ ಭಟ್ಟಚಾರ್ಯ

ಪ್ರಕಾಶ್ ಮಲ್ಯ

ವಿಜಯಾ ಬ್ಯಾಂಕಿನ ಮಾಜಿ ಅಧ್ಯಕ್ಷ ಪ್ರಕಾಶ ಮಲ್ಯ ಅವರು 2016-17ನೇ ಸಾಲಿನ ಕೆ.ಕೆ. ಪೈ ರಾಷ್ಟ್ರೀಯ ಬ್ಯಾಂಕಿಂಗ್ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.ಬ್ಯಾಂಕಿಂಗ್ ಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆಯನ್ನು ಪರಿಗಣಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದ ಅವರು 1973ರಲ್ಲಿ ಅಧಿಕಾರಿಯಾಗಿ ಕೆನರಾ ಬ್ಯಾಂಕ್ ಸೇರುವ ಮೂಲಕ ವೃತ್ತಿ ಜೀವನ ಆರಂಭಿಸಿದ್ದರು. ಬ್ಯಾಂಕಿನ ದೆಹಲಿ ವಲಯದ ಮುಖ್ಯಸ್ಥರಾಗಿ ಹಾಗೂ ಕೆನರಾ ಬ್ಯಾಂಕಿನ ಪತ್ರಿಕೆಯಾದ 'ಶ್ರೇಯಸ್'ನ ಸಂಪಾದಕರಾಗಿ ಕೂಡ ಕೆಲಸ ಮಾಡಿದ್ದರು. ಮಣಿಪಾಲದ ಟಿ.ಎ. ಪೈ ನಿರ್ವಹಣಾ ಸಂಸ್ಥೆಯಲ್ಲಿ ಅ.9ರಂದು ಪ್ರಶಸ್ತಿ ಪ್ರದಾನ ಮಾಡಲಾಗುವುದು.

250. ಪ್ರಪ್ರಥಮ "ಫಿಫಾ ವೈವಿಧ್ಯತೆ ಪ್ರಶಸ್ತಿ (FIFA Diversity Award)" ಪಡೆದುಕೊಂಡ ಭಾರತದ NGO ಯಾವುದು?

ಅ) ಎಫ್ಇಎಸ್

ಆ) ಸ್ಲಂ ಸಾಕರ್

ಇ) ಪ್ರಥಮ್

ಈ) ಪ್ಲಾನ್ ಇಂಡಿಯಾ

ಸ್ಲಂ ಸಾಕರ್

ಭಾರತದ ಸ್ಲಂ ಸಾಕರ್ (Slum Soccer) NGO ಚೊಚ್ಚಲ ಫಿಫಾ ವೈವಿಧ್ಯತೆ ಪ್ರಶಸ್ತಿಯನ್ನು ಪಡೆದುಕೊಂಡಿದೆ. ಯುಕೆ ಯ ಮ್ಯಾಂಚೇಸ್ಟರ್ ನಲ್ಲಿ ನಡೆದ ಸಾಕರೆಕ್ಸ್ ಜಾಗತಿಕ ಸಮ್ಮೇಳನದಲ್ಲಿ ಪ್ರಶಸ್ತಿಯನ್ನು ನೀಡಲಾಗಿದೆ. ಫಿಫಾ ವೈವಿಧ್ಯತೆ ಪ್ರಶಸ್ತಿಯನ್ನು ಫಿಫಾ ಸಂಸ್ಥೆ ಸ್ಥಾಪಿಸಿದ್ದು ಜನರಲ್ಲಿ ಏಕತೆ, ಒಗ್ಗಟ್ಟು ಮತ್ತು ಸಮಾನತೆಯನ್ನು ತುಂಬಲು ಶ್ರಮಿಸುವವರಿಗೆ ನೀಡಲಾಗುವುದು. ಸ್ಲಂ ಸಾಕರ್ ಸಂಸ್ಥೆಯು ಭಾರತದಲ್ಲಿ ಫುಟ್ಬಾಲ್ ಕ್ರೀಡೆಯನ್ನು ಬಳಸಿಕೊಂಡು ಜನರ ನಡುವೆ ಸಂಪರ್ಕ ಬೆಸೆಯಲು, ಜೀವನ ಕೌಶಲ್ಯ ಕಲಿಸಲು, ಮಹಿಳೆಯರ ಹಾಗೂ ದುರ್ಬಲ ವರ್ಗದ ಜನರ ಜೀವನ ಮಟ್ಟ ಸುಧಾರಿಸಲು ಶ್ರಮಿಸುತ್ತಿದೆ.

251. ಗೋಕುಲ ಅಭಿಯಾನದಡಿ ದೇಶದ ಮೊದಲ "ಗೋಕುಲ ಗ್ರಾಮ"ವನ್ನು ಯಾವ ನಗರದಲ್ಲಿ ಸ್ಥಾಪಿಸಲಾಗುತ್ತಿದೆ?

ಅ) ಮಥುರಾ

ಆ) ವಾರಣಾಸಿ

ಇ) ಲಕ್ನೋ

www.karunaduexams.com

ಈ) ಕುರುಕ್ಷೇತ್ರ

ಮಥುರಾ

ದೇಶದ ಮೊದಲ ಗೋಕುಲ ಗ್ರಾಮ ಸ್ಥಾಪನೆಗೆ ಪಂಡಿತ ದೀನದಯಾಳ ಉಪಾಧ್ಯಾಯರ ಜನ್ಮಸ್ಥಳ ಮಥುರಾದಲ್ಲಿ ಕೇಂದ್ರ ಕೃಷಿ ಸಚಿವ ರಾಧೇಮೋಹನ ಸಿಂಗ್ ಅವರು ಶಿಲಾನ್ಯಾಸ ನೆರವೇರಿಸಿದರು. ದೇಶೀಯ ಜಾನುವಾರು ತಳಿಗಳ ಸಂರಕ್ಷಣೆ ಮತ್ತು ಅಭಿವೃದ್ಧಿಗಾಗಿ ರಾಷ್ಟ್ರೀಯ ಗೋಕುಲ ಅಭಿಯಾನದಡಿ ದೇಶಾದ್ಯಂತ 14 'ಗೋಕುಲ ಗ್ರಾಮ'ಗಳನ್ನು ಸ್ಥಾಪಿಸಲಾಗುವುದು.

252.2016 ಟೊರೆ ಪಾನ್ ಫೆಸಿಫಿಕ್ ಓಪನ್ ಟೂರ್ನಿಯ ಮಹಿಳೆಯರ ಡಬ್ಬಲ್ಸ್ ನಲ್ಲಿ ಪ್ರಶಸ್ತಿ ಗೆದ್ದ ಜೋಡಿ ಯಾವುದು?

ಅ) ಚೆನ್ ಲಿಯಾಂಗ್ ಮತ್ತು ಝೂವೊಕ್ಸುಯಾನ್ ಯಾಂಗ್ರ

ಆ) ಸಾನಿಯಾ ಮಿರ್ಜಾ ಮತ್ತು ಚೆನ್ ಲಿಯಾಂಗ್

ಇ) ಬಾರ್ಬೊರ ಸ್ಟ್ರಿಕೋವಾ ಮತ್ತು ಝೂವೊಕ್ಸುಯಾನ್ ಯಾಂಗ್ರ

ಈ) ಸಾನಿಯಾ ಮಿರ್ಜಾ ಮತ್ತು ಬಾರ್ಬೊರ ಸ್ಟ್ರಿಕೋವಾ

ಸಾನಿಯಾ ಮಿರ್ಜಾ ಮತ್ತು ಬಾರ್ಬೊರ ಸ್ಟ್ರಿಕೋವಾ

2016 ಪಾನ್ ಫೆಸಿಫಿಕ್ ಓಪನ್ ಟೂರ್ನಿಯ ಮಹಿಳೆಯರ ಡಬ್ಬಲ್ಸ್ ನಲ್ಲಿ ಸಾನಿಯಾ ಮಿರ್ಜಾ ಮತ್ತು ಬಾರ್ಬೊರ ಸ್ಟ್ರಿಕೋವಾ ಜೋಡಿ ಪ್ರಶಸ್ತಿಯನ್ನು ಗೆದ್ದುಕೊಂಡಿತು. ಚೀನಾದ ಜೋಡಿ ಚೆನ್ ಲಿಯಾಂಗ್ ಹಾಗೂ ಝೂವೊಕ್ಸುಯಾನ್ ಯಾಂಗ್ರನ್ನು 6-1, 6-1 ನೇರ ಸೆಟ್ಗಳಿಂದ ಮಣಿಸಿ ಭಾರತದ ಸಾನಿಯಾ ಮಿರ್ಝಾ ಹಾಗೂ ಝೆಕ್ ಗಣರಾಜ್ಯದ ಬಾರ್ಬೊರ ಸ್ಟ್ರಿಕೋವಾ ಟೊರೆ ಪಾನ್ ಪೆಸಿಫಿಕ್ ಓಪನ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ. ಸಾನಿಯಾ ಹಾಗೂ ಸ್ಟ್ರಿಕೋವಾ ಒಟ್ಟಿಗೆ ಮಹಿಳೆಯರ ಡಬಲ್ಸ್ ಪಂದ್ಯವನ್ನು ಆಡಲು ನಿರ್ಧರಿಸಿದ ಬಳಿಕ ಮೂರು ಟೂರ್ನಮೆಂಟ್ಗಳನ್ನು ಆಡಿದ್ದು, ಎರಡನೆ ಬಾರಿ ಪ್ರಶಸ್ತಿಯನ್ನು ಎತ್ತಿ ಹಿಡಿದಿದ್ದಾರೆ. ಕಳೆದ ತಿಂಗಳು ಸಾನಿಯಾ ಅವರು ಸ್ಟ್ರಿಕೋವಾ ಜೊತೆಗೂಡಿ ತನ್ನ ಹಳೆಯ ಜೊತೆಗಾರ್ತಿ ಸ್ವಿಸ್ನ ಮಾರ್ಟಿನಾ ಹಿಂಗಿಸ್ ಹಾಗೂ ಕೊಕೊ ವ್ಯಾಂಡೆವೆಘ್ರನ್ನು 7-5, 6-4 ಸೆಟ್ಗಳ ಅಂತರದಿಂದ ಮಣಿಸಿ ಸಿನ್ಸಿನಾಟಿ ಓಪನ್ ಪ್ರಶಸ್ತಿಯನ್ನು ಗೆದ್ದುಕೊಂಡಿದ್ದರು.

253.ಇತ್ತೀಚೆಗೆ ನಿಧನರಾದ ಕೆ. ಮಾಧವನ್ ಅವರು ಯಾವ ಕ್ಷೇತ್ರಕ್ಕೆ ಸಂಬಂಧಿಸಿದ್ದಾರೆ?

ಅ) ಸ್ವಾಂತಂತ್ರ್ಯ ಹೋರಾಟ

ಆ) ಕ್ರೀಡೆ

ಇ) ಮಾನವ ಹಕ್ಕು ಹೋರಾಟ

ಈ) ಪತ್ರಿಕೋದ್ಯಮ

ಸ್ವಾಂತಂತ್ರ್ಯ ಹೋರಾಟ

www.karunaduexams.com

ಹಿರಿಯ ಸ್ವಾತಂತ್ರ ಹೋರಾಟಗಾರ ಹಾಗೂ ಗಾಂಧಿವಾದಿ ಪಿ.ಕೆ. ಮಾಧವನ್ ನಂಬಿಯಾರ್ (88) ನಿಧನರಾಗಿದ್ದಾರೆ. ಪಯ್ಯನ್ನೂರಿನಲ್ಲಿ ಜನಿಸಿದ್ದ ನಂಬಿಯಾರ್ ಅವರು ಸಹೋದರ ಪಿ.ಕೆ. ಗೋಪಾಲಕೃಷ್ಣನ್‌ರ ಜೊತೆ ಸ್ವಾತಂತ್ರ ಹೋರಾಟದಲ್ಲಿ ಪಾಲ್ಗೊಂಡಿದ್ದರು. 1942 ರಲ್ಲಿ ಜೈಲು ವಾಸ ಅನುಭವಿಸಿದ್ದರು. ಸ್ವಾತಂತ್ರ್ಯ ಹೋರಾಟದ ಅಂಗವಾಗಿ ನಡೆಸಲಾದ ಪಯ್ಯನ್ನೂರು ಉಪ್ಪು ಸತ್ಯಾಗ್ರಹ, ಗುರುವಾಯೂರು ದೇವಾಲಯ ಪ್ರವೇಶ ಸತ್ಯಾಗ್ರಹ ಸಹಿತ ಸ್ವಾತಂತ್ರ್ಯ ಹೋರಾಟದ ನಾನಾ ಚಳವಳಿಗಳಲ್ಲಿ ಮಾಧವನ್ ಪಾಲ್ಗೊಂಡಿದ್ದರು.

254. ಇವರಲ್ಲಿ “ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ (CSIR)”ನ ಅಧ್ಯಕ್ಷರು _____?

ಅ) ರಾಷ್ಟ್ರಪತಿ

ಆ) ಉಪರಾಷ್ಟ್ರಪತಿ

ಇ) ಪ್ರಧಾನ ಮಂತ್ರಿ

ಈ) ವಿಜ್ಞಾನ & ತಂತ್ರಜ್ಞಾನ ಸಚಿವರು

ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ ಒಂದು ಸ್ವಾಯುತತೆ ಸಂಸ್ಥೆಯಾಗಿದ್ದು, 1942ರಲ್ಲಿ ಸ್ಥಾಪಿಸಲಾಗಿದೆ. ಸಿಎಸ್ಐಆರ್ ದೇಶದ ಅತಿದೊಡ್ಡ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆಯಾಗಿದೆ. ಭಾರತದ ಪ್ರಧಾನ ಮಂತ್ರಿಗಳು ಇದರ ಅಧ್ಯಕ್ಷರಾಗಿರುತ್ತಾರೆ. ಪ್ರಸ್ತುತ ಡಾ.ಗಿರೀಶ್ ಸಹ್ನಿ ಅವರು ಸಿಎಸ್ಐಆರ್ ನ ಡೈರೆಕ್ಟರ್ ಜನರಲ್ ಆಗಿದ್ದಾರೆ.

255. ಈ ಕೆಳಗಿನ ಯಾರು ಸರಕು ಮತ್ತು ಸೇವಾ ತೆರಿಗೆ (GST) ಮಂಡಳಿಯ ಹೆಚ್ಚುವರಿ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದಾರೆ?

ಅ) ಅಜಯ್ ಭೂಷಣ್ ಸಿಂಗ್

ಆ) ಅರುಣ್ ಗೋಯಲ್

ಇ) ಪ್ರತಾಪ್ ಚೌಧರಿ

ಆ) ಕಿರಣ್ ಚಂದ್ರ ಶೌರಿ

ಅರುಣ್ ಗೋಯಲ್

ಹಿರಿಯ ಐಎಎಸ್ ಅಧಿಕಾರಿ ಅರುಣ್ ಗೋಯಲ್ ಅವರನ್ನು ಸರಕು ಮತ್ತು ಸೇವಾ ಮಂಡಳಿಯ (GST) ಹೆಚ್ಚುವರಿ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ. ಗೋಯಲ್ ಅವರು ಈ ಮಂಡಳಿಯ ಮೊದಲ ಹೆಚ್ಚುವರಿ ಕಾರ್ಯದರ್ಶಿಯಾಗಿದ್ದಾರೆ. ಗೋಯಲ್ ರವರು 1985 ನೇ ತಂಡದ ಕೇಂದ್ರಾಡಳಿತ ಪ್ರದೇಶ ಕ್ಯಾಡ್ರೆಯ ಐಎಎಸ್ ಅಧಿಕಾರಿಯಾಗಿದ್ದಾರೆ. ನೇಮಕಾತಿಗೆ ಮುಂಚೆ ಇವರು ಕೇಂದ್ರ ಸಂಪುಟ ಸಚಿವಾಲಯದ ಪ್ರಾಜೆಕ್ಟ್ ಮಾನಿಟರಿಂಗ್

www.karunaduexams.com

ಗ್ರೂಪ್ ನ ಹೆಚ್ಚುವರಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದರು. ಕೇಂದ್ರ ಹಣಕಾಸು ಸಚಿವರಾದ ಅರುಣ್ ಜೇಟ್ಲಿ ಅವರು ಸರಕು ಮತ್ತು ಸೇವಾ ತೆರಿಗೆ ಮಂಡಳಿಯ ಅಧ್ಯಕ್ಷರಾಗಿದ್ದಾರೆ.

256. ಮೊದಲ ಭಾರತ-ಚೀನಾ ಉನ್ನತ ಮಟ್ಟದ ಭಯೋತ್ಪಾದಕ ವಿರೋಧಿ ಮತ್ತು ಭದ್ರತೆ (India-China High Level Dialogue on Counter-terrorism and Security) ಸಭೆ ಯಾವ ನಗರದಲ್ಲಿ ನಡೆಯಿತು?

ಅ) ಶಾಂಘೈ

ಆ) ಬೀಜಿಂಗ್

ಇ) ಹೈದ್ರಾಬಾದ್

ಈ) ನವದೆಹಲಿ

ಬೀಜಿಂಗ್

ಭಾರತ-ಚೀನಾ ಉನ್ನತ ಮಟ್ಟದ ಭಯೋತ್ಪಾದಕ ವಿರೋಧಿ ಮತ್ತು ಭದ್ರತೆ ಕುರಿತಾದ ಮೊದಲ ಸಭೆ ಚೀನಾದ ಬೀಜಿಂಗ್ ನಲ್ಲಿ ನಡೆಯಿತು. ಜಂಟಿ ಗುಪ್ತಚರ ಸಮಿತಿಯ ಮುಖ್ಯಸ್ಥರಾದ ಆರ್ ಎನ್ ರವಿ ಅವರು ಭಾರತದ ಪ್ರತಿನಿಧಿಯಾಗಿ ಸಭೆಯಲ್ಲಿ ಭಾಗವಹಿಸಿದ್ದರು.

257. ರಾಷ್ಟ್ರೀಯ ಭದ್ರತಾ ಪಡೆ(National Security Guard)ಯ ನೂತನ ಡೈರೆಕ್ಟರ್ ಜನರಲ್ ಆಗಿ ಯಾರು ನೇಮಕಗೊಂಡಿದ್ದಾರೆ?

ಅ) ಚಂದ್ರಕಾತ್ ಠಾಗೋರ್

ಆ) ಸುಧೀರ್ ಪ್ರತಾಪ್ ಸಿಂಗ್

ಇ) ಗಣಪತಿ ನಾಯಕ್

ಈ) ಸಮೀರ್ ಭೂಷಣ್

ಸುಧೀರ್ ಪ್ರತಾಪ್ ಸಿಂಗ್

ರಾಷ್ಟ್ರೀಯ ಭದ್ರತಾ ಪಡೆಯ ನೂತನ ಡೈರೆಕ್ಟರ್ ನೂತನ ಡೈರೆಕ್ಟರ್ ಜನರಲ್ ಆಗಿ ಸುಧೀರ್ ಪ್ರತಾಪ್ ಸಿಂಗ್ ನೇಮಕಗೊಂಡಿದ್ದಾರೆ. **ಎನ್.ಎಸ್.ಜಿ. (ರಾಷ್ಟ್ರೀಯ ಭದ್ರತಾ ಪಡೆ** ಅಥವಾ **ನ್ಯಾಷನಲ್ ಸೆಕುರಿಟಿ ಗಾರ್ಡ್ಸ್** ಅಥವಾ **ಬ್ಲ್ಯಾಕ್ ಕ್ಯಾಟ್ ಕಮಾಂಡೋಸ್)** ಇದು ವಿಶೇಷ ಸಂದರ್ಭಗಳಲ್ಲಿ ಬಳಸಲಾಗುವ ಉಗ್ರವಾದ-ನಿಗ್ರಹಣ ದಳ ಇದನ್ನು 1958ರಲ್ಲಿ ಸಂಸತ್ತಿನಲ್ಲಿ 'ನ್ಯಾಷನಲ್ ಸೆಕ್ಯುರಿಟಿ ಗಾರ್ಡ್ಸ್' ಆಕ್ಟ್ ಮೂಲಕ ರಚಿಸಲಾಯಿತು. ಇದು ಭಾರತದ ಗೃಹ ಸಚಿವಾಲಯದ ಸುಪರ್ದಿಗೆ ಒಳಪಟ್ಟಿರುತ್ತದೆ.

www.karunaduexams.com

258. “Driven: The Virat Kohli Story” ಪುಸ್ತಕದ ಲೇಖಕರು ____?

ಅ) ಅರುಣ್ ಶೌರಿ

ಆ) ವಿಜಯ್ ಲೊಕಪಲ್ಲಿ

ಇ) ಸುನೀಲ್ ಚೆತ್ರಿ

ಈ) ರಾಹುಲ್ ಗುಪ್ತಾ

ವಿಜಯ್ ಲೊಕಪಲ್ಲಿ

ಕ್ರೀಡಾ ಪತ್ರಕರ್ತ ವಿಜಯ್ ಲೊಕಪಲ್ಲಿ ಅವರು “Driven: The Virat Kohli Story” ಪುಸ್ತಕದ ಲೇಖಕರು. ಪುಸ್ತಕದಲ್ಲಿ ವಿರಾಟ್ ಕೊಹ್ಲಿ ಅತಿ ಕಡಿಮೆ ಅವಧಿಯಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಗಳಿಸಿದ್ದು ಸೇರಿದಂತೆ ಕೊಹ್ಲಿ ಸಹಚರರು, ತರಬೇತುದಾರರು ಬಗ್ಗೆ ಬರೆಯಲಾಗಿದೆ.

259. ಪಾಕಿಸ್ತಾನದೊಂದಿಗೆ ಅತಿ ಹೆಚ್ಚು ಉದ್ದವಾದ ಗಡಿ ಭಾಗದಿಂದ ಕಡಿಮೆ ಗಡಿ ಭಾಗ ಹೊಂದಿರುವ ರಾಜ್ಯಗಳು ಕ್ರಮವಾಗಿ _____?

ಅ) ಜಮ್ಮು& ಕಾಶ್ಮೀರ, ಪಂಜಾಬ್, ಗುಜರಾತ್, ರಾಜಸ್ತಾನ

ಆ) ಜಮ್ಮು& ಕಾಶ್ಮೀರ, ಗುಜರಾತ್, ಪಂಜಾಬ್, ರಾಜಸ್ತಾನ

ಇ) ಜಮ್ಮು & ಕಾಶ್ಮೀರ, ರಾಜಸ್ತಾನ, ಪಂಜಾಬ್, ಗುಜರಾತ್

ಈ) ಜಮ್ಮು & ಕಾಶ್ಮೀರ, ರಾಜಸ್ತಾನ, ಗುಜರಾತ್, ಪಂಜಾಬ್

ಜಮ್ಮು & ಕಾಶ್ಮೀರ, ರಾಜಸ್ತಾನ, ಪಂಜಾಬ್, ಗುಜರಾತ್

ಪಾಕಿಸ್ತಾನವು ಭಾರತದೊಂದಿಗೆ 3,323 ಕಿ.ಮೀ ಉದ್ದದ ಗಡಿ ಭಾಗವನ್ನು ಹೊಂದಿಗೆ. ಭಾರತದ ನಾಲ್ಕು ರಾಜ್ಯಗಳಾದ ಜಮ್ಮು & ಕಾಶ್ಮೀರ (1,225 ಕಿ.ಮೀ ಅತಿ ಹೆಚ್ಚು), ರಾಜಸ್ತಾನ (1,037 ಕಿ.ಮೀ), ಪಂಜಾಬ್ (553 ಕಿ.ಮೀ) ಮತ್ತು ಗುಜರಾತ್ (508 ಕಿ.ಮೀ) ಗಡಿ ಭಾಗವನ್ನು ಹೊಂದಿಕೊಂಡಿವೆ.

260. ಇತ್ತೀಚೆಗೆ ಬಿಡುಗಡೆಗೊಂಡ “ಜಾಗತಿಕ ಸ್ಪರ್ಧಾತ್ಮಕ ಸೂಚ್ಯಂಕ (Global Competitive Index)”ದಲ್ಲಿ ಭಾರತ ಎಷ್ಟನೇ ಸ್ಥಾನಗಳಿಸಿದೆ?

ಅ) 45

ಆ) 39

ಇ) 60

ಈ) 73

39



www.karunaduexams.com

ವಿಶ್ವ ಆರ್ಥಿಕ ವೇದಿಕೆ (WEF) ಬಿಡುಗಡೆ ಮಾಡಿದ ಜಾಗತಿಕ ಸ್ಪರ್ಧಾತ್ಮಕ ಸೂಚ್ಯಂಕದಲ್ಲಿ ಭಾರತ 39ನೇ ಸ್ಥಾನವನ್ನು ಪಡೆದುಕೊಂಡಿದೆ. ಕಳೆದ ಸೂಚ್ಯಂಕದಲ್ಲಿ ಭಾರತ 55ನೇ ಸ್ಥಾನದಲ್ಲಿತ್ತು. ಈ ಬಾರಿ 16 ಸ್ಥಾನಗಳ ಏರಿಕೆ ಕಂಡಿದೆ. ಬ್ರಿಕ್ಸ್ ರಾಷ್ಟ್ರಗಳಲ್ಲಿ ಭಾರತ, ಚೀನಾ ನಂತರ ಎರಡನೇ ಅತಿ ಹೆಚ್ಚು ಸ್ಪರ್ಧೆ ಒಡ್ಡುವ ದೇಶವಾಗಿದೆ. ಚೀನಾಕ್ಕೆ ವಿಶ್ವ ಆರ್ಥಿಕ ಸೂಚ್ಯಂಕದಲ್ಲಿ 28ನೇ ಸ್ಥಾನವಿದೆ. ಸತತ 8ನೇ ಅವಧಿಗೆ ಸ್ವಿರ್ಜಲೆಂಡ್ ಮೊದಲ ಸ್ಥಾನದಲ್ಲಿದ್ದು ಸಿಂಗಾಪೂರ ಮತ್ತು ಅಮೆರಿಕಾ ಎರಡು ಹಾಗೂ ಮೂರನೇ ಸ್ಥಾನದಲ್ಲಿದೆ. ಸೂಚ್ಯಂಕದಲ್ಲಿ ಭಾರತ 4.52ರಲ್ಲಿದ್ದರೆ, ಸ್ವಿಜರ್ಲೆಂಡ್ ನ ಸೂಚ್ಯಂಕ 5.81ರಷ್ಟಿದೆ. ದಕ್ಷಿಣ ಏಷ್ಯಾ ರಾಷ್ಟ್ರಗಳ ಪೈಕಿ ಭಾರತ ಮೊದಲ ಸ್ಥಾನದಲ್ಲಿದ್ದರೆ, ನಂತರದ ಸ್ಥಾನದಲ್ಲಿ ಶ್ರೀಲಂಕಾ (71), ಭೂತಾನ್ (97) ಮತ್ತು ನೇಪಾಳ (98) ಇದೆ. ಪಾಕಿಸ್ತಾನ 122ನೇ ಸ್ಥಾನದಲ್ಲಿದೆ.

261. ಯಾವ ದೇಶದಲ್ಲಿ ಮೊಟ್ಟ ಮೊದಲ "ಬ್ರಿಕ್ಸ್ ಯುವ ವಿಜ್ಞಾನಿಗಳ ಸಮಾವೇಶ-2016" ಇತ್ತೀಚೆಗೆ ಆರಂಭಗೊಂಡಿತು?

ಅ) ಭಾರತ

ಆ) ಬ್ರೆಜಿಲ್

ಇ) ಚೀನಾ

ಈ) ದಕ್ಷಿಣ ಆಫ್ರಿಕಾ

ಭಾರತ

ಮೊಟ್ಟ ಮೊದಲ ಬ್ರಿಕ್ಸ್ ಯುವ ವಿಜ್ಞಾನಿಗಳ ಸಮಾವೇಶ ಬೆಂಗಳೂರಿನಲ್ಲಿ ಸೆಪ್ಟೆಂಬರ್ 26 ರಂದು ಆರಂಭಗೊಂಡಿದೆ. ಸೆಪ್ಟೆಂಬರ್ 30 ರವರೆಗೆ ನಡೆಯಲಿರುವ ಸಮಾವೇಶದಲ್ಲಿ ಬ್ರಿಕ್ಸ್ ರಾಷ್ಟ್ರಗಳ ಅನೇಕ ಯುವ ವಿಜ್ಞಾನಿಗಳು ಭಾಗವಹಿಸಲಿದ್ದಾರೆ. ಬ್ರಿಕ್ಸ್ ರಾಷ್ಟ್ರಗಳು ಎದುರಿಸುತ್ತಿರುವ ಸಾಮಾನ್ಯ ಸವಾಲುಗಳು ಮತ್ತು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಈ ಸಮಾವೇಶ ವೇದಿಕೆಯಾಗಲಿದೆ. ಗಣಕ ಬುದ್ದಿಮತ್ತೆ, ಇಂಧನ ಪರಿಹಾರ ಮತ್ತು ಕೈಗೆಟಕುವ ಆರೋಗ್ಯಸೇವೆ ಈ ಮೂರು ವಿಷಯಗಳ ಮೇಲೆ ಸಮಾವೇಶದಲ್ಲಿ ಮುಖ್ಯವಾಗಿ ಚರ್ಚಿಸಲಾಗುವುದು.

262. ರಾಷ್ಟ್ರೀಯ ವಿಪತ್ತು ನಿರ್ವಹಣೆ ಪಡೆ (National Disaster Response Force)ಯ ನೂತನ ಜನರಲ್ ಡೈರಕ್ಟರ್ ____?

ಅ) ಜೋಸೆಫ್ ಗರ್ಗ್

ಆ) ಮಹಮ್ಮದ್ ಸೈಯದ್

ಇ) ಆರ್ ಕೆ ಪಚ್ನಂದ

ಈ) ಗೌತಮ್ ಚಂದ್ರ

ಆರ್ ಕೆ ಪಚ್ನಂದ

www.karunaduexams.com

1983ನೇ ತಂಡದ ಹಿರಿಯ ಐಪಿಎಸ್ ಅಧಿಕಾರಿ ಆರ್ ಕೆ ಪಚ್ನಂದ ಅವರು ರಾಷ್ಟ್ರೀಯ ವಿಪತ್ತು ನಿರ್ವಹಣೆ ಪಡೆಯ ನೂತನ ಜನರಲ್ ಡೈರಕ್ಟರ್ ಆಗಿ ನೇಮಕಗೊಂಡಿದ್ದಾರೆ. ಪ್ರಸ್ತುತ ಇವರು ಕೇಂದ್ರ ಕೈಗಾರಿಕಾ ಭದ್ರತೆ ಪಡೆಯ ಅಡಿಷನಲ್ ಡೈರೆಕ್ಟರ್ ಜನರಲ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.

263. 2016 ವಿಶ್ವ ಪ್ರವಾಸೋದ್ಯಮ ದಿನದ ಧ್ಯೇಯವಾಕ್ಯ ______?

ಅ) Tourism for all - promoting universal accessibility

ಆ) Tourism for Better Country

ಇ) Tourism, Tourist and Good Environment

ಈ) One World Many Places

Tourism for all - promoting universal accessibility

ವಿಶ್ವ ಪ್ರವಾಸೋದ್ಯಮ ದಿನವನ್ನು ಸೆಪ್ಟೆಂಬರ್ 27ರಂದು ಪ್ರತಿ ವರ್ಷ ಆಚರಿಸಲಾಗುತ್ತಿದೆ. Tourism for all - promoting universal accessibility ಇದು ಈ ವರ್ಷದ ಧ್ಯೇಯವಾಕ್ಯ.

264. ಮಹಾರಾಷ್ಟ್ರ ಸರ್ಕಾರ ನೀಡುವ ಪ್ರತಿಷ್ಠಿತ "ಲತಾ ಮಂಗೇಶ್ಕರ್ ಜೀವಮಾನ ಸಾಧನೆ ಪ್ರಶಸ್ತಿ"ಗೆ ಈ ವರ್ಷ ಯಾರನ್ನು ಆಯ್ಕೆಮಾಡಲಾಗಿದೆ?

ಅ) ಉತ್ತಮ್ ಸಿಂಗ್

ಆ) ಶಾರೂಖ್ ಖಾನ್

ಇ) ಅಕ್ಷಯ್ ಕುಮಾರ್

ಈ) ಜಯಾ ಬಚ್ಚನ್

ಉತ್ತಮ್ ಸಿಂಗ್

ಹಿರಿಯ ಸಂಗೀತಾ ನಿರ್ದೇಶಕ ಹಾಗೂ ವಯಲಿನ್ ಮಾಂತ್ರಿಕ ಉತ್ತಮ್ ಸಿಂಗ್ ಅವರನ್ನು ಈ ವರ್ಷದ ಲತಾ ಮಂಗೇಶ್ಕರ್ ಜೀವಮಾನ ಸಾಧನೆ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಲತಾ ಮಂಗೇಶ್ಕರ್ ಅವರ 86ನೇ ಜನ್ಮದಿನದ ಅಂಗವಾಗಿ ಪ್ರಶಸ್ತಿಯನ್ನು ಪ್ರಕಟಿಸಲಾಗಿದೆ. ಪ್ರಶಸ್ತಿಯು 5 ಲಕ್ಷ ನಗದು, ಟ್ರೋಫಿ ಹಾಗೂ ಫಲಕವನ್ನು ಒಳಗೊಂಡಿದೆ. ಲತಾ ಮಂಗೇಶ್ಕರ್ ಜೀವಮಾನ ಸಾಧನೆ ಪ್ರಶಸ್ತಿಯನ್ನು ಮಹಾರಾಷ್ಟ್ರ ಸರ್ಕಾರ 1992ರಲ್ಲಿ ಸ್ಥಾಪಿಸಿದ್ದು, ಪ್ರತಿವರ್ಷ ನೀಡಲಾಗುತ್ತಿದೆ.

265. ಇತ್ತೀಚೆಗೆ ನಿಧನರಾದ ನೊಬೆಲ್ ಪ್ರಶಸ್ತಿ ಪುರಸ್ಕೃತ "ಶಿಮಾನ್ ಪೆರೆಸ್" ಯಾವ ದೇಶದ ಮಾಜಿ ಅಧ್ಯಕ್ಷರು?

ಅ) ಇಟಲಿ

ಆ) ಸೂಡಾನ್

ಇ) ಇಸ್ರೇಲ್

www.karunaduexams.com

ಈ) ಜಪಾನ್

ಇಸ್ರೇಲ್

ಇಸ್ರೇಲ್ ಮಾಜಿ ಅಧ್ಯಕ್ಷ ಹಾಗೂ ನೊಬೆಲ್ ಪ್ರಶಸ್ತಿ ಪುರಸ್ಕೃತ ಶಿಮಾನ್ ಪೆರೆಸ್ ಅವರು ಪಾರ್ಶ್ವವಾಯುವಿಗೆ ತುತ್ತಾಗಿ ವಿಧಿವಶರಾದರು. ಪೆರೆಸ್ ಅವರು 2007ರಿಂದ 2014ರವರೆಗೆ ಎರಡು ಬಾರಿ ಇಸ್ರೇಲ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಇದಕ್ಕೂ ಮೊದಲು 1994ರಲ್ಲಿ ಓಸ್ಲೋ ಒಪ್ಪಂದ ಹಾಗೂ ಸ್ವತಂತ್ರ್ಯ ಪ್ಯಾಲೆಸ್ತೀನ್ ಸಂಧಾನದಲ್ಲಿ ಮಹತ್ತರ ಪಾತ್ರವಹಿಸಿದ್ದಕ್ಕಾಗಿ ನೊಬೆಲ್ ಪ್ರಶಸ್ತಿಯನ್ನು ಪೆರೆಸ್ ಪಡೆದುಕೊಂಡಿದ್ದರು. ಪೆರೆಸ್ ರೊಂದಿಗೆ ಪ್ರಧಾನಿ ಯಿಟ್ಜಾಕ್ ರಬಿನ್ ಹಾಗೂ ಪ್ಯಾಲೆಸ್ತೀನಿ ನಾಯಕ ಯಾಸರ್ ಅರಾಫತ್ ಕೂಡ ಜಂಟಿ ನೊಬೆಲ್ ಶಾಂತಿ ಪ್ರಶಸ್ತಿಗೆ ಭಾಜನರಾಗಿದ್ದರು.

266. ಈ ಕೆಳಗಿನ ಯಾವ ವರ್ಷ ಭಾರತವು ಪಾಕಿಸ್ತಾನಕ್ಕೆ "ಪರಮಾಪ್ತ ರಾಷ್ಟ್ರ ಸ್ಥಾನ (Most Favored Nation)"ವನ್ನು ನೀಡಿತು?

ಅ) 2002

ಆ) 1996

ಇ) 1998

ಈ) 1975

1996

1996 ರಲ್ಲಿ ಭಾರತ ಪಾಕಿಸ್ತಾನಕ್ಕೆ ಪರಮಾಪ್ತ ರಾಷ್ಟ್ರ ಸ್ಥಾನಮಾನವನ್ನು ನೀಡಿದೆ. ಈ ಸ್ಥಾನಮಾನವನ್ನು ವಿಶ್ವ ವ್ಯಾಪಾರ ಸಂಸ್ಥೆಯ GATT (General Agreement of Tariff and Trade) ಒಪ್ಪಂದದಡಿ ನೀಡಲಾಗಿದೆ. ಇತ್ತೀಚೆಗೆ ಉರಿ ಸೇನಾ ನೆಲದ ಮೇಲೆ ಪಾಕ್ ಪ್ರೇರೆಪಿತ ಭಯೋತ್ಪಾದಕರು ನಡೆಸಿದ ದಾಳಿಯ ಹಿನ್ನಲೆಯಲ್ಲಿ ಪಾಕಿಸ್ತಾನಕ್ಕೆ ನೀಡಿರುವ ಈ ಸ್ಥಾನಮಾನವನ್ನು ಹಿಂಪಡೆಯಲು ಭಾರತ ಚಿಂತಿಸುತ್ತಿದೆ.

267. ಟ್ರಾಂಬೆ, ನಂಗಲ್ ಮತ್ತು ಸಿಂದ್ರಿ ಇದಕ್ಕೆ ಪ್ರಸಿದ್ದಿಯಾಗಿವೆ _____?

ಅ) ರಸಗೊಬ್ಬರ

ಆ) ಗಾಜು

ಇ) ಜವಳಿ

ಈ) ಕಲ್ಲಿದ್ದಲು

ಟ್ರಾಂಬೆ, ನಂಗಲ್ ಮತ್ತು ಸಿಂದ್ರಿ ನಗರಗಳು ರಸಗೊಬ್ಬರ ತಯಾರಿಕೆ ಪ್ರಸಿದ್ದಿ ಹೊಂದಿವೆ.

268. ಈ ಕೆಳಗಿನ ಯಾವ ವಿಮಾನ ನಿಲ್ದಾಣ ಏಷ್ಯಾ-ಫೆಸಿಫಿಕ್ ವಲಯದಲ್ಲಿ "ಇಂಗಾಲ ತಟಸ್ಥ (Carbon Neutral)"ವಿಮಾನ ನಿಲ್ದಾಣವೆಂಬ ಗೌರವಕ್ಕೆ ಪಾತ್ರವಾದ ಮೊದಲ ನಿಲ್ದಾಣವಾಗಿದೆ?

ಅ) ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ

ಆ) ಟೊಕಿಯೋ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ

ಇ) ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ

ಈ) ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ

ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ

ದೆಹಲಿಯ ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಏಷ್ಯಾ-ಫೆಸಿಫಿಕ್ ವಲಯದಲ್ಲಿ "ಇಂಗಾಲ ತಟಸ್ಥ" ವಿಮಾನ ನಿಲ್ದಾಣವೆಂಬ ಗೌರವಕ್ಕೆ ಪಾತ್ರವಾಗಿದೆ. ಅಲ್ಲದೇ ಈ ಹೆಗ್ಗಳಿಕೆಯನ್ನು ಪಡೆದುಕೊಂಡ ಏಷ್ಯಾ-ಫೆಸಿಫಿಕ್ ವಲಯದ ಮೊದಲ ವಿಮಾನ ನಿಲ್ದಾಣ ಸಹ ಆಗಿದೆ. ಈ ಸಂಬಂಧ ಕೆನಡಾದ ಮಾಂಟ್ರಿಯಲ್ ನಲ್ಲಿ ಅಂತಾರಾಷ್ಟ್ರೀಯ ವಿಮಾನನಿಲ್ದಾಣ ಮಂಡಳಿಯು ಪ್ರಮಾಣ ಪತ್ರವನ್ನು ನೀಡಿತು.

269. ಭಾರತದ "ಸಾಥಿಯನ್ ಜ್ಞಾನಶೇಖರನ್" ಯಾವ ಕ್ರೀಡೆಗೆ ಸಂಬಂಧಿಸಿದ್ದಾರೆ?

ಅ) ಕ್ರಿಕೆಟ್

ಆ) ಹಾಕಿ

ಇ) ಟೆನ್ನಿಸ್

ಈ) ಚೆಸ್

ಟೆನ್ನಿಸ್

ಚೆನ್ನೈ ಮೂಲದ ಸಾಥಿಯನ್ ಜ್ಞಾನಶೇಖರನ್ ಅವರು ಬೆಲ್ಜಿಯಂ ಓಪನ್ ಟೂರ್ನಿಯ ಪುರುಷರ ಸಿಂಗಲ್ಸ್ ನಲ್ಲಿ ಪ್ರಶಸ್ತಿ ಗೆದ್ದರು. ಆ ಮೂಲಕ ಅಚಂತ ಶರತ್ ಕಮಲ್ ನಂತರ ಈ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದ ಭಾರತದ ಎರಡನೇ ಆಟಗಾರ ಎಂಬ ಖ್ಯಾತಿ ಪಡೆದುಕೊಂಡರು.

270. ವಿಶ್ವ ಆರೋಗ್ಯ ಸಂಸ್ಥೆ (WHO) ಇತ್ತೀಚೆಗೆ ಈ ಕೆಳಗಿನ ಯಾವ ಪ್ರದೇಶವನ್ನು ವಿಶ್ವದ ಮೊದಲ ದಡಾರ (Measles) ಮುಕ್ತ ಪ್ರದೇಶವೆಂದು ಘೋಷಿಸಿದೆ?

ಅ) ಅಮೆರಿಕ

ಆ) ಯುರೋಪ್

ಇ) ಏಷ್ಯಾ

ಈ) ಆಸ್ಟ್ರೇಲಿಯಾ

www.karunaduexams.com

ಅಮೆರಿಕ

ವಿಶ್ವ ಆರೋಗ್ಯ ಸಂಸ್ಥೆ ಅಮೆರಿಕ ಪ್ರದೇಶವನ್ನು ದಡಾರ ಮುಕ್ತ ಪ್ರದೇಶವೆಂದು ಘೋಷಿಸಿದೆ. ಆ ಮೂಲಕ ವಿಶ್ವದ ಮೊದಲ ದಡಾರ ಮುಕ್ತ ಪ್ರದೇಶವಾಗಿ ಅಮೆರಿಕಾ ಪ್ರದೇಶ ಪಾತ್ರವಾಗಿದೆ. ದಡಾರ ವೈರಸ್ ನಿಂದ ಹರಡುವ ಮಾರಣಾಂತಿಕ ಕಾಯಿಲೆ. ಈ ಕಾಯಿಲೆಯಿಂದ ಜಗತ್ತಿನಾದ್ಯಂತ 2.6 ಮಿಲಿಯನ್ ಮಕ್ಕಳು ಸಾವನ್ನಪ್ಪುತ್ತಿದ್ದಾರೆ. [ಸೂಚನೆ: ಅಮೆರಿಕ ಪ್ರದೇಶವೆಂದರೆ ದಕ್ಷಿಣ ಅಮೆರಿಕ ಮತ್ತು ಉತ್ತರ ಅಮೆರಿಕ ಖಂಡಗಳ ಒಟ್ಟಾರೆ ಭಾಗ]

271. ವಿಶ್ವ ರೇಬಿಸ್ ದಿನವನ್ನು ಯಾವ ದಿನದಂದು ಆಚರಿಸಲಾಗುತ್ತದೆ?

ಅ) ಸೆಪ್ಟೆಂಬರ್ 27

ಆ) ಸೆಪ್ಟೆಂಬರ್ 28

ಇ) ಸೆಪ್ಟೆಂಬರ್ 29

ಈ) ಸೆಪ್ಟೆಂಬರ್ 30

ಸೆಪ್ಟೆಂಬರ್ 28

ವಿಶ್ವರೇಬಿಸ್ ದಿನವನ್ನು ಸೆಪ್ಟೆಂಬರ್ 28 ರಂದು ಪ್ರತಿವರ್ಷ ಆಚರಿಸಲಾಗುತ್ತದೆ. 2007ರಿಂದ ಈ ದಿನವನ್ನು ಆಚರಣೆ ಮಾಡಲಾಗುತ್ತಿದೆ. ರೇಬಿಸ್ ಕಾಯಿಲೆ ಬಗ್ಗೆ ಅರಿವು ಮೂಡಿಸುವುದು ಈ ದಿನದ ಪ್ರಮುಖ ಉದ್ದೇಶ. ರೇಬಿಸ್ ಬಗ್ಗೆ ಮಾಹಿತಿ ಒದಗಿಸಿ, ಲಸಿಕೆ ಹಾಕಿಸಿ ಮತ್ತು ಕಾಯಿಲೆ ತೊಲಗಿಸಿ ಇದು ಈ ವರ್ಷದ ಥೀಮ್ ಆಗಿದೆ. ಸೆಪ್ಟೆಂಬರ್ 28 ರೇಬಿಸ್ ಲಸಿಕೆಯನ್ನು ಅಭಿವೃದ್ದಿಪಡಿಸಿದ ಲೂಯಿಸ್ ಪ್ಯಾಶ್ಚರ್ ಅವರು ನಿಧನರಾದ ದಿನ ಆಗಾಗಿ ಅವರ ನೆನಪಿಗಾಗಿ ಈ ದಿನವನ್ನು ವಿಶ್ವ ರೇಬಿಸ್ ದಿನವೆಂದು ಆಚರಿಸಲಾಗುತ್ತದೆ.

272. ಇತ್ತೀಚೆಗೆ ನಿಧನರಾದ "ಮ್ಯಾಕ್ಸ್ ವಾಕರ್" ಅವರು ಯಾವ ದೇಶದ ಮಾಜಿ ಟೆಸ್ಟ್ ಕ್ರಿಕೆಟ್ ಆಟಗಾರ?

ಅ) ನ್ಯೂಜಿಲ್ಯಾಂಡ್

ಆ) ಆಸ್ಟ್ರೇಲಿಯಾ

ಇ) ಇಂಗ್ಲೆಂಡ್

ಈ) ದಕ್ಷಿಣ ಆಫ್ರಿಕಾ

ಆಸ್ಟ್ರೇಲಿಯಾ

ಆಸ್ಟ್ರೇಲಿಯದ ಮಾಜಿ ಟೆಸ್ಟ್ ಕ್ರಿಕೆಟಿಗ ಹಾಗೂ ಖ್ಯಾತ ವೀಕ್ಷಕವಿವರಣೆಗಾರ ಮ್ಯಾಕ್ಸ್ ವಾಕರ್(68 ವರ್ಷ) ನಿಧನರಾಗಿದ್ದಾರೆ. 1973ರಲ್ಲಿ ಟೆಸ್ಟ್ ಕ್ರಿಕೆಟಿಗೆ ಕಾಲಿಟ್ಟಿದ್ದ ವಾಕರ್ ಮಧ್ಯಮ ವೇಗದ ಬೌಲಿಂಗ್ನ ಮೂಲಕ 34 ಟೆಸ್ಟ್ ಪಂದ್ಯಗಳಲ್ಲಿ ಒಟ್ಟು 138 ವಿಕೆಟ್ಗಳನ್ನು ಉರುಳಿಸಿದ್ದರು. ಆಸ್ಟ್ರೇಲಿಯ ತಂಡ 1972-73ರಲ್ಲಿ ವೆಸ್ಟ್ಇಂಡೀಸ್ ಪ್ರವಾಸ ಕೈಗೊಂಡಿದ್ದಾಗ 26 ವಿಕೆಟ್ಗಳನ್ನು ಕಬಳಿಸಿದ್ದ ವಾಕರ್ ತಂಡ 2-0 ಅಂತರದಿಂದ ಸರಣಿ ಗೆಲ್ಲುವಲ್ಲಿ ಪ್ರಮುಖ

www.karunaduexams.com

ಪಾತ್ರವಹಿಸಿದ್ದರು. 1974-75ರಲ್ಲಿ ಮೆಲ್ಬೋರ್ನ್‌ನಲ್ಲಿ ನಡೆದ ಆಯಶಸ್ ಟೆಸ್ಟ್ ಸರಣಿಯಲ್ಲಿ 143 ರನ್ಗೆ 8 ವಿಕೆಟ್ ಪಡೆದಿದ್ದರು. ಇದು ಅವರ ವೃತ್ತಿಜೀವನದ ಶ್ರೇಷ್ಠ ಪ್ರದರ್ಶನವಾಗಿತ್ತು. ವಾಕರ್ ನಿವೃತ್ತಿಯ ಬಳಿಕ ಕ್ರಿಕೆಟ್ ವೀಕ್ಷಕವಿವರಣೆಗಾರರಾಗಿದ್ದರು. 1986 ಹಾಗೂ 1991ರ ನಡುವೆ ನೈನ್ ನೆಟ್ವರ್ಕ್ ವೀಕ್ಷಕವಿವರಣೆಗಾರರ ತಂಡದ ಸದಸ್ಯರಾಗಿದ್ದರು. 1999ರ ತನಕ ನೆಟ್ವರ್ಕ್‌ನಲ್ಲಿ ಕೆಲಸ ಮಾಡಿದ್ದರು.

273. ಐದು ದಶಕಗಳ ನಂತರ ಕ್ಯೂಬಕ್ಕೆ ಅಮೆರಿಕದ ಮೊದಲ ರಾಯಭಾರಿಯಾಗಿ ಈ ಕೆಳಗಿನ ಯಾರು ನೇಮಕಗೊಂಡಿದ್ದಾರೆ?

ಅ) ಜೆಫ್ರಿ ಡೆಲಾರೆಂಟಿಸ್

ಆ) ರಾಬರ್ಟ್ ಹ್ಯೂಜೆಲಿಕ್

ಇ) ಸ್ಟೀಪನ್ ವೆಗನ್

ಈ) ಜೇಮ್ಸ್ ಮೊಜೊಬಿಕ್

ಜೆಫ್ರಿ ಡೆಲಾರೆಂಟಿಸ್

ಹವಾನದಲ್ಲಿ ಅಮೆರಿಕದ ಉನ್ನತ ರಾಜತಾಂತ್ರಿಕರಾಗಿರುವ ಜೆಫ್ರಿ ಡೆಲಾರೆಂಟಿಸ್ರನ್ನು ಕ್ಯೂಬಕ್ಕೆ ತನ್ನ ಅಧಿಕೃತ ರಾಯಭಾರಿಯನ್ನಾಗಿ ಅಮೆರಿಕ ನೇಮಿಸಿದೆ. ಅವರು ಐದು ದಶಕಗಳಲ್ಲೇ ಕ್ಯೂಬಕ್ಕೆ ಅಮೆರಿಕದ ಮೊದಲ ರಾಯಭಾರಿಯಾಗಿದ್ದಾರೆ.

274. ಯಾವ ದೇಶದಲ್ಲಿ "2017 ಫಿಫಾ 17 ವರ್ಷ ಒಳಗಿನ ವಿಶ್ವ ಕಪ್" ನಡೆಯಲಿದೆ?

ಅ) ಬ್ರೆಜಿಲ್

ಆ) ಭಾರತ

ಇ) ಜಪಾನ್

ಈ) ರಷ್ಯಾ

ಭಾರತ

ಭಾರತದಲ್ಲಿ 2017 ಫಿಫಾ 17 ವರ್ಷ ಒಳಗಿನ ವಿಶ್ವ ಕಪ್ ಅಕ್ಟೋಬರ್, 2017ರಲ್ಲಿ ನಡೆಯಲಿದೆ. ಇದೇ ಮೊದಲ ಬಾರಿಗೆ ಭಾರತ ಈ ವಿಶ್ವಕಪ್ ಅನ್ನು ಆಯೋಜಿಸುತ್ತಿದೆ. ಇತ್ತೀಚೆಗೆ ಗೋವಾದ ಮಾರ್ಗೋವಾದಲ್ಲಿ ಈ ವಿಶ್ವಕಪ್ ನ ಅಧಿಕೃತ ಚಿಹ್ನೆಯನ್ನು ಬಿಡುಗಡೆಗೊಳಿಸಲಾಗಿದೆ.

www.karunaduexams.com

275. “2015ನೇ ಸಾಲಿನ ಮೂರ್ತಿದೇವಿ ಪ್ರಶಸ್ತಿ”ಯನ್ನು ಪಡೆದ “ಪ್ರೊ.ಕಲಕಲುರಿ ಎನೋಚ್ (Kalakaluri Enoch)” ಯಾವ ಭಾಷೆಯ ಪ್ರಸಿದ್ದ ಸಾಹಿತಿ?

ಅ) ಮರಾಠಿ

ಆ) ತೆಲುಗು

ಇ) ಹಿಂದಿ

ಈ) ಗುಜರಾತಿ

ತೆಲುಗು

ಭಾರತೀಯ ಜ್ಞಾನಪೀಠ ಪ್ರತಿಷ್ಠಾನ ನೀಡುವ ಪ್ರತಿಷ್ಠಿತ ಮೂರ್ತಿದೇವಿ ಪ್ರಶಸ್ತಿಯನ್ನು 2015ನೇ ಸಾಲಿಗೆ ತೆಲುಗಿನ ಖ್ಯಾತ ಸಾಹಿತಿ ಪ್ರೊ.ಕಲಕಲುರಿ ಎನೋಚ್ ರವರಿಗೆ ನೀಡಲಾಯಿತು. ಎನೋಚ್ ಅವರ “ಅನಂತಜೀವನಂ” ಕಾದಂಬರಿಗೆ ಈ ಪ್ರಶಸ್ತಿ ಸಂದಿದೆ. ಅನಂತಜೀವನಂ ಕಾದಂಬರಿಯು ವಿನಾಶಕಾರಿ ಚಂಡಮಾರುತ ಸಮಯದಲ್ಲಿ ರಾಯಲಸೀಮ ಪ್ರದೇಶದಲ್ಲಿ ಐತಿಹಾಸಿಕ ಮತ್ತು ಸಾಂಸ್ಕೃತಿಕ ಆಸ್ತಿಪಾಸ್ತಿ ಸಂರಕ್ಷಿಸಲು ದೀನ ದಲಿತರು, ದುರ್ಬಲರು ಮತ್ತು ಸಾಮಾನ್ಯ ಮನುಷ್ಯರು ಕಷ್ಟಪಟ್ಟ ರೀತಿಯನ್ನು ಚಿತ್ರಿಸುತ್ತಿದೆ.

276. “ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ (PTI)”ದ ನೂತನ ಅಧ್ಯಕ್ಷರಾಗಿ ಯಾರು ಇತ್ತೀಚೆಗೆ ನೇಮಕಗೊಂಡರು?

ಅ) ವಿವೇಕ್ ಗೊಯೆಂಕಾ

ಆ) ರಿಯಾದ್ ಮ್ಯಾಥ್ಯು

ಇ) ಹೊರ್ಸಮುಸ್ಜಿ ಎನ್ ಕೆಮ

ಈ) ವಿನೀತ್ ಜೈನ್

ರಿಯಾದ್ ಮ್ಯಾಥ್ಯು

ಮಲಯಾಳಂ ಮನೋರಮಾದ ನಿರ್ದೇಶಕ ರಿಯಾದ್ ಮ್ಯಾಥ್ಯು ರವರು ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾದ ನೂತನ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಇಂಡಿಯನ್ ಎಕ್ಸಪ್ರೆಸ್ ಚೇರಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಆಗಿರುವ ವಿವೇಕ್ ಗೊಯೆಂಕಾ ಅವರು ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ರಿಯಾದ್ ಅವರು 2009 ರಿಂದ ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ ಮಂಡಳಿಯ ನಿರ್ದೇಶಕರಾಗಿದ್ದಾರೆ.

277. ವಿಶ್ವದ ಮೊದಲ “ಥ್ರೀ-ಪೇರೆಂಟ್” (Three Parent)ಮಗು ಈ ಕೆಳಗಿನ ಯಾವ ದೇಶದಲ್ಲಿ ಜನಿಸಿತು?

ಅ) ಚೀನಾ

ಆ) ಅಮೆರಿಕಾ

ಇ) ಮೆಕ್ಸಿಕೊ

ಈ) ಸ್ವೀಡನ್

ಮೆಕ್ಸಿಕೊ

ಮೆಕ್ಸಿಕೊದಲ್ಲಿ ವಿಶ್ವದ ಮೊದಲ ಥ್ರೀ-ಪೇರೆಂಟ್ ಮಗುವಿಗೆ ಜನ್ಮ ನೀಡಲಾಗಿದೆ. ಮೂವರು ಜನ್ಮದಾತರ ಡಿಎನ್ಎ ಬಳಸಿ ಮಗು ಪಡಡೆಯುವ ಈ ವಿವಾದತ್ಮಕ ತಂತ್ರಜ್ಞಾನದ ಮೂಲಕ ಜೋರ್ಡಾನ್ ಮೂಲದ ದಂಪತಿಗಳಿಗೆ ಮಗು ಜನಿಸಿದೆ. ಥ್ರೀ-ಪೇರೆಂಟ್ ತಂತ್ರಜ್ಞಾನವನ್ನು "ಮೈಟ್ರೋಕಾಂಡ್ರಿಯಲ್ ಡೊನೇಶನ್ (Mitochondrial Donation)" ಎಂತಲೂ ಕರೆಯುತ್ತಾರೆ. ಈ ವಿಧಾನದಿಂದ ಅಪರೂಪದ ತಳಿ ರೂಪಾಂತರಗೊಂಡಿರುವ ಪೋಷಕರು ಸಹ ಆರೋಗ್ಯವಂತ ಮಗುವನ್ನು ಪಡೆಯಬಹುದಾಗಿದೆ.

278. ಯಾವ ರಾಜ್ಯ ಇತ್ತೀಚೆಗೆ "ಡಿಜಿಟಲ್ ತರಭೇತಿ (Digital Classes)" ನೀಡುವ ಸಲುವಾಗಿ ಇಸ್ರೋದೊಂದಿಗೆ ಒಡಂಬಡಿಕೆಗೆ ಸಹಿಹಾಕಿತು?

ಅ) ಆಂಧ್ರ ಪ್ರದೇಶ

ಆ) ತಮಿಳು ನಾಡು

ಇ) ತೆಲಂಗಣ

ಈ) ಗುಜರಾತ್

ಭಾರತೀಯ ಬಾಹ್ಯಕಾಶ ಸಂಶೋಧನ ಸಂಸ್ಥೆ (ಇಸ್ರೋ) ಮತ್ತು ತೆಲಂಗಣ ರಾಜ್ಯ ಡಿಜಿಟಲ್ ತರಭೇತಿ ನೀಡುವ ಸಲುವಾಗಿ ಒಡಂಬಡಿಕೆಗೆ ಸಹಿ ಹಾಕಿವೆ. ಈ ಒಡಂಬಡಿಕೆ ಅನ್ವಯ ತೆಲಂಗಣ ರಾಜ್ಯದಾದ್ಯಂತ ರಾಜ್ಯ ಚಾನೆಲ್ ಆದ ಮನ ಟಿವಿ ಮೂಲಕ ಡಿಜಿಟಲ್ ತರಭೇತಿಗಳನ್ನು ಇಸ್ರೋ ನೀಡಲಿದೆ. ಇಸ್ರೋದ ಡೆವೆಲಪ್ಮೆಂಟ್ ಅಂಡ್ ಎಜುಕೇಷನಲ್ ಕಮ್ಯೂನಿಕೇಷನ್ ಯೂನಿಟ್ ತೆಲಂಗಣ ರಾಜ್ಯದ ಜೊತೆಗೂಡಿ ಶಿಕ್ಷಣ ಸಂಬಂಧಿತ ವಿಷಯಗಳನ್ನು ಉಪಗ್ರಹ ಮೂಲಕ ರವಾನಿಸಲಿದೆ. 14 ಅಕ್ಟೋಬರ್ 2016 ರಿಂದ ರಾಜ್ಯದ 6000 ಶಾಲೆಗಳಲ್ಲಿ ಡಿಜಿಟಲ್ ತರಭೇತಿಗಳು ಪ್ರಾರಂಭಗೊಳ್ಳಲಿವೆ.

279. ಭಾರತ ಮತ್ತು ಪಾಕಿಸ್ತಾನ ನಡುವೆ "ಸಿಂಧೂನದಿ ಜಲ ಒಪ್ಪಂದಕ್ಕೆ" ಸಹಿ ಹಾಕಿದ ವೇಳೆ ಪಾಕಿಸ್ತಾನದ ಅಧ್ಯಕ್ಷರಾಗಿದ್ದವರು ಯಾರು?

ಅ) ಅಯೂಬ್ ಖಾನ್

ಆ) ಯಾಹ್ಯ ಖಾನ್

ಇ) ಜುಲ್ಫೀಕರ್ ಅಲಿ ಭಟ್

ಈ) ಇಸ್ಕಂದರ್ ಮಿರ್ಜಾ

ಅಯೂಬ್ ಖಾನ್

ಸಿಂಧೂನದಿ ಜಲ ಒಪ್ಪಂದಕ್ಕೆ ಅಂದಿನ ಭಾರತದ ಪ್ರಧಾನ ಮಂತ್ರಿಗಳಾದ ಜವಹಾರ್ ಲಾಲ್ ನೆಹರೂ ಹಾಗೂ ಪಾಕಿಸ್ತಾನದ ಅಧ್ಯಕ್ಷರಾದ ಅಯೂಬ್ ಖಾನ್ ನಡುವೆ ಸೆಪ್ಟೆಂಬರ್ 19, 1960 ರಲ್ಲಿ ಸಹಿಹಾಕಲಾಯಿತು. ಒಪ್ಪಂದದ

ಅನ್ವಯ ಪೂರ್ವಾಭಿಮುಖವಾಗಿ ಹರಿಯುವ ನದಿಗಳಾದ ರಾವಿ, ಬಿಯಾಸ್ ಮತ್ತು ಸಟ್ಲೇಜ್ ನದಿಗಳ ಮೇಲೆ ಭಾರತ ನಿಯಂತ್ರಣ ಹೊಂದಲಿದೆ. ಹಾಗೆಯೇ ಪಶ್ಚಿಮಭಿಮುಖವಾಗಿ ಹರಿಯುವ ನದಿಗಳಾದ ಸಿಂಧೂ, ಜೀಲಂ ಮತ್ತು ಚೇನಾಬ್ ನದಿಗಳ ಮೇಲೆ ಪಾಕಿಸ್ತಾನ ನಿಯಂತ್ರಣ ಹೊಂದಿದೆ.

280. ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ "ಪ್ರಗತಿ ಪಂಚಾಯತ್" ವಿಶೇಷ ಕಾರ್ಯಕ್ರಮಕ್ಕೆ ಯಾವ ರಾಜ್ಯದಲ್ಲಿ ಚಾಲನೆ ನೀಡಲಾಯಿತು?

ಅ) ಹರಿಯಾಣ

ಆ) ರಾಜಸ್ತಾನ

ಇ) ಕೇರಳ

ಈ) ಮಧ್ಯ ಪ್ರದೇಶ

ಹರಿಯಾಣ

ಕೇಂದ್ರ ಅಲ್ಪಸಂಖ್ಯಾತರ ವ್ಯವಹಾರ ಸಚಿವ ಮುಖ್ತರ್ ಅಬ್ಬಾಸ್ ನಕ್ವಿ ರವರು "ಪ್ರಗತಿ ಪಂಚಾಯತ್" ಕಾರ್ಯಕ್ರಮಕ್ಕೆ ಹರಿಯಾಣದ ಮೇವಾತ್ ನಲ್ಲಿ ಚಾಲನೆ ನೀಡಿದರು. ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ NDA ಸರ್ಕಾರ ಜಾರಿಗೊಳಿಸಿರುವ ಯೋಜನೆಗಳ ಬಗ್ಗೆ ಅರಿವು ಮೂಡಿಸುವುದು ಈ ಕಾರ್ಯಕ್ರಮದ ಮೂಲ ಉದ್ದೇಶ. ಪ್ರಗತಿ ಪಂಚಾಯತ್ ಕಾರ್ಯಕ್ರಮವನ್ನು ದೇಶದ 100 ಸ್ಥಳಗಳಲ್ಲಿ ಆಯೋಜಿಸಲಾಗುವುದು. ಈ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವರುಗಳು ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಬಗ್ಗೆ ಜನರಿಗೆ ತಿಳಿಸಿ ಚರ್ಚಿಸಲಿದ್ದಾರೆ.

281. ಯಾವ ನಗರದಲ್ಲಿ "ಭಾರತ ನೈರ್ಮಲ್ಯ ಸಮ್ಮೇಳನ (INDOSAN)" ಇತ್ತೀಚೆಗೆ ಆರಂಭಗೊಂಡಿತು?

ಅ) ಮುಂಬೈ

ಆ) ನವದೆಹಲಿ

ಇ) ಬೆಂಗಳೂರು

ಈ) ಹೈದ್ರಾಬಾದ್

ನವದೆಹಲಿ

ಭಾರತ ನೈರ್ಮಲ್ಯ ಸಮ್ಮೇಳನ (India Sanitation Conference (INDOSAN)) ನವದೆಹಲಿಯಲ್ಲಿ ಸೆಪ್ಟೆಂಬರ್ 30 ರಂದು ಆರಂಭಗೊಂಡಿತು. ಪ್ರಧಾನಿ ಮೋದಿರವರು ಈ ಸಮ್ಮೇಳನವನ್ನು ಉದ್ಘಾಟಿಸಿದರು. ಸ್ವಚ್ಚ ಭಾರತ ಅಭಿಯಾನದಡಿ ಸಾಧಿಸಲಾಗಿರುವ ಪ್ರಗತಿ, ಅಭಿಯಾನಕ್ಕೆ ಸಂಬಂಧಿತ ವಿಷಯಗಳ ಬಗ್ಗೆ ಚರ್ಚಿಸಲಾಗುವುದು.

www.karunaduexams.com

282. 2016 ಏಷ್ಯನ್ ಬೀಚ್ ಗೇಮ್ಸ್ ನ ಮಹಿಳೆಯರ ಕಬಡ್ಡಿ ಕ್ರೀಡೆಯಲ್ಲಿ ಚಿನ್ನ ಗೆದ್ದ ತಂಡ ಯಾವುದು?

ಅ) ಪಾಕಿಸ್ತಾನ

ಆ) ಶ್ರೀಲಂಕಾ

ಇ) ಭಾರತ

ಈ) ಬಾಂಗ್ಲದೇಶ

ಭಾರತ

2016 ಏಷ್ಯನ್ ಬೀಚ್ ಗೇಮ್ಸ್ ಮಹಿಳೆಯರ ಕಬಡ್ಡಿಯಲ್ಲಿ ಭಾರತ ತಂಡ ವಿಜೇತರಾಗಿ ಹೊರಹೊಮ್ಮಿತು. ಫೈನಲ್ ಪಂದ್ಯದಲ್ಲಿ ಭಾರತ ತಂಡ ಥಾಯ್ಲೆಂಡ್ ತಂಡವನ್ನು ಮಣಿಸುವ ಮೂಲಕ ಚಿನ್ನದ ಪದಕವನ್ನು ಗೆದ್ದುಕೊಂಡಿತು. 2008 ರಲ್ಲಿ ಏಷ್ಯನ್ ಬೀಚ್ ಗೇಮ್ಸ್ ಆರಂಭವಾದಗಿಲಿಂದಲೂ ಭಾರತ ತಂಡ ಕಬಡ್ಡಿಯಲ್ಲಿ ಚಾಂಪಿಯನ್ ಆಗಿದೆ. ಸತತವಾಗಿ ಐದು ಬಾರಿ ಥಾಯ್ಲೆಂಡ್ ತಂಡ ಭಾರತದ ಎದುರು ಫೈನಲ್ ಪಂದ್ಯದಲ್ಲಿ ಸೋತಿದೆ.

283. ಯಾವ ದಿನದಂದು "ವಿಶ್ವ ಹೃದಯ ದಿನವನ್ನು (World Heart Day)" ಆಚರಿಸಲಾಗುತ್ತದೆ?

ಅ) ಸೆಪ್ಟೆಂಬರ್ 27

ಆ) ಸೆಪ್ಟೆಂಬರ್ 28

ಇ) ಸೆಪ್ಟೆಂಬರ್ 29

ಈ) ಸೆಪ್ಟೆಂಬರ್ 30

ವಿಶ್ವ ಹೃದಯ ದಿನವನ್ನು ಸೆಪ್ಟೆಂಬರ್ 30 ರಂದು ಆಚರಿಸಲಾಗುತ್ತದೆ. ತಂಬಾಕು ಬಳಕೆ, ಅನುಚಿತ ಆಹಾರ ಸೇವನೆ ಕ್ರಮ, ದೈಹಿಕ ವ್ಯಾಯಮ ಕೊರತೆ ಮತ್ತು ಅತಿಯಾದ ಅಲ್ಕೋಹಾಲ್ ಸೇವನೆಯಿಂದ ಮಾನವನ ಹೃದಯದ ಮೇಲೆ ಆಗುವ ಪರಿಣಾಮದ ಬಗ್ಗೆ ಜಾಗೃತಿ ಮೂಡಿಸಲಾಗುವುದು. Light Your Heart, Empower Your Life ಇದು ಈ ವರ್ಷದ ವಿಶ್ವ ಹೃದಯ ದಿನದ ಥೀಮ್ ಆಗಿದೆ.

284. "ಕರಾಚಿ ಯೂ ಆರ್ ಕಿಲ್ಲಿಂಗ್ ಮಿ (Karachi You Are Killing Me)" ಪುಸ್ತಕದ ಲೇಖಕರು ____?

ಅ) ಸಬ ಇಮ್ತಿಯಾಜ್

ಆ) ಸಿರಹುದ್ದೀನ್ ಖಾನ್

ಇ) ಮಹಮ್ಮದ್ ಅಲಿ

ಈ) ಚೇತನ್ ಭಗತ್

ಸಬ ಇಮ್ತಿಯಾಜ್

www.karunaduexams.com

ಪಾಕಿಸ್ತಾನದ ಪತ್ರಕರ್ತ ಹಾಗೂ ಲೇಖಕ ಸಬ ಇಮ್ತಿಯಾಜ್ ಅವರು “ಕರಾಚಿ ಯೂ ಆರ್ ಕಿಲ್ಲಿಂಗ್ ಮಿ” ಪುಸ್ತಕದ ಲೇಖಕರು. ಇದೊಂದು ಹಾಸ್ಯ ಭರಿತ ಅಪರಾಧ ಸಂಬಂಧಿತ ರೋಮಾಂಚಕ ಕಾದಂಬರಿ. ಸೋನಾಕ್ಷಿ ಸಿನ್ಹಾ ಮುಖ್ಯ ಭೂಮಿಕೆಯಲ್ಲಿರುವ ನಿರ್ಮಾಣ ಹಂತದಲ್ಲಿರುವ “ನೂರ್” ಸಿನಿಮಾ ಈ ಪುಸ್ತಕ ಆಧರಿತವಾಗಿದೆ.

285.2018, 2022 ಮತ್ತು 2026ರ ಏಷ್ಯನ್ ಕ್ರೀಡಾಕೂಟ ಯಾವ ದೇಶಗಳಲ್ಲಿ ನಡೆಯಲಿವೆ?

ಅ) ಇಂಡೋನೇಷ್ಯಾ, ಚೀನಾ ಮತ್ತು ಜಪಾನ್

ಆ) ಇಂಡೋನೇಷ್ಯಾ, ಭಾರತ ಮತ್ತು ಚೀನಾ

ಇ) ಚೀನಾ, ಇಂಡೋನೇಷ್ಯಾ ಮತ್ತು ಜಪಾನ್

ಈ) ಚೀನಾ, ಜಪಾನ್ ಮತ್ತು ಇಂಡೋನೇಷ್ಯಾ

ಇಂಡೋನೇಷ್ಯಾ, ಚೀನಾ ಮತ್ತು ಜಪಾನ್

2018, 2022 ಮತ್ತು 2026ರ ಏಷ್ಯನ್ ಕ್ರೀಡಾಕೂಟ ಕ್ರಮವಾಗಿ ಇಂಡೋನೇಷ್ಯಾ, ಚೀನಾ ಮತ್ತು ಜಪಾನ್ ನಲ್ಲಿ ನಡೆಯಲಿದೆ.

286. ಯಾವ ನಗರದಲ್ಲಿ ಇತ್ತೀಚೆಗೆ “ರಾಷ್ಟ್ರೀಯ ಜೈವಿಕ ಆರ್ಥಿಕತೆ ಮಿಷನ್ (National Mission on Bioeconomy)” ಪ್ರಾರಂಭಿಸಲಾಯಿತು?

ಅ) ಶಿಲ್ಲಾಂಗ್

ಆ) ಗುವಾಹಟಿ

ಇ) ತ್ರಿಪುರ

ಈ) ಗ್ಯಾಂಟಕ್

ಶಿಲ್ಲಾಂಗ್

ರಾಷ್ಟ್ರೀಯ ಜೈವಿಕ ಆರ್ಥಿಕತೆ ಮಿಷನ್ ಅನ್ನು ಶಿಲ್ಲಾಂಗ್ ನಲ್ಲಿ ಪ್ರಾರಂಭಿಸಲಾಗಿದೆ. ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯದ “ಇನ್ಸ್ಟಿಟ್ಯೂಟ್ ಆಫ್ ಬಯೋ-ರಿಸೋರ್ಸ್ ಅಂಡ್ ಸಸ್ಟನೇಬಲ್ ಡೆವಲ್ಪ್ಮೆಂಟ್” ಈ ಮಿಷನ್ ಅನ್ನು ಪ್ರಾರಂಭಿಸಿದೆ. ಜೈವಿಕ ಸಂಪನ್ಮೂಲಗಳನ್ನು ಬಳಸಿಕೊಂಡು ಗ್ರಾಮೀಣ ಆರ್ಥಿಕತೆಯನ್ನು ಉತ್ತಮಪಡಿಸುವುದು ಈ ಮಿಷನ್ ಉದ್ದೇಶವಾಗಿದೆ.

www.karunaduexams.com

287.ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ (TRAI)ದ ಈಗಿನ ಅಧ್ಯಕ್ಷರು ಯಾರು?

ಅ) ಸುದೀರ್ ಗುಪ್ತಾ

ಆ) ಆರ್ ಎಸ್ ಶರ್ಮಾ

ಇ) ಕೆ ಮಧುಕರ್

ಈ) ಸುರೇಂದ್ರ ಶರ್ಮಾ

ಆರ್ ಎಸ್ ಶರ್ಮಾ

ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರವನ್ನು 20ನೇ ಫೆಬ್ರವರಿ 1997 ರಲ್ಲಿ ದೂರಸಂಪರ್ಕ ಸೇವೆಗಳನ್ನು ಮತ್ತು ತೆರಿಗೆಗಳನ್ನು ನಿಯಂತ್ರಿಸುವ ಸಲುವಾಗಿ ಸ್ಥಾಪಿಸಲಾಗಿದೆ. ಆರ್ ಎಸ್ ಶರ್ಮಾ ಪ್ರಸ್ತುತ ಈ ಪ್ರಾಧಿಕಾರದ ಅಧ್ಯಕ್ಷರಾಗಿದ್ದಾರೆ.

288. "ಭಾರತೀಯ ಸುದ್ದಿಪತ್ರಿಕೆ ಸೊಸೈಟಿ (Indian Newspaper Society)" ಯ ನೂತನ ಅಧ್ಯಕ್ಷರಾಗಿ ಯಾರು ನೇಮಕಗೊಂಡಿದ್ದಾರೆ?

ಅ) ಕಮಲೇಶ್ ಶರ್ಮಾ

ಆ) ಸೋಮೇಶ್ ಶರ್ಮಾ

ಇ) ಚಂದ್ರಕಾಂತ್ ಸುಕಂದ

ಈ) ರಿಚರ್ಡ್ ಮ್ಯಾಥ್ಯು

ಸೋಮೇಶ್ ಶರ್ಮಾ

ರಾಷ್ಟ್ರದೂತ್ ಸಪ್ತಾಹಿಕ್ ನ ಸೋಮೇಶ್ ಶರ್ಮಾ ಅವರು ಭಾರತೀಯ ಸುದ್ದಿಪತ್ರಿಕೆ ಸೊಸೈಟಿಯ ಅಧ್ಯಕ್ಷರಾಗಿ 2016-17ನೇ ಸಾಲಿಗೆ ನೇಮಕಗೊಂಡಿದ್ದಾರೆ. ಮಾತೃಭೂಮಿ ಸಮೂಹದ ಗೃಹಲಕ್ಷ್ಮಿ ಮುಖ್ಯ ಸಂಪಾದಕರಾದ ಪಿ ವಿ ಚಂದ್ರನ್ ಅವರ ಉತ್ತರಾಧಿಕಾರಿಯಾಗಿ ಇವರು ನೇಮಕಗೊಂಡಿದ್ದಾರೆ. ಸುದ್ದಿಪತ್ರಿಕೆ ಉದ್ಯಮದ ಹಿತ ಕಾಯುವಿಕೆಗಾಗಿ ಭಾರತೀಯ ಸುದ್ದಿಪತ್ರಿಕೆ ಸೊಸೈಟಿಯನ್ನು ಸ್ಥಾಪಿಸಲಾಗಿದ್ದು, ಇದರ ಕೇಂದ್ರ ಕಚೇರಿ ರಫಿ ಮಾರ್ಗ್, ನವದೆಹಲಿಯಲ್ಲಿದೆ.

289. "ಬಿಹು" ಯಾವ ರಾಜ್ಯದ ಜನಪ್ರಿಯ ಜಾನಪದ ನೃತ್ಯ?

ಅ) ಅಸ್ಸಾಂ

ಆ) ಕೇರಳ

ಇ) ಪಶ್ಚಿಮ ಬಂಗಾಳ

ಈ) ಜಾರ್ಖಂಡ್

ಅಸ್ಸಾಂ

www.karunaduexams.com

ಬಿಹು ಅಸ್ಸಾಂ ರಾಜ್ಯದ ಪ್ರಸಿದ್ಧ ಜಾನಪದ ನೃತ್ಯ. ಬಿಹು ನೃತ್ಯ ಬಿಹು ಹಬ್ಬದ ಒಂದು ಭಾಗ. ಬಿಹು ಹಬ್ಬವನ್ನು ಏಪ್ರಿಲ್ ತಿಂಗಳಲ್ಲಿ ಆಚರಿಸಲಾಗುವುದು.

290. ಭಾರತೀಯ ಸಸ್ಯಸರ್ವೇಕ್ಷಣಾ ಇಲಾಖೆ (Botanical Survey of India) ಪ್ರಕಾರ ದೇಶದಲ್ಲಿ ಅತಿ ಹೆಚ್ಚು ಹೂ ಬಿಡುವ ಸಸ್ಯ ಪ್ರಬೇಧಗಳನ್ನು ಹೊಂದಿರುವ ರಾಜ್ಯ ಯಾವುದು?

ಅ) ಕೇರಳ

ಆ) ಮಹಾರಾಷ್ಟ್ರ

ಇ) ತಮಿಳುನಾಡು

ಈ) ಕರ್ನಾಟಕ

ತಮಿಳುನಾಡು

ಭಾರತೀಯ ಸಸ್ಯಸರ್ವೇಕ್ಷಣಾ ಇಲಾಖೆ (Botanical Survey of India) ಇತ್ತೀಚೆಗೆ ಬಿಡುಗಡೆ ಮಾಡಿರುವ ವರದಿಯ ಪ್ರಕಾರ ತಮಿಳುನಾಡು ದೇಶದಲ್ಲಿ ಅತಿ ಹೆಚ್ಚು ಹೂಬಿಡುವ ಸಸ್ಯ ಪ್ರಬೇಧಗಳನ್ನು ಹೊಂದಿದೆ. "ಎಂಡಮಿಕ್ ವ್ಯಾಸ್ಕುಲರ್ ಪ್ಲಾಂಟ್ಸ್ ಆಫ್ ಇಂಡಿಯಾ (*Endemic Vascular Plants of India*)" ಎಂಬ ಶೀರ್ಷಿಕೆಯಡಿ ಬಿಡುಗಡೆಗೊಂಡಿರುವ ವರದಿಯ ಪ್ರಕಾರ ದೇಶದಲ್ಲಿ ಕಾಣಸಿಗುವ ಪ್ರತಿ ನಾಲ್ಕು ಹೂಬಿಡುವ ಸಸ್ಯ ಪ್ರಬೇಧಗಳ ಪೈಕಿ ಒಂದು ದೇಶದ ಸ್ಥಳೀಯ ಪ್ರಬೇಧವಾಗಿದೆ. ಭಾರತದಲ್ಲಿ ಒಟ್ಟು 18,259 ಹೂ ಬಿಡುವ ಸಸ್ಯಗಳು ಕಂಡುಬಂದಿರುವುದಾಗಿ ವರದಿಯಲ್ಲಿ ತಿಳಿಸಲಾಗಿದೆ. ಇವುಗಳ ಪೈಕಿ 4,303 ಸಸ್ಯಗಳು (ಶೇ 23%) ಕೇವಲ ಭಾರತದಲ್ಲಿ ಮಾತ್ರ ಕಾಣಬಹುದಾಗಿದೆ. ಈ 4,303 ಸಸ್ಯಗಳ ಪೈಕಿ ತಮಿಳುನಾಡಿ ಅತಿ ಹೆಚ್ಚು ಅಂದರೆ 410 ಪ್ರಬೇಧಗಳು ವರದಿಯಾಗಿವೆ. ಕೇರಳದಲ್ಲಿ 357 ಪ್ರಬೇಧಗಳು ಮತ್ತು ಮಹಾರಾಷ್ಟ್ರದಲ್ಲಿ 278 ಪ್ರಬೇಧಗಳು ಕಂಡುಬಂದಿವೆ.

291. ಈ ಕೆಳಗಿನ ಯಾವ ರಾಷ್ಟ್ರ "ಪೆಟ್ರೋಲಿಯಂ ರಫ್ತು ರಾಷ್ಟ್ರಗಳ ಸಂಘಟನೆ (OPEC)"ಯ ಸದಸ್ಯ ರಾಷ್ಟ್ರವಲ್ಲ?

ಅ) ಆಸ್ಟ್ರೀಯಾ

ಆ) ವೆನೆಜುವೆಲ

ಇ) ನೈಜೀರಿಯಾ

ಈ) ಕುವೈತ್

ಆಸ್ಟ್ರೀಯಾ

ಪೆಟ್ರೋಲಿಯಂ ರಫ್ತು ರಾಷ್ಟ್ರಗಳ ಸಂಘಟನೆಯನ್ನು 1960 ರಲ್ಲಿ ಬಾಗ್ದದ್ ನಲ್ಲಿ ಸ್ಥಾಪಿಸಲಾಗಿದೆ. 14 ರಾಷ್ಟ್ರಗಳು ಈ ಸಂಘಟನೆಯ ಸದಸ್ಯತ್ವವನ್ನು ಹೊಂದಿವೆ. ಒಪೆಕ್ ನ ಕೇಂದ್ರ ಕಚೇರಿ ಆಸ್ಟ್ರೀಯಾದ ವಿಯೆನ್ನಾದಲ್ಲಿದೆ. ಆದರೆ ಆಸ್ಟ್ರೀಯಾ ಸದಸ್ಯ ರಾಷ್ಟ್ರವಲ್ಲ. ಅಲ್ಜೀರಿಯಾ, ಅಂಗೋಲಾ, ಈಕ್ವಡಾರ್, ಗಬಾನ್, ಇಂಡೋನೇಷಿಯಾ, ಇರಾನ್,

ಇರಾಕ್, ಕುವೈತ್, ಲಿಬಿಯಾ, ನೈಜೀರಿಯಾ, ಖತಾರ್, ಸೌಧಿ ಅರೇಬಿಯಾ, ಯುಎಇ ಮತ್ತು ವೆನೆಜುವೆಲಾ ಒಪೆಕ್ ಸದಸ್ಯ ರಾಷ್ಟ್ರಗಳಾಗಿವೆ.

292. ಅಂತಾರಾಷ್ಟ್ರೀಯ ಭಾಷಾಂತರ ದಿನವನ್ನು _____ದಿನದಂದು ಆಚರಿಸಲಾಗುತ್ತದೆ?

ಅ) ಸೆಪ್ಟೆಂಬರ್ 29

ಆ) ಸೆಪ್ಟೆಂಬರ್ 30

ಇ) ಅಕ್ಟೋಬರ್ 1

ಈ) ಅಕ್ಟೋಬರ್ 2

ಸೆಪ್ಟೆಂಬರ್ 30

ಅಂತಾರಾಷ್ಟ್ರೀಯ ಭಾಷಾಂತರ ದಿನ (International Translation Day)ವನ್ನು ಪ್ರತಿ ವರ್ಷ ಸೆಪ್ಟೆಂಬರ್ 30ರಂದು ಆಚರಿಸಲಾಗುತ್ತದೆ. ಸುಮಾರು 4ನೇ ಶತಮಾನದಲ್ಲಿ ಇತಿಹಾಸಕಾರ ಸೇಂಟ್ ಜೆರೋಮ್ ಎಂಬುವವರು ನಿಧನ ಹೊಂದಿದ ದಿನವನ್ನು ಸೆಪ್ಟಂಬರ್ 30 ವಿಶ್ವ ಭಾಷಾಂತರ ದಿನವನ್ನಾಗಿ ಆಚರಿಸಲಾಗುತ್ತಿದೆ. ಜೊರೊಮ್ ಅವರು ಕ್ರೈಸ್ತರ ಗ್ರಂಥ ಬೈಬಲನ್ನು ಇತರ ಭಾಷೆಗೆ ಅನುವಾದಿಸಿದರು. ಈ ಕಾರಣಕ್ಕಾಗಿ ಅವರನ್ನು ಜಗತ್ತು ಈಗಲೂ ಶ್ರೇಷ್ಠ ಭಾಷಾಂತರಗಾರರಾಗಿ ಗುರುತಿಸುತ್ತಿದೆ.

293. ಕಾಗ್ನಿಜಂಟ್ ಟೆಕ್ನಾಲಜಿ ಸರ್ವೀಸಸ್ ನ ನೂತನ ಅಧ್ಯಕ್ಷರಾಗಿ ಯಾರು ನೇಮಕಗೊಂಡಿದ್ದಾರೆ?

ಅ) ವಿನಯ್ ಚಂದ್ರಶೇಖರ್

ಆ) ರಾಜೀವ್ ಮೆಹ್ತಾ

ಇ) ಸ್ವರೂಪ್ ಕುಲಕರ್ಣಿ

ಈ) ವಿರಾಟ್ ದಂಡೇಕರ್

ರಾಜೀವ್ ಮೆಹ್ತಾ

ಪ್ರಮುಖ ಮಾಹಿತಿ ತಂತ್ರಜ್ಞಾನ ಸಂಸ್ಥೆಗಳಲ್ಲಿ ಒಂದಾಗಿರುವ ಕಾಗ್ನಿಜಂಟ್ ಟೆಕ್ನಾಲಜಿ ಸರ್ವಿಸಸ್ನ ಹೊಸ ಅಧ್ಯಕ್ಷರನ್ನಾಗಿ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರುವ (ಐ.ಟಿ ಸೇವೆ) ಭಾರತ ಸಂಜಾತ ರಾಜೀವ್ ಮೆಹ್ತಾ ಅವರನ್ನು ನೇಮಿಸಲಾಗಿದೆ. ಗೋರ್ಡನ್ ಕೋಬರ್ನ್ ಅವರು ರಾಜೀನಾಮೆ ನೀಡಿದ್ದರಿಂದ ಮೆಹ್ತಾ ಅವರನ್ನು ನೇಮಿಸಲಾಗಿದೆ.

294. ಕಾರ್ಮಿಕ ಮಂಡಳಿ ಇತ್ತೀಚೆಗೆ ಬಿಡುಗಡೆ ಮಾಡಿದ ವರದಿಯ ಪ್ರಕಾರ ದೇಶದಲ್ಲಿ ಅತಿ ಹೆಚ್ಚು ನಿರುದ್ಯೋಗ ಪ್ರಮಾಣವನ್ನು ಹೊಂದಿರುವ ರಾಜ್ಯ ಯಾವುದು?

ಅ) ತ್ರಿಪುರ

ಆ) ಅಸ್ಸಾಂ

ಇ) ಕೇರಳ

ಈ) ಮಹಾರಾಷ್ಟ್ರ

ತ್ರಿಪುರ

2015-16ನೇ ಸಾಲಿನಲ್ಲಿ ದೇಶದ ನಿರುದ್ಯೋಗ ಪ್ರಮಾಣ ಶೇ. 5ರಷ್ಟು ಹೆಚ್ಚಿರುವ ಅಘಾತಕಾರಿ ವಿಷಯವನ್ನು ಕಾರ್ಮಿಕ ಮಂಡಳಿ ವರದಿ ಮಾಡಿದೆ. ಕಳೆದ ಐದು ವರ್ಷಗಳಿಂದ ಉದ್ಯೋಗ ಮತ್ತು ನಿರುದ್ಯೋಗ ಪ್ರಮಾಣ ಅಳೆಯುವ ವರದಿಯನ್ನು ತಯಾರಿಸಲಾಗುತ್ತಿದೆ. ಕಾರ್ಮಿಕ ಮಂಡಳಿ ರಾಷ್ಟ್ರ ಮಟ್ಟದಲ್ಲಿ ಪ್ರತಿವರ್ಷ ವರದಿ ಸಿದ್ದಪಡಿಸುತ್ತಿದ್ದು, ಇದು ಐದನೇ ವರದಿಯಾಗಿದೆ. 2015-16ರಲ್ಲಿ ನಗರ ಪ್ರದೇಶದಲ್ಲಿ ಶೇ. 4.9ರಷ್ಟಿದ್ದು, ಗ್ರಾಮೀಣ ಭಾಗದ ನಿರುದ್ಯೋಗ ಪ್ರಮಾಣ ಶೇ. 5.1ರಷ್ಟಿದೆ. ತ್ರಿಪುರಾ ರಾಜ್ಯ ಅತ್ಯಂತ ಹೆಚ್ಚು ನಿರುದ್ಯೋಗ ಪ್ರಮಾಣ ಶೇ. 19.7ರಷ್ಟು ಹೊಂದಿದೆ. ನಂತರದ ಸ್ಥಾನದಲ್ಲಿ ಸಿಕ್ಕಿಂ 18.1% ಮತ್ತು ಲಕ್ಷದ್ವೀಪ 16.1% ಹೊಂದಿವೆ.

295. ನಾಲ್ಕನೇ ಭೌದ್ಧ ಸಮ್ಮೇಳನ ನಡೆದದ್ದು _____?

ಅ) ಕಪಿಲವಸ್ತು

ಆ) ಕಾಶ್ಮೀರ

ಇ) ಸಾರನಾಥ

ಈ) ಬೋದಗಯಾ

ಕಾಶ್ಮೀರ

ಮೊದಲ ಭೌದ್ಧ ಸಮ್ಮೇಳನ ರಾಜಗಿರ್, ಎರಡನೇ ಭೌದ್ಧ ಸಮ್ಮೇಳನ ವೈಶಾಲಿ, ಮೂರನೇ ಭೌದ್ಧ ಸಮ್ಮೇಳನ ಪಾಟಲಿಪುತ್ರ ಮತ್ತು ನಾಲ್ಕನೇ ಭೌದ್ಧ ಸಮ್ಮೇಳನ ಕಾಶ್ಮೀರದಲ್ಲಿ ನಡೆಯಿತು.

296. 2016-WTA ವುಹಾನ್ ಓಪನ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ನಲ್ಲಿ ಪ್ರಶಸ್ತಿಯನ್ನು ಗೆದ್ದವರು ಯಾರು?

ಅ) ಪೆಟ್ರಾ ಕ್ವಿಟೋವಾ

ಆ) ಡೊಮಿನಿಕಾ ಸಿಬುಲ್ಕೋವಾ

ಇ) ಬಾರ್ಬರಾ ಸ್ಟ್ರೈಕೋವಾ

ಈ) ಲೂಸಿಯಾ ಸಫರೋವಾ



www.karunaduexams.com

ಪೆಟ್ರಾ ಕ್ವಿಟೋವಾ

ಪೆಟ್ರಾ ಕ್ವಿಟೋವಾ ರವರು ಡಬ್ಲ್ಯುಟಿಎ ವುಹಾನ್ ಓಪನ್ ಟೆನಿಸ್ ಟೂರ್ನಿಯ ಸಿಂಗಲ್ಸ್‌ನಲ್ಲಿ ಚಾಂಪಿಯನ್ ಆದರು. ಸಿಂಗಲ್ಸ್ ವಿಭಾಗದ ಫೈನಲ್ ಹಣಾಹಣಿಯಲ್ಲಿ ಕ್ವಿಟೋವಾ 6-1, 6-1ರಲ್ಲಿ ಸ್ಲೋವೇಕಿಯಾದ ಡೊಮಿನಿಕಾ ಸಿಬುಲ್ಕೋವಾ ಅವರನ್ನು ಮಣಿಸಿದರು. ಕ್ವಿಟೋವಾ ವಿಂಬಲ್ಡನ್ ಟೂರ್ನಿಯಲ್ಲಿ ಎರಡು ಸಲ ಪ್ರಶಸ್ತಿ ಜಯಿಸಿದ್ದಾರೆ.

297. ಇತ್ತೀಚೆಗೆ ನಿಧನರಾದ ಸೈಯದ್ ಶಾಂಸುಲ್ ಹಕ್ (Syed Shamsul Haq) ಯಾವ ದೇಶದ ಪ್ರಸಿದ್ಧ ಲೇಖಕರು?

ಅ) ಪಾಕಿಸ್ತಾನ

ಆ) ಬಾಂಗ್ಲದೇಶ

ಇ) ಶ್ರೀಲಂಕಾ

ಈ) ಇಂಡೋನೇಷ್ಯಾ

ಬಾಂಗ್ಲದೇಶ

ಬಾಂಗ್ಲದ ಪ್ರಮುಖ ಲೇಖಕರಾಗಿದ್ದ ಸೈಯದ್ ಶಾಂಸುಲ್ ಹಕ್ ನಿಧನರಾದರು. ಕಾದಂಬರಿ, ಕಾವ್ಯ, ಪ್ರಬಂಧಕಗಳು ಮತ್ತು ನಾಟಕಗಳ ಮೇಲೆ ತಮ್ಮ ಪಾಂಡಿತ್ಯದಿಂದ ಹೆಸರುವಾಸಿಯಾಗಿದ್ದರು. ಸೈಯದ್ ಅವರು ಧಾರ್ಮಿಕ ಮೂಲಭೂತವಾದ ವಿರುದ್ಧ ಧ್ವನಿ ಎತ್ತುವ ಮೂಲಕ ಪ್ರಸಿದ್ಧರಾಗಿದ್ದರು. ಸಾಹಿತ್ಯ ಕ್ಷೇತ್ರಕ್ಕೆ ಅಗಣನೀಯ ಸೇವೆ ನೀಡಿದ್ದ ಸೈಯದ್ ಅವರಿಗೆ ಬಾಂಗ್ಲದೇಶದ ಅತ್ಯುನ್ನತ ನಾಗರೀಕ ಪ್ರಶಸ್ತಿ ಸೇರಿ ಅನೇಕ ಪ್ರಶಸ್ತಿಗಳು ಸಂದಿವೆ.

298. ಈ ಕೆಳಗಿನ ಯಾವ ಸಾಗರವನ್ನು "ಹೆರ್ರಿಂಗ್ ಪಾಂಡ್ (Herring Pond)" ಎಂತಲೂ ಕರೆಯಲಾಗುವುದು?

ಅ) ಹಿಂದೂ ಮಹಾಸಾಗರ

ಆ) ಅಟ್ಲಾಂಟಿಕ್ ಸಾಗರ

ಇ) ಅರ್ಕಟಿಕ್ ಸಾಗರ

ಈ) ಬೆಂಗಾಳ ಕೊಲ್ಲಿ

ಅಟ್ಲಾಂಟಿಕ್ ಸಾಗರ

299. ಹಾರ್ವರ್ಡ್ ವಿಶ್ವವಿದ್ಯಾಲಯದ ದತ್ತಿ ನಿಧಿ ವಿಭಾಗದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾಗಿ (ಸಿಇಒ) ನೇಮಕಗೊಂಡ ಭಾರತೀಯ ಮೂಲದ ಹೂಡಿಕೆದಾರ ಯಾರು?

ಅ) ಅಭಿಜಿತ್ ಸಿಂಗ್

ಆ) ರಮಣಸಿಂಗ್ ಚೌಧರಿ

ಇ) ಎನ್ ಪಿ ನಾರ್ವೇಕರ್

ಈ) ಜ್ಯೋತಿ ಆರಾಧ್ಯ

ಎನ್ ಪಿ ನಾರ್ವೇಕರ್

ಭಾರತ ಮೂಲದ ಬೃಹತ್ ಹೂಡಿಕೆದಾರ ಎನ್.ಪಿ.ನಾರ್ವೇಕರ್ ಅವರು ಹಾರ್ವರ್ಡ್ ವಿಶ್ವವಿದ್ಯಾಲಯದ ದತ್ತಿ ನಿಧಿ ವಿಭಾಗದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾಗಿ (ಸಿಇಒ) ನೇಮಕಗೊಂಡಿದ್ದಾರೆ. ಪ್ರಸಕ್ತ ಆರ್ಥಿಕ ಸಾಲಿನಲ್ಲಿ ವಿಶ್ವವಿದ್ಯಾಲಯದ ದತ್ತಿ ನಿಧಿ ವಿಭಾಗವು ಶೇಕಡ 2ರಷ್ಟು ನಷ್ಟ ಅನುಭವಿಸಿದೆ ಎಂಬ ವರದಿಯ ಕಾರಣ ನಾರ್ವೇಕರ್ ಅವರನ್ನು ಮುಖ್ಯಸ್ಥರಾಗಿ ನೇಮಿಸಲಾಗಿದೆ. ನಾರ್ವೇಕರ್ ಅವರಿಗೂ ಮುನ್ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸ್ಟೀಫನ್ ಬ್ಲಿತ್ ಅವರು ಕಳೆದ ಜುಲೈ 18ರಂದು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ನಾರ್ವೇಕರ್ ಅವರು ಡಿಸೆಂಬರ್ ತಿಂಗಳಿನಲ್ಲಿ ಹಾರ್ವರ್ಡ್ ವಿಶ್ವವಿದ್ಯಾಲಯ ದತ್ತಿ ನಿಧಿ ವಿಭಾಗದ ನಾಲ್ಕನೇ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

www.karunaduexams.com